Department of Public Instruction, Mysore

THE

PANCHA TANTRA

OR

PANCHŌPĀKHYANA,

FIVE COLLECTIONS OF STORIES.

REVISED EDITION

MYSORE
GOVERNMENT BRANCH PRESS
1910

PREFACE

Regarding the date and authorship of the Kanarese version of the Pancha Tantra we have no information, but it is conjectured to have been written in the 16th century A.D.

It was first published in 1864, edited by Mr. J. Garrett, then Director of Public Instruction in Mysore, with the assistance of M. D. Singarachari, munshi to the Kanarese Translator to the Madras Government, who compared it with the original Sanskrit, as well as with the Tamil and Telugu versions.

A second edition appeared the following year, in which were inserted the Sanskrit slokas and Kanarese padyams, two copies of the work contained in the Library of the College of Fort St. George having been lent for the purpose by the Board of Examiners. The book has been out of print for some time, but being required for the examinations of the Madras University has now been issued afresh. (The Kanarese padyams have been excluded from the present revised edition as they appear to be the composition of an inferior modern writer.)

The following are extracts from the introduction to the former editions:—

The collection of Fables and Stories termed Pancha Tantra is one of the oldest in the world. It was translated from Sanskrit into Persian in the sixth century; and from Persian into Arabic in the ninth century; it was afterwards rendered into Hebrew,

Greek, Latin and Syriac; from these versions successive translations were made into all the languages of modern Europe, until it became universally known as Pilpay's Fables.

The narrator of the stories is in the Arabic version called Bidpai; in the Sanskrit original no name similar to this occurs; but it is certain that the name Pilpay, by which the work is known in Europe, is a corruption of Bidpai.

The Arabic Translation of the Panchatantra is called Kalila wa Damna; it is thus designated in allusion to two jackals which act a conspicuous part in the first story of the Arabic version, and which we recognise in the Sanskrit and Kanarese under the forms Karataka and Damanaka.

The most admired Persian translation is not that which was first made, but the one written at the beginning of the sixteenth century, and known under the title of Anwàr-i-Soheili; which was afterwards rendered into Turkish with the designation of Humayun Nameh.

With the exception of the Bible there is probably no work that has been translated into so many languages as the Panchatantra. In India it has retained its popularity to the present time, and is found in some form in all the spoken dialects of the country.

The Sanskrit epitome of the Panchatantra is termed the "Hitopadesa," or "Salutary Instruction." This has been translated into English by Sir William Jones and by Sir Charles Wilkins.

"Its popularity" says Professor Johnson "through so many ages, amidst such various nations, is evidence of intrinsic merit; and the pictures of domestic manners and human nature which it presents, however tinctured by national peculiarities, must have

been recognised as universally true, as well as diverting; or they would not have been naturalized in the West as well as in the East. In the maxims also which the tales serve to illustrate, there must have been much which secured the acquiescence of all mankind, or the remarks would have been left to enlighten the moralists of India alone. These merits however were such as admitted of transfusion into other languages; the merits of its composition are those which have chiefly recommended its preservation by the press, and its circulation amongst the cultivators of Sanskrit literature."

There is a great diversity in the manuscript copies of the Panchatantra. Many differences occur in the various stories. In some versions the residence of the king is in Mahilaropya, a city in the South of India, which Professor Wilson identifies with Saint Thome.* The Kanarese version of the Panchatantra follows the Hitopadesa in making the residence of the king in Pataliputra on the Ganges.

The king had three sons who were deficient in ability and application. He made this known to his counsellors and sought their advice; asking them "Of what use is a son who has neither knowledge nor virtue? of what use is a cow who has no milk with her calf? etc. A learned Brahmin who was present offered to relieve the king of his anxiety by taking the princes to his house and instructing them perfectly. He then composed in their benefit these five

* "We need not be much at a loss for its identification, as the name approaches sufficiently to Mailapur, Melapur, or Saint Thome; where our own records indicate a city of some consequence, in the beginning of the Christain era, as the scene of the labours and martyrdom of Saint Thomas, occurrences very far from invalidated by any argument yet adduced against the truth of the tradition."—Transactions of the Royal Asiatic Society, Vol. I, page 161.

chapters: Mitra Bheda, Dissension of Friends; Mitra Prapti, Acquisition of Friends; Kakolukiya, Inveterate enmity; Labdha Nâsa, Loss of Advantage; Asamprekshya Kâritva, Inconsiderateness. Through reading these the princes became in six months highly accomplished, and the five tantras were famous throughout the world.

In the transactions of the Royal Asiatic Society Professor Wilson has published an "Analytical Account of the Panchatantra, illustrated with occasional translations." This analysis was founded on an examination of three copies of the work, one of which was procured in Calcutta, the others in Benarese; while these copies agreed in all essential points, it was found that they presented abundantly the variations to be expected in compilations of such a character; where stanzas and even stories are often omitted or inserted at the pleasure of the transcriber.

In another article on Hindu Fiction, contributed to the British and Foreign Review, Professor Wilson states that a version of the Panchatantra, as current in the South of India has been published in French, by the Abbe Dubois, but not entire. He has only a selection of the stories, taken from three different copies written one in Kanarese, one in Telugu, and one in Tamil. It may be doubted if his principle of selection is the most judicious that could be adopted; "Nous avons tiré de cet ouvrage tous les apologues qui peuvent interesser un lecteur europeau, et nous avons omis autres, dont le sens et la morale ne pouvaient etre entendus qui par le trespetit nombre de personnes versees dans les usages et les coutumes Indiennes auxquelles ces fables font allusion." This is in fact to omit all that is most characteristic. Enough however is given to show that the vernacular

representatives of the Panchatantra in the Peninsula correspond in plan, and in most of their many details, with the Sanskrit original.

This edition of the Panchatantra, now published for the first time in Kanarese, has been collated with various manuscript copies in circulation amongst learned natives. Many of the stories referred to in Professor Wilson's analytical account are wanting in all the Kanarese copies of the work that have been consulted. Others have been purposely omitted as unsuitable for an edition which will be used in schools.

Several inquiries have been addressed to the editor respecting the English translations that have been published. The most common one, called "The Fables of Pilpay," has been often reprinted in London, and an illustrated edition from the press of Whittingham, appeared in 1852.

Another translation from the Arabic, by the Rev. W. Knatchbull, termed "Kalila and Dimna, or the Fables of Bidpai," was published at Oxford in 1819. The author says in the preface, "In offering to the public an English translation of this invaluable production, which may be placed by the side of the most renowned treasures of Oriental Literature, of which our libraries are in possession, I have thought it possible to open a source of considerable amusement, if not of great intellectual enjoyment, to persons who are strangers to the languages of the East."

But the translation which most fully exhibits the merits of the original work is the following, "Anvari Suheili, or the Lights of Canopus; being the Persian version of the Fables of Pilpay, or "The Book of Kalilah and Damnah," rendered into Persian by Husain Vaiza'l Rashif; literally translated into Prose and Verse, by G. B. Eastwick, F.R.S., M.R.A.S., Hertford 1854.

An account of the various versions of the Panchatantra will be found in the Retrospective Review, Vol. III. The English Encylopaedia has also an interesting sketch of the work, from which the following extract may be given: "Fables and tales in which animals are introduced as actors, and in which moral principles and maxims of prudence are inculcated by example and precept, seem from an early age to have been current among the Hindus. Several collections of such stories, written in Sanskrit, are still in existence. The oldest of them, and evidently the parent stock of the Fables of Bidpai, is the work known in India under the name of the "Panchatantra."

To this may be added the testimony of Professor Robertson, who says, that "it is in such high esteem throughout the East that it has been translated into every dialect spoken there."

CONTENTS

SECTION I.

DISSENSION OF FRIENDS.

ಮಿತ್ರಭೇದ.

PAGE

SECTION II.

ACQUISITION OF FRIENDS.

ಸುಹೃಲ್ಲಾಭ.

SECTION III.

INVETERATE ENMITY.

ಸಂಧಿವಿಗ್ರಹ.

SECTION IV.

LOSS OF ADVANTAGE.

ಲಬ್ಧ ನಾಶ.

SECTION V.

INCONSIDERATENESS.

ಅಸಂಪ್ರೇಕ್ಷ್ಯಕಾರಿತ್ವ.

THE PANCHATANTRA—ITS ORIGIN.

ಪಂಚತಂತ್ರೋತ್ಪತ್ತಿ

ಪಾಟಲೀಪುರವೆಂಬ ಪ್ರಸಿದ್ಧವಾದ ಒಂದು ಪಟ್ಟಣವುಂಟು. ಅದು ವೇದಶಾಸ್ತ್ರಪುರಾಣಾದಿ ಚತುರ್ದಶವಿದ್ಯೆಗಳ ಕಲಿತ ಬ್ರಾಹ್ಮಣೋತ್ತಮರಿಂದಲೂ, ಬಹಳ ಬಲಪರಾಕ್ರಮಶಾಲಿಗಳಾದ ರಾಜಶ್ರೇಷ್ಠರಿಂದಲೂ, ಕ್ರಯವಿಕ್ರಯಗಳಲ್ಲಿ ಪ್ರಸಿದ್ಧರಾದ ವೈಶ್ಯರಿಂದಲೂ, ದೇವಬ್ರಾಹ್ಮಣ ವಿಶ್ವಾಸವುಳ್ಳ ಶೂದ್ರರಿಂದಲೂ, ನಾನಾವಿಧವಾದ ಆಯುಧಸಾಧಕಗಳಲ್ಲಿ ಸಮರ್ಥರಾದ ವೀರಭಟರಿಂದಲೂ, ಅನೇಕ ದೇವಾಲಯಗಳಿಂದಲೂ ಮೆರೆಯುತ್ತಿದ್ದಿತು.

The Excellence of Learning—Sudarśanarāya.

ಆ ಪಟ್ಟಣವನ್ನು ಸುದರ್ಶನನೆಂಬ ಅರಸನು ಪಾಲಿಸುತ್ತಿದ್ದನು. ಆತನು ಪರಾಕ್ರಮದಲ್ಲಿ ಕಾರ್ತವೀರ್ಯಾರ್ಜುನನಿಗೂ ಬುದ್ಧಿಯಲ್ಲಿ ಬೃಹಸ್ಪತಿಗೂ ಧೈರ್ಯದಲ್ಲಿ ಹಿಮವಂತನಿಗೂ ದಾತೃತ್ವದಲ್ಲಿ ಶಿಬಿ ಕರ್ಣ ದಧೀಚಿಗಳಿಗೂ ಸಮಾನನಾಗಿ ಈ ಲೋಕದಲ್ಲಿ ಪ್ರಸಿದ್ಧಿಪಡೆದಿದ್ದನು. ಆ ರಾಜಶ್ರೇಷ್ಠನು ಒಂದುದಿನ ಮಂತ್ರಿ ಪುರೋಹಿತರು ವಿದ್ವಜ್ಜನರು ಸಾಮಂತರಾಯರು ನಂಟರು ಮಿತ್ರರು ಮುಂತಾದವರಿಂದ ಪರಿವೇಷ್ಟಿತನಾಗಿ ಸಭೆಯಲ್ಲಿ ಒಡ್ಡೋಲಗದಿಂದಿರುವಾಗ ದುರ್ಮಾರ್ಗರಾಗಿ ನೀತಿಶಾಸ್ತ್ರತಿಳಿಯದ ತನ್ನ ಪುತ್ರರನ್ನು ನೋಡಿ ಅತಿ ಚಿಂತಾಕ್ರಾಂತನಾಗಿ ಸಭೆಯಲ್ಲಿರುವವರ ಸಂಗಡ ಇಂತೆಂದನು:- ವಿದ್ವಾಂಸನೂ ಧಾರ್ಮಿಕನೂ ಅಲ್ಲದ ಮಗನು ಹುಟ್ಟಿದರೆ ಫಲವೇನು? ಹಾಲುಕರೆಯದ ಆಕಳನ್ನು ಇಟ್ಟುಕೊಂಡು ಏನುಮಾಡಬಹುದು? ಗಂಡುಮಕ್ಕಳು ಅನೇಕರುಟೆಂದು ಲೆಕ್ಕಿಸಿಕೊಳ್ಳುವುದರಿಂದ

ಪ್ರಯೋಜನವೇನು ? ವಂಶಕ್ಕೆ ಕೀರ್ತಿತರುವ ಮಗನೊಬ್ಬನೇ ಸಾಕು. ರೂಪವೂ ಧನವೂ ಬಲವೂ ಉಂಟಾಗಿದ್ದರೂ ಶಾಸ್ತ್ರಜ್ಞಾನವಿಲ್ಲದ ಮಗನು ಏತಕ್ಕೆ ? ಅಂಥ ಮಗನ ಹೆರುವುದಕ್ಕಿಂತ ತಾಯಿ ಗೊಡ್ಡಿಯಾದರೂ ಮೇಲು, ಗರ್ಭವಿಳಿದು ಬಿದ್ದುಹೋದರೂ ಒಳ್ಳೆಯದು, ಹುಟ್ಟಿದವನು ಸತ್ತರೂ ಚೆಂದ, ಹೆಣ್ಣಾಗಿ ಹುಟ್ಟಿದರೂ ವಾಸಿ. ಪೂರ್ವಜನ್ಮದಲ್ಲಿ ತಂದೆ ಮಾಡಿದ ಪುಣ್ಯಕರ್ಮದಿಂದ ಉದಾರನೂ ಧರ್ಮಾತ್ಮನೂ ತಾಯಿತಂದೆಗಳ ಮಾತು ಮೀರದವನೂ ಒಳ್ಳೆಯ ನಡತೆಯುಳ್ಳವನೂ ಸರ್ವಜನರಿಗೂ ಹಿತನೂ ವಿದ್ವಾಂಸನೂ ಸಮರ್ಥನೂ ಪರರು ತನಗೆ ಮಾಡಿದ ಮೇಲನ್ನು ಮರೆಯದವನೂ ಆಡಿದಮಾತು ತಪ್ಪದವನೂ ಆದ ಕುಮಾರನು ಹುಟ್ಟು ತ್ತಾನೆ; ಪಾಪಕರ್ಮದಿಂದ ಕ್ಷೀರಸಮುದ್ರದಲ್ಲಿ ವಿಷಹುಟ್ಟಿದಂತೆ ಒಳ್ಳೆಯ ವಂಶದಲ್ಲಿ ದುರ್ಮಾರ್ಗನು ಹುಟ್ಟಿ ಕುಲವನ್ನು ಕೆಡಿಸುವನು.

ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕಿತಾ ।
ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ ॥

ಯೌವನ ಧನ ದೊರೆತನ ಅವಿವೇಕ ಎಂಬ ಈ ನಾಲ್ಕರಲ್ಲಿ ಒಂದೊಂದೇ ಅನರ್ಥವನ್ನು ಹುಟ್ಟಿಸುತ್ತದೆ. ಈ ನಾಲ್ಕೂ ಉಳ್ಳ ಸ್ಥಳದಲ್ಲಿ ಹೇಳ ಬೇಕಾದುದೇನು ? ಆದುದರಿಂದ ವಿವೇಕವಿಲ್ಲದೆ ದುರ್ಮಾರ್ಗರಾಗಿರುವ ನನ್ನ ಪುತ್ರರಿಗೆ ನೀತಿ ಶಾಸ್ತ್ರವನ್ನೋದಿಸಿ ವಿವೇಕವುಂಟುಮಾಡುವುದರಿಂದ ಅವ ರನ್ನು ಪುನರ್ಜನ್ಮ ಸಂಭೂತರಾಗಿ ಮಾಡತಕ್ಕ ಪುಣ್ಯಾತ್ಮರು ಯಾರಾದರೂ ಈ ಸಭೆಯಲ್ಲಿ ಉಂಟೋ ?

Vishnuśarma, the able Teacher.

ಎಂದು ಅರಸನು ಕೇಳಲು, ದೇವಗುರುವಾದ ಬೃಹಸ್ಪತಿಯ ಹಾಗೆ ಸಮಸ್ತ ನೀತಿ ಶಾಸ್ತ್ರಗಳನ್ನೂ ತಿಳಿದ ವಿಷ್ಣುಶರ್ಮನೆಂಬ ಬ್ರಾಹ್ಮಣನೆದ್ದು ಅರಸನನ್ನು ನೋಡಿ,—ಓ ಮಹಾರಾಯರೇ, ನೀವು ಹೀಗೆ ಚಿಂತಿಸಬೇ ಕಾದುದೇನು ? ನೀವು ನೆನಸಿದ ಕೆಲಸವನ್ನು ನೆಟ್ಟಗೆ ಮಾಡುವುದು ಎಷ್ಟು ಮಾತ್ರ ? ನಾನು ನಿಮ್ಮ ಕುಮಾರರೆಲ್ಲರನ್ನೂ ಆರು ತಿಂಗಳಲ್ಲಿ ಸಕಲ ನೀತಿಶಾಸ್ತ್ರಗಳನ್ನೂ ತಿಳಿದವರಾಗಿ ಮಾಡಿ ನಿಮಗೆ ಸಮರ್ಪಿಸದೆ ಇದ್ದರೆ

ಧನಧಾನ್ಯಸಮೇತ ನನ್ನ ಮನೆಯನ್ನು ಬಿಟ್ಟುಬಿಟ್ಟು ನಿಮ್ಮ ರಾಜ್ಯಕ್ಕೆ ದೂರವಾಗಿ ಹೋಗಲುಳ್ಳವನು—ಎಂದು ಪ್ರತಿಜ್ಞೆ ಮಾಡಿದನು. ಅದಕ್ಕೆ ಅರಸನು ಬಹಳ ಸಂತೋಷಿಸಿ ವಿಷ್ಣುಶರ್ಮನಿಗೆ ಆನೆ ಕುದುರೆ ಗಾಡಿ ಪಲ್ಲಕ್ಕಿ ಬಹಳ ಬೆಲೆಯುಳ್ಳ ವಸ್ತ್ರಗಳು ಒಡವೆಗಳು ಮುಂತಾದ ವಸ್ತುಗಳನ್ನು ಪ್ರೀತಿಯಿಂದ ಬಹುಮಾನಮಾಡಿ ತನ್ನ ಕುಮಾರರನ್ನು ಕರೆಯಿಸಿ,—ಅಯ್ಯಾ, ಇವರನ್ನು ನಿಮ್ಮ ಕುಮಾರರಂತೆ ನೋಡಿಕೊಂಡು ಇವರಿಗೆ ವಿದ್ಯೆಕಲಿಸಿ ಇವರನ್ನು ಬುದ್ಧಿವಂತರಾಗಿ ಮಾಡುವಭಾರ ನಿಮ್ಮದು—ಎಂದು ಅವರನ್ನು ವಿಷ್ಣುಶರ್ಮನ ವಶಕ್ಕೆ ಕೊಟ್ಟನು.

His Scheme of Education.

ಬಳಿಕ ವಿಷ್ಣುಶರ್ಮನು ಆ ರಾಜಪುತ್ರರನ್ನು ಕರೆದುಕೊಂಡು ಹೋಗಿ ತನ್ನ ಮನಸ್ಸಿನಲ್ಲಿ ಆಲೋಚಿಸಿ ಮಿತ್ರಭೇದ, ಸುಹೃಲ್ಲಾಭ, ಸಂಧಿವಿಗ್ರಹ, ಲಬ್ಧನಾಶ, ಅಸಂಪ್ರೇಕ್ಷ್ಯಕಾರಿತ್ವ, ಎಂಬ ಐದು ತಂತ್ರಗಳುಳ್ಳ ಪಂಚತಂತ್ರವೆಂಬ ಗ್ರಂಥವನ್ನು ರಚಿಸಿ ಅವರ ಸಂಗಡ ಇಂತೆಂದನು :—ಮಿತ್ರಭೇಧ ಎಂದರೆ ಸ್ನೇಹಿತರಿಗೆ ವಿರೋಧವನ್ನು ಹುಟ್ಟಿಸೋಣ ; ಸುಹೃಲ್ಲಾಭ ಎಂದರೆ ಸ್ನೇಹಿತರನ್ನು ಸಂಪಾದಿಸೋಣ ; ಸಂಧಿವಿಗ್ರಹ ಎಂದರೆಮೊದಲಲ್ಲಿ ಸ್ನೇಹಮಾಡಿ ತರುವಾಯು ವಿರೋಧಿಸೋಣ ; ಲಬ್ಧನಾಶ ಎಂದರೆ ಸಿಕ್ಕಿದ ಧನವನ್ನು ಹೋಗಲಾಡಿಸಿಕೊಳ್ಳೋಣ ; ಅಸಂಪ್ರೇಕ್ಷ್ಯಕಾರಿತ್ವ ಎಂದರೆ ಯಾವ ಕಾರ್ಯವನ್ನಾದರೂ ಚೆನ್ನಾಗಿ ವಿಚಾರಿಸದೆ ಮಾಡೋಣ. ಪಂಚತಂತ್ರವೆಂದರೆ ಈ ಐದು ತಂತ್ರಗಳನ್ನುಳ್ಳ ಗ್ರಂಥವು.

THE PANCHA TANTRA.

ಪಂಚತಂತ್ರ ಕಥೆಗಳು.

SECTION I.

DISSENSION OF FRIENDS.

I. ಮಿತ್ರಭೇಧ ತಂತ್ರ.

ವರ್ಧಮಾನೋ ಮಹಾನ್ಸ್ನೇಹೋ ಮೃಗೇಂದ್ರವೃಷಯೋರ್ವನೇ ।
ಪಿಶುನೇನಾತಿಲುಬ್ಧೇನ ಜಂಬುಕೇನ ವಿನಾಶಿತಃ ॥

ಒಂದು ವನದಲ್ಲಿ ಒಂದು ಸಿಂಹವೂ ಒಂದು ವೃಷಭವೂ ಬಹಳ ಸ್ನೇಹವಾಗಿರಲಾಗಿ, ಹೇರಳವಾದ ತಂತ್ರವುಳ್ಳ ಒಂದು ನರಿ ಚಾಡಿಗಳ ಹೇಳಿ ಆ ಯೆರಡಕ್ಕೂ ವಿರೋಧಹುಟ್ಟಿಸಿ ಸಿಂಹದ ಕೈಯಿಂದ ವೃಷಭವನ್ನು ಕೊಲ್ಲಿಸಿತು.

ಎಂದು ಹೇಳಲಾಗಿ ರಾಜಕುಮಾರರು ಕೇಳಿ ಮೊದಲು ಸಿಂಹಕ್ಕೂ ವೃಷಭಕ್ಕೂ ಸ್ನೇಹವು ಹೇಗೆ ಉಂಟಾಯಿತು? ತರುವಾಯ ಆ ಸ್ನೇಹ ಕೆಟ್ಟು ವಿರೋಧವು ಹೇಗೆ ಬಂದಿತು? ಇದನ್ನು ನಮಗೆ ವಿಸ್ತಾರವಾಗಿ ಹೇಳಬೇಕನಲು ವಿಷ್ಣುಶರ್ಮಸಿಂತೆಂದನು.

ದಕ್ಷಿಣ ದೇಶದಲ್ಲಿ ಅನೇಕ ಧನಿಕರುಳ್ಳ ಮಹಿಳಾಪುರವೆಂಬ ಪಟ್ಟಣವುಂಟು. ಅದರಲ್ಲಿ ಬಹುಸಂಪನ್ನನಾದ ವರ್ಧಮಾನನೆಂಬ ಹೆಸರುಳ್ಳ ಒಬ್ಬ ವರ್ತಕಸಿದ್ದನು. ಅವನು ತುಂಬ ಹಣವುಳ್ಳವನಾದರೂ ತನ್ನ ಧನವನ್ನು ವೃದ್ಧಿಮಾಡಬೇಕೆಂಬದಾಗಿ ನೆನೆಸಿ ಹೀಗೆಂದು ಆಲೋಚಿಸಿದನು.

Speculations of Vardhamàna.

ಧನವಿಲ್ಲದಿದ್ದರೆ ಆರ್ಜಿಸಬೇಕು. ಆರ್ಜಿಸಿದ ಧನವನ್ನು ರಕ್ಷಿಸಬೇಕು. ರಕ್ಷಿಸಿದ ಧನವನ್ನು ವೃದ್ಧಿಮಾಡಬೇಕು. ವೃದ್ಧಿಮಾಡಿದ ಧನವನ್ನು ಸದ್ವಿನಿಯೋಗ ಪಡಿಸಬೇಕು. ಹೀಗೆ ಮಾಡಲರಿಯದವನ ಮನೆಯಲ್ಲಿ ದ್ರವ್ಯವು ಹೇಗೆ ನಿಂತೀತು? ಮೂಢರಾದವರು ಈ ಅರ್ಥವನ್ನು ತಿಳಿದುಕೊಳ್ಳಲಾರರು. ಸಂರಕ್ಷಣೆ ಮಾಡದ ದ್ರವ್ಯವು ಆಗಲೇ ನಶಿಸುವುದು. ವೃದ್ಧಿಪಡಿಸದ ಧನವನ್ನು ಸ್ವಲ್ಪಸ್ವಲ್ಪವಾಗಿ ವೆಚ್ಚಮಾಡಿದರೂ ಕಾಡಿಗೆಯಹಾಗೆ ಸವೆದುಹೋಗುವುದು. ಅನುಭವಕ್ಕೆ ಬಾರದ ಒಡವೆ ಇದ್ದರೂ ಇಲ್ಲದಹಾಗೆಯೇ ಸುಖಕರವಾಗದು. ಒಬ್ಬರಿಗೆ ಕೊಡುವುದು, ತಾನನುಭವಿಸುವುದು, ಯಾರಾದರೂ ಎತ್ತಿಕೊಂಡು ಹೋಗುವುದು, ಈ ಮೂರು ಧನಹೋಗುವುದಕ್ಕೆ ದಾರಿಗಳು. ಆದುದರಿಂದ ಯಾವನು ತನ್ನ ಧನವನ್ನು ಒಬ್ಬರಿಗೆ ಕೊಡದೆ ತಾನೂ ಅನುಭವಿಸನೋ, ಅವನ ಧನವನ್ನು ಯಾರಾದರೂ ಎತ್ತಿಕೊಂಡು ಹೋಗುವರು. ತುಂಬಿದ ಕೆರೆಗಳಿಗೆ ಕೋಡಿಗಳನ್ನೂ ತೂಬುಗಳನ್ನೂ ತೆಗೆದು ಪೈರಿಗೆ ನೀರು ಬಿಟ್ಟಂತೆ ಸಂಪಾದಿಸಿದ ಧನವನ್ನು ಪಾತ್ರವರಿತು ವೆಚ್ಚಮಾಡುವುದು ರಕ್ಷಿಸುವುದೇಸರಿ ಎಂದು ಆಲೋಚಿಸಿದನು.

The trade of Vardhamàna and his Bullock Sanjívaka.

ಬಳಿಕ ವರ್ಧಮಾನನು ತನ್ನ ಮನೆಯಲ್ಲಿದ್ದ ಕುಂಕುಮದ ಹೂ ಗೋರೋಚನ ಕಸ್ತೂರಿ ಮುತ್ತುಗಳು ಹವಳಗಳು ವಜ್ರಗಳು ಕೆಂಪುಗಳು ಪಚ್ಚೆಗಳು ವೈಡೂರ್ಯಗಳು ಗೋಮೇಧಿಕಗಳು ಪುಷ್ಯರಾಗಗಳು ಅಪರಂಜಿಗಳು ಬೆಳ್ಳಿ ಪಟ್ಟೆಸೀರೆಗಳು ಸರಿಗೆದುಪ್ಪಟಗಳು ನಾನಾವಿಧವಾದ ಶಾಲುವೆಗಳು ಇವೇ ಮೊದಲಾದ ಬಹಳ ಬೆಲೆಯುಳ್ಳ ವಸ್ತುಗಳನ್ನು ಒಂದು ಬಂಡಿಗೆ ಏರಿಸಿ, ಅದಕ್ಕೆ ಸಂಜೀವಕ ನಂದಕಗಳೆಂಬ ಹೆಸರುಳ್ಳ ಎರಡು ಎತ್ತುಗಳ ಕಟ್ಟಿಸಿ, ಬಂಡಿಯನ್ನು ಸಾಗಿಸಿಕೊಂಡು ಬೇಕಾದ ಪರಿವಾರದೊಂದಿಗೆ ವ್ಯಾಪಾರಮಾಡುವುದಕ್ಕಾಗಿ ಪರದೇಶಕ್ಕೆ ಹೊರಟುಹೋದನು. ಆಗ ಬಂಡಿ ಬಹಳ ಭಾರವಾಗಿದ್ದುದರಿಂದ ಮಾರ್ಗದಲ್ಲಿ

ಒಂದು ಅಡವಿಯಲ್ಲಿ ಇಡುಗುತೊಡಗು ಭೂಮಿಯಲ್ಲಿ ಮೊಣಕಾಲುಗಳು ಮುರಿದು ಬಿದ್ದ ಸಂಜೀವಕನನ್ನು ನೋಡಿ ಆ ವರ್ತಕನು ಸ್ವಲ್ಪಹೊತ್ತು ಚಿಂತಿಸಿ, ಬಳಿಕ ಆ ಬಂಡಿಯ ಮೇಲಣ ಸರಕುಗಳನ್ನೆಲ್ಲಾ ಮನುಷ್ಯರ ಕೈಯಿಂದ ಎತ್ತಿಸಿಕೊಂಡು, ಬಿದ್ದಿದ್ದ ಸಂಜೀವಕನ ಕಾಲುಗಳಿಗೆ ಕಟ್ಟು ಕಟ್ಟಿಸಿ, ಆ ಎತ್ತಿನ ಮೇಲಣ ಪ್ರೀತಿಯಿಂದ ಕೆಲವರನ್ನು ಅಲ್ಲಿ ಕಾವಲಿಟ್ಟು ಮುಂದಕ್ಕೆ ಸಾಗಿಹೋದನು.

ಅನಂತರ ಅಲ್ಲಿ ಕಾವಲಿದ್ದವರು—ನಾವು ಈ ಭಯಂಕರವಾದ ಕಾಡಿನಲ್ಲಿದ್ದು ಸಾಯಬೇಕಾದುದೇನು ? ಹೋಗೋಣ—ಎಂದು ಅತಿ ತ್ವರೆಯಾಗಿ ಹೋಗಿ ಪ್ರಭುವನ್ನು ನೋಡಿ—ಸ್ವಾಮಿ, ಆ ವನವಲ್ಲಿ ಹುಲಿ ಮುಂತಾದ ದುಷ್ಟಮೃಗಗಳು ಅನೇಕವುಂಟು. ನಾವು ಅಂಜಿ ಅಲ್ಲಿ ವೃಷಭಕ್ಕೆ ಕಾವಲಿರಲಾರದೆ ಅದನ್ನು ಬಿಟ್ಟುಬಿಟ್ಟು ತಮ್ಮ ಸನ್ನಿಧಾನಕ್ಕೆ ಬಂದೆವು. ತಮ್ಮೊಂದಿಗೆ ಈ ಮಾತು ಹೇಳಲಿಕ್ಕೆ ನಾಚಿಕೆಯಾಗುತ್ತದೆ—ಎಂದು ಮಹಾಭಕ್ತಿಯಿಂದ ನುಡಿದರು.

ಅಲ್ಲಿ ಆ ಸಂಜೀವಕನಿಗೆ ಮುರಿದಕಾಲು ದಿನೇ ದಿನೇ ಚೆನ್ನಾಗಿ ಬಂದ ಕಾರಣ, ಆ ಎತ್ತು ಮೆಲ್ಲಮೆಲ್ಲಗೆ ಎದ್ದು ತಿರುಗಾಡುತ್ತಾ, ಎಳೆಯ ಗರಿಕೆಯನ್ನು ಮೇಯುತ್ತಾ, ಸಿಹಿನೀರು ಕುಡಿಯುತ್ತಾ, ಮೈತಿಳಿಯದೆ ಕೊಬ್ಬಿ ಸ್ವಲ್ಪವಾದರೂ ಭಯವಿಲ್ಲದೆ ಒಂದುದಿನ ಗಟ್ಟಿಯಾಗಿ ಗುಟರುಹಾಕಿತು.

The Story of the Lion Pingalaka.

ಆ ವನವಲ್ಲಿ ಪಿಂಗಳಕನೆಂಬ ಸಿಂಹವು ಹುಲಿಗಳು ಕಾಡುಹಂದಿಗಳು ಕರಡಿಗಳು ಕಾಡುಕೋಣಗಳು ಆನೆಗಳು ಖಡ್ಗಮೃಗಗಳು ಸಾರಂಗಗಳು ಹುಲ್ಲೆಗಳು ಚಿಗರಿಗಳು ಮುಂತಾದ ಸಕಲಮೃಗಗಳನ್ನು ಶಿಕ್ಷಿಸುತ್ತಾ ರಕ್ಷಿಸುತ್ತಾ, ಎದುರಿಲ್ಲದ ಭುಜಬಲದಿಂದ ಗರ್ವಿಸಿ ಸ್ವೇಚ್ಛೆಯಾಗಿ ತಿರುಗುತ್ತಾ, ತನ್ನ ಪರಾಕ್ರಮದಿಂದ ಸಂಪಾದಿಸಲ್ಪಟ್ಟ ರಾಜ್ಯವನ್ನನುಭವಿಸುತ್ತಾ ಇದ್ದಿತು. ಆ ಸಿಂಹವು ಒಂದುದಿನ ಬಾಯಾರಿಕೆಯಿಂದ ಬಳಲಿ ನೀರು ಕುಡಿಯುವುದಕ್ಕಾಗಿ ಯಮುನಾನದಿಯ ತೀರದಲ್ಲಿ ಇಳಿಯುತ್ತಿದ್ದು, ಮಹಾಭಯಂಕರವಾಗಿ ಪ್ರಳಯಕಾಲದ ಮೇಘದಿಂದ ಹುಟ್ಟಿದ

ಗುಡುಗಿಗೆ ಸಮಾನವಾದ ಸಂಜೀವಕನ ಗುಟರೆಯನ್ನು ಕೇಳಿ ದಿಗಿಲು ಪಟ್ಟು—ಇದು ಏನು? ಇಲ್ಲಿ ಯಾರಿದ್ದಾರೆ?—ಎಂದು ತನ್ನಲ್ಲಿ ತಾನು ಆಲೋಚಿಸುತ್ತಾ ಮುಂದಕ್ಕೆ ಹೋಗದೆ ನಿಂತಿತು.

The first Council of Jackals Karataka and Damanaka.

ಆಗ ಪಿಂಗಳಕನ ಮಂತ್ರಿಕುಮಾರರಾದ ಕರಟಕ ದಮನಕರೆಂಬ ಹೆಸರುಳ್ಳ ನರಿಗಳಲ್ಲಿ ದಮನಕನು ತಮ್ಮ ಪ್ರಭುವಾದ ಪಿಂಗಳಕನೆಂಬ ಸಿಂಹರಾಜನು ಗೂಳಿಯ ಗುಟರೆಯನ್ನು ಕೇಳಿ ಬೆದರಿದುದನರಿತು, ಕರಟಕನನ್ನು ನೋಡಿ—ಎಲೈ ಕರಟಕನೇ, ಇಷ್ಟು ದೊಡ್ಡವನಾದ ನಮ್ಮ ಅರಸನು ಅಪೂರ್ವವಾದ ಶಬ್ದವ ಕೇಳಿ ಹೊಳಗೆ ನೀರು ಕುಡಿಯುಹೋಗಲಿಕ್ಕೆ ಹೆದರಿದನು. ನಾವು ಆತನ ಮಂತ್ರಿಕುಮಾರರಾಗಿದ್ದು ಉಪೇಕ್ಷಿಸುವುದು ಯುಕ್ತವಲ್ಲ. ಆತನ ಅಂಜಿಕೆಯ ತೀರಿಸೋಣವೇ—ಎನಲು, ಕರಟಕ ನಿಂತೆಂದನು. ಎಲೈ ಹುಚ್ಚನೇ, ದಾರಿಯಲ್ಲಿ ಹೋಗುವ ವ್ಯಾಜ್ಯವ ಕೊಂಡುಕೊಂಡ ಹಾಗೆ ನಮಗೆ ಇಂಥ ಕೆಲಸವೇಕೆ? ದೇವರು ಕೊಟ್ಟಷ್ಟನ್ನು ಊಟ ಮಾಡಿ ಸುಖವಾಗಿರೋಣ, ಇಂಥ ಕೆಲಸಗಳಿಗೆ ಹೋದರೆ ನಮಗೇನು ಮೋಸ ಬಂದೀತೋ ತಿಳಿಯದು.

ಅವ್ಯಾಪಾರೇಷು ವ್ಯಾಪಾರಂ ಯೋ ನರಃ ಕರ್ತುಮಿಚ್ಛತಿ ।
ಸ ಭೂಮೌ ನಿಹತಶ್ಶೇತೇ ಕೀಲೋತ್ಪಾಟೀವ ವಾನರಃ ॥

ಎಂಬಂತೆ ಅಧಿಕ ಪ್ರಸಂಗಗಳಿಗೆ ಹೋಗುವವನಿಗೆ ಕೀಲನ್ನು ಕಿತ್ತ ಕೋತಿಯ ಹಾಗೆ ನಿಜವಾಗಿ ಹಾನಿ ಬಂದೀತು. ಅದು ಹೇಗೆಂದರೆ:—

ಒಂದು ಪಟ್ಟಣದ ಹತ್ತಿರ ಒಂದು ದೊಡ್ಡಗುಡಿ ಜೀರ್ಣವಾಗಿ ಅರ್ಧ ನೆಲಕ್ಕೆ ಕುಸಿದಿರಲಾಗಿ, ದೇವಭಕ್ತಿಯುಳ್ಳ ಒಬ್ಬ ವೈಶ್ಯನು ಅದನ್ನು ಮುಂಚಿನಹಾಗೆ ನೆಟ್ಟಗೆ ಮಾಡಹೇಳಿ ಶಿಲ್ಪಗಾರರಿಗೆ ಸಲ್ಪ ಧನವನ್ನು ಕೊಟ್ಟನು. ಅವರು ಆ ಧನವನ್ನು ತೆಗೆದುಕೊಂಡು ಗುಡಿಯನ್ನು ಕಟ್ಟುತ್ತಾ ಇರುವ ಸಮಯದಲ್ಲಿ, ಒಂದು ತೇಗಿನ ತೊಲೆಯನ್ನು ಹಲಗೆಗಳಾಗಿ ಕೊಯ್ಯುತ್ತಾ ಅದನ್ನು ಸೀಳುವುದಕ್ಕಾಗಿ ಅಲ್ಲಲ್ಲಿ ಬೆಣೆಗಳನ್ನ ಇಳಿಯು

ಹೊಡೆದು ಅಷ್ಟರಲ್ಲಿ ಹೊತ್ತು ಮುಳುಗಿದುದರಿಂದ ತಮ್ಮ ಮನೆಗಳಿಗೆ ಹೋದರು. ಆಗ ಆ ಸಮೀಪದ ವೃಕ್ಷಗಳನ್ನಾಶ್ರಯಿಸಿ ತಿರುಗುತ್ತಿದ್ದ ಕೋತಿಗಳು ದೇವಾಲಯದ ಹತ್ತಿರಕ್ಕೆ ಬಂದು ಗುಡಿಯ ಹತ್ತಿ ಮರಗಳ ಮೇಲಕ್ಕೆ ಚಕ್ಕನೆ ನೆಗೆಯುತ್ತಾ, ಕೊಂಬೆಯಿಂದ ಕೊಂಬೆಗೆ ಹಾರುತ್ತಾ, ದೊಡ್ಡರೆಂಬೆಗಳನ್ನು ಹಿಡಿದು ತೂಗಾಡುತ್ತಾ, ಪ್ರಾಕಾರಗಳ ಮೇಲೆ ಚಿಮ್ಮಿ ಓಡುತ್ತಾ, ಹುಬ್ಬುಗಳನ್ನು ಹಾರಿಸಿ ಹಲ್ಲುಕಿರಿಯುತ್ತಾ, ಒಂದ ರೊಂದಿಗೊಂದು ಜಗಳವಾಡಿ ಓಡಿಹೋಗುತ್ತಾ, ಹಣ್ಣು ತಿನ್ನುತ್ತಾ, ಜೇನು ಕುಡಿಯುತ್ತಾ, ಸ್ವಾಭಾವಿಕವಾದ ಚಪಲತ್ವದಿಂದ ತಿರುಗುತ್ತಿದ್ದವು. ಅವುಗಳಲ್ಲಿ ಒಂದು ಮುದಿಕೋತಿ ದೈವವಶದಿಂದ ಬೆಣೆಗಳ ಬಡಿದಿದ್ದ ತೇಗಿನ ತೊಲೆಯ ಹತ್ತಿರಕ್ಕೆ ಬಂದು, ಸಂದಿನಲ್ಲಿ ಹಿಂಗಾಲುಗಳನ್ನು ಇಳಿಯ ಬಿಟ್ಟುಕೊಂಡು, ಅದರ ಬೆಣೆಯನ್ನು ಎರಡುಕೈಗಳಿಂದಲೂ ಹಿಡಿದು ಬಲ ವಂತವಾಗಿ ಕಿತ್ತಿತು. ಆಗ ಅದರ ಕಾಲುಗಳು ಆ ಸಂದಿನಲ್ಲಿ ಸಿಕ್ಕಿ ನಲುಗಿ ಹೋದುದರಿಂದ, ಆ ಕೋತಿ ಮೊರೆಯಿಡುತ್ತಾ ಆ ನೋವ ಸಹಿಸಲಾರದೆ ಮೃತವಾಯಿತು. ಆದಕಾರಣ ಈಪ್ರಕಾರ ತನಗೆ ನಿಮಿತ್ತವಿಲ್ಲದ ಕೆಲಸಕ್ಕೆ ಪ್ರವೇಶಿಸುವವರಿಗೆ ಈಗ ಹೇಳಿದ ಕೋತಿಯ ಹಾಗೆ ಆದೀತು. ನಮಗೆ ಅದನ್ನು ವಿಚಾರಿಸಬೇಕಾದುದೇನು? ನಮ್ಮ ದೊರೆ ಭಕ್ಷಿಸಲಾಗಿ ಮಿಕ್ಕ ಮಾಂಸವನ್ನು ತಿನ್ನೋಣ ಬಾ—ಎನಲು, ದಮನಕನಿಂತೆಂದನು.

He who has the power of doing kindness and unkindness is the man.

ಸುಹೃದಾಮುಪಕಾರ ಕಾರಣಾದ್ದ್ವಿಷದಾಮಪ್ಯಪಕಾರ ಕಾರಣಾತ್ ।
ನೃಪಸಂಶ್ರಯ ಇಷ್ಯತೇ ಬುಧೈರ್ಜಠರಂ ಕೋ ನ ಬಿಭರ್ತಿ ಕೇವಲಂ ॥
ಜೀವಿತೇ ಯಸ್ಯ ಜೀವಂತಿ ವಿಪ್ರಾ ಮಿತ್ರಾಣಿ ಬಾಂಧವಾಃ ।
ಸಫಲಂ ಜೀವಿತಂ ತಸ್ಯ ಆತ್ಮಾರ್ಥಂ ಕೋ ನ ಜೀವತಿ ॥

ಮಿತ್ರರಿಗೆ ಉಪಕಾರವನ್ನೂ ಶತ್ರುಗಳಿಗೆ ಅಪಕಾರವನ್ನೂ ಮಾಡು ವುದಕ್ಕಾಗಿ ಲೋಕದಲ್ಲಿಯ ಜನರು ಅರಸರನ್ನು ಸೇವಿಸುತ್ತಾರೆಯೇ ಹೊರತು ತಮ್ಮ ಹೊಟ್ಟೆಗಳ ಹೊರೆವುದಕ್ಕಲ್ಲ. ಅದಕ್ಕೋಸ್ಕರ ಸೇವಿ

ಸುವುದಕ್ಕಿಂತ ಸಾಯುವುದುಮೇಲು. ಒಬ್ಬನಿಂದ ಅನೇಕರು ಜೀವಿಸುವುದಿಲ್ಲದಿದ್ದರೆ ಅವನ ಜನ್ಮವು ಏತಕ್ಕೆ? ಮೂಗಿನಿಂದ ಚುಚ್ಚಿಕೊಂಡು ತಿನ್ನುವ ಕಾಗೆ ತನ್ನ ಹೊಟ್ಟೆಯ ತುಂಬಿಕೊಳ್ಳುವುದಿಲ್ಲವೆ? ಇದೂ ಅಲ್ಲದೆ ಸ್ವಲ್ಪ ಮಿದುಡುಳ್ಳ ಕಠಿಣವಾದ ಮೂಳೆ ಸಿಕ್ಕಿದರೂ ನಾಯಿ ಸಂತೋಷಿಸುತ್ತದೆ. ಅದರಿಂದ ಅದರ ಹಸಿವುಕೂಡ ತೀರುವುದಿಲ್ಲ. ಸಿಂಹವು ತನ್ನ ಹತ್ತಿರಕ್ಕೆ ಅಲ್ಪಮೃಗ ಬಂದರೂ ಅದನ್ನು ಬಿಟ್ಟುಬಿಟ್ಟು ಮದಿಸಿದ ಆನೆಯನ್ನು ಕೊಂದು ಅದರ ಕುಂಭಸ್ಥಲದಲ್ಲಿಯ ಮಿದುಡನ್ನು ಭಕ್ಷಿಸಲು ಯತ್ನಿಸುತ್ತದೆ. ಹೀನರೂ ಅಧಿಕರೂ ಆದ ಸಕಲಮನುಷ್ಯರೂ ತಮ್ಮತಮ್ಮ ಬಲಾನುಸಾರವಾಗಿ ಕೆಲಸಗಳ ಮಾಡಲಪೇಕ್ಷಿಸುತ್ತಾರೆ. ಹಾಗೆ ನೀನೂ ನಿನ್ನ ಬಲಕ್ಕೆ ತಕ್ಕಷ್ಟು ಮಾಡ ನೆನಸಿದೆ. ಮೇಲಾಗಿ ನಾಯಿ ತನಗೆ ಆಹಾರ ಕೊಡುವವನ ಬಳಿಯಲ್ಲಿ ಬಾಲವನ್ನು ನುಲಿದುಕೊಳ್ಳುತ್ತಾ ಕಾಲುಗಳನ್ನು ನೆಲಕ್ಕೆ ಚಾಚಿಕೊಂಡು ಭೂಮಿಯ ಮೇಲೆ ಬಿದ್ದು ಹೊಟ್ಟೆ ಬಾಯಿ ತೋರಿಸುವುದು. ಹೀಗೆ ಏನೇನು ಮಾಡಿದರೂ ನಾಯಿಗೆ ಒಂದು ತುತ್ತು ಅನ್ನವೇ ಹೊರತು ಹೊಟ್ಟೆತುಂಬ ಇಕ್ಕರು. ಆನೆ ಬಹುಧೈರ್ಯದಿಂದ ನೋಡುತ್ತಿರುವುದು. ಒಳ್ಳೆಯ ಮಾತುಗಳನ್ನು ತುಂಬ ಹೇಳಿದ ಹೊರತು ಆಹಾರವನ್ನು ತೆಗೆದುಕೊಳ್ಳದು. ಅದಕ್ಕೆ ಬೇಕಾದಷ್ಟು ಆಹಾರ ಕೊಡುವರು. ಹೀನನಾದವನು ಎಷ್ಟು ದೀನನಾಗಿ ಕೇಳಿಕೊಂಡರೂ ಅವನಿಗೆ ಯಾರೂ ಕೊಡರು; ಒಂದುವೇಳೆ ಕೊಟ್ಟರೂ ಸ್ವಲ್ಪವೇ ಕೊಡುವರು. ಅಧಿಕನಿಗಾದರೆ ಅವನು ಕೇಳದಿದ್ದರೂ ಅರಸರು ಅವನ ಆಸೆ ತೀರುವ ಹಾಗೆ ಕೊಡುವರು. ಘನವಾದ ವಿದ್ಯೆಯಿಂದಲೂ ಪರಾಕ್ರಮದಿಂದಲೂ ಉಪಾಯದಿಂದಲೂ ಅರಸರು ನೋಡಿ ಮೆಚ್ಚುವಂತೆ ಬದುಕುವುದೇ ಬದುಕು; ಇದು ಹೊರತು ನೀಚವಾದ ಬದುಕು ಏತಕ್ಕೆ? ನಾಯಿ ಯಾವಾಗಲೂ ಬಾಲವನ್ನು ಆಡಿಸುತ್ತಾ ಒಂದು ಹಿಡಿಯನ್ನವನ್ನು ತಿನ್ನಲೇತಿನ್ನುತ್ತದೆ. ಪೌರುಷದಿಂದಲೂ ಜ್ಞಾನದಿಂದಲೂ ಕೀರ್ತಿಯಿಂದಲೂ ಪ್ರಸಿದ್ಧಿಗೇರಿದವನ ಸಂಪತ್ತು ಒಪ್ಪೊತ್ತು ನಿಂತರೂ ಸಾಕು. ತನ್ನ ಹೊಟ್ಟೆಯುಮಾತ್ರ ತುಂಬಿಕೊಳ್ಳುವ ಕಾಗೆ ಬಹುಕಾಲ ಬದುಕಿದರೂ ಫಲವೇನು? ಸ್ವಲ್ಪ ನೀರಿನಿಂದ ಕಲ್ಲುಭೂಮಿಯಲ್ಲಿ ಪ್ರವಾಹ ಹೊರಳಿ

ಹರಿದ ಹಾಗೆ ಸ್ವಲ್ಪ ಫಲದಿಂದಲೇ ಅಲ್ಪನು ಬಹಳ ಸಂತೋಷವನ್ನು ಹೊಂದುವನು. ಇದು ಹಿತ ಇದು ಹಿತವಲ್ಲ ಎಂಬ ವಿವೇಕವಿಲ್ಲದೆ ಅನೇಕ ವಾದ ವೇದೋಕ್ತಾಚಾರಗಳನ್ನು ಬಿಟ್ಟು ತನ್ನ ಹೊಟ್ಟೆಯ ಮಾತ್ರ ತುಂಬಿಸಿಕೊಳ್ಳಲಿಚ್ಛೈಸುವ ನರನು ಪಶುವಿಗೆ ಸಮಾನನು. ಭಾರವುಳ್ಳ ಬಂಡಿಯನ್ನೆಳೆಯುತ್ತಾ ಹುಲ್ಲುಮೇಯುತ್ತಾ ಹಳ್ಳ ದಿಣ್ಣೆಯಾಗಿರುವ ಸ್ಥಲ ಗಳಲ್ಲಿ ಉಳುತ್ತಾ ಈಪ್ರಕಾರ ಲೋಕಕ್ಕೆ ಉಪಕಾರಮಾಡುತ್ತಾ ಇರುವ ಪವಿತ್ರವಾದ ಜನ್ಮವುಳ್ಳ ವೃಷಭವು ನರಪಶುವಿಗಿಂತ ಶ್ರೇಷ್ಠವಾದುದು.

ಎನಲು ಕೇಳಿ—ಎಲೈ ನಾವು ಪ್ರಧಾನರಲ್ಲವಾದುದರಿಂದ ಯಾವ ಕೆಲಸಕ್ಕೂ ಶಕ್ತರಲ್ಲ. ನಮಗೆ ಇಷ್ಟು ನೀತಿಗಳಿಂದೇನು ಕೆಲಸ?— ಎಂದು ಕರಟಕನು ನುಡಿಯಲು, ಮರಳಿ ದಮನಕನಿಂತೆಂದನು.

ಯಾವನೊಬ್ಬನು ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯದಿಂದ ಬುದ್ಧಿ ಯುಳ್ಳವನಾಗುವನು; ಬುದ್ಧಿಬಲದಿಂದ ಅರಸರಿಂದ ಪೂಜ್ಯನಾಗುವನು. ಅರಸರು ಮಾನಿಸುವುದರಿಂದ ಅವನ ಬುದ್ಧಿಗೆ ಪ್ರಕಾಶವುಂಟಾಗುವುದು. ಅದರಿಂದ ಅವನು ರಾಜ್ಯತಂತ್ರ ನಡಿಸಲಿಕ್ಕೆ ಪ್ರಧಾನನಾಗುವನು. ಪ್ರಧಾ ನತ್ವಬರಲು ಸಮಸ್ತವೂ ಉಂಟಾಗುವುದು. ಅಪ್ರಧಾನನು ಪ್ರಧಾನ ನಾಗುವುದಕ್ಕೆ ಎಷ್ಟು ಹೊತ್ತು ಹಿಡಿದೀತು? ಮೇಲಾಗಿ ಒಬ್ಬನ ನಡತೆ ಒಳ್ಳೆಯದಾಗಿದ್ದರೆ ಜನರು ಅವನನ್ನು ಗಣ್ಯವಾಗಿ ನೋಡುವರು; ನಡತೆ ಕೆಟ್ಟದಾದರೆ ಅವನ ನಂಟರು ಸಹ ಅವನನ್ನು ಅಲಕ್ಷ್ಯವಾಗಿ ನೋಡು ವರು. ದೊಡ್ಡತನವೂ ಚಿಕ್ಕತನವೂ ನಡತೆಯಿಂದಲೇ ಬರುವುದು. ಒಂದು ದೊಡ್ಡ ಕಲ್ಲನ್ನು ಮಹಾಪ್ರಯತ್ನದಿಂದ ಬೆಟ್ಟದ ಮೇಲಕ್ಕೆ ತೆಗೆದು ಕೊಂಡು ಹೋಗುವುದು ಕಷ್ಟ; ಆ ಕಲ್ಲನ್ನು ಅಲ್ಲಿಂದ ಕೆಳಕ್ಕೆ ತಳ್ಳಿಬಿಡು ವುದು ಸುಲಭ. ಹಾಗೆಯೇ ಒಳ್ಳೆಯ ಗುಣಗಳುಳ್ಳವನೆಂದು ಹೊಗಳಿಸಿ ಕೊಳ್ಳುವುದು ಕಷ್ಟ, ದುರ್ಜನನೆಂದು ಹೆಸರೆತ್ತುವುದು ಸುಲಭ.

ಎಂದು ಹೇಳಲಾಗಿ ಕರಟಕನು ಕೇಳಿ—ಎಲೈ ಒಳ್ಳೆಯ ನೀತಿ ವಾಕ್ಯಗಳ ವಿವರಿಸಿ ತಿಳಿಸಿದೆ. ನನ್ನ ಮನಸ್ಸಿನಲ್ಲಿಯ ಸಂಶಯ ತೀರಿತು. ಈಗ ನೀನೇನು ಮಾಡಬೇಕೆಂದಿದ್ದೀಯೋ ಅದನ್ನು ಹೇಳು—ಎನಲು, ದಮನಕನಿಂತೆಂದನು.

ಬಲವೂ ಪರಾಕ್ರಮವೂ ಧೈರ್ಯವೂ ಉಳ್ಳ ನಮ್ಮ ಅರಸನು ನೀರು ಕುಡಿವುದಕ್ಕಾಗಿ ನದಿಗೆ ಹೋಗಿ, ಇಳಿಯಲಿಕ್ಕೆ ಅಂಜಿ ಇದ್ದಾನೆ. ಅದು ನಿನಗೆ ಹೇಗೆ ತಿಳಿಯಿತು ಎನ್ನುತೀಯೋ ಕೇಳು ;

> ಉದೀರಿತೋರ್ಥಃ ಪಶುನಾಪಿ ಗೃಹ್ಯತೇ ಹಯಾಶ್ಚ ನಾಗಾಶ್ಚ ವಹಂತಿ ದೇಶಿತಾಃ |
> ಅನುಕ್ತಮಪ್ಯೂಹತಿ ಪಂಡಿತೋಜನಃ ಪರೇಂಗಿತಜ್ಞಾನಫಲಾಹಿ ಬುದ್ಧಯಃ ||

ಯಾವಕಾರ್ಯವೂ ಭಾವಜ್ಞರಿಗೆ ವಿಶದವಾಗಿರುವುದು. ಪಶುಗಳು ಬಬ್ಬರ ಮಾತುಗಳ ಕೇಳಿ ಅವರು ಹೇಳಿದ ಪ್ರಕಾರ ಪ್ರವರ್ತಿಸುವುವು. ಕುದುರೆಗಳೂ ಆನೆಗಳೂ ಶಿಕ್ಷೆಗಳಿಂದ ಒಬ್ಬರ ವಶವಾಗಿ ಅವರನ್ನು ತಮ್ಮ ಮೇಲೆ ಏರಿಸಿಕೊಂಡು ತಿರುಗುತ್ತಿರುವುವು. ಪಂಡಿತನಾದವನು ಒಬ್ಬರು ಹೇಳದ ತಾತ್ಪರ್ಯವನ್ನು ಊಹಿಸುವನು. ಪರರ ಇಂಗಿತವನ್ನು ತಿಳಿದು ಕೊಳ್ಳುವುದೇ ಬುದ್ಧಿಯಿರುವುದಕ್ಕೆ ಫಲ. ಬುದ್ಧಿಯಿಲ್ಲದವರು ದೈವ ವನ್ನೇ ಚಿಂತಿಸಿ ತಮ್ಮ ಪ್ರಯತ್ನವೇನನ್ನೂ ಮಾಡದಿರುವರು. ಅಂಥ ವರು ಭೂಮಿಯಲ್ಲಿ ಹುಟ್ಟಿ ಏನುಪ್ರಯೋಜನ ? ಈ ಲೋಕದಲ್ಲಿ ಪರರ ಇಂಗಿತವನ್ನು ತಿಳಿದುಕೊಳ್ಳಲಾರದವನ ಜನ್ಮವೇತಕ್ಕೆ ? ಆದುದರಿಂದ ಈಗ ನಾನು ಅರಸನ ಬಳಿಗೆ ಹೋಗಿ ನನ್ನಮೇಲೆ ಆತನ ಮನಸ್ಸು ಬರುವಹಾಗೆ ಸೇವಿಸಿ ಆತನಿಂದ ಮನ್ನಿಸಲ್ಪಡುವೆನು—ಎನಲು, ಕೇಳಿ— ಎಲೈ ಸ್ನೇಹಿತನೇ, ನೀನು ಮುಂಚೆ ಅರಸರನ್ನು ಸೇವಿಸಿದವನಲ್ಲ. ಅವರ ಚಿತ್ತವೃತ್ತಿಯ ತಿಳದು ಹೇಗೆ ನಡೆಯಬಲ್ಲೆ—ಎಂದು ಕರಟಕನು ಕೇಳಿ ದನು. ಅದಕ್ಕೆ ದಮನಕನು ತಿರುಗಿ ಇಂತೆಂದನು.

> ಕೋತಿಭಾರಸ್ಸಮರ್ಥಾನಾಂ ಕಿಂ ದೂರಂ ವ್ಯವಸಾಯಿನಾಂ |
> ಕೋ ವಿದೇಶಸ್ಸವಿದ್ಯಾನಾಂ ಕಃ ಪರಃ ಪ್ರಿಯವಾದಿನಾಂ ||

ಬಹಳ ಸಮರ್ಥರಾದವರಿಗೆ ಅಸಾಧ್ಯವೊಂದುಂಟೋ ? ಉದ್ಯೋ ಗಮಾಡಬಲ್ಲವರಿಗೆ ದೂರ ಭೂಮಿಯೊಂದುಂಟೋ ? ವಿದ್ಯೆಗಳನ್ನು ಕಲಿ ತವರಿಗೆ ಪರದೇಶವೊಂದುಂಟೋ ? ಪ್ರಿಯವಾದಿಗಳಾದವರಿಗೆ ಶತ್ರುಗ ಳುಂಟೋ ? ಅರಸರೂ ಹೆಂಗಸರೂ ಬಳ್ಳಿಗಳೂ ಯಾವಾಗಲೂ ತಮ್ಮ ಸಮೀಪವನ್ನು ಬಿಡದ ಆಶ್ರಿತರನ್ನು ಪರಿಗ್ರಹಿಸುವರಲ್ಲದೆ 'ಇವನಿಗೆ ವಿದ್ಯೆ

ಬಾರದೆಂದೂ, ಇವನದು ಒಳ್ಳೆಯ ಕುಲವಲ್ಲವೆಂದೂ, ಇವನು ತಿಳಿದವನ ಲ್ಲವೆಂದೂ, ಅನಾದರಣೆ ಮಾಡರು ; ತಮ್ಮನ್ನು ಸೇವಿಸುತ್ತಿದ್ದರೆ ಸಾಕೆಂದು ನೆನಸುವರು. ಯಾವ ಭೃತ್ಯನು ಅರಸನ ಕೋಪಪ್ರಸಾದಗಳ ಕುರುಹುಗ ಳನ್ನರಿತು ನಡೆದುಕೊಳ್ಳುವನೋ ಅವನು ಆ ಅರಸನ ದಯೆಯಿಂದ ಪ್ರಸಿದ್ಧಿ ಪಡೆಯುವನು. ಆದುದರಿಂದ ನಮ್ಮ ಅರಸನು ಮನ್ನಿಸುವ ಸೇವಕ ರೊಂದಿಗೆ ಹೋಗಿ ಆತನ ಸಮೀಪವನ್ನು ಬಿಡದೆ ಅನುಸರಿಸಿ ಇರುವೆನು ಎಂದನು. ಆಗ ಕರಟಕನು—ಎಲೈ ಅರಸನ ಬಳಿಗೆ ಹೋಗಿ ನೀನೇನು ಮಾಡುತ್ತೀಯೆ ? ಎಂದು ಕೇಳಲಾಗಿ ದಮನಕನಿಂತೆಂದನು.

ಒಳ್ಳೆಯ ಮಳೆ ಬಿದ್ದರೆ ಬೀಜದಿಂದ ಬೀಜವು ಹೇಗೆ ಉಂಟಾಗು ವುದೋ ಹಾಗೆಯೇ ಚೆನ್ನಾಗಿ ಉತ್ತರಕೊಟ್ಟರೆ ಅದರಿಂದ ಮತ್ತೊಂದು ಉತ್ತರ ಹುಟ್ಟುತ್ತದೆ. ನೀತಿಮಾರ್ಗದಲ್ಲಿ ಪ್ರವರ್ತಿಸಿದ ಬುದ್ಧಿವಂತರು ಒಳ್ಳೆಯ ಉಪಾಯವನ್ನು ತೋರಿಸುವುದರಿಂದ ಬರುವ ಕಾರ್ಯಸಿದ್ಧಿಯೂ ಅಪಾಯವನ್ನು ತೋರಿಸುವುದರಿಂದ ಬರುವ ಕೆಲಸಗೇಡೂ ಪ್ರತ್ಯಕ್ಷವಾಗಿ ಕಾಣಿಸುವಹಾಗೆ ತಿಳಿಸುತ್ತಾರೆ. ನಾನು ಸಮಯವನ್ನು ವಿಚಾರಿಸದೆ ಹೇಳೆನು. ಬೃಹಸ್ಪತಿಯಾದರೂ ಸಮಯವನ್ನರಿಯದೆ ಮಾತನಾಡಿದರೆ ಅವಮಾನವನ್ನು ಹೊಂದುವನು. ಯಾವ ಗುಣದಿಂದ ಲೋಕದಲ್ಲಿ ಸತ್ಪು ರುಷರಿಂದ ಹೊಗಳಿಸಿಕೊಳ್ಳುವನೋ ಅದೇ ಒಳ್ಳೆಯಗುಣ. ಆ ಗುಣ ದಿಂದಲೇ ನರನು ಗುಣವಂತನೆನಿಸಿಕೊಳ್ಳುವನು. ಆದುದರಿಂದ ಆ ಗುಣ ವನ್ನು ಕಾಪಾಡಿಕೊಂಡು ವೃದ್ಧಿಮಾಡಿಕೊಳ್ಳಬೇಕು.—ಎನಲು, ಕರಟಕ ನು ನಿನಗೆ ಕಾರ್ಯಸಿದ್ಧಿಯಾಗುವುದು ಹೋಗೆಂದು ದಮನಕನೊಡನೆ ಹೇಳಿದನು.

Damanaka visits Pingalaka.

ಆಮೇಲೆ ದಮನಕನು ಪಿಂಗಳಕನ ಬಳಿಗೆ ಹೋಗಿ ವಿನಯಭಯ ಭಕ್ತಿಗಳಿಂದೆರಗಲು, ಪಿಂಗಳಕನು ಅವನನ್ನು ಬಹಳ ಆದರಣೆಯಿಂದ ಕುಳಿತುಕೊಳ್ಳಹೇಳಿ, ಬಹಳ ದಿನಕ್ಕೆ ನಿನ್ನ ನೋಡಿದೆನೆಂದು ನುಡಿಯಲಾಗಿ ದಮನಕನಿಂತೆಂದನು.

ತಮಗೆ ನನ್ನಿಂದ ಪ್ರಯೋಜನವೇನು ? ಅದರೂ ಸಮಯಬಂ ದಾಗ ಚೆನ್ನಾಗಿ ಆಲೋಚನೆ ಹೇಳಬೇಕೆಂದು ಬಂದೆನು.

ಆಪದ್ಯುನ್ಮಾರ್ಗಗಮನೇ ಕಾರ್ಯಕಾಲಾತ್ಯಯೇಷು ಚ ।
ಅಪೃಷ್ಟೇನಾಪಿ ವಕ್ತವ್ಯಂ ಭೃತ್ಯೇನ ಹಿತಮಿಚ್ಛತಾ॥

ಮಂತ್ರಿಯಾದವನು ತನ್ನ ಅರಸನಿಗೆ ಸಮಯಬಂದಾಗ ಕಾರ್ಯಾಕಾ ರ್ಯಗಳನ್ನು ತಿಳಿಸುವುದಕ್ಕಾಗಿ ತನ್ನ ಕರೆಯದೆ ಇದ್ದರೂ ಅರಸನ ಬಳಿಗೆ ಬರಬೇಕು. ನಾನೇ ಅಲ್ಲ, ಎಂಥ ಮನುಷ್ಯನಾದರೂ ಅರಸುಗಳಿಗೆ ಒಂದಾ ನೊಂದುವೇಳೆ ಕೆಲಸಕ್ಕೆ ಬರುವನು.

ದಂತಸ್ಯ ನಿರ್ಘರ್ಷಣಕೇನ ರಾಜನ್ ಕರ್ಣಸ್ಯ ಕಂಡೂಯನಕೇನ ವಾಪಿ ।
ತೃಣೇನ ಕಾರ್ಯಂ ಭವತೀಶ್ವರಾಣಾಂ ಕಿಮಂಗ ವಾಕ್ಪಾಣಿಮತಾ ನರೇಣ ॥

ಅಚೇತನವಾದ ಕಡ್ಡಿಗಳು ಸಹ ಕಿವಿಯ ನವೆಯನ್ನು ಹೋಗಲಾ ಡಿಸಿಕೊಳ್ಳೋಣ ಹಲ್ಲುಚುಚ್ಚಿಕೊಳ್ಳೋಣ ಮುಂತಾದ ಕೆಲಸಕ್ಕೆ ಬರು ತ್ತಿರಲಾಗಿ, ಬಾಯಿ ಕೈಗಳು ಮೊದಲಾದ ಅವಯವಗಳುಳ್ಳ ಮನುಷ್ಯನು ಕೆಲಸಕ್ಕೆ ಬಾರದೆ ಹೋದಾನೇ ? ಧೈರ್ಯವಂತನಿಗೆ ಒಂದುವೇಳೆ ಆಪತ್ತು ಬಂದರೂ ಅವನು ಮುಂಚಿನ ಧೈರ್ಯವನ್ನು ಬಿಡನು. ದೀವಟಿಗೆ ಯನ್ನು ತಲೆಕೆಳಗಾಗಿ ಹಿಡಿದರೂ ಅದರ ಜ್ವಾಲೆಯು ಊರ್ಧ್ವಮುಖ ವಾದೀತೇ ಹೊರತು ಎಂದಿಗೂ ಅಧೋಮುಖವಾಗಲಾರದು. ಮತ್ತು ವಿಶೇಷಜ್ಞನಾದ ಅರಸನಿಗೆ ಸಮಸ್ತವೂ ತಿಳಿವುದು. ಪೈರಿಡುವವನು ಸಮಸ್ತವಾದ ಬೀಜಗಳನ್ನು ಯುಕ್ತವಾದ ಸಮಯದಲ್ಲಿ ಬಿತ್ತಿ ಮೊಳೆ ಬಿಟ್ಟಕೂಡಲೇ ನೋಡಿ ಈ ಪೈರಿಂದ ಇಷ್ಟುಮಾತ್ರ ಹುಟ್ಟುವಳಿಯಾದೀ ತೆಂದು ತಿಳಿದುಕೊಳ್ಳುವಹಾಗೆ, ಬುದ್ಧಿವಂತನಾದವನು ಮನುಷ್ಯರ ಆಕಾ ರವನ್ನು ನೋಡಿ ಅವರ ಮನೋವೃತ್ತಿಯನ್ನು ನಿಶ್ಚಯಿಸುವನು. ಅರ ಸನಾದವನು ತನ್ನ ಭೃತ್ಯರ ಯೋಗ್ಯತಾಯೋಗ್ಯತೆಗಳನ್ನು ಅರಿಯದೆ ಅವರಿಗೆ ಉದ್ಯೋಗಗಳ ಕೊಟ್ಟರೆ, ತಲೆಯಲ್ಲಿ ಧರಿಸುವ ಮಾಣಿಕ್ಯವನ್ನು ಕಾಲಿನಲ್ಲೂ ಕಾಲಿನಲ್ಲಿ ಧರಿಸತಕ್ಕ ಅಂದುಗೆಯನ್ನು ತಲೆಯಲ್ಲೂ ಧರಿಸಿದ ಹಾಗೆ ಅಪಹಾಸ್ಯಕ್ಕೆ ಆಸ್ಪದವಾಗುವನು. ಕುಂದಣದಲ್ಲಿ ಕೆತ್ತತಕ್ಕ ಶ್ರೇಷ್ಠ

ರತ್ನವನ್ನು ಹಿತ್ತಾಳೆಯಲ್ಲಿ ಕೆತ್ತಿದರೆ ರತ್ನಕ್ಕೇನು ಕುಂದುಕ ಬಂದೀತು? ತನ್ನ ಭಂಟನಿಗೆ ತಕ್ಕ ಕೆಲಸ ಇಡದಿದ್ದರೆ ಆ ತಪ್ಪು ಅರಸನದೇ ಹೊರತು ಭಂಟನದಲ್ಲ. ಇವನು ಬುದ್ಧಿವಂತನು, ಇವನು ತನ್ನಲ್ಲಿ ಪ್ರೀತಿಯುಳ್ಳವನು, ಇವನು ಮಂದನು, ಎಂದು ಅರಸನು ತಿಳಿದುಕೊಂಡು ಅವರವರನ್ನು ತಕ್ಕ ಕೆಲಸಗಳಲ್ಲಿ ಇಟ್ಟರೆ ಅವರು ಆತನನ್ನು ಬಿಡದೆ ಬಹುಕಾಲ ಸೇವಿಸುತ್ತಿರುವರು. ಕುದುರೆಗೂ ಆಯುಧಕ್ಕೂ ಶಾಸ್ತ್ರಕ್ಕೂ ವೀಣೆಗೂ ವಾಕ್ಕಿಗೂ ಹೆಂಗಸಿಗೂ ಕಲಿತ ಮನುಷ್ಯನಿಗೂ ಬಂದಾನೊಂದು ಪುರುಷನನ್ನು ಹೊಂದುವುದರಿಂದ ಯೋಗ್ಯತೆಯುಂಟಾಗುವುದು; ಬಂದಾನೊಂದು ಪುರುಷನನ್ನು ಹೊಂದುವುದರಿಂದ ಅಯೋಗ್ಯತೆಯುಂಟಾಗುವುದು. ಸೇವಕನು ಭಕ್ತಿಯುಳ್ಳವನಾಗಿದ್ದರೂ ಅಸಮರ್ಥನಾದರೆ ಪ್ರಯೋಜನವೇನು? ಸಮರ್ಥನಾದರೂ ಭಕ್ತಿಯಿಲ್ಲದವನಾದರೆ ಪ್ರಯೋಜನವೇನು? ಸಮರ್ಥನಾಗಿ ಭಕ್ತಿಯುಳ್ಳ ನನ್ನನ್ನು ನೀವು ಅಲಕ್ಷ್ಯವಾಗಿ ಕಾಣಬೇಡಿ. ಅರಸನು ಅವಮಾನಪಡಿಸುವುದರಿಂದ ಪರಿಜನರು ಬುದ್ಧಿಹೀನರಾಗುವರು; ಅವರು ಬುದ್ಧಿಹೀನರಾಗುತ್ತಲೇ ದೊಡ್ಡವರು ಅರಸನನ್ನು ಬಿಡುವರು; ದೊಡ್ಡವರು ಅರಸನನ್ನು ಬಿಡುತ್ತಲೇ ನ್ಯಾಯವು ನಶಿಸಿ ಅನ್ಯಾಯವು ವೃದ್ಧಿಯಾಗುವುದು; ನ್ಯಾಯವು ನಶಿಸುತ್ತಲೇ ಸಮಸ್ತವೂ ಕೆಟ್ಟುಹೋಗುವುದು. ಆದುದರಿಂದ ಅರಸನು ವಿವೇಕವುಳ್ಳವನಾಗಿ ಇರಬೇಕು.

ಎಂದು ದಮನಕನು ನುಡಿಯಲು ಪಿಂಗಳಕನಿಂತೆಂದನು—ಎಲೈ ನೀನು ನಮ್ಮ ಪ್ರಧಾನಮಂತ್ರಿಪುತ್ರನು. ಆದಕಾರಣ ಹೇಳಬೇಕಾದ ಮಾತುಗಳನ್ನು ಹೇಳಬಹುದು; ಅದರಿಂದ ತಪ್ಪೇನು?—ಎನಲು; ದಮನಕನಿಂತೆಂದನು –ಓ ಮಹಾನುಭಾವಾ, ಭೃತ್ಯನು ನಿಮ್ಮ ಸಂಗಡ ಬಂದು ಬಿನ್ನಹ ಮಾಡಿಕೊಳ್ಳುತ್ತಾನೆ; ಏನಂದರೆ, ನೀವು ನೀರು ಕುಡಿವುದಕ್ಕಾಗಿ ಯಮುನಾನದಿಯಲ್ಲಿ ಇಳಿವಾಗ ಆಶ್ಚರ್ಯಪಟ್ಟವರಹಾಗೆ ಅಲ್ಲಿಯೇಕೆ ನಿಂತಿರಿ? ಪಿಂಗಳಕನಿಂತೆಂದನು,—ಕೇಳು ದಮನಕಾ, ಸಮಸ್ತ ಜಂತುಗಳ ಸಮೂಹಗಳುಳ್ಳ ಈ ಅರಣ್ಯ ನನ್ನ ಅಧೀನ. ಇಷ್ಟುದಿನ ಈ ಅರಣ್ಯವನ್ನು ಬಿಡದೆ ಇದ್ದೆನು; ಇನ್ನು ನಾನು ಬಿಡಬೇಕಾಗಿ ಬಂದಿತು.

ಏತರಿಂದೆಂದರೆ, ಪ್ರಳಯಕಾಲದಲ್ಲಿಯ ಸಿಡಿಲಿನಹಾಗೆ ಒಂದು ಶಬ್ದವು ನನ್ನ ಕಿವಿಗಳಿಗೆ ಕೇಳಿಸಿತು. ಅದಕ್ಕೆ ನಾನು ಹೆದರಿ ಶಬ್ದಕೇಳಿಸಿದ ಸ್ಥಲದಲ್ಲೇ ನಿಂತೆನು. ನಾನು ಏನು ಹೇಳುವೆನು! ನನಗೆ ನೋಡಿದರೆ ಅದು ದೊಡ್ಡ ಜಂತುವಿನ ಶಬ್ದವಾಗಿ ತೋರುತ್ತದೆ; ಚಿಕ್ಕ ಜಂತುವಿಗೆ ಅಂಥಾ ಶಬ್ದವುಂಟೇ? ಇನ್ನು ನಾನೇನುಮಾಡಲಿ—ಎನಲು; ಪಿಂಗಳಕನಿಗೆ ದಮನಕನು ಅಡ್ಡಬಿದ್ದು,—ಸ್ವಾಮಿ, ಶಬ್ದಮಾತ್ರಕ್ಕೆ ಅಂಜಬಾರದು.

ಅಂಭಸಾ ಭಿದ್ಯತೇ ಸೇತುಸ್ತಥಾ ಮಂತ್ರೋಽಪ್ಯರಕ್ಷಿತಃ।
ಪೈಶುನ್ಯಾದ್ಭಿದ್ಯತೇ ಸ್ನೇಹೋ ವಾಗ್ಭಿರ್ಭಿದ್ಯೇಹಿ ಕಾತರಃ॥

ಬಹಳ ನೀರಿನಿಂದ ಕಟ್ಟೆ ಒಡೆದು ಹೋಗುವುದು; ಗುಟ್ಟುಪಡಿಸದೆ ಇದ್ದರೆ ಆಲೋಚನೆ ಹೊರಗೆ ಬೀಳುವುದು; ಚಾಡಿಯಿಂದ ಸ್ನೇಹವು ನಶಿಸುವುದು; ಮಾತುಗಳಿಗೆ ಹೆದರಿದವನು ಕೆಟ್ಟುಹೋಗುವನು. ಆದಕಾರಣ ಅಧೈರ್ಯದಿಂದ ತ್ವರೆಪಟ್ಟರೆ ಕೆಲಸ ಕೆಟ್ಟುಹೋದೀತು. ಧೈರ್ಯವನ್ನವಲಂಬಿಸಿ ನಿಧಾನವಾಗಿ ವಿಚಾರಿಸಬೇಕು. ಇದಕ್ಕೆ ಒಂದು ಪೂರ್ವಕಥೆ ಹೇಳುತ್ತೇನೆ ಕೇಳಿರಿ ಎಂದು ಮರಳಿ ಇಂತೆಂದನು.

Judge patiently. The Fox and the field of battle.

ಪೂರ್ವಕಾಲದಲ್ಲಿ ಒಂದು ನರಿ ಒಂದು ವನದಲ್ಲಿ ಸಂಚರಿಸುತ್ತಾ ಎಲ್ಲೂ ಆಹಾರ ಸಿಕ್ಕದೆ ಬಹಳ ಹಸಿವಿನಿಂದ ಕಂಗೆಟ್ಟಿದ್ದಿತು. ಹೀಗಿರಲು ಅದರ ಅದೃಷ್ಟದಿಂದ ಒಂದು ದಿಕ್ಕಿನಲ್ಲಿ ಕುಪ್ಪೆಗಳಾಗಿ ಬಿದ್ದಿದ್ದ ತೇರುಗಳನ್ನೂ ಸುಂಡಲುಗಳು ಕೊಂಬುಗಳು ತೊಡೆಗಳು ತಲೆಗಳು ಕಡಿದುಬಿದ್ದಿದ್ದ ಆನೆಗಳನ್ನೂ, ಕುತ್ತಿಗೆಗಳು ಕಾಲುಗಳು ಪಕ್ಕಗಳು ತುಂಡಾಗಿ ಬಿದ್ದಿದ್ದ ಕುದುರೆಗಳನ್ನೂ, ಮೂಗುಗಳು ಕೆನ್ನೆಗಳು ಬೆಟ್ಟುಗಳು ಕೈಕಾಲುಗಳು ಮುಖಗಳು ತುಂಡಿಸಿ ನೆಲದಮೇಲೆ ಬಿದ್ದಿದ್ದ ಕಾಲಾಳುಗಳನ್ನೂ ಉಳ್ಳ ಭಯಂಕರವಾದ ಒಂದು ಯುದ್ಧಭೂಮಿ ಅದಕ್ಕೆ ಕಾಣಿಸಿತು. ಆಸ್ಥಳವು ನಿರ್ಜನಪ್ರದೇಶವಾಗಿದ್ದುದರಿಂದ ಆ ನರಿ ಅಲ್ಲಿಗೆ ಪ್ರವೇಶಿಸಿ ಬಳಿಕ ಒಂದು ಧ್ವನಿಯನ್ನು ಕೇಳಿ ಎದೆಗುಂಡಿಗೆ ಅದುರಿ ಬಹಳ ಭಯದಿಂದ ಅತ್ತಿತ್ತ ಕದಲಲಾರದೆ ಕಣ್ಣುಗಳ ಮುಚ್ಚಿಕೊಂಡು ಮೂರ್ಛೆಹೋಗಿ ಸ್ವಲ್ಪ

ಹೊತ್ತಿಗೆ ಮೋರ್ಚೆ ತಿಳಿದು ಕಣ್ಣುಗಳ ಬಿಟ್ಟು ನಾಲ್ಕು ಕಡೆಗಳನ್ನೂ ನೋಡಲು, ಆ ಸಮೀಪದಲ್ಲಿ ನೆಲದಲ್ಲಿ ಬಿದ್ದಿರುವ ಭೇರಿಯ ಮುಖದ ಮೇಲೆ ಮರದಕೊಂಬೆ ಗಾಳಿಯಿಂದ ತಗಲುವುದರಿಂದ ಆ ಶಬ್ದ ವುಂಟಾಗುತ್ತದೆಯೆಂದು ತಿಳಿದು ತನ್ನ ಮನಸ್ಸಿನಲ್ಲಿಯ ಭಯವನ್ನೆಲ್ಲಾ ಬಿಟ್ಟು, 'ಓಹೋ, ನನ್ನ ಅದೃಷ್ಟವನ್ನೇನೆಂದು ಹೇಳಲಿ! ನನಗೆ ಒಳ್ಳೆಯಾಹಾರ ಸಿಕ್ಕಿತು' ಎಂದು ಸಂತೋಷಿಸಿತು. ಬಳಿಕ ಆ ಭೇರಿಗೆ ಹೊಲಿದಿದ್ದ ತೊಗಲನ್ನು ಕಚ್ಚಿ ತುಂಡುತುಂಡು ಮಾಡಿ ಅದರೊಳಕ್ಕೆ ನುಗ್ಗಿ ಹೊರಗೆಬಂದು—'ನಾನು ಮುಂಚೆಯೇ ತಿಳಿದುಕೊಳ್ಳಲಾರದೆ ಹೋದೆ. ಈಗ ಒಳಕ್ಕೆ ನುಗ್ಗಿ ಇದರ ಸಂಗತಿಯನ್ನು ಚೆನ್ನಾಗಿ ತಿಳಿದುಕೊಂಡೆನು. ಮುಂಚೆ ಭಯದಿಂದ ಈ ಸ್ಥಳವನ್ನು ಬಿಟ್ಟೋಡಬೇಕೆಂದೆಣಿಸಿದೆನು. ನಿಧಾನಿಸಿದುದರಿಂದಲ್ಲವೇ ಉಳ್ಳ ಸ್ಥಿತಿ ತಿಳಿಯಿತು? ಆದುದರಿಂದ ಶಬ್ದಮಾತ್ರಕ್ಕೆ ಭಯಪಡಕೂಡದು' ಎಂದು ನೆನೆದು, ಸರಿ ತನಗೆ ಬೇಕಾದ ಆಹಾರವನ್ನು ಭಕ್ಷಿಸುತ್ತಾ ಸ್ವೇಚ್ಛೆಯಾಗಿ ಹೋಯಿತು. ಆದಕಾರಣ ಶಬ್ದಮಾತ್ರಕ್ಕೆ ಭಯಪಡಕೂಡದು. ಆ ಶಬ್ದ ಹುಟ್ಟಿದ ಸ್ಥಲಕ್ಕೆ ನಾನು ಹೋಗಿ ತಿಳಿದುಕೊಂಡು ಬರುತ್ತೇನೆ—ಎಂದು ನುಡಿಯಲು, ಪಿಂಗಳಕನು—ಹಾಗೆಮಾಡು—ಎಂದು ದಮನಕನಿಗೆ ಅಪ್ಪಣೆ ಕೊಟ್ಟನು.

Damanaka introduces himself to Sanjivaka.

ಆಗ ದಮನಕನು ಸಂಜೀವಕನಿರುವ ಸ್ಥಳಕ್ಕೆ ಹೋಗಿ—ಎಲೈ, ನಾನು ಮೃಗರಾಜನ ಹಿತಭೃತ್ಯನು. ಆತನು ನನ್ನನ್ನು ನೀನಿರುವ ಸ್ಥಳಕ್ಕೆ ಹೋಗೆನಲಾಗಿ ಬಂದೆನು. ಆತನು ಈ ಅರಣ್ಯದಲ್ಲಿರುವ ಮೃಗಗಳಿಗೆ ಅಧಿಪತಿಯಾದುದರಿಂದ ನೀನು ಆತನ ಆಜ್ಞೆಯಲ್ಲಿದ್ದುಕೊಂಡು ಆತನ ಪಾದಗಳ ದರ್ಶನ ಮಾಡುತ್ತಾ ಮಂತ್ರಿಯಾಗಿ ಆತನ ಕಾರ್ಯಗಳನ್ನು ವಿಚಾರಿಸಿಕೋ, ಹೆದರಬೇಡ ಬಾ—ಎನಲು, ಸಂಜೀವಕನು ಸಮ್ಮತಿಸಿದನು. ಆಮೇಲೆ ದಮನಕನು ತಾನು ಮುಂದಾಗಿ ಬರಲು—ಆ ಜಂತುವನ್ನು ನೋಡಿದೆಯಾ? ಎಂದು ಸಿಂಹವು ಕೇಳಲಾಗಿ, ದಮ

ನಕನು—ಸ್ವಾಮಿ, ಮುಂಚೆ ನೀವು ಕೇಳಿದ ಶಬ್ದವನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಂಡು ನಿಮ್ಮ ಸನ್ನಿಧಾನಕ್ಕೆ ಬಂದೆನು. ಆ ಧ್ವನಿ ಮಾಡಿದವನು ನಿಮ್ಮ ಅನುಗ್ರಹಕ್ಕೆ ತಕ್ಕವನೇ ಹೊರತು ಕೋಪಕ್ಕೆ ಪಾತ್ರನಲ್ಲ. ನಿಮ್ಮ ಪರಾಕ್ರಮವನ್ನು ಕೇಳಿದಾಗಲೇ ಬಹಳ ಭಯಪಟ್ಟನು. ವಾಯುವು ದೊಡ್ಡ ವೃಕ್ಷಗಳನ್ನು ಮುರಿದು ಕೆಡಹುತ್ತದೆಯೇ ಹೊರತು ಅಲ್ಪವಾಗಿ ಬಗ್ಗಿದ ತೃಣಗಳನ್ನು ಮುರಿಯದು; ಹಾಗೆಯೇ ದೊಡ್ಡವರು ದೊಡ್ಡವರಲ್ಲಿ ತಮ್ಮ ಪರಾಕ್ರಮವನ್ನು ತೋರಿಸುವರೇ ಹೊರತು ಅಲ್ಪರಲ್ಲಿ ತೋರಿಸರು. ನಿಮ್ಮ ಗುಣಗಳನ್ನು ಹೊಗಳುವುದಕ್ಕೆ ಯಾರಿಗೆ ಶಕ್ಯವು! ಆ ಜಂತುವನ್ನು ನಿಮ್ಮ ಪಾದದ ಬಳಿಗೆ ಕರೆದುಕೊಂಡು ಬರುತ್ತೇನೆ. ಆಗ ನಿಮಗೆ ಕೇಳಿಸಿದ ಧ್ವನಿಯನ್ನು ಮಾಡಿದ ಜಂತು ಸಂಜೀವಕನೆಂಬ ಹೆಸರುಳ್ಳ ವೃಷಭರಾಜನು. ಅವನು ದೊಡ್ಡವನು, ಒಳ್ಳೆಯ ಬುದ್ಧಿಯುಳ್ಳವನು, ನಿಮಗೆ ಮಂತ್ರಿಯಾಗಿರತಕ್ಕವನು. ನಾನು ಅವನನ್ನು ನಿಮ್ಮ ಬಳಿಗೆ ಕರೆತರಲೋ?—ಎನಲು; ಮೃಗರಾಜನು ತುಂಬ ಸಂತೋಷದಿಂದ ಸಮ್ಮತಿಸಿದನು.

Damanaka introduces Sanjivaka to Pingalaka.

ಆಮೇಲೆ ದಮನಕನು ತಿರುಗಿ ಸಂಜೀವಕನ ಬಳಿಗೆ ಹೋಗಿ ಅವನನ್ನು ಕರೆದುಕೊಂಡು ಬಂದು ಸಿಂಹದ ಹತ್ತಿರ ನಿಲ್ಲಿಸಿದನು. ಪಿಂಗಳಕನು ತನಗೆ ನಮಸ್ಕರಿಸಿ ನಿಂತ ಸಂಜೀವಕನನ್ನು ನೋಡಿ ಅವನ ತಲೆಯಮೇಲೆ ಕೈಯಿಟ್ಟು,—ನೀನೇ ನಾನು, ನಾನೇ ನೀನು, ನಮಗೆ ಭೇದವಿಲ್ಲ, ನೀನು ನನಗೆ ಮಂತ್ರಿಯಾಗಿರು. ನಿನ್ನ ಮನಸ್ಸು ಬಂದಹಾಗೆ ಈ ವನದಲ್ಲಿ ಸಂಚರಿಸು—ಎಂದು ನುಡಿದು ಸಂಜೀವಕನಿಗೆ ಅಭಯಪ್ರದಾನ ಮಾಡಿದನು. ಅನಂತರ ಸಂಜೀವಕನು ಮರಳಿ ಮೃಗರಾಜನಿಗೆ ನಮಸ್ಕರಿಸಿ ಕೈಮುಗಿದುಕೊಂಡು,—ಸ್ವಾಮಿ, ನೀವು ಹೇಳಿದ ಹಾಗೆ ಕೇಳಿ ನಿಮ್ಮ ಪಾದದ ಬಳಿಯಲ್ಲಿ ಕಾದುಕೊಂಡಿರುವೆನು. ನನ್ನನ್ನು ಕಟಾಕ್ಷಿಸಬೇಕು—ಎಂದು ನುಡಿದನು. ಅದುಮೊದಲು ಪಿಂಗಳಕ ಸಂಜೀವಕರು ಇಬ್ಬರೂ ಬಹಳ ಸ್ನೇಹವಾಗಿದ್ದರು. ಹೀಗೆ ಕೆಲವುಕಾಲ

ವಿರಲಾಗಿ ಸಿಂಹವು ತನ್ನ ಪರಿಜನರನ್ನೂ ಬಂಧುಗಳನ್ನೂ ಮರೆತು ಸಂಜೀವಕನಮೇಲೆ ತುಂಬ ಪ್ರೀತಿಯಾಗಿದ್ದಿತು.

The second council of Karataka and Damanaka.

ಆ ಮೇಲೆ ಕರಟಕ ದಮನಕರು ಮನಸ್ಸಿನಲ್ಲಿ ಬಹಳ ವಿಚಾರ ಹೊಂದಿ ನಾನಾವಿಧವಾಗಿ ಮಾತುಗಳಾಡುತ್ತಾ, ಕರಟಕನು ದಮನಕನನ್ನು ನೋಡಿ—ನೀನು ಸಂಜೀವಕನನ್ನು ಕರೆತಂದು ಅರಸನ ಹತ್ತಿರ ಮಂತ್ರಿಯಾಗಿ ನಿಲ್ಲಿಸಿದುದರಿಂದ ನಮ್ಮಮೇಲೆ ಆದರಣೆ ತಪ್ಪಿತು. ಇದು ನಿನ್ನಿಂದ ಬಂದ ತಪ್ಪಲ್ಲವೋ?—ಎಂದು ನುಡಿಯಲಾಗಿ, ದಮನಕನಿಂತೆಂದನು:—ಹೌದು, ನೀನು ಹೇಳಿದುದು ಸರಿ. ಈಗ ನಮ್ಮರಸನು ಮುಂಚಿನ ಪರಿವಾರವನ್ನು ಬಿಟ್ಟು ಸಂಜೀವಕನು ಹೇಳಿದಹಾಗೆ ಕೇಳುವುದರಿಂದ ಸೇವಕರು ಆಹಾರಕಾಣದೆ ನೊಂದುಹೋದರು. ನಾನಿಷ್ಟು ದೂರ ಆಲೋಚಿಸದೆ ಇಬ್ಬರಿಗೂ ಸ್ನೇಹಮಾಡಿದೆನು. ಇಂಥ ಕಾರ್ಯಗಳಿಗೆ ಕರ್ತೃ ದೇವರೇ ಹೊರತು ಇತರರಿಂದೇನಾದೀತು? ಇದು ನನ್ನ ದೋಷವೆಂದು ದೂರಬೇಡ; ಸ್ವಯಂಕೃತಾಪರಾಧ ನನಗೆ ಮಾತ್ರವಲ್ಲ.

One's own fault:—Ashadhabhuti deceives Devasarma.

ಜಂಬುಕೋ ಮೇಷಯುದ್ಧೇನ ವಯಂ ಚಾಷಾಢಭೂತಿನಾ।
ವಿಶ್ವಾಸಪಾತ್ರತಾಜ್ಞಾನಾತ್ ಸ್ವದೋಷಾದ್ದುಃಖಿತಾವಿಮೌ ॥

ಮೇಷಯುದ್ಧದಿಂದ ಜಂಬುಕವೂ ಆಷಾಢಭೂತಿಯಿಂದ ಸಿದ್ಧಮುನಿಯೂ ಈ ಇಬ್ಬರೂ ಪಾತ್ರವನ್ನರಿಯದೆ ನಂಬಿದುದರಿಂದ ಸ್ವಯಂಕೃತಾಪರಾಧವುಳ್ಳವರೇ ಎಂದು ನುಡಿಯಲು,—ಅದು ಹೇಗೆ ನನಗೆ ಹೇಳಬೇಕು.—ಎಂದು ಕರಟಕನು ಕೇಳಲಾಗಿ, ದಮನಕನು ಹೇಳುತ್ತಾನೆ.

ಒಂದಾನೊಂದು ಕಾಲದಲ್ಲಿ ದೇವಶರ್ಮನೆಂಬ ಹೆಸರುಳ್ಳ ಒಬ್ಬ ಯೋಗಿಯಿದ್ದನು. ಆತನು ಭೂ ಸಂಚಾರಮಾಡುತ್ತಾ ತಾನು ಸಂಪಾದಿಸಿದ ಧನವನ್ನೆಲ್ಲಾ ತನ್ನ ಬೊಂತೆಯಲ್ಲಿ ಅಡಗಿಸಿ ಹೊಲಿದು ಅದನ್ನು

ಹೊಂದಿದುಕೊಂಡು ಹೋಗುತ್ತಿದ್ದನು. ಹೀಗಿರಲಾಗಿ ಒಬ್ಬ ದುರ್ಜನನು ಈ ಸಂಗತಿಯನ್ನು ತಿಳಿದುಕೊಂಡು ಆ ಧನವನ್ನು ಕಳಲಿಕ್ಕೆ ಶಿಷ್ಯತ್ವವನ್ನು ವಹಿಸಿ ಆಷಾಢಭೂತಿಯೆಂಬ ಹೆಸರಿಟ್ಟುಕೊಂಡು ಅತ್ಯಂತ ವಿನಯ ಭಕ್ತಿಗಳನ್ನು ಆತನಿಗೆ ತೋರಿಸಿ ನಂಬಿಸಿ ಕೆಲಸಗಳ ಮಾಡುತ್ತಾ, ಒಂದು ದಿನ ಉದಯಕಾಲದಲ್ಲಿ ಆ ಯೋಗಿಯೊಂದಿಗೆ ಹಾದಿನಡೆವಾಗ ಒಂದು ಹುಲ್ಲುಕಡ್ಡಿಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಆತನಿಗೆ ತೋರಿಸಿ,— ಅಯ್ಯಾ, ನಾವು ನಿನ್ನೆ ರಾತ್ರಿ ಮಲಗಿಕೊಂಡಿದ್ದ ಸ್ಥಲದಲ್ಲಿ ಮನೆಯವರದಾದ ಈ ಹುಲ್ಲಿನಕಡ್ಡಿ ನನ್ನ ಬಟ್ಟೆಯಲ್ಲಿ ಅಂಟಿಕೊಂಡು ಬಂದಿತು. ಪರರ ಸೊತ್ತನ್ನು ಅಪಹರಿಸುವುದು ಒಳ್ಳೆಯದಲ್ಲ. ನನಗೆ ಅಪ್ಪಣೆ ಕೊಟ್ಟರೆ ನಾನು ತಿರುಗಿಹೋಗಿ ಇದನ್ನು ಅವರಿಗೆ ಕೊಟ್ಟುಬರುತ್ತೇನೆ—ಎಂದು ಹೇಳಿ ಆತನ ಅಪ್ಪಣೆ ತೆಗೆದುಕೊಂಡು ಹಿಂದಕ್ಕೆ ಹೋಗಿ ದಾರಿಯಲ್ಲಿ ಸ್ವಲ್ಪ ಹೊತ್ತಿದ್ದು ಆಮೇಲೆ ಆತನ ಬಳಿಗೆ ಬಂದನು. ಅವನ್ನು ಯೋಗಿ ನೋಡಿ ಇವನು ಪರದ್ರವ್ಯಾಪೇಕ್ಷೆಯಿಲ್ಲದವನೆಂದು ವೃಥವಾಗಿ ಮನಸ್ಸಿನಲ್ಲೆಣಿಸಿ ತನ್ನ ಜೊಂತೆಯನ್ನು ತಾನು ಹೊರಲಾರೆನೆಂದು ಆಷಾಢಭೂತಿಯ ಕೈಯಲ್ಲಿ ಕೊಟ್ಟನು. ಬಳಿಕ ಒಂದುದಿನ ಅರಣ್ಯಮಧ್ಯದಲ್ಲಿ ಹೋಗುತ್ತಿರುವಾಗ ಆ ಯೋಗಿ ಒಂದು ಕೆರೆಯನ್ನು ಕಂಡು ಅಲ್ಲಿಗೆ ಹೋಗಿ ಆಚಮನ ಮಾಡುತ್ತಿದ್ದನು. ಆ ಸಮೀಪದಲ್ಲಿ ಎರಡು ಟಗರುಗಳು ಅತ್ಯುಗ್ರವಾಗಿ ಒಂದಕ್ಕೊಂದು ತಲೆ ಒಡೆವಹಾಗೆ ಡೀ ಕೊಟ್ಟು ಕೊಟ್ಟು ಕಾದುತ್ತಿದ್ದುವು. ಆಗ ಅವುಗಳ ತಲೆಗಳು ಒಡೆದು ಸೋರಿದ ರಕ್ತವು ನೆಲದಲ್ಲಿ ಬಿದ್ದು ಕರಣೆ ಕಟ್ಟಿತು. ಒಂದು ನರಿ ಅವನ್ನು ಮಾಂಸಖಂಡವೆಂದು ನೆನಸಿ ಹತ್ತಿರಕ್ಕೆ ಬಂದು ಇದು ಮೇಷಯುದ್ಧದ ಮಧ್ಯವೆಂದು ಅರಿಯದೆ ಜಿಹ್ವಾಚಾಪಲ್ಯದಿಂದ ಅದನ್ನು ತಿನ್ನುತ್ತಿರಲಾಗಿ, ಮುಂಚೆ ಡೀ ಕೊಟ್ಟು ಹಿಂದುಹಿಂದಕ್ಕೆ ಹೋಗಿ ತಿರುಗಿ ಡೀಕೊಡುವ ಟಗರುಗಳ ಮಧ್ಯದಲ್ಲಿ ಸಿಕ್ಕಿ ಆ ನರಿ ಪ್ರಾಣಬಿಟ್ಟಿತು. ಆ ಯೋಗಿ ಅದನ್ನು ನೋಡಿ ವಿಚಾರಪಟ್ಟು ಮೇಷಯುದ್ಧದಿಂದ ನರಿಯು ಹಾನಿಪಟ್ಟಿತೆಂದು ನೆನಸಿ, ಆಷಾಢಭೂತಿಯನ್ನು ಕೂಗಲಾಗಿ, ಅವನು ಮಾತಾಡದುದರಿಂದ ಧನ

ವಿಟ್ಟು ಹೊಲಿದ ಬೊಂತೆಯನ್ನು ಅವನು ಅಪಹರಿಸಿಕೊಂಡು ಹೋದ ನೆಂದು ತಿಳಿದು, ಈ ನರಿ ಮೇಷಯುದ್ಧದಲ್ಲಿ ಹಾನಿಯಾದಹಾಗೆ ಆಷಾಢಭೂತಿಯಿಂದ ನಾನು ಮೋಸಹೋದೆನು—ಎಂದು ಬಹಳ ಚಿಂತಾಕ್ರಾಂತನಾಗಿ ಪ್ರಳಾಪಿಸುತ್ತಾ ಹೋದನು.

ಎಂದು ನುಡಿಯಲಾಗಿ, ಕರಟಕನು ದಮನಕನನ್ನು ನೋಡಿ—ನೀನಿನ್ನು ಮಾಡನೆನಿಸಿದ ಕಾರ್ಯವೇನು—ಎಂದು ಕೇಳಲು, ದಮನಕ ನಿಂತೆಂದನು:— ಕೆಟ್ಟುಹೋದ ಕೆಲಸವನ್ನು ನೆಟ್ಟಗೆ ಮಾಡುವುದಕ್ಕೂ ಇನ್ನು ಮೇಲಾಗತಕ್ಕ ಪ್ರಯೋಜನವನ್ನು ಸಂಗ್ರಹಿಸುವುದಕ್ಕೂ ಅನರ್ಥಗಳನ್ನು ಹೋಗಲಾಡಿಸುವುದಕ್ಕೂ ತಕ್ಕ ಆಲೋಚನೆಯೇನುಂಟೋ ಅದೇ ಶ್ರೇಷ್ಠವಾದ ಆಲೋಚನೆ. ಆದುದರಿಂದ ನಾವು ಚೆನ್ನಾಗಿ ಆಲೋಚಿಸಿ ಸಂಜೀವಕ ಪಿಂಗಳಕರಿಗೆ ಭೇದ ಹುಟ್ಟಿಸುವುದಕ್ಕೆ ಉಪಾಯವನ್ನು ಹುಡುಕದೆ ಸುಮ್ಮನೆ ಇದ್ದಲ್ಲಿ ನಾವು ಪಿಂಗಳಕನ ಹತ್ತಿರಕ್ಕೆ ಸೇರಲೇ ಕೂಡದು—ಎಂದನು. ಕರಟಕನು—ಇದು ಹೇಗೆ ಸಾಧ್ಯವಾದೀತು—ಎನಲು, ದಮನಕನು ನುಡಿಯುತ್ತಾನೆ:—

> ಉಪಾಯೇನ ಹಿ ಯಚ್ಛಕ್ಯಂ ನ ತಚ್ಛಕ್ಯಂ ಪರಾಕ್ರಮೈಃ।
> ಕಾಕೀ ಕನಕಸೂತ್ರೇಣ ಕೃಷ್ಣಸರ್ಪಮಘಾತಯತ್॥

ಉಪಾಯದಿಂದ ಯಾವುದನ್ನು ಸಾಧಿಸಶಕ್ಯವೋ ಅದನ್ನು ಪರಾಕ್ರಮದಿಂದ ಸಾಧಿಸಲಿಕ್ಕೆ ಶಕ್ಯವಾಗದು. ಅರಸನ ಚಿನ್ನದ ಹಾರವನ್ನು ಎತ್ತಿಕೊಂಡು ಕಾಗೆ ಉಪಾಯದಿಂದ ತನಗೆ ಶತ್ರುವಾದ ಸರ್ಪವನ್ನು ಜಯಿಸಿತು; ಉಪಾಯದಿಂದ ಸಾಧ್ಯವಾಗದ ಕೆಲಸವುಂಟೇ? ಎನಲು, ಕರಟಕನು—ಆ ಕಥೆಯ ಕೇಳಬೇಕು, ಹೇಳು—ಎನಲು ದಮನಕನು ಹೇಳಲಾರಂಭಿಸಿದನು.

ಒಂದು ಆಲದ ಮರದ ಕೊಂಬೆಯಮೇಲೆ ಒಂದು ಕಾಗೆ ಗೂಡು ಕಟ್ಟಿಕೊಂಡು ತನ್ನ ಹೆಂಡತಿಯೊಂದಿಗೆ ಒಕ್ಕಲಿದ್ದಿತು. ಆ ಮರದ ಪೊಟ್ಟರೆಯಲ್ಲಿ ಒಂದು ಕೃಷ್ಣಸರ್ಪವಿದ್ದು ಆ ಕಾಗೆ ಯಿಟ್ಟ ಪೊಟ್ಟೆಗಳನ್ನೆಲ್ಲಾ ಆಗಾಗ್ಗೆ ತಿನ್ನುತ್ತಿದ್ದಿತು. ಅದಕ್ಕೆ ಆ ಕಾಗೆ ಬಹಳ ವ್ಯಸನ

ಪಟ್ಟು ಕೃಷ್ಣಸರ್ಪಕ್ಕೆ ಹೆದರಿ ತಾನೇನೂ ಮಾಡಲಾರದೆ ತಿರುಗಿ ತನ್ನ ಹೆಂಡತಿಗೆ ಪ್ರಸವಕಾಲ ಬರುತ್ತಲೇ ತನಗೆ ಅತಿ ಸ್ನೇಹಿತನಾದ ಒಂದು ನರಿಯು ಬಳಿಗೆ ಹೋಗಿ ತನಗೆ ಕೃಷ್ಣ ಸರ್ಪವು ಮಾಡುತ್ತಿದ್ದ ಅಪಕಾರ ವನ್ನು ಹೇಳಿ—ಏನುಮಾಡಲಿ? ಎನಲು, ಆ ನರಿ ಯಿಂತೆಂದಿತು.

The Old Crafty Crane, the Crab, and the Fish.

ಭಕ್ಷಯಿತ್ವಾಬಹೂನ್ಮತ್ಸ್ಯಾನುತ್ತಮಾಧಮ ಮಧ್ಯಮಾ ।
ಅತಿಲೌಲ್ಯಾದ್ಬಕಃ ಪಶ್ಚಾನ್ಮೃತಃ ಕರ್ಕಟ ಸಂಗ್ರಹಾತ್ ॥

ಪೂರ್ವದಲ್ಲಿ ಒಂದು ಕೊಳದಲ್ಲಿದ್ದ ಮೀನುಗಳನ್ನೆಲ್ಲಾ ಕಪಟ ದಿಂದ ನುಂಗಿ ಕೊಬ್ಬಿದ್ದ ಕೊಕ್ಕರೆಯನ್ನು ಒಂದು ನಳ್ಳಿ ಉಪಾಯದಿಂದ ಕೊಂದಿತು. ಹಾಗೆ ನೀನೂ ಹಗೆತೀರಿಸಿಕೊ—ಎನಲು, ಆ ಕಥೆಯು ಕೇಳಬೇಕು ಹೇಳು—ಎಂದು ಕಾಗೆ ಕೇಳಲಾಗಿ ನರಿ ನುಡಿಯುತ್ತದೆ.

ಒಂದು ಮುದಿಕೊಕ್ಕರೆ ಒಂದು ದೊಡ್ಡ ಕೊಳಕ್ಕೆ ಹೋಗಿ ಕುತ್ತಿಗೆಯೆತ್ತಿ ಕಣ್ಣುಗಳ ಮುಚ್ಚಿಕೊಂಡು ತನ್ನ ನೋಡುವವರಿಗೆ ಬಹು ಕಠಿನವಾದ ವ್ರತವನ್ನು ಆಚರಿಸುತ್ತಿರುವುದಾಗಿ ತೋರುವ ಹಾಗೆ ಕುಳಿತುಕೊಂಡು ಆಹಾರವೇನೂ ತೆಗೆದುಕೊಳ್ಳದೆ ಇರಲು, ಒಂದು ನಳ್ಳಿ ನೋಡಿ ಆಶ್ಚರ್ಯಪಟ್ಟು ಕೊಕ್ಕರೆಯ ಹತ್ತಿರಕ್ಕೆ ಬಂದು,—ಎಲೈ ಬಕರಾಯನೇ, ನೀನು ತುಂಬಾ ಹಸಿವಿನಿಂದ ನೊಂದಿದ್ದರೂ ಮೀನು ಗಳು ಹತ್ತಿರಕ್ಕೆ ಬಂದರೂ ಭಕ್ಷಿಸದೆ ಇರುವುದು ಅದ್ಭುತವಾಗಿದೆ. ಇದೇನು ಹೇಳು—ಎಂದು ಒಳ್ಳೆಯಮಾತಿನಿಂದ ಕೇಳಲು, ಕೊಕ್ಕರೆ ಹೇಳುತ್ತದೆ;—ಎಲೈ ಕರ್ಕಟಕರಾಯನೇ, ಪ್ರಾಕ್ಕು ನಾನು ಯಾವ ಕೊಳಕ್ಕೆಂದರೆ ಆ ಕೊಳಕ್ಕೆ ಹೋಗಿ ಅಲ್ಲಿದ್ದ ಮೀನುಗಳನ್ನು ತಿಂದು ಮೈಯನ್ನು ಬೆಳಸಿಕೊಂಡಿದ್ದೆನು. ಮೊನ್ನೆ ಸಿಡಿಲಿನಂಥ ಮಾತನ್ನು ಕೇಳಿದೆನು. ಅದು ಮೊದಲು ಹೊಟ್ಟೆ ತುಂಬಿಸಿಕೊಳ್ಳುವುದನ್ನು ಬಿಟ್ಟು ಚಿಂತಾಸಮುದ್ರದಲ್ಲಿ ಮುಳುಗಿದ್ದೇನೆ. ಇನ್ನೇನ ಹೇಳುವೆನು—ಎನಲು, ನಳ್ಳಿ ಬಹಳ ವ್ಯಸನದಿಂದ ಕೊಕ್ಕರೆಯನ್ನು ನೋಡಿ—ನೀನು ಕೇಳಿದು

ದೇನು—ಎಂದಿತು. ಆ ಕೊಕ್ಕರೆ ಕಣ್ಣೀರು ಬಿಡುತ್ತಾ—ಮೊನ್ನೆ ಕೆಲವರು ಬೆಸ್ತರು ಬಂದು ಈ ನೀರಿನ ಆಳವನ್ನು ನೋಡಿಹೋದರು. ಇನ್ನೆಂಟು ದಿನಕ್ಕೆ ನೀರು ಬಹಳ ಬತ್ತಿಹೋಗುತ್ತದೆ. ಆಮೇಲೆ ಬಲೆಗಳು ಗಾಲ ಗಳು ಮುಂತಾದ ಸಾಧನಗಳನ್ನು ತೆಗೆದುಕೊಂಡು ಆ ಬೆಸ್ತರು ಬರು ತ್ತಾರೆಂತ ಕೇಳಿದೆನು—ಎಂದು ಹೇಳಲು ; ಅಲ್ಲಿದ್ದ ಮೀನುಗಳೆಲ್ಲಾ ಈ ಮಾತ ಕೇಳಿ—ಎಲೈ ಬಕಶ್ರೇಷ್ಠನೇ; ನೀನು ನಮ್ಮೆಲ್ಲರನ್ನೂ ಉದ್ಧರಿ ಸುವುದಕ್ಕಾಗಿ ಹುಟ್ಟಿದೆ. ನಮಗೆ ಇಂದು ಈ ಆಪತ್ತನ್ನು ನೀನು ಹೋಗಲಾಡಿಸಬೇಕು—ಎಂದು ಮಹಾ ದೈನ್ಯದಿಂದ ಬೇಡಿಕೊಂಡುವು. ಆಗ ಕೊಕ್ಕರೆ ಒಂದು ಮುಹೂರ್ತಕಾಲ ಮನಸ್ಸಿನಲ್ಲಿ ಚಿಂತಿಸಿ—ಇನ್ನು ಮೇಲೆ ನಾನು ಮಾಡಬೇಕಾದ ಕಾರ್ಯವೇನು ? ಎಂದು ಕೇಳಿತು. 'ಎಂದೆಂದಿಗೂ ಬತ್ತಿಹೋಗದ ನೀರುಳ್ಳ ಇನ್ನೊಂದು ಕೊಳದಲ್ಲಿ ನಮ್ಮ ನ್ನು ಒಯಿದುಬಿಟ್ಟರೆ ಸಾಕು. ಈ ಸಮಯದಲ್ಲಿ ನೀನು ಹೊರತು ನಮಗೆ ಬೇರೆ ರಕ್ಷಕರಿಲ್ಲ' ಎಂದು ಮತ್ಸ್ಯಗಳು ಹೇಳಿದುವು. ಆಗ ಕೊಕ್ಕರೆ ತನ್ನ ಮನಸ್ಸಿನಲ್ಲಿ ಹಿಗ್ಗಿ—ನಾನು ಬೆಸ್ತರನ್ನು ನಿವಾರಿಸಲಾ ರೆನು. ಆದರೆ ನಿಮ್ಮೆಲ್ಲರನ್ನೂ ದಿನಕ್ರಮೇಣ ಒಬ್ಬೊಬ್ಬರನ್ನಾಗಿ ನನ್ನ ಮೂಗಿನಲ್ಲಿ ಕಚ್ಚಿಕೊಂಡು ಹೋಗಿ ನಿಮಗೆ ಅನುಕೂಲವಾದ ಸ್ಥಳದಲ್ಲಿ ಸುರಕ್ಷಿತವಾಗಿ ಬಿಡಬಲ್ಲೆನು—ಎಂದು ದಯಾರಸ ತೋರು ವಹಾಗೆ ನುಡಿಯಲು ಅದಕ್ಕೆ ಮೀನುಗಳು ಸಮ್ಮತಿಸಿದುವು. ತರು ವಾಯ ಕೊಕ್ಕರೆಯು ಮೀನುಗಳನ್ನು ಒಂದೊಂದಾಗಿ ತನ್ನ ಮೂಗಿ ನಲ್ಲಿ ಕಚ್ಚಿಕೊಂಡು ಪೋಗಿ ಒಂದು ವಿಶಾಲವಾದ ಬಂಡೆಯ ಮೇಲೆ ಅವುಗಳನ್ನು ಕೊಂದು ತಿಂದು ಮತ್ತೆಮತ್ತೆ ಇದೇಪ್ರಕಾರ ಮಾಡುತ್ತಾ ಸ್ವಲ್ಪಕಾಲದಲ್ಲಿ ಕ್ರಮಕ್ರಮವಾಗಿ ಮೀನುಗಳನ್ನೆಲ್ಲಾ ಸ್ವೇಚ್ಛೆಯಾಗಿ ಭಕ್ಷಿಸಿ ಆಶೆತೀರದೆ ಕೊಳದಲ್ಲಿ ಮತ್ಸ್ಯಗಳನ್ನು ಹುಡುಕುತ್ತಿದ್ದಿತು. ಆಗ ನಳ್ಳಿ ಕೊಕ್ಕರೆಯನ್ನು ನೋಡಿ—ಎಲೈ ಸ್ನೇಹಿತನೇ, ನಾನು ಬಹುಕಾಲ ವಾಗಿ ಈ ಕೊಳದಲ್ಲಿ ಮೀನುಗಳ ಸಂಗಡ ಬೆಳದು ಇದುವರೆಗೆ ಸಂತೋ ಷವಾಗಿ ಇದ್ದೆನು. ಈಗ ನಾನೊಬ್ಬನಾಗಿ ನಿಂತೆನು. ಇನ್ನು ಮೇಲೆ ನನ್ನನ್ನು ತೆಗೆದುಕೊಂಡು ಹೋಗಬಾರದೇ—ಎಂದು ನುಡಿಯಿತು.

ಆ ಮಾತನ್ನು ಕೊಕ್ಕರೆ ಕೇಳಿ—ನಾನು ಇದುವರೆಗೆಂದೂ ಕರ್ಕಟಕ ಮಾಂಸದ ರುಚಿಯನ್ನರಿಯೆನು. ಇಂದು ದೈವವಶದಿಂದ ನನಗದು ಲಭಿಸಿತು—ಎಂದು ಮನಸ್ಸಿನಲ್ಲಿ ಉಬ್ಬಿ, ತ್ವರೆಯಾಗಿ ಅದನ್ನು ತನ್ನ ಮೂಗಿನಲ್ಲಿ ಕಚ್ಚಿ ಹಿಡಿದುಕೊಂಡು ಮುಂಚೆ ತಾನು ಮತ್ಸ್ಯಗಳನ್ನು ಭಕ್ಷಿಸಿದ ಸ್ಥಳಕ್ಕೆ ಹೋಗಿ ಕಲ್ಲಿನಮೇಲಕ್ಕೆ ಬಾಗಲು, ಆ ನಳ್ಳಿ ಮತ್ಸ್ಯಗಂಧವನ್ನು ಕಂಡುಕೊಂಡು 'ಈ ದುರಾತ್ಮನು ಕಪಟೋಪಾಯದಿಂದ ಮೀನುಗಳನ್ನೆಲ್ಲಾ ಇಲ್ಲೇ ಕೊಂದು ತಿಂದನು' ಎಂದು ಎಣಿಸಿ ತನ್ನಲ್ಲಿ ತಾನು ಇಂತೆಂದಿತು.

ಸಾಹಸವಿಲ್ಲದವನ ಬಾಳು ಏತಕ್ಕೆ? ಶೂರನಾದವನು ಭುಜಬಲದಿಂದ ವಿಜೃಂಭಿಸಿ ಶತ್ರುಸಮೂಹಗಳನ್ನು ಕೊಲ್ಲಲಾದರೂ ಕೊಲ್ಲುವನು, ಇಲ್ಲವೇ ತಾನು ಸಾಯಲಾದರೂ ಸಾಯುವನು. ಹೇಡಿಗಳು ಸ್ವಲ್ಪಹೊತ್ತು ಯುದ್ಧಭೂಮಿಯಲ್ಲಿ ನಿಂತು ಜಯವನ್ನು ಪಡೆಯಲಾರದೆ ಓಡಿಹೋಗುವರು. ಮೃತ್ಯುವು ಸಮೀಪಿಸಿದಾಗ ಶರೀರವನ್ನು ಬಚ್ಚಿಟ್ಟುಕೊಳ್ಳಲಿಕ್ಕೆ ಆದೀತೆ? ಅದನ್ನು ಹೀನರಾದವರು ಅರಿಯದೆ ಇಹ ಪರ ಸುಖವನ್ನು ಕೆಡಿಸಿಕೊಳ್ಳುವರು; ಬುದ್ಧಿವಂತರಾದವರು ಆ ಸಮಯದಲ್ಲಿ ಹಿಂತೆಗೆಯದೆ ನಿಂತು ಇಹಪರಸುಖಗಳನ್ನು ಅನುಭವಿಸುವರು. ಈ ಲೋಕದಲ್ಲಿ ಹಗೆಗೆ ಯಾರಿಗೂ ಕಡಿಮೆಯಿಲ್ಲ. ಅಂಥಾ ಹಗೆ ಬಲವಂತವಾದುದಾಗಿ ಇದ್ದರೆ ತನಗೆ ತಕ್ಕ ಸಹಾಯನ್ನು ಸೇರಿಸಿಕೊಂಡು ಹಗೆಯಾಳುಗಳನ್ನು ಸಾಧಿಸಬೇಕು. ತಾನು ಬಲವನ್ನು ಸೇರಿಸಿಕೊಳ್ಳುವುದಕ್ಕಿಂತ ಮುಂಚೆ ಹಗೆಗಾರನು ಸಮಯನೋಡಿ ಎದ್ದು ಬಂದಲ್ಲಿ ತಾನು ಮುಖವ ತಪ್ಪಿಸಿಕೊಳ್ಳದೆ ಹಗೆಗಾರನ ಮೇಲೆ ಬಿದ್ದು ಅವನನ್ನಾದರೂ ಕೊಲ್ಲಬೇಕು, ತಾನಾದರೂ ಸಾಯಬೇಕು. ಓಡಿಹೋದಲ್ಲಿ ಚಿರಕಾಲ ಬಾಳಬಹುದೇ? ಎಂದಾದರೂ ಸಾವು ಬಾರದೆ ತಪ್ಪದೆಂದು ಪ್ರಾಜ್ಞನಾದವನು ಧೈರ್ಯವನ್ನು ತಾಳುವನು. ಆದುದರಿಂದ ನನಗೆ ಸಾಹಸಮಾಡಲಿಕ್ಕೆ ಇದು ಸಮಯವು—ಎಂದು ಆಲೋಚಿಸಿ ನಳ್ಳಿ ತನ್ನ ಕೊಂಡಿಗಳಿಂದ ಕೊಕ್ಕರೆಯ ಕತ್ತನ್ನು ಅವುಕಿ ಹಿಡಿದುಕೊಂಡು ಕ್ಷಣದಲ್ಲಿ ಕಚ್ಚಿಕೊಂದು ಸ್ವೇಚ್ಛೆಯಾಗಿ ಹೋಯಿತು. ಈ ಪ್ರಕಾರ ನೀನು ಬಂದು

ಉಪಾಯವನ್ನು ಹುಡುಕಿ ನಿನಗೆ ಶತ್ರುವಾದ ಕೃಷ್ಣಸರ್ಪವನ್ನು ಜಯಿಸು—ಎನಲಾಗಿ, ಕಾಗೆ ನರಿಯ ಅಪ್ಪಣೆಯನ್ನು ತೆಗೆದುಕೊಂಡು ತಾನಿದ್ದ ಆಲದ ಮರದ ಹತ್ತಿರಕ್ಕೆ ಮರಳಿ ಬಂದಿತು.

That which cannot be done by force can be done by wisdom.—The Crow and the Serpent.

ಮಾರನೆಯ ದಿನ ಆ ಪಟ್ಟಣವನ್ನಾಳುತ್ತಿದ್ದ ಅರಸನ ಹೆಂಡಿರುಗಳಾದ ಅರಸಿತಿಯರೆಲ್ಲರೂ ಉದ್ಯಾನವನಕ್ಕೆ ಬಂದು ಮಲ್ಲಿಗೆ ಸಂಪಗೆ ಜಾಜಿ ಪಾರಿಜಾತ ಸೇವಂತಿಗೆ ಹೊನ್ನೆ ಸುರಹೊನ್ನೆ ಮೊದಲಾದ ನಾನಾ ವಿಧವಾದ ಹೂಗಳನ್ನು ಎತ್ತಿ ಬಳಲಿ ಜಲಕ್ರೀಡೆಗಳಾಡಬೇಕೆಂದು ಕೊಳದಲ್ಲಿ ಇಳಿಯುವಾಗ, ತಮ್ಮ ಒಡವೆಗಳಲ್ಲಿ ಕೆಲವನ್ನು ತೆಗೆದು ಆ ಗಿಡದ ಕೊಂಬೆಗೆ ತಗುಲಿಸಿದರು. ಕಾಗೆ ಆ ಸಮಯವನ್ನು ನೋಡಿ ಬಂದು, ಆ ಸ್ತ್ರೀಯರು ನೋಡುತ್ತಿರುವಾಗ ಅವುಗಳಲ್ಲಿ ನವರತ್ನಖಚಿತವಾದ ಚಿನ್ನದ ಒಡವೆಯೊಂದನ್ನು ಮೂಗಿನಲ್ಲಿ ಕಚ್ಚಿಕೊಂಡು, ದೂರಕ್ಕೆ ಹೋಗದೆ ಸಮೀಪದಲ್ಲೇ ಒಂದು ಮರದ ಕೊಂಬೆಯ ಮೇಲೆ ಕುಳಿತುಕೊಂಡಿತು. ಆ ಸಮಾಚಾರವನ್ನು ಆಳುಗಳು ಕೂಡಲೇ ಅರಸನಿಗೆ ತಿಳಿಸಿದರು. ಅರಸನು ತನ್ನ ಭೃತ್ಯರನ್ನು ನೋಡಿ ‘ ನೀವು ಬೇಗ ಹೋಗಿ ಕಾಗೆಯೆತ್ತಿಕೊಂಡು ಹೋದ ಒಡವೆಯನ್ನು ತೆಗೆದುಕೊಂಡು ಬನ್ನಿರಿ ’ ಎಂದು ಆಜ್ಞಾಪಿಸಿದನು. ಅನಂತರ ರಾಜಭಟರು ಹತ್ತಿರಕ್ಕೆ ಬರುತ್ತಾ ಬರುತ್ತಾ, ಕಾಗೆ ಮೆಲ್ಲಮೆಲ್ಲಗೆ ಮುಂದಕ್ಕೆ ಹೋಗಿ ಕೃಷ್ಣಸರ್ಪವಿದ್ದ ಹುತ್ತಿನಲ್ಲಿ ಆ ಒಡವೆಯನ್ನು ಹಾಕಿತು. ಅದನ್ನು ನೋಡಿ ಅವರು ಹಾರೆ ಗಡಾರಿ ಗುದ್ದಲಿಗಳಿಂದ ಆ ಹುತ್ತವನ್ನಗೆಯಲಾಗಿ, ಅದರಲ್ಲಿ ಸುತ್ತಿಕೊಂಡು ನಿದ್ರಿಸುತ್ತಿದ್ದ ಕೃಷ್ಣಸರ್ಪವು ಎದ್ದು ಬುಸಗುಟ್ಟುತ್ತಾ ಕೋಪದಿಂದ ಉರಿದುಬಿದ್ದು ಕೆಲವರನ್ನು ಕಚ್ಚಿ ಕೆಲವರನ್ನು ಬೆನ್ನಟ್ಟಿತು. ಕೆಲವರು ಧೈರ್ಯಶಾಲಿಗಳು ದೊಣ್ಣೆಗಳಿಂದ ಆ ಹಾವನ್ನು ಹೊಡೆದು ಕೊಂದು, ಆ ಒಡವೆಯನ್ನು ತೆಗೆದುಕೊಂಡು ಹೋಗಿ ಅರಸನಿಗೆ ಒಪ್ಪಿಸಿದರು. ಆದುದರಿಂದ ಉಪಾಯದಿಂದ ಸಾಧಿಸಕೂಡದ ಕಾರ್ಯವು ಉಂಟೋ ?

ಬುದ್ಧಿರ್ಯಸ್ಯ ಬಲಂ ತಸ್ಯ ನಿರ್ಬುದ್ಧೇಸ್ತು ಕುತೋ ಬಲಂ।
ಪಶ್ಯ ಸಿಂಹೋ ಮದೋನ್ಮತ್ತಃ ಶಶಕೇನ ನಿಪಾತಿತಃ ॥

ಬಲವಿಲ್ಲದವನಾದರೂ ಬುದ್ಧಿವಂತನಾದರೆ ಅವನೇ ಬಲಾಧಿಕನು, ಬಲವುಳ್ಳವನಾದರೂ ಬುದ್ಧಿಹೀನನಾದರೆ ಅವನ ಬಲವು ನಿಷ್ಫಲವು. ಅಲ್ಪಜಂತುವಾದ ಮೊಲವು ಮಹತ್ತಾದ ಸಿಂಹವನ್ನು ಉಪಾಯದಿಂದ ಕೊಂದಿತು. ಮೊಲದ ಬಲವನ್ನು ನೋಡಿದೆಯಾ? ಎನಲು, ಕರಟಕನು—'ಆ ಕಥೆಯನ್ನು ನಾನು ಕೇಳಬೇಕು ಹೇಳು' ಎಂದನು. ದಮನಕನು ಹೇಳುತ್ತಾನೆ.

The Lion Madotkata and the Hare.

ಒಂದು ವನದಲ್ಲಿ ಮದೋತ್ಕಟವೆಂಬ ಹೆಸರುಳ್ಳ ಒಂದು ಸಿಂಹವು ಸೇರಿ ಅಲ್ಲಿಯ ಸಮಸ್ತವಾದ ಜಂತುಗಳನ್ನೂ ಹಿಡಿದುಕೊಂಡು ಭಕ್ಷಿಸುತ್ತಿದ್ದಿತು. ಆ ವನದಲ್ಲಿ ಹುಲಿಗಳು ಚಿರತೆಗಳು ಹಂದಿಗಳು ಕೋಣಗಳು ಸಾರಂಗಗಳು ಹುಲ್ಲೆಗಳು ಮೊಲಗಳು ಮುಂತಾದ ನಾನಾಬಗೆಯ ಜಂತುಗಳೆಲ್ಲಾ ಅದಕ್ಕಂಜಿ ಗುಂಪು ಕೂಡಿ ಸಿಂಹದ ಬಳಿಗೆ ಬಂದು ಬಹು ದೀನತ್ವದಿಂದ ಪಾದಕ್ಕೆರಗಿ,—ಎಲೈ ಮೃಗೇಂದ್ರನೇ, ಈ ಕಾಡಿನಲ್ಲಿ ಚಿರಕಾಲದಿಂದ ವಾಸವಾಗಿರುವ ನಾವೆಲ್ಲರೂ ನಿಮಗೊಂದು ಬಿನ್ನಹವನ್ನು ಮಾಡಿಕೊಳ್ಳುವುದಕ್ಕೆ ಬಂದೆವು. ಏನೆಂದರೆ, ನೀವು ಕೋಪದಿಂದ ಮೃಗಗಳನ್ನೆಲ್ಲಾ ಒಂದೇಸಾರಿಯಾಗಿ ಕೊಲ್ಲಬೇಡಿ. ನಾವು ಸರದಿಯ ಪ್ರಕಾರ ನೀವಿರುವ ಸ್ಥಳಕ್ಕೆ ಒಂದೊಂದು ಮೃಗವಾಗಿ ಬಂದು ನಿಮ್ಮ ಹಸಿವನ್ನು ತೀರಿಸುವಂತೆ ಆಲೋಚಿಸಿಕೊಂಡಿದ್ದೇವೆ; ಇದಕ್ಕೆ ನೀವು ಸಮ್ಮತಿಸಿ ನಮ್ಮ ಭಯವನ್ನು ಬಿಡಿಸಬೇಕು—ಎಂದು ಸಿಂಹದೊಡನೆ ಹೇಳಲಾಗಿ, ಸಿಂಹವು ಒಪ್ಪಿ—ನಿಮಗೆ ಅಭಯವನ್ನು ಕೊಟ್ಟೆನು, ಸುಖವಾಗಿ ಬಾಳಿರಿ—ಎಂದು ಮೃಗಗಳನ್ನು ಕಳುಹಿಸಿತು. ಬಳಿಕ ಮೃಗಗಳು ತಮ್ಮ ತಮ್ಮ ಸರದಿಯ ಪ್ರಕಾರ ಸೂರ್ಯೋದಯಕಾಲಕ್ಕೆ ದಿನಂಪ್ರತಿ ಒಂದರ ಮೇಲೊಂದು ಸಿಂಹದ ಬಳಿಗೆ ಹೋಗುತ್ತಿದ್ದುವು. ಅದನ್ನು ಸಿಂಹವು ಭಕ್ಷಿಸಿ ಹಸಿವು ತೀರಿಸಿಕೊಳ್ಳುತ್ತಾ ಬಹುಕಾಲ ಕಳೆಯಿತು.

ಆಮೇಲೆ ಒಂದುದಿನ ' ಇಂದುಮೊಲದ ಸರದಿ ಬಂದಿತು ' ಎಂದು ಮೃಗಗಳು ಹೇಳಿದುವು. ಆ ಮಾತನ್ನು ಕೇಳುತ್ತಲೇ ಮೊಲವು ಬೆದರಿಬಿದ್ದು ಮೂರ್ಛೆಹೋಗಿ, ಸ್ವಲ್ಪಹೊತ್ತಿಗೆ ಮೂರ್ಛೆತಿಳಿದೆದ್ದು, ಧೈರ್ಯವನ್ನು ತಾಳಿಕೊಂಡು ತನ್ನ ಮನಸ್ಸಿನಲ್ಲಿ ಹೀಗೆಂದು ವಿತರ್ಕಿಸಿತು :—ಮಹಾಬಲವುಳ್ಳ ಈ ಸಿಂಹವನ್ನು ನನ್ನ ಬುದ್ಧಿಚಾತುರ್ಯದಿಂದ ಕೊಲ್ಲುವೆನು. ಬುದ್ಧಿಗೆ ಅಶಕ್ಯವಾದ ಕೆಲಸವು ಭೂಮಿಯಲ್ಲಿಲ್ಲ. ಆದುದರಿಂದ ನಾನು ಯಾವಪ್ರಕಾರದಿಂದಲಾದರೂ ಜಯವನ್ನು ಹೊಂದುವೆನು—ಎಂದು ಆಲೋಚಿಸಿ ಪಯಣಹೊರಟು ಮೆಲ್ಲಮೆಲ್ಲಗೆ ಸಿಂಹದ ಬಳಿಗೆ ಹೋಯಿತು. ಅಷ್ಟರಲ್ಲಿ ಸಿಂಹವು ಹಸಿವುಗೊಂಡು ಕೋಪದಿಂದ ಬೆಂಕಿಯಹಾಗೆ ಉರಿದುಬೀಳುತ್ತಾ ತುಟಿಗಳನ್ನು ಕಚ್ಚಿಕೊಂಡು ' ಈ ವನದಲ್ಲಿ ಮೃಗಗಳು ಪ್ರತಿದಿನವೂ ನನಗೆ ಕಳುಹಿಸುವ ಮೃಗವನ್ನು ಇಂದು ನನಗೆ ಕಳುಹಿಸದೆ ಇರುವುದಕ್ಕೆ ಕಾರಣವೇನು ? ನಾನೀಗ ಹೋಗಿ ಮೃಗಗಳನ್ನೆಲ್ಲಾ ಒಟ್ಟಿಗೆ ಹಿಡಿದು ಕೊಂದು ತಿನ್ನುವೆನು. ಹೀಗೆ ಮಾಡದಿದ್ದರೆ ಅವುಗಳ ಹಮ್ಮು ಅಡಗದು ' ಎಂದು ಗುಹೆಯಿಂದ ಹೊರಗೆ ಹೊರಟಿತು. ಆಗ ಧೈರ್ಯಶಾಲಿಯಾದ ಮೊಲವು ಬಹಳ ಅಂಜಿದಂತೆ ಗಡಗಡನೆ ನಡುಗುತ್ತಾ ಸಿಂಹದ ಹತ್ತಿರಕ್ಕೆ ಬಂದಿತು. ಅದನ್ನು ನೋಡಿ ಸಿಂಹವು—ಎಲಾ ದುರಾತ್ಮನೇ, ನನಗೆ ವೇಳೆತಪ್ಪಿದ ಆಹಾರ ಹಿತವಲ್ಲವೆಂದು ನಿನಗೆ ತಿಳಿಯದೇ ? ಇಷ್ಟು ಹೊತ್ತು ಏತಕ್ಕೆ ಮಾಡಿದೆ ? ಕಾಡಿನಲ್ಲಿರುವ ಜಂತುಸಮೂಹಕ್ಕೆ ಏನಾದರೂ ವಿಪರೀತಬುದ್ಧಿ ಹುಟ್ಟಿತೋ ?—ಎಂದು ಕೋಪವಾಗಿ ಮಾತನಾಡಲಾಗಿ ; ಸಿಂಹಕ್ಕೆ ಮೊಲವು ಸಾಷ್ಟಾಂಗ ಪ್ರಣಾಮಮಾಡಿ ಇಂತೆಂದಿತು : ' ಎಲೈ ಮೃಗರಾಜನೇ, ನನ್ನ ಅರಿಕೆಯನ್ನು ಚಿತ್ತೈಸು. ಇಂದು ನನ್ನಿಂದ ತಪ್ಪೇನೂ ಇಲ್ಲ. ಸೂರ್ಯೋದಯಕಾಲದಲ್ಲಿ ನಾನೆದ್ದು ತಮ್ಮ ಹತ್ತಿರಕ್ಕೆ ಬರುತ್ತಿರುವಾಗ ದಾರಿಯಲ್ಲಿ ಒಂದು ಸಿಂಹವು ಅಡ್ಡಗಟ್ಟಿತು. ' ನನ್ನ ಏಕೆ ತಡೆಯುತ್ತೀಯೆ ? ನನಗೆ ಪ್ರಭುವಾದ ಸಿಂಹರಾಜನ ಬಳಿಗೆ ನಾನು ಹೋಗಬೇಕು, ಬಿಡು ' ಎನಲು, ಆ ಸಿಂಹಕ್ಕೆ ಬಹು ಕೋಪಬಂದು, ಅದು—ಈ ವನದಲ್ಲಿರುವ ಜಂತುಸಮೂಹಕ್ಕೆಲ್ಲಾ ಪ್ರಭು

ನಾನೇಹೊರತು ಬೇರೊಬ್ಬನುಂಟೋ ?—ಎಂದು ಬಹಳ ಹೊತ್ತು ನನ್ನನ್ನು ಪೀಡಿಸಿ,—ನನಗಿಂತ ಅಧಿಕನು ಯಾರು, ಬೇಗಹೋಗಿ ಅವನನ್ನು ತನಗೆ ತಂದು ತೋರಿಸೆಂದು ನನ್ನ ಕೈಯಲ್ಲಿ ಪ್ರಮಾಣಮಾಡಿಸಿಕೊಂಡು ಈಗ ನನ್ನನ್ನು ಬಿಟ್ಟಿತು. ಈ ಸುದ್ದಿಯನ್ನು ತಮಗೆ ಅರಿಕೆಮಾಡಬೇಕೆಂದು ಬಹು ತ್ವರೆಯಾಗಿ ಸನ್ನಿಧಾನಕ್ಕೆ ಬಂದೆನು. ಇನ್ನು ಮೇಲೆ ಅದು ನಿಮ್ಮ ಬಳಿಗೆ ಬರುವ ಮೃಗಗಳನ್ನು ಬಿಡದು. ಇಂದು ನಾನು ಪಟ್ಟ ಶ್ರಮವನ್ನು ಏನೆಂದು ಹೇಳಲಿ ? ' ಎಂದು ನುಡಿದಿತು. ಆ ಮಾತಿಗೆ ಸಿಂಹವು ಬಹಳ ರೌದ್ರಾಕಾರದಿಂದ ಮೊಲವನ್ನು ನೋಡಿ—ಆ ಸಿಂಹವನ್ನು ನನಗೆ ತೋರಿಸು—ಎಂದಿತು. 'ಸ್ವಾಮಿ, ನಾನು ಅದನ್ನು ತೋರಿಸುತ್ತೇನೆ. ನೀವೀಗಲೇ ಹೊರಡಬೇಕು—ಎಂದು ಮೊಲವು ಹೇಳಿತು. 'ಎಲಾ, ನೀನು ತ್ವರೆಯಾಗಿ ನನಗೆ ಮುಂಚೆ ನಡೆದು ಹಾದಿ ತೋರಿಸು '—ಎಂದು ಸಿಂಹವು ಗರ್ಜಿಸುತ್ತಾ ನಡೆಯಿತು. ಮೊಲವು ಅತಿ ವೇಗವಾಗಿ ಮುಂದೆ ಓಡುತ್ತಾ ಸಿಂಹವನ್ನು ಬಹುದೂರ ಕರೆದುಕೊಂಡುಹೋಗಿ, ಮುಂಚೆ ತಾನು ನೋಡಿ ಬಂದ ಅಗಾಧವಾದ ಬಾವಿಯ ಹತ್ತಿರ ನಿಂತುಕೊಂಡು,—ಎಲೈ ಮೃಗರಾಜನೇ, ಇಗೋ ನಿನ್ನ ಶತ್ರುವಾದ ಸಿಂಹದ ಹತ್ತಿರಕ್ಕೆ ಬಂದು ನೋಡು, ನಿನಗೆ ಅವನು ಕಾಣಬರುತ್ತಾನೆ ಎಂದು ಇಣಿಕಿ ನೋಡಿಸಿತು. ಆಗ ಸಿಂಹವು ಬಾವಿಯ ನೀರಿನಲ್ಲಿ ಪ್ರತಿಫಲಿಸಿದ ತನ್ನ ದೇಹವನ್ನು ನೋಡಿ ಅದು ಮತ್ತೊಂದು ಸಿಂಹವೆಂದು ಭ್ರಮಿಸಿ ಬಾವಿಯಲ್ಲಿ ದುಮುಕಿ ತತ್ಕ್ಷಣವೇ ಮೃತವಾಯಿತು. ಆದುದರಿಂದ ಎಷ್ಟು ಬಲವಂತನಾದರೂ ಬುದ್ಧಿಬಲದಿಂದ ಜಯಿಸಬಹುದೆನಲು, ಕೇಳಿ ಕರಟಕನು—ನಿನಗೆ ಕಾರ್ಯಸಿದ್ಧಿಯಾಗುವುದು ಹೋಗು—ಎಂದು ಹೇಳಿದನು.

Damanaka bears tales to Pingalaka against Sanjivaka.

ಆ ಮೇಲೆ ದಮನಕನು ಪಿಂಗಳಕನ ಹತ್ತಿರಕ್ಕೆ ಹೋಗಿ ನಮಸ್ಕರಿಸಿ—ನಾನು ನಿಮಗೆ ಅತ್ಯಂತ ಅಪರಾಧಮಾಡಿದೆನು, ಈ ಅಪರಾಧ

ವನ್ನು ನೀವು ತಾಳಿಕೊಳ್ಳಬೇಕು. ಪದವಿಯುಳ್ಳ ಮಂತ್ರಿ ಅರಸನ ಬಳಿಯಲ್ಲಿ ಏನು ಹೇಳಿದರೂ ಸಾಗುತ್ತದೆ; ಪದವಿಯಿಲ್ಲದವನು ಹತ್ತುಸಾವಿರ ಹೇಳಿದರೂ ಅರಸನಿಗೂ ಸರಿಬೀಳುವುದಿಲ್ಲ, ಪ್ರಜೆಗಳಿಗೂ ಸರಿಬೀಳುವುದಿಲ್ಲ—ಎಂದು ನುಡಿದನು. ಪಿಂಗಳಕನು ಆ ಮಾತನ್ನು ಕೇಳಿ,—ಎಲೈ ದಮನಕಾ, ನೀನೇನು ಹೇಳಬೇಕೋ ಅದನ್ನು ಹೆದರದೆ ಹೇಳು, ನಿನಗಿಂತ ನನಗೆ ಹಿತನುಂಟೇ?—ಎಂದು ಬಹುಪ್ರೀತಿಯಾಗಿ ಮಾತನಾಡಿದನು. ಆಗ ದಮನಕನು ಕೈಗಳನ್ನು ಮುಗಿದುಕೊಂಡು ವಿನಯಭಕ್ತಿಗಳಿಂದ ನಿಂತು ಸಿಂಹವನ್ನು ನೋಡಿ—ಈ ಸಂಜೀವಕನು ನನ್ನ ಬಳಿಯಲ್ಲಿ ನಿಮ್ಮ ಮೇಲೆ ತಪ್ಪುಗಳನ್ನೆಣಿಸುತ್ತಾ ಯಾವಾಗಲೂ ನಿಮ್ಮನ್ನು ಹಾಸ್ಯಮಾಡುತ್ತಾ ಇದ್ದಾನೆ. ಯಾವ ಕೆಲಸಕ್ಕೂ ನಿಮ್ಮನ್ನು ಲಕ್ಷ್ಯಮಾಡುವುದಿಲ್ಲ. ಅದೂ ಅಲ್ಲದೆ ಸ್ವಲ್ಪಕಾಲದಲ್ಲಿ ನಿಮ್ಮ ಮಾತಿಗಿದಿರಿಸಿ ನಿಮ್ಮನ್ನು ಮೂಲೆಗೆ ಒತ್ತರಿಸಿ ನಿಮ್ಮ ರಾಜ್ಯವನ್ನು ತಾನು ಅಪಹರಿಸಬೇಕೆಂಬ ಮನಸ್ಸುಳ್ಳವನಾಗಿ ಯಿದ್ದಾನೆ. ಈ ಸಂಗತಿಯನ್ನು ನಾನರಿತು ನಿಮಗೆ ತಿಳಿಸಲಿಕ್ಕೆ ಬಂದೆನು—ಎನಲು, ಪಿಂಗಳಕನು ಭಯವಿಸ್ಮಯಗಳಿಂದ ಏನೂ ನುಡಿಯದೆ ಸುಮ್ಮನಿದ್ದನು. ಅದನ್ನು ನೋಡಿ ಮರಳಿ ದಮನಕನಿಂತೆಂದನು.—

ಎಲೈ ಮಹಾರಾಜನೇ, ಇವನೊಬ್ಬನು ನಿನ್ನ ಮಂತ್ರಿಗಳಲ್ಲಿ ಮಿಂಚಿದವನು. ಈ ಲೋಕದಲ್ಲಿ ಲಕ್ಷ್ಮಿ ಅತ್ಯುಚ್ಛ್ರಾಯವನ್ನು ಹೊಂದಿದ ಮಂತ್ರಿಯ ಮೇಲೆ ಒಂದು ಪಾದವನ್ನೂ ಅರಸನ ಮೇಲೆ ಒಂದು ಪಾದವನ್ನೂ ಇಟ್ಟು ನಿಂತಿರುವಳು. ಆ ಲಕ್ಷ್ಮಿ ಸ್ತ್ರೀಸ್ವಭಾವದವಳಾದುದರಿಂದ ಕೆಲವು ದಿನಕ್ಕೆ ಅವರಲ್ಲಿ ಒಬ್ಬರನ್ನು ಬಿಟ್ಟುಬಿಡುವಳು. ಅರಸನು ರಾಜ್ಯದಲ್ಲಿ ದೊಡ್ಡಮಂತ್ರಿಯನ್ನು ನಿಲ್ಲಿಸಿದರೆ ಅವನು ರಾಜ್ಯಭಾರವನ್ನೆಲ್ಲಾ ನಿರ್ವಹಿಸಿ ವಿಷಯಾಸಕ್ತನಾಗುವನು. ವಿಷಯಾಸಕ್ತಿಯಿಂದ ಮೋಹವು ಮಿಂಚುವುದು, ಮೋಹದಿಂದ ಗರ್ವವುಂಟಾಗುವುದು. ಅವನು ಗರ್ವದಿಂದ ಕಣ್ಣುಕಾಣದೆ ಅಕಾರ್ಯಗಳನ್ನು ಮಾಡಿ, ಅರಸನನ್ನೆತ್ತಿಹಾಕಿ, ದಂಡನ್ನು ತನ್ನ ವಶಪಡಿಸಿಕೊಂಡು, ಅರಸನ ಪಕ್ಷದಲ್ಲಿ

ರುವವರಿಗೆ ಅನ್ನವಸ್ತ್ರಕ್ಕೆ ಕೊಡದೆ, ಉಪಾಯದಿಂದ ಅರಸನನ್ನು ಕೊಂದು ರಾಜ್ಯವನ್ನೆಲ್ಲಾ ತನ್ನ ವಶಪಡಿಸಿಕೊಳ್ಳುವನು. ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವನು ಈ ಲೋಕದಲ್ಲಿರುವುದು ಅಪೂರ್ವವು. ಎಲ್ಲರಿಗೂ ತಮ್ಮ ಕೆಲಸವಾದ ಮೇಲೆ ಬುದ್ಧಿ ಬೇರೆ ಆಗುತ್ತದೆ. ಬಗೆಬಗೆಯಾದ ಬಹುಮಾನಗಳನ್ನು ಮಾಡಿ ತನ್ನನ್ನು ಆದರಿಸಿದ ಅರಸನನ್ನು ವಿಚಾರಿಸದೆ ಪರರಾಜನ ಹತ್ತಿರ ಲಂಚಕ್ಕೆ ಆಶಿಸುವ ದುಷ್ಟನಾದ ಮಂತ್ರಿ ಈ ಲೋಕದಲ್ಲಿ ಅರಸನನ್ನು ಕೆಡಿಸಿ ಪರಲೋಕದಲ್ಲಿ ತಾನೂ ಕೆಡುವನು. ವಿಷಕಲಿಸಿದ ಅನ್ನವನ್ನೂ ಕದಲುವ ಹಲ್ಲನ್ನೂ ದುಷ್ಟನಾದ ಮಂತ್ರಿಯನ್ನೂ ಶುದ್ಧವಾಗಿ ತೆಗೆದುಹಾಕುವುದು ಸುಖಕರವು. ಸಂಜೀವಕನು ಸಕಲಕಾರ್ಯದಲ್ಲೂ ಸ್ವೇಚ್ಛೆಯಾಗಿ ಪ್ರವರ್ತಿಸುತ್ತಾನೆ, ಅದು ನಿಮ್ಮ ಚಿತ್ತಕ್ಕೆ ತಿಳಿದೇ ಇದೆ. ಸಂಪತ್ತನ್ನು ಕೋರದವನು ಲೋಕದಲ್ಲಿಲ್ಲ, ಆ ಕೋರಿಕೆಯನ್ನು ಕೊನೆಸಾಗಿಸಿಕೊಳ್ಳಲಾರದವನು ಅರಸನನ್ನು ಸೇವಿಸುವನು. ಸೇವಕರಾದವರು ತಾವು ಧನವಂತರಾಗಿದ್ದರೆ ಅರಸನನ್ನು ಏತಕ್ಕೆ ಓಲೈಸುವರು ? ಸಾಗದುದರಿಂದಲೇ ಅಲ್ಲವೇ ಹೇಳಿದ ಕೆಲಸಮಾಡುವುದು ? ಇಂಥಾ ಸೇವಕರಾದ ಮತ್ತೊಬ್ಬರನ್ನು ಅರಸನ ಹತ್ತಿರಕ್ಕೆ ಸೇರಲೀಯದೆ ಸಂಜೀವಕನು ತಾನೇ ಸರ್ವಾಧಿಕಾರಿಯಾಗಿದ್ದಾನೆ. ಇದನ್ನೆಲ್ಲಾ ನೋಡಿದರೆ ಶೀಘ್ರವಾಗಿ ನಿಮಗೇನೋ ಮೋಸಮಾಡುತ್ತಾನೆಂದು ತೋರುತ್ತದೆ. ನೀವೀಗ ಮೈಮರೆದು ಇರಬಾರದು. ನನ್ನ ಮಾತು ನಂಬತಕ್ಕುದಾದರೆ ನಂಬಿ, ಇಲ್ಲದಿದ್ದರೆ ರಹಸ್ಯವಾಗಿ ನೀವೇ ವಿಚಾರಿಸಿ—ಎಂದನು.

ಅದನ್ನು ಕೇಳಿ ಪಿಂಗಳಕನು ದಮನಕನನ್ನು ನೋಡಿ—ಎಲೈ ಈ ದೇಹವು ದೋಷಮಯವಾಗಿದ್ದರೂ ಇದು ಏತಕ್ಕೆಂದು ಬಿಡುವವರುಂಟೋ ? ಹಾಗೆಯೇ ತನ್ನ ಸ್ನೇಹಿತನು ಒಂದುವೇಳೆ ಅಪಕಾರವೂ ಮಾಡಿದ್ದರೂ ಆವನನ್ನು ಬಿಟ್ಟುಬಿಡುವುದು ಒಳ್ಳೆಯದಲ್ಲ. ನಾವು ನಂಬಿಕೆಕೊಟ್ಟು ಅಧಿಕಾರದಲ್ಲಿ ಪ್ರವೇಶಪಡಿಸಿ ಒಂದು ಮಾತಿನಿಂದ ಸಾಹಸವನ್ನು ಮಾಡಬಾರದು. ಅವನಲ್ಲಿ ತಪ್ಪಿದ್ದರೆ ಅವನ ಪಾಪದಲ್ಲಿ ಅವನೇ

ಹೋಗುತ್ತಾನೆ. ನೀನಿನ್ನು ನನ್ನ ಮನಸ್ಸನ್ನು ಕಳವಳಪಡಿಸಬೇಡ—ಎಂದು ನುಡಿದನು.

ಅದಕ್ಕೆ ದಮನಕನು—ನೀವು ಸಂಜೀವಕನನ್ನು ತುಂಬಾ ಗೌರವಪಡಿಸಿ ದೊಡ್ಡಮಂತ್ರಿಯನ್ನಾಗಿ ಮಾಡಿ ರಾಜ್ಯಗಳನ್ನೆಲ್ಲಾ ಅವನ ವಶಪಡಿಸಿ ಸಮಸ್ತವಿಷಯದಲ್ಲೂ ಯಾವಾಗಲೂ ಅವನನ್ನು ನಂಬಿರುವಿರಿ; ಅವನು ಇದನ್ನೆಷ್ಟುಮಾತ್ರವೂ ಮನಸ್ಸಿನಲ್ಲಿಡದೆ ನಿಮ್ಮ ರಾಜ್ಯವನ್ನು ಒಟ್ಟಿಗೆ ಅಪಹರಿಸಬೇಕೆಂಬ ದುರಾಲೋಚನೆಯುಳ್ಳವನಾಗಿದ್ದಾನೆ. ಅದು ನನಗೆ ತಿಳಿಯಿತು. ಆದಕಾರಣ ಅದನ್ನು ಬೇಗ ನಿಮಗೆ ತಿಳಿಸಲಿಕ್ಕೆ ಬಂದೆನು. ಅಣ್ಣತಮ್ಮನಾದರೂ ಮಗನಾದರೂ ಮಂತ್ರಿಸ್ಥಾನದ ಕೆಲಸಗಳನ್ನು ನಡಿಸುತ್ತಿರುವಾಗ ಅವನ ಮೇಲೆ ದೃಷ್ಟಿಯಿಡದಿದ್ದರೆ ಅರಸನ ಲಕ್ಷ್ಮಿ ತೊಲಗಿ ಹೋಗುವಳು. ಸುಜನರ ಹಿತವಾಕ್ಯವನ್ನು ಕಿವಿಗೆ ಸೋಕಲೀಯದೆ ದುರ್ಜನರು ಹೇಳಿದುದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಗಳನ್ನು ನಡಿಸುವ ಭೂಪಾಲಕನು ಅಪಥ್ಯವಸ್ತುಗಳನ್ನು ಭುಜಿಸಿದ ರೋಗಿಯಹಾಗೆ ನಶಿಸುವನು, ಇದು ನಿಶ್ಚಯ. ಮಿತ್ರರ ಮಾತುಗಳನ್ನು ಕೇಳುವ ಅರಸನು ಸುಖವಾಗಿರುವನು; ಶತ್ರುಗಳ ಮಾತನ್ನು ಕೇಳುವ ಅರಸನು ಶೀಘ್ರವಾಗಿ ರಾಜ್ಯವನ್ನು ಹೋಗಲಾಡಿಸಿಕೊಳ್ಳುವನು. ಸದ್ಯದಲ್ಲಿ ಅಪ್ರಿಯವಾಗಿದ್ದರೂ ಮುಂದಕ್ಕೆ ಪ್ರಿಯವಾಗಿರುವ ಮಾತುಗಳನ್ನು ಹೇಳುವವರು ಸಿಕ್ಕರು. ಅಂಥವರ ಮಾತುಗಳನ್ನು ಬುದ್ಧಿವಂತರು ಕೇಳುವರೇ ಹೊರತು ಇತರರು ಕೇಳರು; ಕೇಳಿದವರನ್ನು ಲಕ್ಷ್ಮಿ ಅಗಲದೆ ಇರುವಳು. ಹಿತವನ್ನು ಕೋರುವವರು ತಿಳಿದವರಾಗಿ ಇರರು, ತಿಳಿದವರು ಹಿತವನ್ನು ಕೋರುವವರಾಗಿ ಇರರು; ತಿಳಿದವರಾಗಿಯೂ ಹಿತವನ್ನು ಕೋರುವವರಾಗಿಯೂ ಇರುವವರು ಸಿಕ್ಕುವುದು ರೋಗವನ್ನು ಹರಿಸುವುದಾಗಿಯೂ ರುಚಿಯಾಗಿಯೂ ಇರುವ ಔಷಧದ ಹಾಗೆ ಅಪೂರ್ವವು. ಹಳೆಯ ಸೇವಕರಿಗೆ ವಿರುದ್ಧವಾಗಿ ಹೊಸತಾಗಿ ಬಂದವರನ್ನು ಸನ್ಮಾನಿಸಿದರೆ ಅದು ರಾಜ್ಯ ಕೆಟ್ಟುಹೋಗುವುದಕ್ಕೆ ಮೂಲವು—ಎಂದನು.

ಈ ಮಾತುಗಳನ್ನು ಕೇಳಿ ಸಂಜೀವಕನಿಗೆ ನಾನು ಅಭಯವಿತ್ತು ದೊಡ್ಡ ಮಂತ್ರಿಯಾಗಿ ಮಾಡಿ ಪ್ರೀತಿಯಿಂದ ನಡಿಸುತ್ತಿರುವಲ್ಲಿ ಅವನು ನನಗೆ ಅಪಕಾರ ಮಾಡಬೇಕೆಂದು ನೆನಸುವನೇ? ಇದೆಲ್ಲಿಯ ಮಾತು?— ಎಂದು ಪಿಂಗಳಕನು ನುಡಿಯಲು, ದಮನಕನು ಹೇಳುತ್ತಾನೆ:

ದುರ್ಜನನು ತನ್ನನ್ನು ಪೂಜಿಸಿದವರಿಗೂ ತನಗೆ ಅಪರಾಧಮಾಡಿದವರಿಗೂ ಅಪರಾಧವನ್ನೇ ಮಾಡುವನು; ಹಾವನ್ನು ತಲೆಯ ಮೇಲೆ ಇಟ್ಟುಕೊಂಡರೂ ಕಾಲಿನಲ್ಲಿ ಒದೆದರೂ ಅದು ಕಚ್ಚಲೇ ಕಚ್ಚುವುದು. ದುರ್ಜನನು ಸರ್ವದಾ ಸೇವಿಸಲ್ಪಡುತ್ತಿದ್ದರೂ ತನ್ನ ದುಸ್ಸ್ವಭಾವವನ್ನು ಬಿಡುವನೆ? ನಾಯಿಯ ಬಾಲಕ್ಕೆ ಎಣ್ಣೆ ಸವರಿ ನೀವಿದರೂ ಅದರ ಡೊಂಕು ಹೋದೀತೆ? ಪೂಜ್ಯವಲ್ಲದ ಪದಾರ್ಥವು ಎಲ್ಲಿಯೂ ಪೂಜ್ಯವಾಗಲಾರದು, ಅಮೃತಧಾರೆಯನ್ನು ಹೊಯಿದು ಬೆಳಸಿದರೂ ಬೂರುಗದ ಮರವು ಕಲ್ಪವೃಕ್ಷದ ಹಾಗೆ ಪೂಜ್ಯವಾದೀತೆ? ಸಕ್ಕರೆಯಲ್ಲಿ ಜೇನನ್ನು ಹಾಕಿ ಕಲಸಿ ಪಾತಿಗಟ್ಟಿ ಬೇವಿನ ಬೀಜವನ್ನು ನೆಟ್ಟು ಹಾಲ ಹಾಕಿ ಬೆಳೆಯಿಸಿದರೆ ಆ ಬೇವಿನಗಿಡವು ಸಿಹಿಯಾದೀತೇ? ಉತ್ತಮನಾದವನು ಇತರರಿಗೆ ಅಪಾಯಬರುವಾಗ ವಿಚಾರಿಸಿ ತಿಳಿದುಕೊಂಡು ಅವರೊಡನೆ ಮುಂಚಿತವಾಗಿ ಹೇಳುವನು; ದುರಾತ್ಮನಾದವನು ತಾನು ತಿಳಿದಿದ್ದರೂ ತನ್ನ ಮನಸ್ಸಿನಲ್ಲಿ ನಿರ್ನಿಮಿತ್ತವಾಗಿ ಒಂದು ಹಗೆತನವನ್ನು ಇಟ್ಟು ಹೇಳನು. ಎಷ್ಟು ಒಳ್ಳೆಯತನದಿಂದಿದ್ದರೂ ಮನಸ್ಸಿನಲ್ಲಿ ಹಗೆತನವನ್ನು ಇಟ್ಟುಕೊಂಡು ಕೋಪವುಳ್ಳವನಾಗಿರುವನು ದುರ್ಜನನು; ಒಳ್ಳೆಯತನದಿಂದ ಸಂತೋಷಿಸುವನು ಸುಜನನು. ಕಬ್ಬೂ ಬೇವಿನ ಗಿಡವೂ ಅವುಗಳ ರಸದಿಂದಲೇ ತಿಳಿಯಬರುತ್ತವೆ, ಹಾಗೆಯೇ ಸುಜನನೂ ದುರ್ಜನನೂ ಅವರ ಸ್ವಭಾವದಿಂದಲೇ ತಿಳಿಯಬರುತ್ತಾರೆ.

ವೃಶ್ಚಿಕಸ್ಯ ವಿಷಂ ಪುಚ್ಛೇ ಮಕ್ಷಿಕಸ್ಯ ವಿಷಂ ಶಿರಃ ।
ತಕ್ಷಕಸ್ಯ ವಿಷಂ ದಂಷ್ಟ್ರೌ ಸರ್ವಾಂಗಂ ದುರ್ಜನೇ ವಿಷಂ ॥

ಚೇಳಿಗೆ ವಿಷವು ಬಾಲದಲ್ಲಿರುವುದು, ನೊಣಕ್ಕೆ ವಿಷವು ತಲೆಯಲ್ಲಿರುವುದು, ಹಾವಿಗೆ ವಿಷವು ಹಲ್ಲಿನಲ್ಲಿರುವುದು, ದುರ್ಜನನಿಗೆ ವಿಷವು

ಸರ್ವಾಂಗದಲ್ಲೂ ಇರುವುದು. ಕಪಟವಿಲ್ಲದವನೇ ಮಿತ್ರನು, ಯುದ್ಧ ರಂಗದಲ್ಲಿ ತನ್ನ ಸ್ವಾಮಿಕಾರ್ಯಕ್ಕೆ ಹಿಂದೆಗೆಯದವನೇ ಭೃತ್ಯನು, ಮದ ವನ್ನು ಹುಟ್ಟಿಸದುದೇ ಸಂಪತ್ತು, ಸತ್ಪುರುಷರಿಂದ ಪ್ರಾರ್ಥಿಸಲ್ಪಟ್ಟ ವನೇ ಬುದ್ಧಿವಂತನು, ಇಂದ್ರಿಯಗಳನ್ನು ಜಯಿಸಿದವನೇ ಪುರುಷನು, ಹಿತರ ಮಾತನ್ನು ಕೇಳಿದವನೇ ಅರಸನು.

ಈರೀತಿಯಲ್ಲಿ ಎಷ್ಟು ಹೇಳಿದರೂ ಸಂಜೀವಕನಿಗೆ ಪಿಂಗಳಕನ ಮೇಲೆ ಮನಸ್ಸು ಒಡೆಯದೆ ಇರುವುದನ್ನರಿತು ದಮನಕನು ಮರಳಿ ಇಂತೆಂದನು;—ಎಲೈ ಮೃಗಕುಲಸಾರ್ವಭೌಮನೇ, ನಾನೆಷ್ಟು ಬಿನ್ನೈ ಸಿದರೂ ಸಂಜೀವಕನ ಮೇಲೆ ತಗುಲಿದ ನಿಮ್ಮ ಮನಸ್ಸು ತಿರುಗಲಿಲ್ಲ. ಆದುದರಿಂದ ಇನ್ನು ಭೃತ್ಯನ ಮೇಲೆ ದೋಷವಿಲ್ಲ. ಅಧಿಕಾಸಕ್ತನಾದ ಅರಸನು ಕಾರ್ಯಾಕಾರ್ಯವನ್ನರಿಯದೆ, ಮದಿಸಿದ ಆನೆಯ ಹಾಗೆ ಮನಸ್ಸು ಬಂದಂತೆ ನಡೆಯುವನು. ಬಳಿಕ ಮಂತ್ರಿ ಮುಂತಾದವರ ದೋಷಗ ಳನ್ನು ಚೆನ್ನಾಗಿ ವಿಚಾರಿಸದುದರಿಂದ ಅವರನ್ನು ಶಿಕ್ಷಿಸಲಾರದೆ ಶೋಕಾ ರಣ್ಯದಲ್ಲಿ ಬೀಳುವನು. ಆಗ ಆತನು ತನ್ನ ಭೃತ್ಯನಲ್ಲಿ ತಪ್ಪೆಣಿಸುವನೇ ಹೊರತು ತನ್ನ ತಪ್ಪನ್ನು ತಾನು ತಿಳಿದುಕೊಳ್ಳಲಾರನು—ಎಂದನು.

ಆಮಾತನ್ನು ಕೇಳಿ—ಸಂಜೀವಕನ ನಿರಾಕರಿಸಿ ಹೊರಡಿಸಿ ಬಿಡೋಣವೇ—ಎಂದು ಪಿಂಗಳಕನು ನುಡಿದನು. ಅದಕ್ಕೆ—ಸ್ವಾಮಿಾ, ಹಾಗೆ ಮಾಡಿದಲ್ಲಿ ಮಂತ್ರವು ಭೇದಿಸುವುದು. ನಿರಾಕರಿಸಿದ ಬಳಿಕ ಸಂಜೀವಕನು ತುಂಬಾ ಅಪಕಾರವನ್ನು ಮಾಡುವನು. ಪರಿಪಕ್ವವಾದ ಮಂತ್ರವೆಂಬ ಬೀಜವನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು. ಅದು ಸ್ವಲ್ಪವಾದರೂ ಭೇದಿಸಲ್ಪಡಕೂಡದು, ಭೇದಿಸಲ್ಪಟ್ಟರೆ ಕೆಟ್ಟು ಹೋಗುವುದು—ಎಂದು ದಮನಕನು ಹೇಳಿದನು. ಸಂಜೀವಕನು ನಮಗಪಕಾರಮಾಡುವನೇ ?—ಎಂದು ಪಿಂಗಳಕನು ಮತ್ತೆ ನುಡಿದನು. ಅವನ ಸ್ವಭಾವ ನಮಗೆ ತಿಳಿಯದಾದುದರಿಂದ ನಾವು ಹೇಗೆ ನಿಶ್ಚಯಿಸ ಬಹುದು? ಯಾವನಿಗಾದರೂ ಅವನ ಸ್ವಭಾವ ತಿಳಿಯದೆ ಆಸ್ಪದ ಕೊಡಬಾರದು. ಅಜ್ಞಾತವಾದ ಸ್ವಭಾವವುಳ್ಳ ಡಿಂಡಿಮಕ್ಕೆ ತಾವನ್ನು

ಕೊಟ್ಟುದರಿಂದ ಮಂದವಿಸರ್ಪಿಣಿ ಮೃತವಾಯಿತು— ಎಂದು ದಮನಕನು ಹೇಳಿದನು. ಪಿಂಗಳಕನು—ಆ ಕಥೆಯೇನು?—ಎಂದು ಕೇಳಲು, ದಮನಕನಿಂತೆಂದನು.

It is improper to give admission to a person whose character is unknown. The Louse and the Bug.

ಮಂದವಿಸರ್ಪಿಣಿ ಎಂಬ ಒಂದು ಕೂರೆ ಬಹುಕಾಲದಿಂದ ಅರಸನ ಹಾಸಿಗೆಯಲ್ಲಿ ಸ್ಥಲಮಾಡಿಕೊಂಡು ಎಲ್ಲಿಗೂ ಹೋಗದೆ ಅಲ್ಲೇ ಇರುತ್ತಿರಲಾಗಿ, ಡಿಂಡಿಮವೆಂಬ ಒಂದು ತಿಗಣೆ ಗಾಳಿಯಿಂದ ಹಾರಿಬಂದು ಆ ಹಾಸಿಗೆಯ ಮೇಲೆ ಬಿದ್ದಿತು. ಆಗ ಮಂದವಿಸರ್ಪಿಣಿ ಅತಿಥಿಸತ್ಕಾರವನ್ನು ಮಾಡ ಹೋಗೆಂದಿತು. ನಿನ್ನನುಗ್ರಹದಿಂದ ನಾನಿಲ್ಲೇ ಇದ್ದು ನಿನ್ನನ್ನು ಒಂದು ಯಾಚಿಸಬೇಕೆಂದಿದ್ದೇನೆ. ನಿನಗೆ ನಮಸ್ಕರಿಸುತ್ತೇನೆ, ನಾನೆಂದೂ ಅನ್ಯರನ್ನು ಯಾಚಿಸಿದವನಲ್ಲ; ನನ್ನ ಕೋರಿಕೆಯನ್ನು ನೆರವೇರಿಸಬೇಕು. ನಿನ್ನ ಗುಣಗಳು ಬಹಳ ಪ್ರಸಿದ್ಧವಾಗಿ ಇವೆ. ನಿನ್ನಂಥವನು ಲೋಕದಲ್ಲೇ ಇಲ್ಲ—ಎಂದು ತಿಗಣೆ ನುಡಿಯಿತು. ಅದನ್ನು ಮಂದವಿಸರ್ಪಿಣಿ ಕೇಳಿ—ನೀನು ನನ್ನ ಇಷ್ಟು ಪಕೆ ಹೊಗಳುತ್ತೀಯೆ? ನನ್ನ ಪುಣ್ಯವಶದಿಂದ ನೀನು ಇಲ್ಲಿಗೆ ಬಂದೆ, ನನ್ನ ವಂಶ ಧನ್ಯವಾಯಿತು. ನಾನು ನಿನ್ನ ಅನುಗ್ರಹದಿಂದ ಈ ರಾಜಶ್ರೇಷ್ಠನ ಹಾಸಿಗೆಯಲ್ಲಿ ಸುಖವಾಗಿ ಇದ್ದೇನೆ. ಈಗ ನೀನು ನನ್ನನ್ನೇನು ಕೇಳಬೇಕೆಂದು ಬಂದೆ? ನನ್ನ ಯೋಗ್ಯತೆಯನ್ನು ನೋಡಿ ನನ್ನನ್ನು ಯಾಚಿಸು—ಎನಲು, ಡಿಂಡಿಮವಿಂತೆಂದಿತು. ಯಾಚಕನಾದವನು ತನಗೆ ಬೇಕಾದುದನ್ನು ಕೇಳುವನಲ್ಲದೆ ದಾತನ ವಿದ್ಯಮಾನವನ್ನು ನೋಡಿ ಕೇಳುವನೋ? ಅರ್ಥಾಶೆಯಿಂದ ಮೊರೆಯಿಡುವನಲ್ಲದೆ ಇವ ಲೋಭಿ ಇವ ದಾತ ಎಂದು ಅರಿಯುವನೋ? ತನಗೆ ಇಲ್ಲದುದರಿಂದ ಇತರರನ್ನು ಶ್ರಮಪಡಿಸುತ್ತಾನೆಯೇ ಹೊರತು, ಇದು ಹೆಚ್ಚು ಇದು ಸ್ವಲ್ಪ ಎಂದು ತಿಳಿದು ಯಾಚಿಸುತ್ತಾನೋ? ಧನಾಪೇಕ್ಷೆಯಿಂದ ಸಭೆಗಳಲ್ಲಿ ಪ್ರಸಂಗಿಸಲಾರಂಭಿಸುತ್ತಾನೆಯಲ್ಲದೆ, ತನಗೆ ವಿದ್ಯೆ ಸಾಲದೆಂದು ಹೇಳುವನೋ? ಹಣಗಾರರ ಹಿಂದೆ ತಿರುಗಿ ತನಗೆ ತಿಳಿದುದನ್ನೆಲ್ಲಾ ತೋರಿಸಿ ಅವರನ್ನು ಯಾಚಿಸಲಾಗಿ, ದಾತನಾದವನು

ಮೆಚ್ಚಿ ಹಣವನ್ನು ಕೊಟ್ಟರೆ ಸಂತೋಷಿಸುವನು; ಲೋಭಿಯಾದವನು ಹಣವನ್ನು ಕೊಡದಿದ್ದರೆ ನೊಂದುಕೊಳ್ಳುವನು. ಇದು ಯಾಚಕನ ಸ್ವಭಾವವು. ನಾನೀಗ ಅರ್ಥಾಪೇಕ್ಷೆಯಿಂದ ನಿನ್ನನ್ನು ಕೇಳಬರಲಿಲ್ಲ; ನನಗೊಂದು ಸಹಾಯಮಾತ್ರ ಮಾಡಬೇಕು, ಅದೇನೆಂದರೆ: ಅನೇಕ ವೇಳೆ ನಾನು ಸಾಮಾನ್ಯ ಮನುಷ್ಯರ ರಕ್ತವನ್ನು ಪಾನಮಾಡಿರುವೆನಲ್ಲದೆ ಅರಸನ ದೇಹದ ರಕ್ತವನ್ನು ಎಂದೂ ಕುಡಿಯಲಿಲ್ಲ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇಂದು ನಾನು ನಿನ್ನ ಬಳಿಗೆ ಬಂದೆನು. ಇದಕ್ಕೆ ನೀನು ಸಮ್ಮತಿಸಿ ನನ್ನ ಕೋರಿಕೆಯನ್ನು ಈಡೇರಿಸಬೇಕು. ಇಂಥ ಕೋರಿಕೆ ಉಂಟಾಗಲಿಕ್ಕೆ ಕಾರಣವೇನೆಂದರೆ, ಹೇಳುತ್ತೇನೆ ಕೇಳು. ಸಣ್ಣಕ್ಕಿಯ ಅನ್ನ, ಆಗ ಬೆಣ್ಣೆ ಕಾಸಿದ ಹಸುವಿನ ತುಪ್ಪ, ತೊವ್ವೆ, ಒಳ್ಳೆಯ ಮೇಲೋಗರ, ರುಚಿಯಾದ ಭಕ್ಷ್ಯಗಳು, ಬಗೆಬಗೆಯ ಹಣ್ಣುಗಳು, ಪಾನಕ, ಹಸುವಿನ ಹಾಲು, ಗಟ್ಟಿಮೊಸರು, ಸಕ್ಕರೆ, ಕಲ್ಲು ಸಕ್ಕರೆ, ಸಿಹಿನೀರು, ತಾಂಬೂಲ, ಪರಿಮಳವುಳ್ಳ ಗಂಧ ಪುಷ್ಪಗಳು, ಮೊದಲಾದ ವಸ್ತುಗಳನ್ನು ದಿನದಿನವೂ ಅನುಭವಿಸುತ್ತಾ ಸುಖಿಸುತ್ತಿರುವ ಅರಸನ ದೇಹರಕ್ತವು ಬಹು ರುಚಿಯಾಗಿರುವುದೆಂದು ಕೇಳಿಯಿದ್ದೇನೆ. ಈ ವರೆಗೆ ಎಂದೂ ಅದು ನನಗೆ ಲಭಿಸಲಿಲ್ಲ—ಎಂದು ತಿಗಣೆ ಹೇಳಲಾಗಿ, ಕೇಳಿ ಮಂದವಿಸರ್ಪಿಣಿ ಹೇಳುತ್ತದೆ;—ನಿನ್ನ ಹಲ್ಲುಗಳು ಬಹು ತೀಕ್ಷ್ಣವಾದುವು; ನಿನಗೆ ಸಮಯ ತಿಳಿಯದು; ನಿನ್ನನ್ನು ಇಲ್ಲಿ ಸೇರಿಸಿಕೊಂಡರೆ ನನಗೇ ಮೋಸ ಬಂದೀತು. ಈ ಅರಸನ ಹಾಸಿಗೆಯಲ್ಲಿ ಹಗಲೂ ಇರಳೂ ಉಪಾಯವಾಗಿ ಇರುವುದನ್ನು ಬಿಟ್ಟು ಹಾಸಿಯಾಗಲಿಕ್ಕೆ ಯತ್ನಿಸುವೆನೇ? ದುಷ್ಟರು ಸಜ್ಜನರಿಗೆ ಅಪಕಾರವನ್ನೇ ಹುಡುಕುತ್ತಿರುವರು, ಅದು ಅವರ ನೈಜಗುಣ, ಆದುದರಿಂದ ನಿನ್ನ ಬಯಕೆಗೆ ನಾನು ಎಷ್ಟು ಮಾತ್ರವೂ ಸಮ್ಮತಿಸೆನು. ನಿನ್ನ ಮೇಲೆ ನನಗೆ ಕೋಪಬರುವುದು—ಎಂದಿತು. ಆ ಮಾತಿಗೆ ಡಿಂಡಿಮವು ದೈನ್ಯದಿಂದ—ನೀನಿದ್ದ ಕಡೆಗೆ ನಾನು ಬಂದೆನು, ನಿನ್ನ ಚಿತ್ತಪ್ರಕಾರ ನಡಿಸಬಹುದು. ನಾನು ನಿನ್ನ ಕಾಲಿಗೆ ಬೀಳುವೆನು. ಅಭ್ಯಂತರವನ್ನು ಹೇಳದೆ ನಾನು ಕೇಳಿದ ಮಾತಿಗೆ ನೀನು ಸಮ್ಮತಿಸಬೇಕು—ಎನಲು, ಕಡೆಗೆ ಮಂದವಿಸರ್ಪಿಣಿ ದಾಕ್ಷಿಣ್ಯದಿಂದ

ಸಮ್ಮತಿಸಿ ಆ ಡಿಂಡಿಮದೊಡನೆ,—ನೀನು ಉಪಾಯವರಿತು ತ್ವರೆಪಡದೆ ಪರವಶವಾಗಿ ನಿದ್ರಿಸುತ್ತಿರುವ ರಾಜಶ್ರೇಷ್ಠನ ದೇಹವನ್ನು ಮೆಲ್ಲಗೆ ಕಚ್ಚಿ ರಕ್ತವನ್ನು ಹೀರಿ ಹೋಗಬೇಕು, ಬಹಳ ಎಚ್ಚರಿಕೆಯಿಂದಿರಬೇಕು— ಎಂದಿತು. ಬಳಿಕ ಡಿಂಡಿಮವು ಆ ಪ್ರಕಾರವೇ ಮಾಡುತ್ತೇನೆ ಎಂದು ಒಪ್ಪಿ, ಬಹಳ ಪ್ರೀತಿಯಾಗಿ ಅದರೊಡನೆ ಒಂದೇ ಹಾಸಿಗೆಯಲ್ಲಿದ್ದು, ಅದಕ್ಕೆ ತಿಳಿಯದ ಹಾಗೆ ಅರಸನ ಹತ್ತಿರಕ್ಕೆ ಹೋಗಿ ಮೊದಲಿನ ಜಾವ ದಲ್ಲೇ ಕಚ್ಚಲಿಕ್ಕಾರಂಭಿಸಿತು. ಆಗ ಅರಸನು ಎಚ್ಚರಗೊಂಡು ಅದುರಿ ಬಿದ್ದು, ಕಾಲುಗಳನ್ನು ಹಿಸುಕುತ್ತಿದ್ದ ಊಳಿಗದವರನ್ನು ನೋಡಿ,— ನನ್ನ ಮೈ ಚೇಳುಕುಟುಕಿದ ಹಾಗೆ ಉರಿಯುತ್ತದೆ, ಹಾಸಿಗೆಯನ್ನು ಬೇಗ ನೋಡಿರಿ—ಎಂದು ನುಡಿದನು. ಇಷ್ಟರಲ್ಲಿ ತಿಗಣೆ ಒಂದು ಸಂದಿನಲ್ಲಿ ಹೊಕ್ಕಿಕೊಂಡಿತು. ಅವರು ಹುಡುಕಿ ಅರಸನ ಹಾಸಿಗೆಯಲ್ಲಿದ್ದ ಕೂರೆ ಯನ್ನು ನೋಡಿ, ಇದೇ ಅರಸನ ದೇಹವನ್ನು ಕಚ್ಚಿತೆಂದು ಅದನ್ನು ಕೊಂದರು. ಆದಕಾರಣ ದುರ್ಜನರ ಸಹವಾಸವು ಹಾನಿಕರವಾಗುವುದು.

ಎಂದು ಈ ರೀತಿಯಲ್ಲಿ ದಮನಕನು ಹೇಳಿದ ಕಥೆಯನ್ನು ಕೇಳಿ ಪಿಂಗಳಕನು—ನನ್ನ ಪರಾಕ್ರಮವನ್ನು ತಿಳಿದಿರಲಾಗಿ ಸಂಜೀವಕನು ಯಾವ ಸಾಧನಗಳಿಂದ ನನಗೆ ಹೇಗೆ ದ್ರೋಹವನ್ನು ಮಾಡಿಯಾನು? ಎಂದು ಕೇಳಿದನು. ನೀನು ಮೈಮರೆತು ಇರುವಾಗ ಸಂಜೀವಕನು ನಿನ್ನನ್ನು ಕೊಂಬುಗಳಿಂದ ತಿವಿದು ಎತ್ತಿ ಹಾಕಿ, ಭಯಂಕರವಾದ ಗೊರಸುಗಳಲ್ಲಿ ತುಳಿದು, ಉದ್ದವಾದ ಬಾಲದಿಂದ ಬೀಸಿ ಹೊಡೆದು ಮನಸ್ಸುಬಂದಂತೆ ಬಾಧಿಸುವನು—ಎಂದು ದಮನಕನು ಹೇಳಿದನು. ಆ ಮೇಲೆ ಪಿಂಗಳಕನು ಸ್ವಲ್ಪಹೊತ್ತು ಚಿಂತಾಕ್ರಾಂತನಾಗಿ ನೀನೀಗ ಸಂಜೀವಕನ ಬಳಿಗೆ ಹೋಗಿ ಅವನ ಅಭಿಪ್ರಾಯವನ್ನು ತಿಳಿದುಕೊಂಡು ಬೇಗ ಬಾ—ಎಂದು ದಮನಕನನ್ನು ಕಳುಹಿಸಿದನು. ಬಳಿಕ ದಮನ ಕನು ಹೆದರಿದವನ ಹಾಗೆ ಅಲ್ಲಲ್ಲಿ ನಿಂತು ನಿಂತು ಸಂಜೀವಕನ ಹತ್ತಿರಕ್ಕೆ ಹೋಗಲು, ಅವನು—ಇದೇನು ? ಭಯದಿಂದ ನಡುಗುತ್ತಾ ಬಂದೆ, ನೀವೆಲ್ಲರೂ ಕ್ಷೇಮವೆ ?—ಎಂದು ಕೇಳಲು, ದಮನಕನಿಂತೆಂದನು.

Damanaka carries tales to Sanjivaka against Pingalaka.

ಎಲೈ ವೃಷಭರಾಜನೇ, ಅರಸನನ್ನು ಸೇವಿಸುವವರಿಗೆ ಕ್ಷೇಮ ವೆಲ್ಲಿಯದು? ಸಂಪತ್ತಿಗಾಗಿ ಪರಾಧೀನರಾಗಲು, ಬದುಕಿ ಇರುವುದರಲ್ಲಿ ನಂಬಿಕೆಯಿಲ್ಲ; ಚಿತ್ತಸ್ವಾಸ್ಥ್ಯ ವಿರಲೇಇರದು. ಧನವಿದ್ದರೆ ಗರ್ವಿಸದವನು ಯಾವನು? ಕಾಲಗತಿಯನ್ನು ಹೊಂದದವರು ಯಾರು? ಯಾಚಕನಾದವನು ಯಾವನು ಗೌರವವನ್ನು ಹೊಂದಿದನು? ದುರ್ಜನರ ಬಲೆಯಲ್ಲಿ ಸಿಕ್ಕಿದವನು ಯಾವನು ಕ್ಷೇಮವಾಗಿ ಹೋದನು? ಅರಸನಿಗೆ ಪ್ರಿಯನಾದವನು ಯಾವನು? ಮೂಢನಾದವನು—ಅರಸನು ತನ್ನನ್ನು ಇಷ್ಟರವನನ್ನಾಗಿ ಮಾಡಿದನು, ತನಗಿಷ್ಟು ಧನ ಕೂಡಿತು, ತನ್ನ ಮೇಲೆ ಅರಸನಿಗೆ ತುಂಬಾ ವಿಶ್ವಾಸವುಂಟು, ತಾನು ಬಹುಕಾಲ ಸುಖವಾಗಿ ಬಾಳಬಹುದು—ಎಂದು ಮನಸ್ಸಿನಲ್ಲಿ ನೆನಸಿ ಸಂತೋಷಿಸುತ್ತಿರುವನು; ವಿವೇಕಿಯಾದವನು ಇದನ್ನೆಲ್ಲಾ ಪ್ರಾಣಾಂತಕವೆಂದೆಣಿಸಿ ಹೆದರುತ್ತಿರುವನು. ಬುದ್ಧಿಶಾಲಿಯಾದವನು ಕಾಲದೇಶಗಳನ್ನರಿತು—ತನಗೆ ಇವರು ಆಪ್ತರು ಇವರು ಅನಾಪ್ತರು—ಎಂದು ತಿಳಿದುಕೊಂಡು, ತನ್ನ ಶಕ್ತಿ ಇಂಥದು, ತನಗಿಂತ ಇವನಧಿಕನು, ಇವನಲ್ಪನು, ಎಂದು ವಿಚಾರಿಸಿ ಇತರರಿಗೆ ತಾನು ಒಳಪಡದೆ ಇರುವ ಉಪಾಯವನ್ನು ಯಾವಾಗಲೂ ಚಿಂತಿಸುತ್ತಿರುವನು—ಎಂದನು. ಅದಕ್ಕೆ ಸಂಜೀವಕನು—ಅಲ್ಲಿಯ ರಾಜಕಾರ್ಯದ ಸ್ವಭಾವವೇನು? ಈಗ ಅರಸನೇನು ಹೇಳಿದನು? ಮಾಡಬೇಕಾದ ಕೆಲಸವೇನು?—ಎಂದು ಕೇಳಲಾಗಿ, ಹತ್ತಿರಕ್ಕೆ ಹೋಗಿ ಕುಳಿತುಕೊಂಡು ದಮನಕನು ಇಂತೆಂದನು;—ಅರಸರ ವಿಶ್ವಾಸವನ್ನೂ ಅವಿಶ್ವಾಸವನ್ನೂ ಹೇಳತಕ್ಕುದಲ್ಲ. ಆದರೂ ನೀನು ನನ್ನಲ್ಲಿ ನಂಬಿಕೆಯಿಂದ ಬಂದಿದ್ದೀಯೆ. ಆದುದರಿಂದ ಇದ್ದ ಸಂಗತಿಯನ್ನು ತಿಳಿಸಬೇಕು. ಸ್ವಚ್ಛವಾಗಿರುವುದರಿಂದ ಸಮುದ್ರದಲ್ಲಿ ಮಣಿಗಳು ಮೇಲಕ್ಕೆ ಕಾಣಬಂದರೂ, ಸಮುದ್ರದ ಆಳ ಕೊಂಚವಾಗಿರುವುದೆಂದು ಎಣಿಸಕೂಡದು; ಹಾಗೆಯೇ ಅರಸನು ನಮ್ಮಲ್ಲಿ ಬಹು ದಯೆಯುಳ್ಳವನಾಗಿದ್ದಾನೆಂದು ಅದನ್ನೇ ನಂಬಿರಕೂಡದು. ಸೇವಕರು ಅರಸನ ಹತ್ತಿರ

ಸೇರಿ ಕಡೆಯಲ್ಲಿ ಯಾವಾಗಲಾದರೂ ಕೆಟ್ಟು ಹೋಗುವುದು ಸಿದ್ಧವು, ಈಗ ಸೇವೆಗೆ ನೀನು ಬರುತ್ತಲೇ ತೀಕ್ಷ್ಣವಾದ ದೊಡ್ಡ ಕೋರೆಗಳಿಂದ ನಿನ್ನನ್ನು ಕದಲದಂತೆ ಹಿಡಿದು ನಿನ್ನ ಕಂಠರಕ್ತವನ್ನು ಮುಂಚೆ ತಾನು ಕುಡಿದು ತರುವಾಯ ತನ್ನ ಬಳಿಯಲ್ಲಿ ಇರುವವರಿಗೆಲ್ಲಾ ನಿನ್ನ ಮಾಂಸ ವನ್ನು ಪಂಚಿ ಕೊಡಬೇಕೆಂದು ಮೃಗೇಂದ್ರನು ನಿಶ್ಚೈಸಿಕೊಂಡು ಇದ್ದಾನೆ. ಈ ತಾತ್ಪರ್ಯ ಆತನಿಗೆ ಇಂದು ಹುಟ್ಟಿದುದಲ್ಲ, ಬಹುದಿ ನವಾಗಿ ಉಂಟು. ನಾನು ಮುಂಚೆ ನಿನಗೆ ಮಾತುಕೊಟ್ಟು ನಿನ್ನನ್ನು ಊಳಿಗದಲ್ಲಿ ಇಟ್ಟವನಾದುದರಿಂದ, ಈ ಸಂಗತಿಯನ್ನೆಲ್ಲಾ ನಿನಗೆ ತಿಳಿಸ ಲಿಕ್ಕೆ ಬಂದೆನು; ನಿನಗೆ ಮನಸ್ಸು ಬಂದ ಮಾರ್ಗವನ್ನು ನೋಡಿಕೊ— ಎನಲು; ಸಂಜೀವನಕನು ಬಹಳ ದುಃಖಿತನಾಗಿ ಸ್ವಲ್ಪ ಹೊತ್ತು ಸುಮ್ಮ ನಿದ್ದು ಬಳಿಕ ದಮನಕನನ್ನು ನೋಡಿ ಇಂತೆಂದನು.

Sanjivaka's thoughts on the subject.

ಈ ಲೋಕದಲ್ಲಿ ಹಲವರು ಅರಸರು ಅಪಾತ್ರರನ್ನು ಪೋಷಿಸು ವರು, ಲೋಭಿಯಾದವನಿಗೇ ಧನವು ಸೇರುವುದು, ಮೇಘವು ವಿಶೇಷ ವಾಗಿ ಸಮುದ್ರದಲ್ಲಿ ವರ್ಷಿಸುವುದು. ತಪ್ಪಿಲ್ಲದೆ ಸೇವಕರ ಮೇಲೆ ಕೋಪಿಸಿಕೊಳ್ಳುವ ಅರಸರ ಮನಸ್ಸನ್ನು ಯಾರು ಸಂತೋಷ ಪಡಿಸ ಬಲ್ಲರು? ಕಾರಣವಿದ್ದು ಕೋಪಿಸುವ ಅರಸನಾದರೆ ಆತನಲ್ಲಿ ಸೇವಿಸ ಬಹುದಲ್ಲದೆ ಕಾರಣವಿಲ್ಲದೆ ತಪ್ಪುಗಳ ಹುಡುಕುತ್ತಿರುವ ಅರಸನನ್ನು ಸೇವಿಸಲಿಕ್ಕಾದೀತೇ? ನಮ್ಮ ಪಿಂಗಳಕನು ಅನ್ಯರ ಮಾತನ್ನು ಕೇಳು ವನೇ ಹೊರತು ಸ್ವಬುದ್ಧಿಯಿಂದ ನಡೆಯುವವನಲ್ಲ. ವೈದ್ಯನೂ ವಿದ್ವಾಂ ಸನೂ ಮಂತ್ರಿಯೂ ಈ ಮೂವರೂ ಯಾವ ಅರಸನಿಗೆ ಇಚ್ಛಕದ ಮಾತುಗಳನ್ನು ನುಡಿಯುತ್ತಿರುವರೋ, ಆ ಅರಸನು ಆರೋಗ್ಯವನ್ನೂ ಧರ್ಮವನ್ನೂ ಬೊಕ್ಕಸವನ್ನೂ ಶೀಘ್ರವಾಗಿ ಹೋಗಲಾಡಿಸಿಕೊಳ್ಳು ವನು. ಈ ಅರಸನಿಗೆ ನಾನು ಕೇಡಕೋರಲಿಲ್ಲ. ನನ್ನಲ್ಲಿ ನಿರ್ನಿಮಿತ್ತ ವಾಗಿ ಈತನು ಅಪಕಾರವೆಣಿಸುತ್ತಾನೆ. ಗುಣವಂತರೊಂದಿಗೆ ಸೇರಿದ ಪುರುಷನು ಗುಣವಂತನೇ ಆಗುತ್ತಾನೆ; ದುರ್ಗುಣಿಗಳೊಂದಿಗೆ ಕೂಡಿದರೆ

ಒಳ್ಳೇ ಸಿಹಿನೀರುಳ್ಳ ನದಿಗಳು ಉಪ್ಪುಸಮುದ್ರದಲ್ಲಿ ಬಿದ್ದು ಕೆಟ್ಟಹಾಗೆ, ಅವನ ಗುಣವು ಕೆಟ್ಟು ಹೋಗುತ್ತದೆ. ಬೆಳ್ಳಿಯ ಬೆಟ್ಟದ ಮೇಲೆ ಚಂದ್ರ ಕಿರಣಗಳು ತುಂಬಾ ಪ್ರಕಾಶಿಸುವಂತೆ, ಒಳ್ಳೆಯ ಗುಣವುಳ್ಳ ಪುರುಷನಲ್ಲಿ ಇತರನ ಅಲ್ಪಗುಣವಾದರೂ 'ಪ್ರಕಾಶಿಸುತ್ತದೆ. ಕಾಡಿಗೆಯ ಬೆಟ್ಟದಲ್ಲಿ ರಾತ್ರಿಯಲ್ಲಿ ಪೂರ್ಣಚಂದ್ರಕಿರಣಗಳು ಪ್ರಸರಿಸಿದರೂ ಪ್ರಕಾಶಿಸದ ಹಾಗೆ, ಕೆಟ್ಟ ಗುಣಗಳುಳ್ಳವನಲ್ಲಿ ಅನ್ಯನ ಒಳ್ಳೆಯಗುಣಗಳೆಷ್ಟಾದರೂ ಪ್ರಕಾಶಿಸವು. ದುಷ್ಟರಿಗೆ ಎಷ್ಬು ಉಪಕಾರಮಾಡಿದರೂ, ಮೂಢರಿಗೆ ಎಷ್ಟು ವಿದ್ಯೆ ಕಲಿಸಿದರೂ, ಹೇಳಿದ ಹಾಗೆ ಕೇಳದವರಿಗೆ ಎಷ್ಟು ಬುದ್ಧಿ ಹೇಳಿದರೂ, ಅಪಾತ್ರರಿಗೆ ಎಷ್ಟು ಕೊಟ್ಟರೂ ಫಲವಿಲ್ಲ. ಕಾಡಿನಲ್ಲಿ ಅಳುವುದೂ, ಹೆಣಗಳನ್ನಲಂಕರಿಸುವುದೂ, ಮಿಟ್ಟೆ ಭೂಮಿಯಲ್ಲಿ ಕಮಲಲತೆಯನ್ನು ನಾಟುವುದೂ, ನಾಯಬಾಲವನ್ನು ನೆಟ್ಟಗೆ ಮಾಡುವುದಕ್ಕಾಗಿ ದಬ್ಬೆಗಳಿಟ್ಟು ಕಟ್ಟುವುದೂ, ಕಿವುಡನೊಂದಿಗೆ ಏಕಾಂತವಾಡುವುದೂ, ಚೌಳು ನೆಲದಲ್ಲಿ ವರ್ಷಿಸುವುದೂ, ಕುರುಡನಿಗೆ ಕನ್ನಡಿತೋರಿಸುವುದೂ, ಬೂದಿಯಲ್ಲಿ ತುಪ್ಪವನ್ನು ಹೋಮಮಾಡುವುದೂ ಹೇಗೆ ನಿಷ್ಫಲವೋ ಹಾಗೆಯೇ, ಅವಿವೇಕಿಯಾದ ಅರಸನಲ್ಲಿ ಸೇವೆಮಾಡುವುದು ನಿಷ್ಪ್ರಯೋಜನವು. ಒಳ್ಳೆಯ ಗಂಧದ ಮರಕ್ಕೆ ಹಾವು ಸುತ್ತಿಕೊಂಡಿರುತ್ತದೆ, ಮಡುವುಗಳಲ್ಲಿ ಮೊಸಳೆಗಳು ಇರುತ್ತವೆ, ಕಮಲವು ಕೆಸರಿನಲ್ಲಿ ಬೆಳೆಯುತ್ತದೆ; ಶ್ರೇಷ್ಠವಾದ ವಸ್ತು ನಿರುಪದ್ರವವಾಗಿ ಇರುವುದು ಅಪೂರ್ವವು. ಸೇವಕರು ವಿವೇಕಿಯಾದ ಅರಸನನ್ನು ಓಲೈಸಿದರೆ ಭಯವಿಲ್ಲ. ದುರ್ಜನನು ತನ್ನಬಳಿಗೆ ಬರುವವನನ್ನು ಕಾಣುತ್ತಲೇ ಬಹು ವಿನಯದಿಂದ ಎದ್ದು ಅವನನ್ನು ತಣ್ಣಗೆ ನೋಡಿ ತಬ್ಬಿಕೊಂಡು ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿ ಒಳಗೆ ವಿಷವಿಟ್ಟುಕೊಂಡು ಹೊರಗೆ ಅಮೃತಸೋರುವಹಾಗೆ ಪ್ರಿಯವಚನಗಳನ್ನು ನುಡಿಯುವನು. ಬುದ್ಧಿವಂತರು ಸಮುದ್ರವನ್ನು ದಾಟುವುದಕ್ಕೆ ಹಡಗನ್ನೂ, ಕತ್ತಲೆಯನ್ನು ಹೋಗಲಾಡಿಸುವುದಕ್ಕೆ ದೀಪವನ್ನೂ, ಸುಖವಾಗಿಯೂ ವೇಗವಾಗಿಯೂ ಸುಲಭವಾಗಿಯೂ ಸಂಚರಿಸಲಿಕ್ಕೆ ಲೋಹಮಾರ್ಗವನ್ನೂ, ಬಲು ಬೇಗ ಸಮಾಚಾರವನ್ನು ತಿಳಿಸಲಿಕ್ಕೆ ತಂತಿಯ ತಪಾಲನ್ನೂ ಉಪಾಯದಿಂದ ನಿರ್ಮಿಸಿದರು;

ಆದರೂ ಅವರು ಮೂರ್ಖರ ಚಿತ್ತವೃತ್ತಿಯನ್ನು ತಿದ್ದಲಿಕ್ಕೆ ತಕ್ಕ ಉಪಾಯುವನ್ನು ಮಾಡಲಾರದೆ ಹೋದರು. ಸಾಯುಂಕಾಲದಲ್ಲಿ ಯುಕ್ತಾಯುಕ್ತವಿಚಾರಮಾಡದೆ, ತುಂಬಿಯು ಜೇನಿನ ಆಸೆಯಿಂದ ಶೀಘ್ರವಾಗಿ ಕಮಲದಲ್ಲಿ ಪ್ರವೇಶಿಸಿ, ಆಮೇಲೆ ಕಮಲವು ಮುಚ್ಚಿಕೊಳ್ಳುತ್ತಲೇ ಹೊರಗೆ ಹೊರಟು ಬರುವುದಕ್ಕೆ ಹಾದಿಯಿಲ್ಲದೆ ಚಿಂತಿಸುವ ಹಾಗೆ, ಕೆಲವರು ಮುಂದಕ್ಕೆ ಬರುವುದನ್ನರಿಯದೆ ಲೋಭದಿಂದ ಪ್ರವರ್ತಿಸುವರು. ಕಮಲನ್ನೈದಿಲೆ ಮುಂತಾದ ಹೂಗಳನ್ನು ಬಿಟ್ಟು ಬಿಟ್ಟು ತುಂಬಿಗಳು ಮದಿಸಿದ ಆನೆಯ ಮಸ್ತಕದಲ್ಲಿಯ ಮದಜಲವನ್ನು ಪಾನಮಾಡಲಿಕ್ಕೆ ಹೋಗುತ್ತವೆ; ಆಗ ಆನೆ ಕಿವಿಗಳಿಂದ ಬೀಸಿದರೆ ಆ ಗಾಳಿಗೆ ಕೆಳಗೆ ಬಿದ್ದು ಅವು ತಾವರೆಯಲ್ಲಿ ತಾವು ವಿಹರಿಸುವುದನ್ನು ನೆನೆದುಕೊಳ್ಳುತ್ತವೆ. ಹಾಗೆಯೇ ಲೋಕದಲ್ಲಿ ಜನರು ಸುಲಭನಾದವನನ್ನು ಬಿಟ್ಟು ದುರ್ಜನರಲ್ಲಿ ಅನುರಕ್ತಿಯುಳ್ಳವರಾಗಿ, ಅಲ್ಲಿ ಉಪದ್ರವವು ಸಂಭವಿಸಿದಾಗ ಸಜ್ಜನರ ಬಳಿಯಲ್ಲಿ ಸೇವಿಸದೆ ಹೋದೆವಲ್ಲಾ ಎಂದು ವ್ಯಸನಪಡುತ್ತಾರೆ. ಕಾಡಿನಲ್ಲಿಯ ಹುಲ್ಲನ್ನು ತಿಂದು ಪ್ರಭುವಿಗೆ ಹಿತವಾದ ಕೆಲಸ ಮಾಡುತ್ತಿರುವ ನನಗೀಗ ಮೃತ್ಯುವಿನ ಬಾಯಲ್ಲಿ ಬೀಳಬೇಕಾಗಿ ಬಂದಿತು. ಈ ಕಲಿಕಾಲದಲ್ಲಿ ಇವರು ದೊಡ್ಡವರು ಇವರು ಚಿಕ್ಕವರು ಎನ್ನದೆ ಮಾಯೋಪಾಯುಗಳಿಂದ ವರ್ತಿಸುವವರು, ಕಾಗಿ ಮುಂತಾದ ಜಂತುಗಳೇಕವಾಗಿ ಒಂಟೆಗೆ ಕೇಡನ್ನು ಕೋರಿದ ಹಾಗೆ ಸಾಧುಗಳಿಗೆ ಕೇಡಬಗೆವರು— ಎಂದನು. ದಮನಕನು ಆ ಕಥೆಯನ್ನು ನನಗೆ ತಿಳಿಸೆನಲು, ಸಂಜೀವಕನು ಹೇಳುತ್ತಾನೆ.

Deception—The Crow, the Tiger, and the Fox.

ಮಹಾಭಯಂಕರವಾದ ಒಂದಡವಿಯಲ್ಲಿ ಮದೋತ್ಕಟವೆಂಬ ಹೆಸರುಳ್ಳ ಒಂದು ಸಿಂಹವು ಸಂಚರಿಸುತ್ತಿರುವುದು. ಅದಕ್ಕೆ ಕಾಗೆ ಹುಲಿ ನರಿ ಈ ಮೂವರೂ ಮಂತ್ರಿಗಳಾಗಿದ್ದರು. ಅವರು ಒಂದು ದಿನ ಆ ಕಾಡಿನಲ್ಲಿ ಒಂದೊಂಟೆಯನ್ನು ಕಂಡು—ನೀನೆಲ್ಲಿಂದ ಬಂದೆ—ಎಂದು ಕೇಳಿದರು. ಆ ಒಂಟೆ ಕಾಗೆ ಮುಂತಾದ ಜಂತುಗಳಿಗೆ ಎರಗಿ,—ಬಬ್ಬ

ವರ್ತಕನು ನನ್ನ ಬೆನ್ನಿನ ಮೇಲೆ ಭಾರವಿಟ್ಟು ಹೊರಿಸುತ್ತಿರಲಾಗಿ ನಾನು ಹೊತ್ತು ಹೊತ್ತು ದಣಿದು ಈಗ ಅವನಿಗೆ ಕಾಣಿಸದೆ ಅವಿತುಕೊಂಡಿದ್ದೇನೆ, ನನಗೆ ನೀವೇ ಗತಿ, ನನ್ನ ರಕ್ಷಿಸಬೇಕು, ನಾನು ನಿಮ್ಮಲ್ಲಿರುತ್ತೇನೆ—ಎನಲು, ನರಿಯು—ಈ ಅರಣ್ಯದಲ್ಲಿ ಒಬ್ಬ ಮೃಗರಾಜನು ಮಹಾಬಲಪರಾಕ್ರಮಸಂಪನ್ನನಾಗಿದ್ದಾನೆ. ನಾವು ಆತನನ್ನು ಕುಲಸ್ವಾಮಿಯಾಗಿ ಮಾಡಿಕೊಂಡು ಯಾವಾಗಲೂ ಸೇವಿಸುತ್ತಿರುವೆವು. ನೀನು ನಮಗೆ ಮಿತ್ರನಾದೆ. ಆದುದರಿಂದ ಮೃಗರಾಜನ ಬಳಿಗೆ ನಿನ್ನ ಕರೆದುಕೊಂಡು ಹೋಗಿ ದರ್ಶನಮಾಡಿಸಿ ನಿನಗೆ ಮೇಲುಂಟಾಗುವ ಹಾಗೆ ಮಾಡುತ್ತೇವೆ. ನೀನು ಭಯವನ್ನು ಬಿಟ್ಟು ಧೈರ್ಯದಿಂದಿರು. ನಮ್ಮ ಮಾತಿನಲ್ಲಿ ನಂಬಿಕೆಯಿಟ್ಟು ನಮ್ಮನ್ನು ಹೊಸಬರಾಗಿ ಎಣಿಸದೆ ಸಂಗಡ ಬಂದರೆ, ನಿನ್ನ ಸಂಗತಿಯನ್ನು ಮೃಗೇಂದ್ರನಿಗೆ ತಿಳಿಸಿ ನಿನ್ನಲ್ಲಿ ಪ್ರೀತಿ ಹುಟ್ಟಿಸಿ ನಿನ್ನನ್ನು ಆತನ ಓಲಗಕ್ಕೆ ಸೇರಿಸಿಕೊಳ್ಳುವಂತೆ ಮಾಡುತ್ತೇವೆ. ನಾವು ನಾಲ್ವರೂ ಏಕೀಭವಿಸಿ ಇರೋಣ. ಮೃಗೇಂದ್ರನ ಓಲಗದಲ್ಲಿರುವವರನ್ನು ಮಾತನಾಡಿಸುವವರು ಬೇರೊಬ್ಬರುಂಟೋ? ಚಿಂತೆಯೇನೂ ಇಲ್ಲದೆ ನೆಮ್ಮದಿಯಾಗಿರಬಹುದು__ಎಂದು ಹೇಳಲಾಗಿ, ಒಂಟೆ ತನ್ನ ಮನಸ್ಸಿನಲ್ಲಿ ಸಂತೋಷಿಸಿ ಅವರ ಹಿಂದೆ ಹೋಯಿತು. ಆ ಒಂಟೆಯ ಸಂಗತಿಯನ್ನು ಮೃಗರಾಜನಿಗೆ ತಿಳಿಸಿದರು. ಆಗ ಮೃಗರಾಜನು ಒಂಟೆಗೆ ಅಭಯಹಸ್ತವನ್ನು ಕೊಟ್ಟು ಸಂತೋಷಪಡಿಸಿ ಸ್ವಲ್ಪ ಹೊತ್ತು ಮಾತನಾಡಿ, ಅದಕ್ಕೆ ಕಥನಕನೆಂಬ ಹೆಸರನ್ನಿಟ್ಟು— ನನ್ನ ಮಂತ್ರಿಗಳಲ್ಲಿ ನೀನೊಬ್ಬ ಮಂತ್ರಿಯಾಗಿರು—ಎಂದು ನಿಯಮಿಸಿದನು. ಆ ಒಂಟೆಯು ಕಾಗೆ ಹುಲಿ ನರಿಗಳ ಸಂಗಡ ಸೇರಿ ಅತಿಸ್ನೇಹವಾಗಿ ಬಹುಕಾಲವಿದ್ದಿತು. ಹೀಗಿರಲಾಗಿ ಒಂದು ದಿನ ಅವುಗಳನ್ನು ಸಿಂಹವು ನೋಡಿ,—ಎಲೈ ಮಂತ್ರಿಗಳಿರಾ, ಈಗ ನನಗೆ ಮೈ ಚೆನ್ನಾಗಿಲ್ಲ. ನನಗೆ ಗುಣವಾಗುವ ತನಕ ನಾನು ಅಡವಿಯಲ್ಲಿ ಸಂಚರಿಸಲಾರೆನು. ಆದುದರಿಂದ ನನಗೆ ಹೊತ್ತೇರುವುದಕ್ಕಿಂತ ಮುಂಚೆ ಆಹಾರವನ್ನು ತಂದುಕೊಡಬೇಕು—ಎನಲು; ಮಂತ್ರಿಗಳೆಲ್ಲರೂ ಏಕೀಭವಿಸಿ—ನಾವು ಅಲ್ಪರು, ನಿಮಗೆ ಬೇಕಾದ ಆಹಾರವನ್ನು ಬಪ್ಪೊತ್ತಿಗೆ ಸಹ ತಂದು ಕೊಡಲಾರೆವು.

ನಾವು ನಿಮ್ಮ ಸೇವೆ ಮಾಡಿಕೊಂಡು ನೀವು ಭಕ್ಷಿಸಿದ ಬಳಿಕ ಉಳಿದು
ದನ್ನು ತಿಂದು ಜೀವಿಸುತ್ತಿದ್ದೇವೆ. ನಾವೆಷ್ಟುಮಾತ್ರದವರು?—ಎಂದು
ನುಡಿದರು. ಆಗ ಸಿಂಹವು ಅವರನ್ನು ನೋಡಿ—ಎಷ್ಟುಮಾತ್ರ ಆಹಾರ
ಸಿಕ್ಕಿದರೂ ಸಾಕು. ಆ ಸ್ವಲ್ಪದೊಂದಿಗೆ ಹೊತ್ತುಕಳೆಯುತ್ತಿರುವೆನು;
ನಾನೇನುಮಾಡಲಿ! ನನಗೀಗ ರೋಗ ಸಂಭವಿಸಿತು. ಆದುದರಿಂದ
ತಾವುಸಪಡಿಸದೆ ಗಿಡಕ್ಕೆ ಹೋಗಿ ಯಾವ ಮಾಂಸವನ್ನಾದರೂ ಎಷ್ಟುಮಾ
ತ್ರವನ್ನಾದರೂ ತೆಗೆದುಕೊಂಡು ಬನ್ನಿರಿ—ಎಂದು ಅವರನ್ನು ಕಳುಹಿಸಿ
ತು. ಆಮೇಲೆ ಅವರು ಅಡವಿಗೆ ಹೋಗಿ ಹೊದರುಗಳಲ್ಲೂ ಗಿಡಗಳಲ್ಲೂ
ಬೆಟ್ಟಗಳಲ್ಲೂ ಜೌಗುಗಳಲ್ಲೂ ಗುಹೆಗಳಲ್ಲೂ ಒಂದು ಮೃಗವನ್ನಾದರೂ
ಕಾಣದೆ, ತರುವಾಯ ನಾಲ್ವರೂ ನಾಲ್ಕು ದಿಕ್ಕುಗಳಿಗೆ ಚದರಿ ಹೋಗಿ
ಹುಡುಕುತ್ತಿರಲಾಗಿ, ಕಾಗೆ ಹುಲಿನರಿಗಳು ಒಂದು ಕಡೆಯಲ್ಲಿ ಸೇರಿ
ಕೊಂಡುವು. ಆಗ ಕಾಗೆಯು ಹುಲಿನರಿಗಳನ್ನು ನೋಡಿ—ನಾವು
ಸ್ವಾಮಿಯ ಕೆಲಸಕ್ಕಾಗಿ ಬಂದುದಕ್ಕೆ ಅರಣ್ಯದಲ್ಲಿ ಏನೂ ಸಿಕ್ಕಲಿಲ್ಲ.
ಈ ಕಥನಕನನ್ನು ಕೊಂದು ತೆಗೆದುಕೊಂಡು ಹೋಗಿ ಆತನಿಗೆ ಆಹಾರ
ವಾಗಿ ಮಾಡಿದರೆ ಒಳ್ಳೆಯದಲ್ಲವೋ? ಮಿಕ್ಕ ಮಾಂಸ ನಮಗೆ ಕೆಲವು
ದಿನಕ್ಕೆ ಉದರಪೋಷಣೆಗೆ ಸಾಕು. ಈವರೆಗೆ ಸಂದ ಕಾಲದಲ್ಲಿ ಅನೇಕ
ಮೃಗಮಾಂಸಗಳಿಂದ ನಮ್ಮನ್ನು ಪೋಷಿಸಿದ ಅರಸನಿಗೆ ನಾವೀಗ ಬಂದ
ಸಂಕಟವನ್ನು ಹೋಗಲಾಡಿಸಬೇಕು—ಎಂದು ನುಡಿಯಲು, ಕಾಗೆಗೆ
ಹುಲಿ ನರಿಗಳಿಂತೆಂದುವು;—ಬಹಳ ದಯೆಯಿಂದ ಒಂಟೆಗೆ ಅಭಯಪ್ರ
ದಾನಮಾಡಿ ಎಲ್ಲರಿಗಿಂತ ಹೆಚ್ಚಾಗಿ ಮನ್ನಿಸುತ್ತಿರುವ ಅರಸನಿಗೆ ತಿಳಿಸದೆ
ನಾವು ಅದನ್ನು ಕೊಂದರೆ ಆ ಮೇಲೆ ಆ ಸಂಗತಿ ಅರಸನಿಗೆ ತಿಳಿದಲ್ಲಿ
ನಮ್ಮ ಮೇಲೆ ಕೋಪಿಸಿ ನಮಗೆ ಶಿಕ್ಷೆಯನ್ನು ವಿಧಿಸುವನು. ಆದುದ
ರಿಂದ ನಮ್ಮ ಸ್ವಾಮಿ ಅರಿಯದ ಹಾಗೆ ಅದನ್ನು ಕೊಲ್ಲುವುದು ಯುಕ್ತ
ವಲ್ಲ—ಎಂದುವು. ಅದಕ್ಕೆ ಕಾಗೆಯು—ಅತಿ ಹಸಿವಿನಿಂದ ಪೀಡಿತನಾದ
ಮನುಷ್ಯನು ತನ್ನ ಹೆಂಡತಿ ಮಕ್ಕಳನ್ನೊಲ್ಲನು. ಹಾವು ತಾನಿಟ್ಟ
ಮೊಟ್ಟೆಗಳನ್ನು ಹಸಿವಿನಿಂದ ತಾನೇ ತಿನ್ನುವುದು. ತೀರದೆ ಮಾರಿ
ಬಂದಾಗ ಹಸಿಗೊಂಡವನು ಪಾಪಮಾಡದೆ ಇರುವನೋ? ನಮ್ಮ ಹಸಿ

ವನ್ನೇ ನಾವೀಗ ತಾಳಲಾರೆವು. ಎಲ್ಲಿಗಾದರೂ ಓಡಿ ಹೋಗೋಣವೇ— ಎಂದು ರೋಸಿಕೊಂಡಿತು. ಆಗ ಹುಲಿಯು—ನಮ್ಮ ಸ್ವಾಮಿ ಮಹಾ ವ್ಯಾಧಿಯಿಂದ ಪೀಡಿತನಾಗಿ ಹಸಿಗೊಂಡಿರುವಾಗ, ನಾವು ಆತನನ್ನು ಬಿಟ್ಟು ಹೋಗುವುದು ಭೃತ್ಯನ್ಯಾಯವಲ್ಲ. ಆತನ ಸಮ್ಮುಖಕ್ಕ ಹೋದಮೇಲೆ ಅದೃಷ್ಟವಿದ್ದಂತೆ ಆಗುತ್ತದೆ, ಹೋಗೋಣ—ಎಂದು ಕಾಗೆಗೆ ಹೇಳಿ ಹೊರಡುವ ಸಮಯದಲ್ಲಿ ಒಂಟೆ ಸಹ ಸೇರಿಕೊಂಡಿತು. ಆ ಮೇಲೆ ಈ ಮೂವರೂ ಅದನ್ನು ತಲೆಬಾಗಿಲಲ್ಲಿ ನಿಲ್ಲಿಸಿ ಸಿಂಹದ ಬಳಿಗೆ ಹೋಗಿ—ಎಲೈ ಮಹಾ ಪ್ರಭುವೇ, ನಾವು ನಿಮ್ಮ ಆಜ್ಞೆಯ ಪ್ರಕಾರ ಅಡವಿಗಳಿಗೆ ಹೋಗಿ ಅಲ್ಲಿ ಮಾಂಸ ಸಿಕ್ಕದೆ ತಿರುಗಿ ಸಾಕಾಗಿ ಬಂದೆವು. ಈಗ ಆಹಾರವಿಲ್ಲದೆ ಶ್ರಮಪಡಬೇಕಾದುದೇನು? ನಾವು ಒಂದು ಬಿನ್ನಹ ಮಾಡುತ್ತೇವೆ, ಚಿತ್ತೈಸಬೇಕು. ಕಥನಕನು ತನ್ನ ಕಾರ್ಯಕ್ಕಾಗಿ ನಿಮ್ಮ ಬಳಿಗೆ ಬಂದನೇ ಹೊರತು, ನೀವು ಕರೆಯಿಸಿ ಬಂದ ವನಲ್ಲವಷ್ಟೆ? ಆದುದರಿಂದ ಅವನನ್ನು ಆಹಾರವಾಗಿ ಸ್ವೀಕರಿಸಿದರೆ ನಿಮಗೂ ನಮಗೂ ಬೇಕಾದಷ್ಟು ಆಹಾರವಾಗುತ್ತದೆ—ಎನಲು; ಸಿಂಹ ವು ಕೇಳಿ, ಹರಿ ಹರೀ! ಎಂದು ಕಿವಿಗಳನ್ನು ಮುಚ್ಚಿಕೊಂಡು—ಅಭ ಯಪ್ರದಾನ ಮಾಡಿದ ತರವಾಯ ಇಂಥ ಆಲೋಚನೆ ಮಾಡಬಹುದೇ? ಗೋದಾನ, ಭೂದಾನ, ಅನ್ನದಾನ, ವಸ್ತ್ರದಾನ, ಸುವರ್ಣದಾನ, ಇವು ಅಭಯವಾಗ್ದಾನಕ್ಕೆ ಸಮನಲ್ಲವೆಂದು ದೊಡ್ಡವರು ಹೇಳುವರು. ಹೆದರಿ ಮರೆಹೊಕ್ಕ ಒಬ್ಬನನ್ನು ಕಾಪಾಡಿದರೆ ಅಶ್ವಮೇಧಯಾಗ ಮಾಡಿದ ಫಲವು ಬರುವುದೆಂಬುದನ್ನು ನೀವು ಕೇಳಲಿಲ್ಲವೇ?—ಎಂದು ನುಡಿಯಿತು. ಆಗ ಆ ಮೂವರಲ್ಲಿ ಕಾಗೆಯು, ಕುಲವನ್ನು ರಕ್ಷಿಸುವುದ ಕ್ಕಾಗಿ ದುಷ್ಟನಾದ ಮಗನನ್ನು ಬಿಡುವರು; ಗ್ರಾಮವನ್ನು ಕಾಪಾಡುವು ದಕ್ಕಾಗಿ ಕುಲವನ್ನು ಬಿಡುವರು; ಭೂಮಿಯನ್ನು ರಕ್ಷಿಸುವುದಕ್ಕಾಗಿ ಗ್ರಾಮವನ್ನು ಬಿಡುವರು; ತನ್ನನ್ನು ಕಾಪಾಡಿಕೊಳ್ಳುವುದಕ್ಕಾಗಿ ಸರ್ವಸ್ವ ವನ್ನೂ ಬಿಡುವರು. ಆದುದರಿಂದ ದೇಹಸಂರಕ್ಷಣಾರ್ಥವಾಗಿ ಏನುಮಾ ಡಿದರೂ ಮಾಡಬಹುದು. ಇದೂ ಅಲ್ಲದೆ ನೀವು ಕಥನಕನನ್ನು ಬಲಾ ತ್ಕಾರವಾಗಿ ಕೊಲ್ಲಬೇಕಾದುದಿಲ್ಲ. ಅವನು ಸಮ್ಮತಿಸುವಹಾಗೆ ಮಾಡು

ತ್ತೇವೆ—ಎಂದುದನ್ನು ಕೇಳಿ ಸಿಂಹವು ಸುಮ್ಮಗಿದ್ದಿತು. ಆಗ ಕಾಗೆಯು ಸಂದು ತಿಳಿದುಕೊಂಡು ಮಾಯೋಪಾಯಮಾಡಿ ಎಲ್ಲರನ್ನೂ ಕರೆದು ಕೊಂಡು ಸಿಂಹದ ಹತ್ತಿರಕ್ಕೆ ಬಂದು,—ಸ್ವಾಮೀ, ನೀವು ಬಹಳ ಹಸಿ ವಿನಿಂದ ಬಳಲಿ ಇದ್ದೀರಿ; ನನ್ನ ಕೊಂದು ಭಕ್ಷಿಸಿರಿ. ನೀವು ದಾಕ್ಷಿಣ್ಯ ದಿಂದ ನನ್ನ ಕೊಲ್ಲಲಾರದೆ ಇದ್ದರೆ ನಾನೇ ಸಾಯುತ್ತೇನೆ. ನನ್ನ ತಿಂದು ನಿಮ್ಮ ಹಸಿವನ್ನು ತೀರಿಸಿಕೊಳ್ಳಿರಿ, ಇದು ನನಗೆ ಬಹಳ ಸಮ್ಮತ. ಸಾವಿರ ವರ್ಷ ಬಾಳಿದರೂ ಒಂದು ದಿನ ಸಾಯಬೇಕು. ಹೀಗೆ ಸ್ವಾಮಿ ಕಾರ್ಯಕ್ಕಾಗಿ ಪ್ರಾಣಬಿಡುವುದರಿಂದ ಜನ್ಮವು ಸಫಲವಾಗುವುದು—ಎಂದು ನುಡಿಯಲು, ಕೇಳಿ ಸಿಂಹವು—ನನಗೆ ಈಗಿರುವ ಹಸಿವು ಹೇಳತೀರದು; ನಿನ್ನ ದೇಹವು ಬಲು ಚಿಕ್ಕದು. ಇದರಿಂದ ನನ್ನ ಹಸಿವು ತೀರದು, ವ್ಯರ್ಥವಾಗಿ ಜೀವಹಿಂಸೆ ಮಾಡಿದ ಪಾಪಮಾತ್ರ ಸಂಭವಿಸುತ್ತದೆ—ಎಂದು ಹೇಳಿತು. ಬಳಿಕ ನರಿ ಮುಂದೆ ಬಂದು ನಿಂತು ನನ್ನ ದೇಹ ವನ್ನು ನಿಮಗೆ ಕೊಟ್ಟೆ. ನೀವು ಭುಜಿಸಿರಿ—ಎಂದು ಸಿಂಹದೊಂದಿಗೆ ಹೇಳಿತು. ಸಿಂಹವು ಕಾಗೆಗೆ ಹೇಳಿದಂತೆ ನರಿಗೂ ಉತ್ತರಕೊಟ್ಟಿತು. ಆ ಮೇಲೆ ವ್ಯಾಘ್ರವು ಸಿಂಹಕ್ಕೆ ನಮಸ್ಕರಿಸಿ—ನನ್ನನ್ನು ತಿಂದು ನಿಮ್ಮ ಹಸಿವನ್ನು ತೀರಿಸಿಕೊಳ್ಳಬೇಕು—ಎಂದು ಹೇಳಿತು. ಅದಕ್ಕೆ—ನೀನು ದುಷ್ಟ ಜಂತು, ನಾನಿದುವರೆಗೆ ಇಂಥ ದುಷ್ಟಜಂತುವಿನ ಮಾಂಸವನ್ನು ತಿಂದವನಲ್ಲ. ನಿನ್ನ ತಿಂದರೆ ನನಗೆ ಬಹುದೋಷಬಂದೀತು! ಈ ದಿನ ಹೇಗಾದರೂ ಉಪವಾಸವಿರುತ್ತೇನೆ, ಹೋಗು—ಎಂದು ನುಡಿ ಯಿತು. ಆ ಮಾತಿಗೆ ಹುಲಿ ನಾಚಿಕೆಪಟ್ಟಂತೆ ತಲೆಬಗ್ಗಿಸಿಕೊಂಡು ಆಚೆಗೆ ಹೋಯಿತು. ಬಳಿಕ ಒಂಟೆ ಸಿಂಹಕ್ಕೆ ಪ್ರದಕ್ಷಿಣೆ ಮಾಡಿ ವಿನ ಯದಿಂದೆರಗಿ—ನನ್ನದು ಬಹಳ ದೊಡ್ಡ ದೇಹ, ನನ್ನನ್ನು ತಿಂದರೆ ನಿಮ್ಮ ಹಸಿವು ತೀರುವುದು. ನನ್ನ ಮನಃಪೂರ್ವಕವಾಗಿ ಹೇಳುತ್ತೇನೆ, ಕೈಕೊಳ್ಳಬೇಕು—ಎಂದಿತು. ಈ ಮಾತು ಕೇಳುತ್ತಲೇ ಸಿಂಹವು ಒಂಟೆಯ ಮೇಲೆ ಬಿದ್ದು, ಕುತ್ತಿಗೆಯನ್ನು ಹಿಡಿದು ಕಚ್ಚಿ ನೆಲಕ್ಕೆ ಕೆಡವಿ, ತನಗೆ ಬೇಕಾದಷ್ಟು ಮಾಂಸವನ್ನು ಭಕ್ಷಿಸಿತು. ಆದುದ ರಿಂದ ಹೊಸತಾಗಿ ಊಳಿಗಕ್ಕೆ ಬಂದ ಸೇವಕನು ಎಷ್ಟು ಗುಣವಂತನಾ

ದರೂ ಅರಸನಿಗೂ ಅರಸನ ಪರಿವಾರದವರಿಗೂ ಮನಸ್ಸು ಕಲೆತು ಇರಲಾರದು—ಎಂದು ನುಡಿಯಲು, ಸಂಜೀವಕನು ದಮನಕನನ್ನು ನೋಡಿ—ಅರಸನ ಹತ್ತಿರ ಕ್ಷುದ್ರಪರಿವಾರ ಸೇರಿ ಇರುವುದರಿಂದ ಆಶ್ರಿತರಿಗೆ ಸುಖವಿಲ್ಲ. ಪೂರ್ವಕಾಲದಲ್ಲಿ ಕುಯುಕ್ತಿಗಳುಳ್ಳ ನರಿ ತೀಕ್ಷ್ಣವಾದ ಮೂಗುಳ್ಳ ಕಾಗೆ ಈ ಇಬ್ಬರೂ ನಿನ್ನ ಬಳಿಯಲ್ಲಿದ್ದರಾದುದರಿಂದ ನಾನು ಮರವೇರಿದೆನು; ನಿನ್ನ ಪರಿವಾರ ಒಳ್ಳೆಯದಲ್ಲವೆಂದು ಒಬ್ಬ ಬಡಗಿಯು ಒಂದು ಸಿಂಹಕ್ಕೆ ಹೇಳಿದ ಮಾತನ್ನು ನೀನು ಕೇಳಲಿಲ್ಲವೇ? ಎಂದು ನುಡಿಯಲು, ದಮನಕನು—ಆ ಕಥೆಯನ್ನು ನನಗೆ ಹೇಳು—ಎಂದು ಕೇಳಿದನು. ಸಂಜೀವಕನು ಹೇಳುತ್ತಾನೆ.

Evils of bad company—The Carpenter and the Lion.

ಒಂದು ಪಟ್ಟಣದಲ್ಲಿ ಒಬ್ಬ ಬಡಗಿಯಿದ್ದನು. ಅವನು ನಿತ್ಯವೂ ಕಾಡಿಗೆ ಹೋಗಿ ಮರಗಳನ್ನು ಕಡಿದು ತಂದು ಮಾರಿ ಜೀವಿಸುತ್ತಿದ್ದನು. ಒಂದು ದಿನ ಸುಹೃದ್ವಿಲೋಚನನೆಂಬ ಹೆಸರುಳ್ಳ ಸಿಂಹವು ಕಾಡಿನಲ್ಲಿ ಸಂಚರಿಸುತ್ತಾ ಅವನ ಕಣ್ಣಿಗೆ ಬಿದ್ದಿತು. ಅವನು ಅದನ್ನು ಕಂಡಂಜಿ ನಿಶ್ಚೇಷ್ಟಿತನಾದನು. ಆಗ ಸಿಂಹವು ಅವನಿಗೆ ಅಭಯವಿತ್ತು ಹೆದರಬೇಡವೆಂದು ಹೇಳಿತು. ಆ ಮೇಲೆ ಅವನು ತನ್ನ ಮನೆಯಿಂದ ತಂದ ಅನ್ನ ಮುಂತಾದುದನ್ನು ಸಿಂಹಕ್ಕೆ ಇಟ್ಟನು. ಸಿಂಹವು ತೃಪ್ತಿಹೊಂದಿ ಅವನ ಮೇಲೆ ದಯೆಯುಳ್ಳದಾಗಿದ್ದಿತು. ಬಳಿಕ ಪ್ರತಿದಿನವೂ ಅವನು ಸಿಂಹಕ್ಕೆ ನಾನಾವಿಧವಾದ ಆಹಾರಗಳನ್ನು ತಂದು ಕೊಡುತ್ತಾ ಬಂದನು. ಹೀಗೆ ಇಬ್ಬರಿಗೂ ಬಹು ಸ್ನೇಹವಾಗಿ ಬಹುಕಾಲ ಕಳೆಯಿತು. ಆ ಸಿಂಹಕ್ಕೆ ಒಂದು ಕಾಗೆಯೂ ಒಂದು ನರಿಯೂ ಇಬ್ಬರೂ ಅನುಚರರಾಗಿದ್ದರು. ಅವರು ಒಂದು ದಿನ ಸಿಂಹವನ್ನು ನೋಡಿ—ನಮ್ಮ ಆಹಾರವನ್ನು ವಿಚಾರಿಸದೆ ನೀವು ಮಾತ್ರ ಆಹಾರವನ್ನು ಸಂಪಾದಿಸಿಕೊಳ್ಳುತ್ತೀರಿ, ನಮ್ಮ ಗತಿ ಏನು?—ಎಂದು ಕೇಳಿದರು. ನಾನೆಲ್ಲಿಗೂ ಹೋಗುವದಿಲ್ಲ—ಎಂದು ಸಿಂಹವು ಹೇಳಿತು. ಆದರೆ ನಿಮಗೆ ಆಹಾರವನ್ನು ಯಾರು ತಂದು ಕೊಡುತ್ತಾರೆ? ನಮ್ಮ ಸಂಗಡ ಹೇಳಬೇಕು—

ಎಂದು ಅವೆರು ಕೇಳಿದರು. ಒಬ್ಬ ಬಡಗಿಯು ನಿತ್ಯವೂ ನನಗೆ ಅನ್ನ ಪಾನಾದಿಗಳನ್ನು ತಂದು ಕೊಡುತ್ತಾನೆ—ಎಂದು ಸಿಂಹವು ಹೇಳಿತು. ನಮಗೆ ಅವನನ್ನು ತೋರಿಸಿರಿ—ಎಂದು ಕಾಗೆ ಜಂಬುಕಗಳು ನುಡಿದುವು. ಮಾರನೆಯ ದಿನ ಬೆಳಗ್ಗೆ ಎಲ್ಲರೂ ಕಾಡಿನಲ್ಲಿ ಒಂದು ಕಡೆಯಲ್ಲಿ ಸೇರಿಯಿದ್ದರು. ಬಡಗಿಯು ಪರಿವಾರದೊಂದಿಗೆ ಕೂಡಿರುವ ಸಿಂಹವನ್ನು ನೋಡಿ ಮರವನ್ನು ಹತ್ತಿದನು. ಸಿಂಹವು ಅವನ ಹತ್ತಿರಕ್ಕೆ ಹೋಗಿ—ಸ್ನೇಹಿತನೇ, ಏಕೆ ಮರವೇರಿದೆ?—ಎಂದು ಕೇಳಿತು. ನರಿಯೂ ಕಾಗೆಯೂ ನಿನ್ನ ಮಗ್ಗುಲಲ್ಲಿದ್ದಾರೆ; ಆದುದರಿಂದ ಮರವೇರಿದೆನು. ನಿನ್ನ ಪರಿವಾರವು ಒಳ್ಳೆಯದಲ್ಲ—ಎಂದು ಹೇಳಿ, ಅವನು ಮರದಿಂದ ಇಳಿಯದೆ ಇದ್ದನು.

ಅನೇಕರಾದ ದುಷ್ಟರ ಬಳಿಯಲ್ಲಿ ಒಬ್ಬ ಸಜ್ಜನನಿದ್ದರೆ ಅವನಿಗೆ ದುಷ್ಟನೆಂಬ ಹೆಸರು ಬರುವುದು. ಊರ ಹತ್ತಿರ ಶ್ಮಶಾನಭೂಮಿಯಲ್ಲಿರುವ ಹದ್ದುಗಳ ಸಂಗಡ ಒಂದು ಹಂಸವಿದ್ದರೆ, ನೋಡುವವರು ಅವನ್ನು ಹದ್ದೆಂದುಕೊಳ್ಳುವರೇ ಹೊರತು ಹಂಸವೆಂದು ತಿಳಿದುಕೊಳ್ಳಲಾರರು. ಅರಸನ ಬಳಿಯಲ್ಲಿ ಯೋಗ್ಯರಿದ್ದರೆ ಅಲ್ಲಿಗೆ ಬಂದವನು ಅಲ್ಪನಾದರೂ ಗುಣವಂತನಾಗುವನು. ಹಂಸಗಳ ಗುಂಪಿನಲ್ಲಿ ಒಂದು ಹದ್ದಿದ್ದರೆ ಅದನ್ನು ನೋಡುವವರು ಹಂಸವೆಂದುಕೊಳ್ಳುವರೇ ಅಲ್ಲದೆ ಹದ್ದೆಂದೆಣಿಸರು. ಅರಸನ ಹತ್ತಿರ ಯಾವನೋ ದುರಾತ್ಮನು ಸೇರಿ ನಿಜವನ್ನು ಸುಳ್ಳಾಗಿಯೂ ಸುಳ್ಳನ್ನು ನಿಜವಾಗಿಯೂ ಹೇಳಿ ನನ್ನಲ್ಲಿ ಭೇದವನ್ನು ಹುಟ್ಟಿಸಿದನು. ಕೆಲಸ ಮಿಾರಿ ಹೋಯಿತು. ಏನುಮಾಡುವೆನು? ಭೂಮಿಯಲ್ಲಿ ಸಿಡಿಲೂ ರಾಜಪರಾಕ್ರಮವೂ ಅತಿ ಭಯಂಕರವಾದುವುಗಳು. ಅವುಗಳಲ್ಲಿ ಸಿಡಿಲು ಒಂದು ಕಡೆಯಲ್ಲಿ ಬೀಳುತ್ತದೆ; ರಾಜಪರಾಕ್ರಮವಾದರೋ ಹಗೆಗಾರನ ರಾಜ್ಯದಲ್ಲೆಲ್ಲಾ ವ್ಯಾಪಿಸುತ್ತದೆ. ಈಗ ನಾನು ಆತನೊಂದಿಗೆ ಸಾಯುವುದು ಮೇಲೇ ಹೊರತು ಆತನ ಆಜ್ಞೆಯಲ್ಲಿರುವುದು ಯುಕ್ತವಲ್ಲ. ಕಾರ್ಯಾಕಾರ್ಯಗಳನ್ನರಿಯದೆ ಗರ್ವಿಸಿ ದುರ್ಮಾರ್ಗದಲ್ಲಿ ಪ್ರವರ್ತಿಸುವ ಗುರುವನ್ನಾದರೂ ಬಿಡಬೇಕು. ಒಳ್ಳೆಯ ಯಜ್ಞಗ

ಳನ್ನು ಮಾಡಿದವರೂ ಸಮಸ್ತ ಪುಣ್ಯತೀರ್ಥಗಳಲ್ಲಿ ಸ್ನಾನ ಮಾಡಿದವರೂ ಎಂಥ ಪುಣ್ಯಲೋಕವನ್ನು ಹೊಂದುವರೋ ಅಂಥ ಪುಣ್ಯಲೋಕವನ್ನು ಯುದ್ಧದಲ್ಲಿ ಮಡಿದವರು ಕ್ಷಣದಲ್ಲಿ ಹೊಂದುವರು. ಯುದ್ಧದಲ್ಲಿ ತಾನು ಮೃತನಾದರೆ ಸ್ವರ್ಗಲೋಕದ ಸುಖವನ್ನನುಭವಿಸಬಹುದು. ತನ್ನ ಕೈಯಲ್ಲಿ ಶತ್ರು ಸತ್ತರೆ ಅವನ ಸಂಪತ್ತುಗಳನ್ನನುಭವಿಸಬಹುದು. ಇವೆರಡೂ ಶೂರರಿಗೆ ಉತ್ತಮಗುಣಗಳು. ಆದಕಾರಣ ಇದು ನನಗೆ ಯುದ್ಧಕಾಲವೆಂದು ಸಂಜೀವಕನು ನುಡಿದನು.

He who opposes one stronger than himself is defeated. The Lark and the Sea.

ಅದನ್ನು ಕೇಳಿ ದಮನಕನು —ರಣಮರಣವು ಒಳ್ಳೆಯದೆಂದು ಅಸಾಧ್ಯವಾದ ಶತ್ರುಬಲದ ಮೇಲೆ ಬೀಳಬಹುದೇ? ಶತ್ರುವಿನ ಪರಾಕ್ರಮವನ್ನರಿಯದೆ ಯಾವನು ವಿರೋಧಿಸುವನೋ ಅವನು ಅಪಜಯವನ್ನು ಹೊಂದುವನು. ಪೂರ್ವದಲ್ಲಿ ಟಿಟ್ಟಿಭದಿಂದ ಸಮುದ್ರವು ಅಪಜಯವನ್ನು ಹೊಂದಲಿಲ್ಲವೆ ?—ಎನಲು, ಸಂಜೀವಕನು— ಆ ಕಥೆಯನ್ನು ನನಗೆ ತಿಳಿಸು ಎಂದನು. ದಮನಕನು ಹೇಳುತ್ತಾನೆ.

ಸಮುದ್ರತೀರದಲ್ಲಿ ಒಂದು ಮರದ ಮೇಲೆ ಟಿಟ್ಟಿಭಪಕ್ಷಿಯು ಗೂಡು ಕಟ್ಟಿಕೊಂಡು ತನ್ನ ಹೆಂಡತಿಯೊಂದಿಗೆ ಒಕ್ಕಲಿರುತ್ತಿದ್ದಿತು. ಕೆಲವು ದಿವಸಕ್ಕೆ ಅದರ ಹೆಂಡತಿ ಬಸಿರಾಯಿತು. ಒಂದು ದಿನ ಅದು ಚಿಂತೆಯೊಡಗೂಡಿರುವುದನ್ನು ಕಂಡು ಗಂಡುಪಕ್ಕಿ—ನಿನಗೇನು ಬೇಕೋ ಹೇಳು, ತಂದು ಕೊಡುತ್ತೇನೆ—ಎಂದಿತು. ಆಗ ಹೆಣ್ಣು ಹಕ್ಕಿಯು— ನನಗೆ ಯಾವ ವಸ್ತುವಿನ ಮೇಲೂ ಮನಸ್ಸಿಲ್ಲ. ನನ್ನ ಮನಸ್ಸಿನಲ್ಲಿ ಒಂದು ವ್ಯಾಕುಲವು ಹುಟ್ಟಿದೆ. ಅದನ್ನು ನಿವಾರಣೆ ಮಾಡಬೇಕು. ಅದೇನೆಂದರೆ, ಪರ್ವದಿನದಲ್ಲಿ ಸಮುದ್ರನು ಉಕ್ಕಿಬರುವನು; ಆಗ ನಾವು ಗೂಡು ಕಟ್ಟಿಕೊಂಡಿರುವ ಗಿಡದ ಕೊಂಬೆಯನ್ನು ತಾಕುವ ಹಾಗೆ ಅಲೆಗಳು ಬರುವುವು. ನಾನಿಟ್ಟ ಮೊಟ್ಟೆಗಳು ಆಗ ನೀರಿನ ಪಾಲಾಗುವುವು. ಆದುದರಿಂದ ನಾವೀಗಲೆ ಎಲ್ಲಾದರೂ ಒಂದು ಸ್ಥಳವನ್ನು ನೋಡಿಕೊಂಡು

ಹೋಗುವುದು ಮೇಲು ಹೆರುವ ಕಾಲವು ಬಂದಾಗ ಇನ್ನೊಂದು ಸ್ಥಳಕ್ಕೆ ಹೋಗುವುದು ಕಷ್ಟವು—ಎಂದು ಹೆಣ್ಣು ಪಕ್ಷಿ ನುಡಿಯಿತು. ಅದಕ್ಕೆ ಗಂಡುಪಕ್ಷಿ ನಕ್ಕು,—ತಣ್ಣಗಿರುವ ಕಿರಣಗಳುಳ್ಳ ಚಂದ್ರನು ನೈದಿಲೆಗಳಿಗೆ ರಕ್ಷಕನು, ಸೋರುವ ಸ್ವಚ್ಛವಾದ ನೀರುಳ್ಳ ಮೇಘವು ಚಾತಕಗಳಿಗೆ ರಕ್ಷಕನು, ಲೋಕವೆಂಬ ಮನೆಗೆ ದೀಪವಾದ ಸೂರ್ಯನು ತಾವರೆಗಳಿಗೆ ರಕ್ಷಕನು, ಪಕ್ಷಿಗಳಿಗೆ ವಿಷ್ಣು ವಾಹನನಾದ ಗರುಡನು ರಕ್ಷಕನು. ನಮಗೆ ಇಂಥ ರಕ್ಷಕನಿರುವಲ್ಲಿ ನಮ್ಮ ಸಂಗಡ ಸಮುದ್ರನು ವಿರೋಧಿಸಿಕೊಳ್ಳುವನೇ ?—ಎಂದಿತು. ಹಿತರ ಮಾತನ್ನು ಕೇಳದ ಮೂಢನು ಕಟ್ಟಿಗೆಯನ್ನು ಬಿಟ್ಟು ಬಿದ್ದ ಆಮೆಯು ಹಾಗೆ ನಶಿಸುವನು—ಎಂದು ಹೆಣ್ಣು ಹಕ್ಕಿ ನುಡಿಯಿತು. ಆ ಕಥೆಯನ್ನು ಹೇಳೆಂತ ಗಂಡು ಹಕ್ಕಿ ಕೇಳಲು ಹೆಣ್ಣು ಹಕ್ಕಿ ಹೇಳುತ್ತದೆ.

A fool not following the advice of his friends will be ruined—The Tortoise and the Swan.

ಒಂದು ಸರೋವರದಲ್ಲಿ ಕಂಬುಗ್ರೀವನೆಂಬ ಹೆಸರುಳ್ಳ ಒಂದು ಆಮೆಯು ಬಹುಕಾಲದಿಂದ ಮಹಾಸಂತೋಷದಿಂದ ವಾಸಮಾಡುತ್ತಿದ್ದಿತು. ಆ ಕೂರ್ಮಕ್ಕೆ ವಿಕಟಸಂಕಟಗಳೆಂಬ ಹೆಸರುಳ್ಳ ಎರಡು ಹಂಸಗಳು ಸ್ನೇಹವಾಗಿ ಆ ಸರೋವರದಲ್ಲೇ ಒಕ್ಕಲಿದ್ದುವು. ತರುವಾಯ ಸ್ವಲ್ಪಕಾಲಕ್ಕೆ ಮಳೆಯಿಲ್ಲದೆ ಕೊಳವೆಲ್ಲಾ ಒಣಗಿ ಹೋಗುತ್ತಿದ್ದಿತು. ಆಗ ಆ ಹಂಸಗಳು ಮತ್ತೊಂದು ಸ್ಥಳಕ್ಕೆ ಹೋಗಬೇಕೆಂದು ಯೋಚಿಸಿ, ಕಂಬುಗ್ರೀವನ ಬಳಿಗೆ ಹೋಗಿ ನಾವೀಸ್ಥಳವನ್ನು ಬಿಟ್ಟು ಬೇರೆ ತಾವಿಗೆ ಹೋಗುತ್ತೇವೆ; ಅಪ್ಪಣೆ ಕೊಡು—ಎಂದು ಕೇಳಿದುವು. ಅದಕ್ಕೆ ಆಮೆ ವ್ಯಸನಪಟ್ಟು—ನಾವು ಬಹು ಕಾಲದ ಸ್ನೇಹಿತರು, ರೆಕ್ಕೆಗಳುಳ್ಳವರಾಗಿರುವುದರಿಂದ ಹೋಗಬೇಕೆಂಬ ಸ್ಥಳಕ್ಕೆ ಹೋಗುವ ಶಕ್ತಿ ನಿಮಗುಂಟು. ರೆಕ್ಕೆಗಳಿಲ್ಲದ ನಾನು ಎಲ್ಲಿಗೆ ಹೋಗಬಲ್ಲೆನು? ನಾನೇನುಮಾಡುವೆನು? ನಿಮ್ಮನ್ನು ಬಿಟ್ಟು ನಿಮಿಷವಾದರೂ ಬದುಕಲಾರೆನು—ಎಂದು ಬಹಳ ದೈನ್ಯದಿಂದ ಮಾತನಾಡಿತು. ಆ ದುಃಖವನ್ನು

ನೋಡಿ ವಿಕಟಸಂಕಟಗಳು ಸ್ವಲ್ಪಹೊತ್ತು ಆಲೋಚಿಸಿ,—ಎಲೈ ಕಂಬುಗ್ರೀವನೇ, ನಾವು ಒಂದು ಉಪಾಯವನ್ನು ಹೇಳುತ್ತೇವೆ. ನೀನಂಜದೆ ನಮ್ಮ ಮಾತಿನ ಪ್ರಕಾರ ನಡೆದುಕೊಂಡ ಪಕ್ಷದಲ್ಲಿ ನಿನ್ನನ್ನು ನಮ್ಮ ಸಂಗಡ ಕರೆದುಕೊಂಡು ಹೋಗುತ್ತೇವೆ. ಹೇಗೆಂದರೆ: ಒಂದು ಕಟ್ಟಿಗೆಯನ್ನು ನಾವಿಬ್ಬರೂ ಎರಡು ಕೊನೆಗಳಲ್ಲಿ ಮೂಗಿನಲ್ಲಿ ಕಚ್ಚಿಕೊಂಡು ಹಾರಿ ಹೋಗುವೆವು. ನೀನು ಆ ಕಟ್ಟಿಗೆಯ ನಡುವನ್ನು ಗಟ್ಟಿಯಾಗಿ ಬಾಯಲ್ಲಿ ಕಚ್ಚಿಕೊಂಡು ಬಾಯಿಬಿಡದೆ ಇರಬೇಕು—ಎಂದು ಹೇಳಿದುವು. ಆ ಮಾತಿಗೆ ಕೂರ್ಮವು ಸಮ್ಮತಿಸಿ ಅವು ತಂದು ಕೊಟ್ಟ ಕಟ್ಟಿಗೆಯ ಮಧ್ಯಭಾಗವನ್ನು ಬಾಯಲ್ಲಿ ಕಚ್ಚಿಕೊಂಡಿತು. ಆ ಮೇಲೆ ಆ ಹಂಸಗಳು ಕಟ್ಟಿಗೆಯ ಎರಡು ಕೊನೆಗಳನ್ನೂ ಕಚ್ಚಿಕೊಂಡು ಆಕಾಶಮಾರ್ಗವಾಗಿ ಹಾರಿ ಹೋಗುತ್ತಿರಲಾಗಿ, ಒಂದು ಪಟ್ಟಣದಲ್ಲಿರುವ ಜನರು ಇವುಗಳನ್ನು ನೋಡಿ—ಇದೇನು ಅತಿಶಯವೆಂದು ಮಹಾಧ್ವನಿಯಿಂದ ಮಾತನಾಡಿದರು. ಆ ಧ್ವನಿಯನ್ನು ಕೇಳಿ ಬುದ್ಧಿಯಿಲ್ಲದ ಕೂರ್ಮವು—ಇದೇನು ಗದ್ದಲ — ಎಂದು ಹಂಸಗಳನ್ನು ಕೇಳಿತು. ಆ ಕ್ಷಣವಲ್ಲೇ ಕಟ್ಟಿಗೆಯ ಪಟ್ಟು ಬಿಟ್ಟು ಅದು ಕೆಳಗೆ ಬಿದ್ದು ಮಾಂಸಾಹಾರಿಗಳಿಗೆ ಎರೆಯಾಯಿತು. ಪೂರ್ವವೃತ್ತಾಂತವು ತಿಳಿಯುವುದಕ್ಕಾಗಿ ಇನ್ನೊಂದು ಕಥೆಯನ್ನು ಹೇಳುವೆನು ಕೇಳು. ಹಿತರ ಮಾತುಗಳನ್ನು ಕೇಳುವ ಬುದ್ಧಿವಂತರು ವಿವೇಕಿಗಳೊಳಗೆ ಹೊಗಳಿಸಿಕೊಳ್ಳುತ್ತಾರೆ. ಪೂರ್ವದಲ್ಲಿ ಅನಾಗತವಿಧಾತ, ಪ್ರತ್ಯುತ್ಪನ್ನಮತಿ, ಯದ್ಭವಿಷ್ಯನು, ಎಂಬ ಹೆಸರುಳ್ಳ ಮೂರು ಮತ್ಸ್ಯಗಳಿದ್ದುವು. ಅವುಗಳಲ್ಲಿ ಯದ್ಭವಿಷ್ಯನು ಬುದ್ಧಿಹೀನನಾದುದರಿಂದ ಉಪಾಯ ತಿಳಿಯದೆ ಸಿಕ್ಕಿಕೊಂಡು ಮೃತನಾದನು—ಎಂದು ನುಡಿಯಲು, ಆ ಕಥೆಯನ್ನು ಹೇಳೆಂದು ಟಿಟ್ಟಿಭವು ಕೇಳಿತು. ಅದರ ಹೆಂಡತಿಯಾದ ಹೆಣ್ಣುಪಕ್ಕಿ ಹೇಳುತ್ತದೆ.

The three Fishes.

ನಾನೀಗ ಹೇಳಿದ ಮತ್ಸ್ಯಗಳು ಮೂರೂ ಒಂದು ಕೆರೆಯಲ್ಲಿ ಬಹುಕಾಲ ಅನ್ಯೋನ್ಯಸ್ನೇಹದಿಂದ ಸಂಚರಿಸುತ್ತಿದ್ದುವು. ಒಂದು

ದಿನ ಅವುಗಳಲ್ಲಿ ಅನಾಗತವಿಧಾತ — ಈ ಸಂವತ್ಸರ ಮಳೆಯಿಲ್ಲದುದರಿಂದ ಕೆರೆ ದಿನೇ ದಿನೇ ಬತ್ತಿಹೋಗುತ್ತಾ ಇದೆ. ನೀರು ಬತ್ತಿ ಹೋಗದ ಮತ್ತೊಂದು ತಟಾಕಕ್ಕೆ ನಾವು ಈಗಲೇ ಹೋಗಬೇಕು. ನಾವು ಆಲಸ್ಯವನ್ನು ಮಾಡಿ ಹೋಗದೆ ನಿಂತರೆ ಬೆಸ್ತರಪಾಲಾಗುವೆವು. ಒಂದು ಗಳಿಗೆಗೆ ಮುಂಚೆ ಕೆಲವರು ಬೆಸ್ತರು ಬಂದು ಈ ಕೆರೆಯನ್ನು ನೋಡಿ—ನೀರು ಬಹಳ ಬತ್ತಿ ಹೋಯಿತು, ಎರಡು ಮೂರುದಿನ ವಲ್ಲಿ ಬಲೆಗಳನ್ನು ತೆಗೆದುಕೊಂಡು ಬರೋಣ—ಎಂದು ಒಬ್ಬರೊಂದಿಗೊಬ್ಬರು ಮಾತನಾಡಿಕೊಂಡರು. ಇನ್ನು ನಾವು ವಿಳಂಬ ಪಡಿಸಿದರೆ ಕೇಡು ಸಂಭವಿಸೀತು—ಎಂದು ಹೇಳಿತು. ಅದಕ್ಕೆ ಪ್ರತ್ಯುತ್ಪನ್ನ ಮತಿ—ನಾವು ಇಷ್ಟುದೂರ ಆಲೋಚಿಸಬೇಕಾದುದೇನು? ಅಂಥ ಕೆಲಸಬಿದ್ದಾಗ ನೋಡಿಕೊಳ್ಳೋಣ. ಕೆಲಸಬಿದ್ದಾಗ ಯಾರಿಗೆ ಬುದ್ಧಿ ಕಡಮೆಯಾಗದೆ ಪೂರ್ಣವಾಗಿ ಇರುವುದೋ ಅವನು, ತನ್ನ ಕೆಲಸಗಳನ್ನು ನೆರವೇರಿಸಿ ಕೊಳ್ಳುತ್ತಾನೆ—ಎಂದು ನುಡಿಯಿತು.

ಯದ್ಭವಿಷ್ಯನು ಇದನ್ನೆಲ್ಲಾ ಕೇಳುತ್ತಿದ್ದು ಏನೂ ಹೇಳದೆ ಸುಮ್ಮನಿದ್ದನು. ಬಳಿಕ ಅನಾಗತವಿಧಾತನು ಬಹಳ ನೀರುಳ್ಳ ಮಡುವಿಗೆ ಜಲಪ್ರವಾಹದ ಮೂಲವಾಗಿ ಪ್ರವೇಶಿಸಿತು. ಮಾರನೆಯ ದಿನ ಆ ಸರಸ್ಸಿನ ಬಳಿಗೆ ಬೆಸ್ತರು ಬಂದು ಬಲೆಗಳನ್ನು ಹಾಕಿ ಪ್ರತ್ಯುತ್ಪನ್ನಮತಿಯನ್ನೂ ಯದ್ಭವಿಷ್ಯನನ್ನೂ ಇನ್ನೂ ಅನೇಕ ಮೀನುಗಳನ್ನೂ ಹಿಡಿದರು. ಆಗ ಪ್ರತ್ಯುತ್ಪನ್ನಮತಿ ತಾನು ಸತ್ತಹಾಗೆ, ಅಂಗತ್ತನಾಗಿ ಕದಲದೆ ಬಿದ್ದಿದ್ದಿತು. ಅದು ಸತ್ತ ಮೀನೆಂದು ಅದನ್ನು ಬೆಸ್ತರು ಬಿಟ್ಟುಬಿಟ್ಟರು. ಯದ್ಭವಿಷ್ಯನು ಉಪಾಯುವೇನೂ ಅರಿಯದೆ ಒದೆದುಕೊಳ್ಳುತ್ತಿರಲು ಇದು ಬಳ್ಳಯ ಕೊಬ್ಬಿದ ಮೀನೆಂದು ಅದನ್ನು ಬುಟ್ಟಿಗೆ ಹಾಕಿದರು. ಅವರು ಹೋದಮೇಲೆ ಪ್ರತ್ಯುತ್ಪನ್ನಮತಿ ಮೆಲ್ಲಗೆ ಜಾರಿಕೊಳಕ್ಕೆ ಪ್ರವೇಶಿಸಿತು.

ಎಂದು ಟಿಟ್ಟಿಭ ಸ್ತ್ರೀ ಹೇಳಲಾಗಿ ಟಿಟ್ಟಿಭವು ಅದನ್ನು ಅಸಡ್ಡೆ ಮಾಡಿತು. ತರುವಾಯ ಕೆಲವು ದಿನಕ್ಕೆ ಹೆಣ್ಣುಹಕ್ಕಿ ಮೊಟ್ಟೆಯಿಟ್ಟಿತು.

ಸಮುದ್ರನು ಟಿಟ್ಟಿಭದ ಪ್ರತಿಜ್ಞೆಯನ್ನು ಭಂಗಪಡಿಸಬೇಕೆಂದು ನೆನಸಿ ಅಲೆಗಳ ಮೂಲವಾಗಿ ಅದರ ಮೊಟ್ಟೆಗಳನ್ನು ಅಪಹರಿಸಿದನು. ಆಗ ಆ ಹೆಣ್ಣು ಹಕ್ಕಿ ವ್ಯಸನಪಡುತ್ತಾ ತನ್ನ ಗಂಡನನ್ನು ನೋಡಿ--ನಾನು ಅಂದು ಹೇಳಿದ ಮಾತನ್ನು ಕೇಳದೆಹೋದೆ; ನಾನಿಟ್ಟ ಮೊಟ್ಟೆಗಳೆಲ್ಲಾ ಸಮುದ್ರದ ಪಾಲಾದುವು. ಇನ್ನು ನಾನೇನುಮಾಡಲಿ—ಎಂದು ದುಃಖಿಸಲಾಗಿ, ಅದನ್ನು ಟಿಟ್ಟಿಭವು ಸಮಾಧಾನಪಡಿಸಿ,—ನನ್ನನ್ನು ಕೈಲಾಗದವನೆಂದು ಎಣಿಸಬೇಡ, ಸಮುದ್ರವು ಅಪಹರಿಸಿದ ನಿನ್ನ ಮೊಟ್ಟೆಗಳನ್ನು ನಿನಗೆ ತರಿಸಿ ಕೊಡುವೆನು—ಎಂದು ಹೇಳಿ, ಪಕ್ಷಿಜಾತಿಗಳಿಗೆಲ್ಲಾ ಆ ಸಮಾಚಾರವನ್ನು ತಿಳಿಸಿ, ಅವುಗಳನ್ನು ಕರೆತರಿಸಿ ಅವುಗಳ ಸಂಗಡ ಆಲೋಚಿಸಿ, ಆ ಪಕ್ಷಿಗಳೂ ತಾನೂ ಗರುಡನನ್ನು ಧ್ಯಾನಿಸಿದುವು. ಗರುಡನು ಪ್ರತ್ಯಕ್ಷವಾಗಿ—ಎಲೈ ಪಕ್ಷಿಗಳಿರಾ, ನಿಮ್ಮ ಭಕ್ತಿಗೆ ಮೆಚ್ಚಿ, ನಾನು ನೀವಿರುವ ಸ್ಥಳಕ್ಕೆ ಬಂದೆನು. ನಿಮ್ಮ ಕೋರಿಕೆಯನ್ನು ಇದು ಸ್ವಲ್ಪ ಇದು ಮಹತ್ತು ಎಂದು ಎಣಿಸದೆ ಹೇಳಿರಿ. ಅದು ಸಮಸ್ತರಿಗೂ ಅಸಾಧ್ಯವಾಗಿ ಇದ್ದರೂ, ನಾನದನ್ನು ಮಾಡುವೆನು. ನನ್ನವರು ನೀವೇ ಅಲ್ಲವೇ? ನಿಮಗಿಂತ ನನಗೆ ಬೇಕಾದವರು ಯಾರು?—ಎಂದು ನುಡಿಯಲು, ಗರುತ್ಮಂತನಿಗೆ ಅವು ಈ ಸಂಗತಿಯನ್ನು ಅರಿಕೆಮಾಡಿದುವು. ಆ ಮೇಲೆ ಗುರುತ್ಮಂತನು ಪಕ್ಷಿಜಾತಿಗಳನ್ನು ಕ್ಷೀರಸಮುದ್ರದಲ್ಲಿ ಶೇಷಶಾಯಿಯಾಗಿ ಇರುವ ವಿಷ್ಣುವಿನ ಬಳಿಗೆ ಕರೆದುಕೊಂಡುಹೋಗಿ ಆ ಸಂಗತಿಯನ್ನು ಬಿನ್ನೈಸಲಾಗಿ, ಭಕ್ತಪರಾಧೀನನಾದ ವಿಷ್ಣುವು ಗರುಡಾರೂಢನಾಗಿ ಸಮುದ್ರನ ಬಳಿಗೆ ಬಂದು—ಎಲೈ ಸಮುದ್ರನೇ, ನನ್ನಲ್ಲಿ ಭಕ್ತಿಯುಳ್ಳ ಈ ಪಕ್ಷಿಗಳ ಮೊಟ್ಟೆಗಳನ್ನು ನೀನು ಅಪಹರಿಸಿದೆಯಂತೆ. ಶೀಘ್ರವಾಗಿ ಅವುಗಳ ಮೊಟ್ಟೆಗಳನ್ನು ಅವುಗಳಿಗೆ ಕೊಡು—ಎಂದು ಅಪ್ಪಣೆಮಾಡಿದನು. ಆಗ ಸಮುದ್ರನು ಮಹಾ ವಿನಯಭಯಭಕ್ತಿಗಳಿಂದ ಭಗವಂತನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಪಕ್ಷಿಯ ಮೊಟ್ಟೆಗಳನ್ನು ರತ್ನ ಮಯವಾದ ತಟ್ಟೆಯಲ್ಲಿಟ್ಟುಕೊಂಡು ಬಂದು ಟಿಟ್ಟಿಭಪಕ್ಷಿಗಳಿಗೆ ಒಪ್ಪಿಸಿದನು.

The fight of Pingalaka and Sanjivaka.

ಎಂದು ಹೇಳಲಾಗಿ ಸಂಜೀವಕನು ಕೇಳಿ ಮೃಗೇಂದ್ರನು ಯಾವ ರೀತಿಯಾಗಿ ಯುದ್ಧಸನ್ನದ್ಧನಾಗುತ್ತಾನೆಂದು ಕೇಳಿದನು. ಅದಕ್ಕೆ ದಮನಕನು—ಮುಂಗಾಲೆರಡನ್ನೂ ಬಾಲವನ್ನೂ ಮೇಲಕ್ಕೆತ್ತಿ ಮುಖವನ್ನು ವಿಕಾರಪಡಿಸಿಕೊಂಡು ಭಯಂಕರವಾಗಿ ಬಾಯಿತೆರೆದುಕೊಂಡು ಇದ್ದರೆ, ಮೃಗೇಂದ್ರನು ಕಲಹಕ್ಕೆ ಉದ್ಯುಕ್ತನಾದನೆಂದು ನೀನು ತಿಳಿದುಕೊಳ್ಳಬೇಕು—ಎಂದು ಹೇಳಿದನು. ಆ ಮೇಲೆ ದಮನಕನು ಕರಟಕನ ಬಳಿಗೆ ಬಂದು—ನಾವು ಯತ್ನಿಸಿದ ಕೆಲಸ ಒದಗಿ ಬಂದಿತು. ಸಿಂಹ ವೃಷಭಗಳಿಗೆ ಪರಸ್ಪರಭೇದವು ಹುಟ್ಟಿತು. ನೀತಿ ಶಾಸ್ತ್ರವರಿತವರ ಕೈಯಲ್ಲಾಗದ ಕೆಲಸವು ಎಲ್ಲಾದರೂ ಉಂಟೋ? ನಾನು ಕಲಿತ ಉಪಾಯಗಳಿಂದ ಹಿಡಿದ ಕೆಲಸವನ್ನು ಸಾಧಿಸಿದೆನು—ಎಂದು ಹೇಳಿ, ಅಲ್ಲಿಂದ ಪಿಂಗಳಕನ ಹತ್ತಿರಕ್ಕೆ ಹೋಗಿ—ಇಗೋ ನಿನ್ನ ಶತ್ರು ಯುದ್ಧಕ್ಕೆ ಸನ್ನದ್ಧನಾಗಿ ಬರುತ್ತಿದ್ದಾನೆ. ಸೀಸೀಗ ಮೈಮರೆದು ಇರಬಾರದು—ಎಂದು ನುಡಿದನು. ಕೂಡಲೇ ಪಿಂಗಳಕನು ದಮನಕನು ಹೇಳಿದಪ್ರಕಾರ ಸರ್ವಸನ್ನದ್ಧನಾಗಿ ಎದುರು ನೋಡುತ್ತಿದ್ದನು. ಅಷ್ಟರಲ್ಲಿ ಸಂಜೀವಕನು ಬಂದು ಮುಂಚೆ ತನಗೆ ದಮನಕನು ಹೇಳಿದ ರೀತಿಯಲ್ಲಿ ಭಯಂಕರಾಕಾರವಾಗಿದ್ದ ಸಿಂಹವನ್ನು ನೋಡಿ ಹೆದರದೆ ಮೇಲಕ್ಕೆ ಹಾಯಲು, ಪಿಂಗಳಕನು ಸಂಜೀವಕನ ಮೇಲೆ ಹಾರಿದನು. ಆ ಇಬ್ಬರಿಗೂ ಅಷ್ಟಕ್ಕಷ್ಟಕ್ಕೆ ಬಲ ಹೆಚ್ಚಿ ಘೋರವಾದ ಕಾಳಗವು ನಡಿಯುತ್ತಿದ್ದಿತು. ಆ ಸಮಯದಲ್ಲಿ ಕರಟಕನು ದಮನಕನನ್ನು ನೋಡಿ ಇಂತೆಂದನು;—ಎಲೈ ದುರಾತ್ಮನೇ, ನಿನ್ನ ದುರಾಲೋಚನೆಯನ್ನು ಕೇಳಿದುದರಿಂದ ಬಂದ ಫಲವನ್ನು ನಮ್ಮ ಸ್ವಾಮಿ ಅನುಭವಿಸುತ್ತಿದ್ದಾನೆ.

The third council of Karataka and Damanaka.

ಸಾಮ ದಾನ ಭೇದ ದಂಡಗಳಲ್ಲಿ ಸಾಮೋಪಾಯದಿಂದ ಮೂರ್ಖನಾದರೂ ಬಗ್ಗುವನು. ಎಲ್ಲಾ ಉಪಾಯಗಳಿಗಿಂತಲೂ ಸಾಮೋಪಾಯವೇ ಒಳ್ಳೆಯದು. ಕಾರ್ಯಜ್ಞನಾದವನು ಮೂರ್ಖನ ಮೇಲೆ ಮೊದ

ಬಲ್ಲಿ ಸಾಮೋಪಾಯವನ್ನೇ ಮಾಡಬೇಕು. ಸಾಮದಿಂದ ಎಲ್ಲಾ ಕಾರ್ಯ ಗಳೂ ನೆಟ್ಟಗಾಗುವುವು. ಎಷ್ಟು ವಿಧವಾಗಿ ನೋಡಿದರೂ ಅದರಲ್ಲಿ ಕೆಡಕಿಲ್ಲ. ಸಾಮ ದಾನ ಭೇದ ದಂಡವೆಂಬ ಚತುರುಪಾಯಗಳು ಕಾರ್ಯಸಿದ್ಧಿಗೋಸ್ಕರ ಹೇಳಲ್ಪಟ್ಟು ಇರುತ್ತವೆ. ಆದರೂ ದಾನ ಭೇದ ದಂಡಗಳಿಗೆ ಸಂಖ್ಯಾಮಾತ್ರವೇ ಫಲವೇ ಹೊರತು ಬೇರೆ ಫಲವೇನೂ ಇಲ್ಲ. ಸಾಮೋಪಾಯದಿಂದಲೇ ಸಕಲ ಕಾರ್ಯಗಳು ಸಿದ್ಧಿಸುವುವು. ವಿರೋಧವೆಂಬ ಗಾಡಾಂಧಕಾರವು ರತ್ನ ಕಾಂತಿಯಿಂದಾಗಲಿ ಸೂರ್ಯಕಿರಣಗಳಿಂದಾಗಲಿ ಅಗ್ನಿ ಜ್ವಾಲೆಗಳಿಂದಾಗಲಿ ಶಾಂತಿಯನ್ನು ಹೊಂದದು; ಸಾಮೋಪಾಯದಿಂದಲೇ ಹುಟ್ಟುಗೆಟ್ಟು ಹೋಗುವುದು. ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳೊಳಗೆ ದಂಡೋಪಾಯವು ತುಂಬಾ ಪಾಪಕ್ಕೆ ಆಕರವಾಗುವುದು. ಆದಕಾರಣ ಅದನ್ನು ಬಿಡಬೇಕು. ಚೆನ್ನಾಗಿ ಆಲೋಚಿಸದೆ ಗರ್ವ ಪಡುವವನು ತಾನು ನಶಿಸುವುದು ಮಾತ್ರವೇ ಅಲ್ಲದೆ ತನ್ನನ್ನು ಆಳುವವನಿಗೆ ಸಹ ಸಂಕಟವನ್ನು ತರುವನು. ಈಗ ನಮ್ಮ ಸ್ವಾಮಿ ಮಹತ್ತಾದ ಆಪತ್ತನ್ನು ಹೊಂದಿ ಇದ್ದಾನೆ. ಅದಕ್ಕೆ ನೀವು ಏನಾದರೂ ಪರಿಹಾರವನ್ನು ಹುಡುಕಬೇಕು. ಸಮಯವರಿತು ಸಂಧಿಮಾಡಬಲ್ಲ ಮಂತ್ರಿಯೂ ಸನ್ನಿಪಾತ ಬಂದಾಗ ಬೇಗ ಅದನ್ನು ತಿಳಿದುಕೊಂಡು ವಾಸಿಮಾಡುವ ವೈದ್ಯನೂ ಶ್ಲಾಘಿಸಲ್ಪಡುತ್ತಾರೆ. ಬರಿಯ ಕಾಲದಲ್ಲಿ ಎಲ್ಲರೂ ತಿಳಿದವರೇ. ಅರಸನು ಗುಣವಂತನಾಗಿದ್ದರೂ ಮಂತ್ರಿ ಕಪಟಿಯಾದರೆ, ದುಷ್ಟವಾದ ಮೊಸಳೆಗಳುಳ್ಳ ಕೆರೆಗೆ ಹೆದರಿದ ಹಾಗೆ ಪ್ರಜೆಗಳು ಅರಸನನ್ನು ಸೇರ ಹೆದರುವರು. ನೀನು ನಿನ್ನ ಮೇಲಿಗೋಸ್ಕರ ಅರಸನನ್ನು ಒಬ್ಬೊಂಟಿಗನನ್ನಾಗಿ ಮಾಡಿದೆ. ಯಾವ ಸೇವಕರನ್ನೂ ಹತ್ತಿರಕ್ಕೆ ಸುಳಿಯಗೊಡಿಸಲೊಲ್ಲೆ. ಮಂತ್ರಿಯು ಅರಸನ ಹತ್ತಿರಕ್ಕೆ ಪ್ರಜೆಗಳನ್ನು ಸೇರಲೀಯದೆ ಎಲ್ಲಕ್ಕೂ ತಾನೇ ತಾನಾಗಿ ಇದ್ದರೆ, ಅರಸನಿಗೆ ತಾನೇ ಹಗೆಗಾರನಾಗುತ್ತಾನೆ.

ಕ್ರೂರರಾದವರಿಗೆ ಹಿತವನ್ನು ಮಾಡುವವನೂ ಸಾಧುಜನರಿಗೆ ಕೇಡುಮಾಡುವವನೂ ಕೆಟ್ಟುಹೋಗುವನು. ನೀನು ಸಾಧುಜನರಿಗೆ

ಅಹಿತವನ್ನು ಮಾಡುವ ಅಭಿಲಾಷೆಯಿಂದ ಪ್ರವರ್ತಿಸುತ್ತೀಯೆ. ಇದು ಉಚಿತವಲ್ಲ. ಮನಸ್ಸಿನಲ್ಲೂ ವಾಕ್ಕಿನಲ್ಲೂ ಏಕ ರೀತಿಯಾಗಿ ಇರದೆ ಒಂದು ಕಾರ್ಯವನ್ನುದ್ದೇಶಿಸಿ ಸ್ನೇಹಿತರನ್ನು ಸಂಪಾದಿಸಲಿಕ್ಕೆ ಪ್ರಯತ್ನಿಸುವವನೂ, ನಿತ್ಯವೂ ಪ್ರಸಿದ್ಧವಾದ ಪಾಪಗಳನ್ನು ಮಾಡುತ್ತಾ ಧರ್ಮವನ್ನು ಮಾಡಬೇಕೆಂದು ನೆನಸುವವನೂ, ಯಾವಾಗಲೂ ಪರರಿಗೆ ಉಪದ್ರವವನ್ನು ಮಾಡಿ ಧನವನ್ನು ಕೂಡಹಾಕಬೇಕೆಂಬ ಇಚ್ಛೆಯುಳ್ಳವನೂ, ಕೇವಲ ಶರೀರಸೌಖ್ಯವನ್ನಪೇಕ್ಷಿಸಿ ವಿದ್ಯೆಗಳನ್ನು ಅಭ್ಯಾಸಿಸಬೇಕೆಂಬ ಮನಸ್ಸುಳ್ಳವನೂ, ವಿವೇಕವಿಲ್ಲದವರೆಂದು ನೀತಿಶಾಸ್ತ್ರಜ್ಞರು ಹೇಳುತ್ತಾರೆ. ತನ್ನನ್ನು ಆಳುವವನಿಗೆ ಮೇಲುಕೋರಿ ಅವನ ಪ್ರಸಾದದಿಂದ ಹೊಂದಿದ ಸಂಪತ್ತು ಎಂದಿಗೂ ಕೆಡದು; ತನ್ನ ಯಜಮಾನನಿಗೆ ಕೇಡು ಕೋರಿ ಸಂಪಾದಿಸಿದ ಸಂಪತ್ತು ಅತಿ ತ್ವರೆಯಲ್ಲಿ ನಶಿಸುವುದು. ಅರ್ಥಶಾಸ್ತ್ರವನ್ನೋದದ ಕೆಲವರು ದುಷ್ಟರು ತಾವು ತಿಳಿದವರೆಂದು ಆಲೋಚನೆಗಳನ್ನು ಹೇಳಬರುವರು. ಶಾಸ್ತ್ರವನ್ನೋದದವನ ಮಗನು ತಾಳೆಯ ಗಿಡದಲ್ಲಿ ಹುಟ್ಟಿದ ಹಣ್ಣುಗಳು ಮುಳ್ಳುಂಟಾಗಿ ಇರುವಹಾಗೆ ತಂದೆಯ ಹಾಗೆ ಹುಟ್ಟುತ್ತಾನೆ. ನಿನಗೆ ಹೇಳಬೇಕಾದುದು ಏನಿದೆ? ಯಾವನಾದರೂ ಬಗ್ಗಿಸಕೂಡದ ಮರವನ್ನು ಬಗ್ಗಿಸಹೋದರೂ, ಕತ್ತಿಯಿಂದ ಪರ್ವತಶಿಖರವನ್ನು ಕಡಿಯಹೋದರೂ, ಮೂರ್ಖನಿಗೆ ಬುದ್ಧಿ ಹೇಳ ಹೋದವರೂ, ಅವನು ವಾನರಕ್ಕೆ ಬುದ್ಧಿ ಹೇಳಹೋದ ಸೂಚೀಮುಖವೆಂಬ ಪಕ್ಷಿಯ ಹಾಗೆ ಹಾನಿಪಡುವನು—ಎನಲು, ದಮನಕನು—ಆ ಕಥೆಯನ್ನು ಕೇಳಬೇಕು; ಹೇಳು—ಎನಲಾಗಿ, ಕರಟಕನಿಂತೆಂದನು.

To give advice to a fool is bad—The Monkey and the Tailor Bird.

ಹಿಮಾಲಯ ಪರ್ವತದ ಸಮೀಪದಲ್ಲಿ ಒಂದು ವನವುಂಟು. ಆ ವನದಲ್ಲಿ ಫಲಭರಿತವಾದ ಅನೇಕ ವೃಕ್ಷಗಳು ತುಂಬಿರುವುವು. ಅಲ್ಲಿ ಸಂಚರಿಸುತ್ತಿದ್ದ ವಾನರಸಮೂಹವು ಒಂದುದಿನ ಶೀತಬಾಧೆಯಿಂದ ಮಿಣುಕುಹುಳುಗಳ ಗುಂಪನ್ನು ಕಂಡು ಅವು ಬೆಂಕಿಯೆಂದುಕೊಂಡು ಚಳಿ

ಕಾಸಿಕೊಳ್ಳುತ್ತಿರಲಾಗಿ, ಸೂಚೀಮುಖವೆಂಬ ಒಂದು ಪಕ್ಷಿಯು ಕಂಡು ಎಲೈ—ಹುಚ್ಚು ಕೋತಿಗಳಿರಾ, ಇವು ಬೆಂಕಿಯುಳ್ಳ ಮಿಣುಕುಹುಳುಗಳು. ಅಕೋ ಆ ಗಿಡಗದ ಹತ್ತಿರ ಬೆಂಕಿಯಿದೆ. ನೀವಲ್ಲಿಗೆ ಹೋಗಿ ಬೆಂಕಿ ಕಾಯಿಸಿಕೊಳ್ಳಬಾರದೆ?—ಎಂದು ಎರಡು ಮೂರು ಸಲ ಹೇಳಿತು. ಆಗ ಒಂದು ಕಪಿ ಕಣ್ಣುಗಳನ್ನು ಕೆಂಪಗೆ ಕೆರಳಿಸಿಕೊಂಡು, ಕೋಪದಿಂದ ಹಲ್ಲುಕಚ್ಚುತ್ತಾ, ಆ ಪಕ್ಷಿಯನ್ನು ನೋಡಿ—ನಿನ್ನನ್ನು ಯಾರು ಕೇಳಿದರು? ನೀನೀಗ ಇಂಥಾ ಮಾತನಾಡಬೇಕಾದುದೇನು?—ಎಂದು ಅದನ್ನು ಹಿಡಿದು ಕಲ್ಲಿಗೆ ಅಪ್ಪಳಿಸಿ ಕೊಂದು ಹಾಕಿತು. ಆದುದರಿಂದ ಬುದ್ಧಿಹೀನರಿಗೆ ಬುದ್ಧಿವಂತರು ಹೇಳಿದ ಬುದ್ಧಿ ಏಕೆ ಹಿತವಾದೀತು? ಸಮಸ್ತರಿಂದಲೂ ಹೊಗಳಿಸಿಕೊಳ್ಳತಕ್ಕ ಬುದ್ಧಿಯಿಂದಾಗಲಿ ಧನದಿಂದಾಗಲಿ ತನ್ನ ವಂಶದವರನ್ನು ಪೋಷಿಸುವಂಥ ಮಗನನ್ನು ಹೆತ್ತ ತಾಯಿಯೇ ತಾಯಿ. ಚೆಲುವರಾದ ಪುರುಷರು ಅನೇಕರುಂಟು; ಒಳ್ಳೆಯ ವಿವೇಕವುಳ್ಳ ಪುರುಷರು ಸಿಕ್ಕುವುದು ಅಪೂರ್ವ—ಎಂದು ನುಡಿಯಲು, ಕೇಳಿ ದಮನಕನು ಸುಮ್ಮನಿದ್ದುದನ್ನು ನೋಡಿ, ಕರಟಕನು ಮರಳಿ ಇಂತೆಂದನು.

Evil of covetousness—Subuddhi and Durbuddhi.

ಅನ್ಯರಿಗೆ ಅಪಕಾರ ಮಾಡಿದವನಿಗೆ ಕಂಠಸ್ವರವೇ ಭೇದಿಸುವುದು, ಮುಖವು ವಿವರ್ಣವಾಗುವುದು, ದೃಷ್ಟಿ ಚಲಿಸುವುದು, ಮೈ ಕುಗ್ಗುವುದು. ದುಷ್ಟಬುದ್ಧಿ ಎಂಬುವನು ಧನಲೋಭದಿಂದ ತನ್ನ ತಂದೆಯನ್ನು ಕೊಲ್ಲಿಸಿಕೊಂಡ ಹಾಗೆ ಲೋಭಗುಣವುಳ್ಳವರು ಕೆಟ್ಟುಹೋಗುವರು. ಆ ಕಥೆಯನ್ನು ಕೇಳು—ಎಂದು ಕರಟಕನು ಹೇಳತೊಡಗಿದನು.

ಒಂದಾನೊಂದು ಪಟ್ಟಣದಲ್ಲಿ ದುಷ್ಟಬುದ್ಧಿ ಸುಬುದ್ಧಿ ಎಂಬ ಇಬ್ಬರು ಕೋಮಟಿಗರಿದ್ದರು. ಅವರು ಚಿಕ್ಕತನದಿಂದ ಬಹಳ ಸ್ನೇಹವುಳ್ಳವರಾಗಿದ್ದರು. ಕೆಲವು ಕಾಲದ ತರುವಾಯ ಅವರು ಹಣಗಳಿಸಬೇಕೆಂದು ದೇಶಾಂತರಕ್ಕೆ ಹೋದರು. ಅಲ್ಲಿ ಸುಬುದ್ಧಿಗೆ ಒಂದು ಕಡೆಯಲ್ಲಿ ವರಹಗಳ ಬಿಂದಿಗೆ ಸಿಕ್ಕಿತು. ಅವನು ಸ್ನೇಹವಾತ್ಸಲ್ಯದಿಂದ ದುಷ್ಟಬುದ್ಧಿಯ ಹತ್ತಿರಕ್ಕೆ ಹೋಗಿ—ಎಲೈ ಗೆಳೆಯನೇ, ನನಗೆ ವರಹ

ತುಂಬಿದ ಬಿಂದಿಗೆ ಒಂದು ಸಿಕ್ಕಿತು. ನಾವಿಬ್ಬರೂ ಈ ಬಿಂದಿಗೆಯನ್ನು ತೆಗೆದುಕೊಂಡು ನಮ್ಮ ನಮ್ಮ ಮನೆಗಳಿಗೆ ಹೋಗಿ ಸುಖವಾಗಿರೋಣ, ಬಾ—ಎಂದು ಹೇಳಿದನು. ಬಳ್ಳಿಯದು, ಹಾಗೆಯೇ ಆಗಲಿ—ಎಂದು ದುಷ್ಟಬುದ್ಧಿ ಸುಬುದ್ಧಿಯ ಸಂಗಡ ತನ್ನ ಪಟ್ಟಣಕ್ಕೆ ಬರುತ್ತಾ, ಪಟ್ಟಣದ ಹತ್ತಿರ ಸುಬುದ್ಧಿಯನ್ನು ನೋಡಿ,—ಎಲೈ ಸ್ನೇಹಿತನೇ, ನಾವೀಗ ಈ ಧನವನ್ನು ಮನೆಗೆ ತೆಗೆದುಕೊಂಡು ಹೋಗುವುದು ಯುಕ್ತವಲ್ಲ. ಜನರು ಕಂಡರೆ ಅರಸನಿಗೆ ತಿಳಿಸುವರು. ಆಮೇಲೆ ಅರಸನು ನಮ್ಮನ್ನು ಹೊಡಿಸಿ ಸುಲಿದುಕೊಂಡಾನು. ಆದುದರಿಂದ ನಾವು ಈ ಧನದಲ್ಲಿ ವೆಚ್ಚಕ್ಕೆ ನೂರು ವರಹ ತೆಗೆದುಕೊಂಡು ಮಿಕ್ಕುದನ್ನು ಎಲ್ಲಾದರೂ ಬಚ್ಚಿಟ್ಟುಬಿಟ್ಟು ಹೋಗೋಣ—ಎಂದು ನುಡಿಯಲಾಗಿ ಅದಕ್ಕೆ ಸುಬುದ್ಧಿ ಸಮ್ಮತಿಸಿದನು. ಬಳಿಕ ಅವರಿಬ್ಬರೂ ಒಂದು ಮರದ ಬಳಿಗೆ ಹೋಗಿ ಆ ಬಿಂದಿಗೆಯಲ್ಲಿ ನೂರು ವರಹ ತೆಗೆದುಕೊಂಡು, ಉಳಿದ ಧನವನ್ನು ಅಲ್ಲಿಯೇ ಹೂಳಿಟ್ಟು, ತಮ್ಮ ಮನೆಗಳಿಗೆ ಹೋಗಿ ಅತಿ ಸ್ನೇಹದಿಂದ ಸುಖವಾಗಿ ಇದ್ದರು. ಹೀಗೆ ಕೆಲವು ದಿನವಾದ ತರುವಾಯ ದುಷ್ಟಬುದ್ಧಿ ಆ ಧನವನ್ನೆಲ್ಲಾ ತಾನಪಹರಿಸಬೇಕೆಂದು ಎಣಿಸಿ, ಒಂದು ದಿನ ರಹಸ್ಯವಾಗಿ ಹೋಗಿ ಹೂಳಿಟ್ಟ ಬಿಂದಿಗೆಯನ್ನು ತೋಡಿ ಎತ್ತಿ ತನ್ನ ಮನೆಗೆ ತೆಗೆದುಕೊಂಡು ಬಂದು ಬಚ್ಚಿಟ್ಟನು. ಆ ಮೇಲೆ ಕೆಲವು ದಿವಸಕ್ಕೆ ಅವನು ಸುಬುದ್ಧಿಯ ಬಳಿಗೆ ಹೋಗಿ—ಎಲೈ ಸ್ನೇಹಿತನೇ, ಅಂದು ನಾವು ಹೂಳಿಟ್ಟ ಧನವನ್ನು ಈಗ ತೆಗೆದುಕೊಳ್ಳೋಣ, ವಿಳಂಬ ಪಡಿಸಲೇಕೆ? ಈ ಅರಸನು ಬಹಳ ಧಾರ್ಮಿಕನು; ಮಂತ್ರಿ ಅತ್ಯಂತ ಯೋಗ್ಯನು, ಪ್ರಜೆಗಳೆಲ್ಲರೂ ಬಹು ಸಜ್ಜನರು; ಆದಕಾರಣ ನಾವು ಮನಸ್ಸಿನಲ್ಲಿ ಚಿಂತಿಸಬೇಕಾದುದಿಲ್ಲ. ನಾವು ಹಣವನ್ನು ದಕ್ಕಿಸಿಕೊಳ್ಳಬಹುದು, ಹೋಗೋಣ ಬಾ—ಎಂದು ಸುಬುದ್ಧಿಯನ್ನು ಕರೆದುಕೊಂಡು ಆ ಗಿಡದಬಳಿಗೆ ಹೋಗಿ, ಅಲ್ಲಿ ಅಗೆದು ನೋಡಲಾಗಿ, ಧನವು ಸಿಕ್ಕಲಿಲ್ಲ. ಆಗ ದುಷ್ಟಬುದ್ಧಿ ಅತ್ತು ಎದೆ ಎದೆ ಬಡಿದುಕೊಳ್ಳುತ್ತಾ ಸುಬುದ್ಧಿಯನ್ನು ನೋಡಿ,—ನೀನೇ ಈ ಧನವನ್ನು ಎತ್ತಿಕೊಂಡೆ—ಎಂದು ಹೇಳಿದನು. ನಾನು ಅರಿಯಲೇ ಅರಿಯೆನು—ಎಂದು ಸುಬುದ್ಧಿ ನುಡಿದನು. ಬಳಿಕ

ಆವರಿಬ್ಬರೂ ವಿವಾದಿಸುತ್ತಾ ಆ ಪಟ್ಟಣದ ಅರಸನ ಬಳಿಗೆ ಹೋಗಿ ತಮ್ಮ ವಿದ್ಯಮಾನಗಳನ್ನೆಲ್ಲ ತಿಳಿಸಿದರು. ಅರಸನು ಧರ್ಮಾಧಿಕೃತರನ್ನು ಕರೆಯಿಸಿ,—ಈ ವ್ಯಾಜ್ಯವನ್ನು ತೀರಿಸಿರಿ—ಎಂದು ಅಪ್ಪಣೆ ಮಾಡಿದನು. ಅವರು ವ್ಯಾಜ್ಯಗಾರರನ್ನು ನೋಡಿ—ಐದು ದಿವಸದಲ್ಲಿ ನಿಮ್ಮೊಳಗೆ ನೀವು ಬಗೆ ಹರಿಸಿಕೊಂಡರೆ ಸರಿ, ಇಲ್ಲದ ಪಕ್ಷದಲ್ಲಿ ಆರನೆಯ ದಿನ ನಮ್ಮ ಬಳಿಗೆ ಬರಬೇಕು—ಎಂದು ಹೇಳಿದರು. ತರುವಾಯ ಅವರು ಆರನೆಯ ದಿನ ವ್ಯಾಜ್ಯಗಳ ತೀರಿಸುವವರ ಬಳಿಗೆ ಬಂದು ನಿಂತರು. ಆಗ ಧರ್ಮಾಧಿಕೃತರು ಇವರ ವಾಙ್ಮೂಲಗಳನ್ನು ಕೇಳಿ—ನಿಮಗೆ ಸಾಕ್ಷಿಗಳು ಯಾರಾದರೂ ಉಂಟೋ? ಎಂದು ಕೇಳಿದರು. ಅದಕ್ಕೆ ದುಷ್ಟಬುದ್ಧಿಯು—ಎಲೈ ಪುಣ್ಯಾತ್ಮರೇ, ಈ ಧನವನ್ನು ನಿಜವಾಗಿ ಸುಬುದ್ಧಿ ಅಪಹರಿಸಿದನು. ಇದಕ್ಕೆ ನೀವು ಸಂಶಯಿಸ ಕೆಲಸವಿಲ್ಲ. ನಾವೀಧನವನ್ನು ಯಾವ ಮರದ ಕೆಳಗೆ ಹೂತಿಟ್ಟೆವೋ ಆ ಮರವೇ ಸಾಕ್ಷಿ. ಆ ಮರದ ಕೈಯಲ್ಲಿಯೇ ಹೇಳಿಸುತ್ತೇನೆ. ನೋಡಿ: ನನ್ನ ಸುಳ್ಳು ದಿಟ ಆಗ ನಿಮಗೆ ಮಂದಟ್ಟಾಗುತ್ತದೆ—ಎಂದು ನುಡಿದನು. ಅದನ್ನು ಕೇಳಿ ಇವರು ಬಹಳ ಆಶ್ಚರ್ಯಪಟ್ಟು, ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ಈ ವರೆಗೆ ನಾವೆಂದೂ ಇಂಥ ಪ್ರಮಾಣವನ್ನು ಕೇಳಿದವರಲ್ಲ; ಇದೇನೋ ವಿಚಿತ್ರವಾಗಿದೆ, ನೋಡೋಣ—ಎಂದುಕೊಂಡು—ಬಳ್ಳಿಯುದು, ಈ ದಿವಸ ಬಹಳ ಹೊತ್ತು ಹೋಯಿತು. ನಾಳೆ ಹೊತ್ತಿಗೆ ಮುಂಚೆ ಬನ್ನಿ—ಎಂದು ಅವರಿಗೆ ಅಪ್ಪಣೆಕೊಟ್ಟು ಕಳುಹಿಸಿದರು. ಆ ಮೇಲೆ ದುಷ್ಟಬುದ್ಧಿ ತನ್ನ ಮನೆಗೆ ಹೋಗಿ ತಂದೆಯನ್ನು ನೋಡಿ—ಅಪ್ಪಾ, ಈ ಹಸ್ತಗತವಾದ ಧನವನ್ನು ಅನ್ಯರಿಗೆ ಏಕೆ ಹಂಚಿ ಕೊಡಬೇಕು? ನೀನೊಂದು ಮಾತು ನುಡಿದರೆ ನಮಗೆ ದಕ್ಕುತ್ತದೆ. ನನ್ನ ಮಾತನ್ನು ತೆಗೆದು ಹಾಕದೆ ನಡೆಯಿಸಿಕೊಡು. ಅದೇನೆಂದರೆ, ಮರದ ಪೊಟ್ಟರೆಯಲ್ಲಿ ನೀನೀರಾತ್ರಿ ಪ್ರವೇಶಿಸಿ ಕಾಣಿಸಿಕೊಳ್ಳದೆ ಇದ್ದರೆ, ನಾಳೆ ಬೆಳಗ್ಗೆ ಧರ್ಮಾಧಿಕೃತರು ಬಂದು ಆ ಮರವನ್ನು ಕೇಳುತ್ತಲೇ ನೀನು ತಾಮಸಪಡಿಸದೆ ಈ ಧನವನ್ನು ಸುಬುದ್ಧಿ ಹೊತ್ತು ಹಾಕಿದನೇ ಹೊರತು

ದುಷ್ಟಬುದ್ಧಿ ಅರಿಯನು—ಎಂದು ಹೇಳು. ಕೂಡಲೇ ವ್ಯಾಜ್ಯ ನಮ್ಮ ಪಕ್ಷವಾಗಿ ಗೆಲ್ಲುತ್ತದೆ. ಆ ಧನವನ್ನು ಇಟ್ಟುಕೊಂಡು ನಾವು ಚಿರ ಕಾಲ ಬಾಳಬಹುದು—ಎಂದು ಹೇಳಿದನು. ಅದಕ್ಕೆ ದುಷ್ಟಬುದ್ಧಿಯ ತಂದೆ—ಕೆಟ್ಟು ಹೋಗುವ ಕಾಲಕ್ಕೆ ನಿನಗಿಂಥ ಬುದ್ಧಿ ಪುಟ್ಟಿತು. ಹಣದಾಶೆಗೆ ಅಂತವು ಉಂಟೇ ? ನಿನಗೆ ಹುಚ್ಚು ಹಿಡಿಯಿತು. ಉಪಾಯವನ್ನು ಚಿಂತಿಸುವಾಗಲೇ ಅಪಾಯವನ್ನು ಸಹ ಬುದ್ಧಿಶಾಲಿಯಾದವನು ಚಿಂತಿಸಬೇಕು. ಹಾಗೆ ಮಾಡದಿದ್ದರೆ ಕೊಕ್ಕರೆಯ ಮರಿಗಳನ್ನು ಮುಂಗಿಸಿ ನುಂಗಿದಹಾಗೆ ಆಗುತ್ತದೆ. ಆ ಕಥೆ ಹೇಗೆಂದರೆ—

The advantage and the disadvantage of a design must be considered together—The Cranes, the Serpent and the Mongoose.

ಒಂದು ಮಡುವಿನ ಕಟ್ಟೆಯ ಅಂಚಿನಲ್ಲಿ ಒಂದು ಮರದ ಮೇಲೆ ಬಕದಂಪತಿಗಳು ವಾಸಮಾಡುತ್ತಿದ್ದವು. ಅವುಗಳ ಮರಿಗಳನ್ನು ಆಗಾಗ್ಗೆ ಒಂದು ಸರ್ಪವು ಭಕ್ಷಿಸಿ ಹೋಗುತ್ತಿದ್ದಿತು. ಬಳಿಕ ಒಂದು ದಿನ ಹೆಣ್ಣು ಕೊಕ್ಕರೆ ತನ್ನ ಗಂಡನನ್ನು ನೋಡಿ—ನನ್ನ ಮರಿಗಳನ್ನು ಸಲಸಲಕ್ಕೂ ಹಾವು ತಿಂದು ಹೋಗುತ್ತದೆ. ಈಗ ನನಗೆ ಪ್ರಸವ ಕಾಲವು ಸಮೀಪಿಸಿತು. ಈ ಬಾರಿಯಾದರೂ ಒಂದು ಉಪಾಯವನ್ನು ವಿಚಾರಿಸದೆ ಉಪೇಕ್ಷಿಸಿದರೆ ಪುತ್ರಶೋಕವನ್ನು ನಾನು ಹೇಗೆ ಸಹಿಸುವುದು—ಎಂದು ಕಣ್ಣೀರು ಬಿಟ್ಟಿತು. ಆಗ ಗಂಡು ಕೊಕ್ಕರೆ ಮರದ ಕೆಳಕ್ಕೆ ಇಳಿದು ಮಡುವಿನ ಕಟ್ಟೆಯ ಮೇಲೆ ನಿಂತುಕೊಂಡು ಯೋಚಿಸುತ್ತಿರುವ ಸಮಯದಲ್ಲಿ ಅಲ್ಲಿಗೆ ಒಂದು ನಳ್ಳಿ ಬಂದು—ನೀನೇಕೆ ಚಿಂತಿಸುತ್ತಾ ಇದ್ದೀಯೆ ? - ಎಂದು ಕೇಳಿತು. ತನ್ನ ವೃತ್ತಾಂತವನ್ನೆಲ್ಲಾ ಕೊಕ್ಕರೆ ಅದರ ಸಂಗಡ ಹೇಳಿತು. ಆಗ ನಳ್ಳಿ ಸ್ವಲ್ಪ ಹೊತ್ತು ಆಲೋಚಿಸಿ—ಎಲೈ ಬಕ ಶ್ರೇಷ್ಠನೇ, ನಿನಗೆ ನಾನೊಂದು ಉಪಾಯವನ್ನು ಹೇಳುತ್ತೇನೆ ಕೇಳು. ಮುಂಗಿಸಿಯಿರುವ ಬಿಲದ ಹತ್ತಿರದಿಂದ ಆ ಹಾವಿರುವ ಹುತ್ತಿನತನಕ ಅಲ್ಲಲ್ಲಿ ಒಂದೊಂದು ಮೀನನ್ನು ಹಾಕಿ

ಇರು—ಎಂದು ಹೇಳಲಾಗಿ, ಆ ಕೊಕ್ಕರೆ ಅದೇಪ್ರಕಾರ ಮಾಡಿತು. ತರುವಾಯ ಆ ಮುಂಗಿಸಿ ತನ್ನ ಬಿಲದಿಂದ ಹೊರಟು ಸಾಲಾಗಿದ್ದ ಮೀನುಗಳನ್ನು ತಿನ್ನುತ್ತಾ, ಹುತ್ತಿನ ಹತ್ತಿರಕ್ಕೆ ಬಂದು ಅದರಲ್ಲಿದ್ದ ಹಾವನ್ನು ಕೊಂದು, ಮರಕ್ಕೆ ಹತ್ತಿ ಕೊಕ್ಕರೆಯ ಮರಿಗಳನ್ನು ಸಹ ಭಕ್ಷಿಸಿತು. ಆದಕಾರಣ ತನ್ನ ಕ್ಷೇಮಕ್ಕಾಗಿ ಎಷ್ಟು ಮಾತ್ರವೂ ಕನಿಕರವಿಲ್ಲದೆ ಹೆರರಿಗೆ ಕೇಡಮಾಡ ಕೋರುವವನಿಗೆ ಎಂದೆಂದಿಗೂ ಮೇಲು ಉಂಟಾಗದು—ಎಂದು ತಂದೆ ಹೇಳಿದನು.

ಆ ಮಾತುಗಳಿಗೆ ಕಿವಿಗೊಡದೆ ದುಷ್ಟಬುದ್ಧಿಯು ಅರ್ಧರಾತ್ರಿ ವೇಳೆಯಲ್ಲಿ ತಂದೆಯನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಆ ಮರದ ಪೊಟ್ಟರೆಯಲ್ಲಿ ನಿಲ್ಲಿಸಿ, ಬೆಳಗಿನ ಜಾವದಲ್ಲೆದ್ದು ತನ್ನ ಜಾತಿಯವರನ್ನು ಸೇರಿಸಿಕೊಂಡು ಧರ್ಮಾಧಿಕಾರಿಗಳನ್ನೂ ಕರೆದುಕೊಡು ಸುಬುದ್ಧಿಯೊಂದಿಗೆ ಆ ಮರದ ಬಳಿಗೆ ಬಂದು, ಆ ಮರಕ್ಕೆ ಸಾಷ್ಟಾಂಗವರಗಿ—ಎಲೈ ವೃಕ್ಷರಾಜನೇ, ನಿನಗೆ ತಿಳಿದ ಸಂಗತಿಯನ್ನು ನಿಜವಾಗಿ ನುಡಿಯಬೇಕು—ಎಂದು ಪ್ರಾರ್ಥಿಸಿದನು. ಧರ್ಮಾಧಿಕೃತರು ವೃಕ್ಷವನ್ನು ನೋಡಿ—ಧನವನ್ನು ಯಾರು ಒಯ್ದರು—ಎಂದು ಕೇಳಿದರು. ಈ ಧನವನ್ನು ಸುಬುದ್ಧಿ ಅಪಹರಿಸಿದನೇ ಹೊರತು ದುಷ್ಟಬುದ್ಧಿ ಅರಿಯನು—ಎಂದು ವೃಕ್ಷದ ಪೊಟ್ಟರೆಯಿಂದ ಬಂದು ವಾಕ್ಕು ಕೇಳಿಸಿತು. ಆ ವಾಕ್ಕನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟು ಏನೂ ತೋರದೆ ಬೆರಗಾಗಿ ನಿಂತರು. ಆಗ ಸುಬುದ್ಧಿ ಬಹಳ ವ್ಯಸನದಿಂದ ಸ್ವಲ್ಪ ಹೊತ್ತು ಆಲೋಚಿಸಿ ಮರವನ್ನು ಹತ್ತಿ ನೋಡಲಾಗಿ, ಒಂದು ಪೊಟ್ಟರೆ ಕಾಣಿಸಿತು. ಅದಕ್ಕೆ ಒಣಹುಲ್ಲು ತುರುಕಿ ಬೆಂಕಿ ಹಚ್ಚಿ ತಾನು ಗಿಡದಿಂದ ಇಳಿದು ಬಂದನು. ಕೂಡಲೆ ಉರಿ ಹತ್ತಿ ದುಷ್ಟಬುದ್ಧಿಯು ತಂದೆಗೆ ಉಸಿರಾಡದೆ, ತಿಟ್ಟು ಮೂಗಿಟ್ಟು ಮೈಸುಟ್ಟು ಅವನು ತಲ್ಲಣಿಸುತ್ತಾ ಮೊರೆಯಿಟ್ಟುಕೊಂಡು ಗಿಡದ ಮೇಲಿಂದ ಕೆಳಗೆ ಬಿದ್ದನು. ಆಗ ಅವನ ಬಳಿಗೆ ಧರ್ಮಾಧಿಕೃತರು ಬಂದು—ಇದೇನು—ಎಂದು ಕೇಳಲಾಗಿ, ತನ್ನ ಮಗನಾದ ದುಷ್ಟಬುದ್ಧಿ ತನಗೆ ಈ ಅವಸ್ಥೆಯನ್ನು ತಂದನೆಂದು ಉಂಟಾ

ದುದನ್ನು ಹೇಳಿ ಅವನು ಪ್ರಾಣವನ್ನು ಬಿಟ್ಟನು. ಆ ಮೇಲೆ ಅವರು ಈ ಸಮಾಚಾರವನ್ನೆಲ್ಲಾ ಅರಸನಿಗೆ ತಿಳಿಸಿದರು. ಅರಸನು ದುಷ್ಟಬುದ್ಧಿಯ ಕಡೆಯಿಂದ ಎಲ್ಲ ಹಣವನ್ನೂ ಸುಬುದ್ಧಿಗೆ ಕೊಡಿಸಿ ಅವನಿಗೆ ತಕ್ಕ ಶಿಕ್ಷೆಯನ್ನು ಸಹ ಮಾಡಿಸಿದನು--ಎಂದು ಹೇಳಿ ಕರಟಕನು ಮರಳಿ ಇಂತೆಂದನು.

ನದಿಗಳು ಸಮುದ್ರ ಸಂಗಮವಾಗುವವರೆಗೆ ನಿಲ್ಲುವುವು, ಸ್ನೇಹವು ಭೇದ ಹುಟ್ಟುವ ತನಕ ನಿಲ್ಲುವುದು, ರಹಸ್ಯವು ಚಾಡಿಗಾರನ ಕಿವಿಗೆ ಬೀಳುವ ಪರ್ಯಂತವು ನಿಲ್ಲುವುದು, ವಂಶವು ದುಷ್ಟ ಪುತ್ರನು ಉಂಟಾಗುವತನಕ ನಿಲ್ಲುವುದು, ಆ ಮೇಲೆ ಅವು ನಿಲ್ಲಲಾರವೆಂದು ನೀತಿಶಾಸ್ತ್ರಜ್ಞರು ಹೇಳುವರು. ನೀನು ಕುಲವನ್ನು ಕೆಡಿಸುವಷ್ಟು ಕೆಟ್ಟ ನಡತೆಯುಳ್ಳವನಾಗಿ ಇದ್ದೀಯೆ. ನಿನ್ನ ನಡತೆಯನ್ನು ನೋಡಿದರೆ ನನಗೆ ಅಂಜಿಕೆಯಾಗುತ್ತದೆ. ಚಾಡಿಖೋರನ ಸಂಗಡ ಸ್ನೇಹಮಾಡುವವನು ಕೆಟ್ಟುಹೋಗುವನು. ಹಾವಿನ ಮರಿಗಳನ್ನು ಬಹುಕಾಲ ಸಾಕಿದರೂ ಅವು ಕಚ್ಚದೆ ಬಿಟ್ಟಾವೇ ? ತಿಳಿದವನ ಸಹವಾಸ ಸಿಕ್ಕಿದರೆ ಒಳ್ಳೆಯದು ; ಅದೇ ಅವನು ಕಪಟಿಯಾಗಿದ್ದರೆ ಒಳ್ಳೆಯದಲ್ಲ. ತಿಳಿಯದವನು ಗುಣವಂತನಾಗಿ ಇದ್ದರೆ ಅವನ ಸಹವಾಸದಿಂದ ಸಜ್ಜನರಿಗೆ ಎಂದಿಗೂ ಕೊರತೆಯಿಲ್ಲ. ನೀನು ಧಣಿಯನ್ನೇ ಇಷ್ಟು ದುರವಸ್ಥೆ ಹೊಂದಿಸಿದೆ ; ಅನ್ಯರು ನಿನಗೆ ತೃಣಪ್ರಾಯರೇ ಸರಿ. ಒಬ್ಬನನ್ನು ತಾನು ವಂಚಿಸಬೇಕೆಂದು ಎಣಿಸಿದರೆ ತನ್ನನ್ನು ದೈವವು ವಂಚಿಸುತ್ತದೆ. ಐವತ್ತು ಭಾರ ಲೋಹವನ್ನು ಇಲಿಗಳು ತಿಂದುವೆಂದು ಒಬ್ಬ ವರ್ತಕನು ಹೇಳಿದರೆ, ಇನ್ನೊಬ್ಬನು ಹುಡಗನನ್ನು ಹದ್ದು ಎತ್ತಿಕೊಂಡು ಹೋಯಿತೆಂದು ನುಡಿದನು. ಈ ವಿಚಿತ್ರವಾದ ಕಥೆಯನ್ನು ನೀನು ಕೇಳಿರುವೆಯಾ ? ಎಂದು ಹೇಳಲಾಗಿ, ಇದನ್ನು ನಾನೆಂದೂ ಕೇಳಲಿಲ್ಲ ಹೇಳು—ಎಂದು ದಮನಕನೆಂದನು. ಕರಟಕನು ಹೇಳಲಾರಂಭಿಸಿದನು.

He who intends to deceive another will deceive himself—The two Merchants.

ಒಂದಾನೊಂದು ಪಟ್ಟಣದಲ್ಲಿ ಅಕ್ಷೀಣವಿಭವನೆಂಬ ಹೆಸರುಳ್ಳ ಒಬ್ಬ ಕೋಮಟಿಯುಂಟು. ಅವನು ಹಣವನ್ನು ಗಳಿಸಬೇಕೆಂದು ವ್ಯಾಪಾರ ಮಾಡುವುದಕ್ಕಾಗಿ ಪರದೇಶಕ್ಕೆ ಹೋಗುವುದಕ್ಕೆ ಪ್ರಯಾಣಹೊರಟು, ಐವತ್ತು ಭಾರ ಲೋಹವನ್ನು ತನ್ನ ಸ್ನೇಹಿತನ ಬಳಿಯಲ್ಲಿ ಜೋಪಾನವಾಗಿಟ್ಟಿರೆಂದು ಕೊಟ್ಟು, ದೇಶಾಂತರಕ್ಕೆ ಹೋಗಿ ಸ್ವಲ್ಪ ಕಾಲ ಇದ್ದು, ಅಲ್ಲಿಂದ ತಿರುಗಿ ಬಂದು ಊರಿಗೆ ಸೇರಿ, ತನ್ನ ಸ್ನೇಹಿತನ ಮನೆಗೆ ಹೋಗಿ—ಗೆಳೆಯನೇ, ಇಷ್ಟು ದಿನ ಪರದೇಶಕ್ಕೆ ಹೋಗಿದ್ದೆ. ಅಲ್ಲಿ ನನಗೊಂದು ಕಾಸು ಸುದಾ ಲಾಭ ಸಿಕ್ಕದೆ ಸುಮ್ಮನೆ ತಿರುಗಿ ಬರಬೇಕಾಯಿತು. ನಿನ್ನ ಮನೆಯಲ್ಲಿ ಇಟ್ಟು ಹೋದ ಲೋಹವನ್ನು ಕೊಡಿಸು—ಎಂದು ಕೇಳಿದನು. ಅವನು ದ್ರವ್ಯಲೋಭದಿಂದ ಸೊತ್ತುಗಾರನಿಗೆ ಸೊತ್ತನ್ನು ಕೊಡದೆ ಅದನ್ನು ಇಲಿಗಳು ತಿಂದುಹೋದುವೆಂದು ಹೇಳಿದನು. ಆ ಮೇಲೆ ಈ ವರ್ತಕನು ಸ್ವಲ್ಪ ಹೊತ್ತು ತನ್ನ ಮನಸ್ಸಿನಲ್ಲಿ ಆಲೋಚಿಸಿ,—ಇವನು ನನ್ನ ಸೊತ್ತನ್ನು ನನಗೆ ಕೊಡಲಾರದೆ ಇದ್ದಾನೆ. ಹೇಗಾದರೂ ಇವನನ್ನು ವಂಚಿಸದೆ ಹೋದರೆ ನನ್ನ ಸೊತ್ತು ನನಗೆ ಬರಲಾರದು.—ಎಂದು ನಿಶ್ಚಯಿಸಿ, ಮಾರನೆಯ ದಿನ ಆ ವರ್ತಕನ ಮಗನನ್ನು—ಮೀಯೋಣ ಬಾ—ಎಂದು ತನ್ನ ಸಂಗಡ ಕೆರೆಗೆ ಕರೆದುಕೊಂಡು ಹೋಗಿ, ಅಲ್ಲಿ ಮಿಂದು ತಿರುಗಿ ಬರುವಾಗ ಆ ಹುಡಗನನ್ನು ಒಬ್ಬರ ಮನೆಯಲ್ಲಿ ಅವಿತಿಟ್ಟು ತಾನು ಮಾತ್ರವೇ ಬಂದನು. ನಮ್ಮ ಹುಡಗನು ನಿನ್ನ ಸಂಗಡ ಸ್ನಾನಕ್ಕೆ ಕೆರೆಗೆ ಬಂದನಲ್ಲಾ, ಎಲ್ಲಿ ಹೋದನು—ಎಂದು ಅವನ ತಾಯಿತಂದೆಗಳು ಕೇಳಿದರು. ನಿಮ್ಮ ಹುಡಗನೂ ನಾನೂ ಕೆರೆಯಲ್ಲಿ ಸ್ನಾನಮಾಡಿ ಹಾದಿಯಲ್ಲಿ ಬರುತ್ತಿರುವಾಗ ನಿಮ್ಮ ಹುಡಗನನ್ನು ಹದ್ದು ಎತ್ತಿಕೊಂಡು ಹೋಯಿತು—ಎಂದು ವರ್ತಕನು ಹೇಳಿದನು. ಆಗ ಲೋಹವನ್ನು ಅಪಹರಿಸಿದವನು ಕಣ್ಣುಗಳನ್ನು ಕೆಂಪಗೆ ಕೆರಳಿಸಿಕೊಂಡು ಬಲು ಬೇಗ ಅರಸನ ಹತ್ತಿ

ರಕ್ಕೆ ಹೋಗಿ ಮೊರೆಯಿಟ್ಟುಕೊಂಡನು. ಅರಸನು ಧರ್ಮಾಧಿಕೃತರನ್ನು ಕರೆಯುಕಳುಹಿಸಿ ಆ ಮೊರೆಯುನ್ನು ವಿಚಾರಿಸಹೇಳಿ ಅಪ್ಪಣೆಮಾಡಿದನು. ಅವರು ಆ ವೈಶ್ಯನನ್ನು ಕರೆಯಿಸಿ—ನೀನು ಮೊರೆಯಿಡುವುದಕ್ಕೆ ಕಾರಣವೇನು—ಎಂದು ಕೇಳಿದರು. ಅವನು ಅಯ್ಯಾ, ನನ್ನ ಸ್ನೇಹಿತನೊಬ್ಬನು ನನ್ನ ಮಗನನ್ನು ತನ್ನ ಸಂಗಡ ಕರೆದುಕೊಂಡು ಹೋಗಿ ಹಾದಿಯಲ್ಲಿ ಅವನನ್ನು ಕೊಂದುಬಿಸುಟು, 'ಹುಡುಗನೆಲ್ಲಿ' ಎಂದು ಕೇಳಿದರೆ 'ಅವನನ್ನು ಹದ್ದು ಎತ್ತಿಕೊಂಡು ಹೋಯಿತು' ಎಂದು ಹೇಳುತ್ತಾನೆ. ಇಂಥ ಅನ್ಯಾಯ ಭೂಮಿಯಲ್ಲಿ ಎಲ್ಲಾದರೂ ಉಂಟೋ? ಇದನ್ನು ನೀವು ಚೆನ್ನಾಗಿ ವಿಚಾರಿಸಬೇಕು,—ಎಂದು ನುಡಿದನು. ಧರ್ಮಾಧಿಕೃತರು ಇಂಥುದನ್ನು ಈವರೆಗೆ ಎಂದೂ ಕೇಳಲಿಲ್ಲ. ಇದನ್ನು ಚೆನ್ನಾಗಿ ವಿಚಾರಿಸಬೇಕು—ಎಂದು ನೆನಸಿ, ಪ್ರತಿವಾದಿಯುನ್ನು ಕರೆಯಿಸಿ—ಈ ಸಂಗತಿ ಏನು?—ಎಂದು ಕೇಳಿದರು. ಅದಕ್ಕೆ ಅವನು ಅಯ್ಯಾ, ಐವತ್ತು ಭಾರ ಲೋಹವನ್ನು ನಾನು ವಾದಿಯ ಮನೆಯಲ್ಲಿ ಇಟ್ಟುಬಿಟ್ಟು ಹೋದೆ. ಅದನ್ನು ಇಲಿಗಳು ತಿಂದುಹೋದುವಂತೆ. ಚಿಕ್ಕ ಹುಡುಗನನ್ನು ಹದ್ದು ಎತ್ತಿಕೊಂಡು ಹೋಗುವುದು ಆಶ್ಚರ್ಯವೇ?—ಎಂದು ಕೇಳಿದನು. ಆ ಸಭೆಯುವರು ಅವನ ತಾತ್ಪರ್ಯವನ್ನು ತಿಳಿದುಕೊಂಡು—ಈ ಸೆಟ್ಟಿ ನಿನ್ನ ಲೋಹವನ್ನು ನಿನಗೆ ಕೊಡುತ್ತಾನೆ. ನೀನು ಅವನ ಮಗನನ್ನು ಅವನಿಗೆ ಕೊಡು—ಎಂದು ಹೇಳಿದರು. ಆ ಮೇಲೆ ಅವರಿಬ್ಬರೂ ಸಭೆಯುವರ ತೀರ್ಪಿಗೆ ಸಂಮತಿಸಿ ಆ ಪ್ರಕಾರ ನಡೆದುಕೊಂಡರು—ಎಂದು ನುಡಿದು, ಕರಟಕನು ಮರಳಿ ಇಂತೆಂದನು.

ಹಿತವಾಗಿ ಒಂದು ಮಾತನ್ನು ಹೇಳಿದರೆ ತಿಳಿದು ನಡೆದುಕೊಳ್ಳುವವನು ಬುದ್ಧಿವಂತನು. ನೀನು ಬೊಂಬೆಯ ಹಾಗೆ ನಿಶ್ಚೇಷ್ಟಿತನಾಗಿ ಭ್ರಮಿಸಿದ್ದೀಯೆ. ನಿನಗೆ ಎಷ್ಟು ಹೇಳಿದರೂ ಪ್ರಯೋಜನವೇನು? ನಾನು ನಿನ್ನ ಸಂಗಡ ಸೇರಿ ಇರುವುದು ಅನುಚಿತ. ನಾನಾದೇಶದಲ್ಲಿ ಸಂಚರಿಸುತ್ತಿರುವ ವಾಯುವಿಗೆ ಸುಗಂಧ ದುರ್ಗಂಧಗಳು ಉಂಟಾಗುವ ಹಾಗೆ ಸುಜನ ದುರ್ಜನ ಸಹವಾಸ ಮಾಡುತ್ತಿರುವ ಪುರುಷನಿಗೆ ಸುಗುಣ

ದುರ್ಗುಣಗಳು ಉಂಟಾಗುವುವು. ಬುದ್ಧಿಶಾಲಿಯಾದವನು ಮಾಡಬಾರದ ಕೆಲಸವನ್ನು ಮಾಡಲಪೇಕ್ಷಿಸನು. ಬಹಳ ದಾಹವಾಗಿದ್ದರೂ ಚಾತಕಪಕ್ಷಿಗಳು ಬೀದಿಯಲ್ಲಿ ಹರಿವ ನೀರನ್ನು ಕುಡಿವುವೇ?—ಎಂದು ಬಹುಪ್ರಕಾರವಾಗಿ ಹೇಳಲು, ಕೇಳಿ ದಮನಕನು—ನಮ್ಮ ಸ್ವಾಮಿ ಸಂಜೀವಕನನ್ನು ಕೊಂದ ಬಗೆಯನ್ನು ತಿಳಿದುಕೊಳ್ಳಬೇಕು, ಹೋಗೋಣ ಬಾ—ಎಂದು ಕರಟಕನನ್ನು ಕರೆದುಕೊಂಡು ಪಿಂಗಳಕನ ಸಮೀಪಕ್ಕೆ ಹೋದನು. ಪಿಂಗಳಕನು ಅದಕ್ಕೆ ಮುಂಚೆಯೇ ಸಂಜೀವಕನನ್ನು ಕೊಂದು ಪಶ್ಚಾತ್ತಾಪಪಡುತ್ತಾ ಇದ್ದು ದಮನಕನನ್ನು ನೋಡಿ ಇಂತೆಂದನು:—

ಪಾಲಿಸತಕ್ಕವನನ್ನು ನೋಡಿ ಪಾಲಿಸಿ ಅವನಿಗೆ ಸಕಲಸಂಪತ್ತುಗಳನ್ನು ಉಂಟುಮಾಡುವುದು ರಾಜಧರ್ಮವೇ ಹೊರತು ಅಂಥವನನ್ನು ಕೊಲ್ಲುವುದು ರಾಜಧರ್ಮವಲ್ಲ. ನಾನೆಷ್ಟುಮಾತ್ರವೂ ಹಿಂದು ಮುಂದು ವಿಚಾರಿಸದೆ ಏಕೆ ಸಂಜೀವಕನನ್ನು ಕೊಂದೆನು? ತಾನು ಇಟ್ಟ ವಿಷವೃಕ್ಷವನ್ನಾದರೂ ತಾನೇ ಕಡಿದುಹಾಕುವುದು ಯುಕ್ತವಲ್ಲ. ಒಳ್ಳೆಯ ಗುಣವಂತನಾದ ಭೃತ್ಯನನ್ನು ಅರಸನು ಬಿಟ್ಟುಬಿಟ್ಟರೆ ಉಳಿದವರು ಆತನಿಗೆ ದೂರವಾಗುವರು. ಅಂಥ ಕೆಲಸ ಮಾಡುವುದು ಅರಸನಿಗೆ ಹಾನಿಕರವು. ಪರರ ಪಾಲಾದ ಭೂಮಿಯನ್ನಾದರೂ ತಂದುಕೊಳ್ಳಬಹುದು; ಒಳ್ಳೆಯ ಭೃತ್ಯನನ್ನು ಮಾತ್ರ ಸಂಪಾದಿಸುವುದು ಕಷ್ಟ. ಭೂಮಿಯಲ್ಲಿ ಇರುವತನಕ ನನಗೆ ಇದೊಂದು ದೊಡ್ಡ ಅಪಕೀರ್ತಿ ಬಂದಿತು. ಇದನ್ನು ಹೋಗಲಾಡಿಸುವ ಬಗೆ ಹೇಗೆ?—ಎಂದು ಪ್ರಲಾಪಿಸಿದನು.

Damanaka comforts Pingalaka.

ಪಿತಾ ವಾ ಯದಿ ವಾ ಭ್ರಾತಾ ಪುತ್ರೋ ವಾ ಯದಿ ವಾ ಸುಹೃತ್ ।
ಪ್ರಾಣಚ್ಛೇದಕರಾ ರಾಜ್ಞಾ ಹಂತವ್ಯಾ ಭೂತಿ ಮಿಚ್ಛತಾ ॥

ಅದನ್ನು ಕೇಳಿ ದಮನಕನಿಂತೆಂದನು:—ಸ್ವಾಮೀ, ಶತ್ರುಸಂಹಾರ ಮಾಡಿದ ತರುವಾಯ ಹೀಗೆ ಸಂತಾಪಿಸುವುದು ಯುಕ್ತವಲ್ಲ. ತನ್ನ ತಂದೆಯಾದರೂ ಮಗನಾದರೂ ಅಣ್ಣನಾದರೂ ತಮ್ಮನಾದರೂ ಮಿತ್ರನಾದರೂ ತನಗೆ ದ್ರೋಹಮಾಡಿದರೆ ಭೂಮಿಯಮೇಲೆ ಆಶೆಯುಳ್ಳ

ಅರಸನು ಅವರನ್ನು ಶೀಘ್ರವಾಗಿ ಕೊಲ್ಲಬೇಕು. ಅದೂ ಅಲ್ಲದೆ ಯಾವಾಗಲೂ, ಸ್ವಲ್ಪವಾದರೂ ದಯೆಯಿಲ್ಲದ ಅರಸನೂ, ಸರ್ವಭಕ್ಷಕನಾದ ಬ್ರಾಹ್ಮಣನೂ, ಗಂಡನಿಗೆ ಯಾವಾಗಲೂ ಪ್ರತಿಕೂಲೆಯಾಗಿರುವ ಹೆಂಗಸೂ, ಕಪಟವುಳ್ಳ ಸ್ನೇಹಿತನೂ, ಗರ್ವಿಸಿದ ಭೃತ್ಯನೂ, ಪ್ರಮತ್ತನಾದ ಮಂತ್ರಿಯೂ, ಮಾಡಿದ ಮೇಲನ್ನು ಮರೆತವನೂ, ಈ ಏಳು ಮಂದಿಯೂ ಬುದ್ಧಿಮಂತನಿಂದ ಬಿಡಲ್ಪಡತಕ್ಕವರು. ಮನುಷ್ಯಮಾತ್ರನಿಗೆ ಇರುವ ಗುಣಗಳಲ್ಲಿ ಅರಸನು ರಾಜ್ಯ ಪರಿಪಾಲನೆ ಮಾಡಬೇಕೆಂದರೆ ಆ ದೊರೆತನವು ಪ್ರಕಾಶಿಸದು. ಶತ್ರುಭಯಂಕರವಾದ ಕಾರ್ಯಗಳಿಂದ ಭೂಮಿಯನ್ನೆಲ್ಲಾ ತನ್ನ ವಶಪಡಿಸಿಕೊಂಡು ಕೀರ್ತಿಸಂಪತ್ತುಗಳುಳ್ಳವನಾಗಿ ಇದ್ದರೆ ದೊರೆತನವು ಪ್ರಕಾಶಿಸುವುದು. ಯಾವುವು ಮನುಷ್ಯಮಾತ್ರನಿಗೆ ದೋಷವೋ, ಅವು ಅರಸನಿಗೆ ಒಳ್ಳೆಯ ಗುಣಗಳು. ಆತನು ಒಂದು ಕಡೆಯಲ್ಲಿ ಸತ್ಯಕ್ಕೆ ತಪ್ಪದೆ ನಡೆವನು, ಒಂದು ಕಡೆಯಲ್ಲಿ ಸ್ವಲ್ಪ ಸಡಿಲ ಬಿಡುವನು ; ಒಂದು ಕಡೆಯಲ್ಲಿ ಒಳ್ಳೆಯ ಮಾತುಗಳನ್ನು ನುಡಿವನು ; ಒಂದು ಕಡೆಯಲ್ಲಿ ಕಠಿನವಾಗಿ ಮಾತನಾಡುವನು ; ಒಂದು ಕಡೆಯಲ್ಲಿ ಬಹಳ ದಯೆಯುಳ್ಳವನಾಗಿ ಇರುವನು , ಒಂದು ಕಡೆಯಲ್ಲಿ ದಯೆಯಿಲ್ಲದವನಾಗಿರುವನು ; ಒಂದು ಕಡೆಯಲ್ಲಿ ಧನವನ್ನು ಸಂಪಾದಿಸುವುದೇ ಮುಖ್ಯಪ್ರಯೋಜನವಾಗಿ ಎಣಿಸುವನು ; ಒಂದು ಕಡೆಯಲ್ಲಿ ಬಹಳ ದಾತೃತ್ವವನ್ನುಳ್ಳವನಾಗಿರುವನು. ಈ ಪ್ರಕಾರ ಅನೇಕ ವಿಧವಾದ ರೂಪಗಳಿಂದ ರಾಜನೀತಿ ಪ್ರಕಾಶಿಸುತ್ತಿರುವುದು. ಇಂಥ ನೀತಿಮಾರ್ಗಗಳನ್ನೆಲ್ಲಾ ತಿಳಿದುಕೊಂಡರೆ ನಿನಗೆ ಬಹಳ ಸಂಪತ್ತು ಉಂಟಾಗುವುದು—ಎಂದು ದಮನಕನು ಹೇಳಿದನು. ಅದನ್ನು ಕೇಳಿ ಪಿಂಗಳಕನು ಮನಸ್ಸಿನಲ್ಲಿಯ ಕಳವಳ ತೀರಿ ಸಂತೋಷಚಿತ್ತನಾಗಿ ತನ್ನ ಮಂತ್ರಿ ಭೃತ್ಯರು ಸಹಿತವಾಗಿ ಎಂದಿನಂತೆ ರಾಜ್ಯವನ್ನಾಳುತ್ತಿದ್ದನು.

ಎಂದು ವಿಷ್ಣುಶರ್ಮನು ನುಡಿದ ಮಿತ್ರಭೇಧವೆಂಬ ಪ್ರಥಮ
ತಂತ್ರವನ್ನು ಆ ರಾಜಕುಮಾರರು ಕೇಳಿ
ಸಂತೋಷಭರಿತಾಂತರಂಗರಾಗಿದ್ದರು.

SECTION II.

ACQUISITION OF FRIENDS.

ಸುಹೃಲ್ಲಾಭವು.

ಅನಂತರ ಆ ರಾಜಪುತ್ರರು ಸಕಲ ನೀತಿಶಾಸ್ತ್ರಪಾರಂಗತನಾದ ವಿಷ್ಣುಶರ್ಮನಿಗೆ ಅತಿ ಭಯಭಕ್ತಿಯಿಂದ ನಮಸ್ಕರಿಸಿ—ಅಯ್ಯಾ, ತಮ್ಮ ಅನುಗ್ರಹದಿಂದ ನಮಗೆ ಮಿತ್ರಭೇದವೆಂಬ ತಂತ್ರವು ಸಾಂಗವಾಗಿ ತಿಳಿಯಿತು. ಇದರಿಂದ ಶತ್ರುಮಿತ್ರವರ್ಗದಲ್ಲಿ ಆಯಾ ಕಾಲಾನುಸಾರವಾಗಿ ಎಚ್ಚರಿಕೆಯಾಗಿ ಇರುವುದಕ್ಕೂ, ಸಜ್ಜನಸ್ನೇಹದಿಂದ ಉಂಟಾಗುವ ಸುಖ, ದುರ್ಜನ ಸಹವಾಸದಿಂದ ಉಂಟಾಗುವ ದುಃಖ ಮುಂತಾದ ಅನೇಕ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೂ ನಾವು ಸಮರ್ಥರಾದೆವು. ಆದಕಾರಣ ಇನ್ನು ಮೇಲೆ ತಿಳಿಸಬೇಕಾದ ನೀತಿ ಶಾಸ್ತ್ರಾಂಶಗಳನ್ನು ಈ ಪ್ರಕಾರವೇ ಲೌಕಿಕದೃಷ್ಟಾಂತಪುರಸ್ಸರವಾಗಿ ತಿಳಿಯಹೇಳಿ ಅನುಗ್ರಹಿಸಬೇಕು—ಎಂದು ಬಹಳ ವಿನೀತರಾಗಿ ಪ್ರಾರ್ಥಿಸಲು, ವಿಷ್ಣುಶರ್ಮನಿಂತೆಂದನು.

The necessity of mutual friendship—The Crow, the Tortoise, the Deer and the Rat.

ಅಸಾಧನಾ ವಿತ್ತಹೀನಾ ಬುದ್ಧಿಮಂತಸ್ಸುಹೃತ್ತಮಾಃ ।
ಸಾಧಯಂತ್ಯಾಶು ಕಾರ್ಯಾಣಿ ಕಾಕಕೂರ್ಮಮೃಗಾಖುವತ್ ॥

ಬುದ್ಧಿಮಂತರಾದವರು ಸಾಧನಗಳೂ ಧನವೂ ಇಲ್ಲದೆ ಒಬ್ಬರೊಂದಿಗೊಬ್ಬರು ಸ್ನೇಹಿಸಿ ತಮಗೆ ಬೇಕಾದ ಕಾರ್ಯಗಳನ್ನು ಕಾಕಕೂರ್ಮ

ಮೃಗ ಮೂಷಿಕಗಳ ಹಾಗೆ ಚೆನ್ನಾಗಿ ನೆರವೇರಿಸಿಕೊಳ್ಳುವರು—ಎಂದು ವಿಷ್ಣುಶರ್ಮನು ಹೇಳಲು, ರಾಜಕುಮಾರರು ಕೇಳಿ—ಕಾಕಕೂರ್ಮಮೃಗ ಮೂಷಿಕಗಳಿಗೆ ಹೇಗೆ ಸ್ನೇಹವಾಯಿತು? ಅವು ಯಾವ ಕಾರ್ಯಗಳನ್ನು ನೆರವೇರಿಸಿಕೊಂಡುವು? ನಮಗೆ ವಿಶದವಾಗಿ ತಿಳಿಸಬೇಕು—ಎನಲು, ವಿಷ್ಣುಶರ್ಮನು ಹೇಳುತ್ತಾನೆ—

ಮಹಿಳಾಪುರವೆಂಬ ಪಟ್ಟಣಕ್ಕೆ ಸಮೀಪವಾಗಿದ್ದ ದೊಡ್ಡ ಅಡವಿಯಲ್ಲಿ ಒಂದು ಬೂರುಗದ ಮರವುಂಟು. ಆ ಮರದ ಮೇಲೆ ಲಘುಪತನಕನೆಂಬ ಹೆಸರುಳ್ಳ ಕಾಗೆ ಒಕ್ಕಲಿದ್ದಿತು. ಆ ಗಿಡದ ಕೆಳಗೆ ಒಬ್ಬ ಬೆಸ್ತನು ಬಂದನು. ಅವನನ್ನು ಕಂಡು ಆ ಕಾಗೆ ಹೆದರಿ 'ಇವನಿಲ್ಲಿಗೆ ಏತಕ್ಕೋಸ್ಕರ ಬಂದನು? ದುರ್ಜನನಿರುವ ಸ್ಥಳದಲ್ಲಿ ನಿಲ್ಲಬಾರದು. ಇದೂ ಅಲ್ಲದೆ ಈಗ ನಾನು ಬಹಳ ಹಸಿಗೊಂಡು ಇದ್ದೇನೆ. ಬಹಳ ಹೊತ್ತೇರಿತು. ಶೀಘ್ರವಾಗಿ ಹೋಗಬೇಕು' ಎಂದು ಯತ್ನಿಸುತ್ತಿರುವಾಗ, ಆ ಬೆಸ್ತನು ಆ ಮರದ ಸುತ್ತಲೂ ಬಲೆಯೊಡ್ಡಿ ಕೆಳಗೆ ಧಾನ್ಯವನ್ನು ಚೆಲ್ಲಿ ತಾನು ಕಾಣಿಸದೆ ಆಚೆ ಹೊದರಿನಲ್ಲಿ ಅವಿತುಕೊಂಡು ರೆಪ್ಪೆ ಹಾಕದೆ ನೋಡುತ್ತಿದ್ದನು.

The Huntsman and the prince of Doves.

ಆಗ ಚಿತ್ರಗ್ರೀವನೆಂಬ ಕಪೋತರಾಜನು ಬಂದು ಆ ಧಾನ್ಯವನ್ನು ತಿನ್ನಬೇಕೆಂಬ ಆಶೆಯಿಂದ ತನ್ನ ಪರಿವಾರಸಮೇತನಾಗಿ ಅವನ ಬಲೆಯಲ್ಲಿ ಸಿಕ್ಕುಬಿದ್ದನು. ಅದನ್ನು ಕಂಡು ಬೆಸ್ತನು ಬಹಳ ಸಂತೋಷಿಸಿ ಬಲೆಯ ಹತ್ತಿರಕ್ಕೆ ಬರುತ್ತಿರುವ ಸಮಯದಲ್ಲಿ, ಚಿತ್ರಗ್ರೀವನು ತನ್ನ ಪರಿವಾರವನ್ನು ನೋಡಿ ಇಂತೆಂದನು.

ಹಸಿವಿನ ಬಾಧೆಯಿಂದ ಮೈಮರೆತು ನಾವೆಲ್ಲರೂ ಬಲೆಯಲ್ಲಿ ಸಿಕ್ಕಿಕೊಂಡೆವು. ನಮಗೆ ಈ ಆಪತ್ತನ್ನು ಹೋಗಲಾಡಿಸುವುದಕ್ಕೆ ಮತ್ತಾರಿದ್ದಾರೆ? ನಾನೊಂದುಪಾಯವನ್ನು ಹೇಳುತ್ತೇನೆ ಕೇಳಿ, ಅದೇನೆಂದರೆ: ನಾವೆಲ್ಲರೂ ಒಂದೇ ಪಟ್ಟಾಗಿ ಬಲೆಯನ್ನು ಎತ್ತಿಕೊಂಡು ಆಕಾಶಕ್ಕೆ

ಹಾರಿ ಹೋದವರೆ ಈಗ ಈ ಆಪತ್ತು ನಮಗೆ ತಪ್ಪುವುದು. ಆಚೆಗೆ ಹೋಗಿ ಬಲೆಯಿಂದ ಬಿಡಿಸಿಕೊಳ್ಳುವುದಕ್ಕೆ ಮತ್ತೊಂದು ಉಪಾಯ ವನ್ನು ಹುಡುಕಬಹುದು—ಎಂದು ಹೇಳಲು, ಪಾರಿವಾಳದ ಹಕ್ಕಿಗಳು ಹಾಗೆಯೆ ಆಗಲಿ ಎಂದು ಅದ್ಭುತವಾಗಿ ಆಕಾಶಕ್ಕೆ ಹಾರಿ ಬಲೆಯನ್ನೆತ್ತಿ ಕೊಂಡು ಹೋದುವು. ಆಗ ಬೆಸ್ತನು ವಿಸ್ಮಯವನ್ನೂ ವಿಷಾದವನ್ನೂ ಹೊಂದಿ ತನ್ನಲ್ಲಿ ತಾನು ಹೀಗೆಂದು ವಿತರ್ಕಿಸಿದನು—ಈ ಲೋಕದಲ್ಲಿ ಪಕ್ಷಿಗಳಿಗೆ ಬಲೆಯೊಡ್ಡಿದರೆ ಅವು ಬಲೆಯಲ್ಲಾದರೂ ಸಿಕ್ಕಿಕೊಳ್ಳಬೇಕು; ಇಲ್ಲವೇ ಬಲೆಯನ್ನು ಹರಿದುಕೊಂಡಾದರೂ ಹೋಗಬೇಕು. ಈ ಪ್ರಕಾರ ಬಲೆಯನ್ನು ಎತ್ತಿಕೊಂಡು ಆಕಾಶಮಾರ್ಗವಾಗಿ ಹಾರಿಹೋಗು ವುದನ್ನು ಇದಕ್ಕೆ ಮುಂಚೆ ಎಲ್ಲಿಯೂ ನೋಡಲಿಲ್ಲ. ಇದು ಬಹಳ ಆಶ್ಚರ್ಯವಾಗಿದೆ. ಈ ಪಕ್ಷಿಗಳು ನೆಲಕ್ಕೆ ವಾಲುವುದನ್ನು ನೋಡಿ ಹೋಗಿ ಹಿಡಿದುಕೊಳ್ಳಬೇಕು—ಎಂದು ನೋಡುತ್ತಿದ್ದನು. ಈ ಸಮಯ ದಲ್ಲಿ ಬೂರುಗದ ಮರದ ಮೇಲಿದ್ದ ಕಾಗೆ ಬಹಳ ಹಸಿವಿನಿಂದ ಬಳಲಿ ದ್ದರೂ ಈ ಅತಿಶಯವನ್ನು ನೋಡಬೇಕೆಂದು ಪಾರಿವಾಳಗಳ ಹಿಂದೆ ಹೋಗುತಿದ್ದಿತು. ಆ ಬೆಸ್ತನು ಕಪೋತಗಳಿಗೆ ಸಮೀಪವಾಗಿ ಭೂಮಿಯ ಮೇಲೆ ಅತಿತ್ವರೆಯಾಗಿ ಓಡಿಯೋಡಿ ಅಸುರುಸುರಾಗಿ, ಅವು ದೃಷ್ಟಿಗೆ ಬೀಳದೆ ದೂರವಾಗಿ ಹೋದುವರಿಂದ, ಬುಸುಗುಟ್ಟುತ್ತಾ ತಿರುಗಿ ತನ್ನ ಮನೆಗೆ ಹೋದನು. ಚಿತ್ರಗ್ರೀವನು ಬಹುದೂರ ಸಾಗಿಹೋಗಿ ತನ್ನ ಅನುಚರರನ್ನು ನೋಡಿ—ನನ್ನ ಸ್ನೇಹಿತನಾದ ಹಿರಣ್ಯಕನೆಂಬ ಮೂಷಿಕ ರಾಜನು ಈ ಕೆರೆಯ ಬಳಿಯಲ್ಲಿದ್ದಾನೆ. ಅವನು ನನ್ನನ್ನು ನೋಡಿದರೆ ಈಗ ನಮಗೆ ಬಂದಿರುವ ಆಪತ್ತನ್ನು ಹೋಗಲಾಡಿಸುವನು. ಆದುದ ರಿಂದ ನಾವಲ್ಲಿಗೆ ಹೋಗೋಣ—ಎಂದು ಹೇಳಿದನು. ಕಪೋತಗಳು ಒಳ್ಳೆಯದೆಂದು ಹಿರಣ್ಯಕನ ಬಿಲದ ಮೇಲೆ ವಾಲಿದುವು. ಚಿತ್ರಗ್ರೀವನು ತನ್ನ ಮುಖವನ್ನು ಇಲಿಯ ಬಿಲದಲ್ಲಿಟ್ಟು—ಎಲೈ ಹಿರಣ್ಯಕನೇ, ನಾನು ನಿನ್ನ ಸ್ನೇಹಿತನಾದ ಚಿತ್ರಗ್ರೀವನು. ನನ್ನ ಯೋಗಕ್ಷೇಮವನ್ನು ನೀನೀಗ ವಿಚಾರಿಸಿಕೊಳ್ಳಬೇಕು—ಎಂದು ನುಡಿದನು.

Everything done is done by decree of God— The conversation between the Dove and the Rat.

ಅದನ್ನು ಕೇಳಿ ಹಿರಣ್ಯಕನು ಬಹುಬೇಗ ಬಿಲದಿಂದ ಹೊರಗೆ ಬಂದು, ಅಲ್ಲಿ ಆಪನ್ನನಾಗಿದ್ದ ಸ್ನೇಹಿತನನ್ನು ಬಹಳ ಆದರದಿಂದ ತಬ್ಬಿಕೊಂಡು ದುಃಖಿತನಾಗಿ—ಎಲೈ ಸ್ನೇಹಿತನೇ, ಒಳ್ಳೆಯ ವಿವೇಕಿಯಾದ ನಿನಗೆ ಇಂಥ ದುರವಸ್ಥೆ ಹೇಗೆ ಬಂದಿತು ?—ಎಂದು ಕೇಳಿದನು. ಅದಕ್ಕೆ ಚಿತ್ರಗ್ರೀವನು ಮುಗುಳುನಗೆ ನಗುತ್ತಾ ಹಿರಣ್ಯಕನನ್ನು ನೋಡಿ ಇಂತೆಂದನು :—ನೀನು ಸಮಸ್ತವನ್ನೂ ತಿಳಿದವನಾಗಿದ್ದು ಈ ಪ್ರಕಾರ ನನ್ನ ಕೇಳಬೇಕಾದುದೇನು ? ಅರಿತಿದ್ದರೂ ನೀನು ಕೇಳಿದೆ. ಆದುದರಿಂದ ಹೇಳುತ್ತೇನೆ —

ಯಸ್ಮಾಚ್ಚ ಯೇನಚ ಯಥಾಚ ಯದಾಚ ಯಚ್ಚ
ಯಾವಚ್ಚ ಯತ್ರಚ ಶುಭಾಶುಭಮಾತ್ಮಕರ್ಮ ।
ತಸ್ಮಾಚ್ಚ ತೇನಚ ತಥಾಚ ತದಾಚ ತಚ್ಚ
ತಾವಚ್ಚ ತತ್ರಚ ವಿಧಾತೃವಶಾದುಪೈತಿ ॥

ವ್ಯೋಮೈಕಾಂತವಿಹಾರಿಣೋಽಪಿ ವಿಹಗಾಸ್ಸಂಪ್ರಾಪ್ನುವಂತ್ಯಾಪದಂ
ವಧ್ಯಂತೇ ನಿಪುಣೈರಗಾಧಸಲಿಲಾನ್ಮತ್ಸ್ಯಾಸ್ಸಮುದ್ರಾದಪಿ ।
ದುರ್ನೀತಂ ಕಿಮಿಹಾಸ್ತಿ ಕಿಂ ಸುಚರಿತಂ ಕಃ ಸ್ಥಾನಲಾಭೇ ಗುಣಃ
ಕಾಲೋಹಿ ವ್ಯಸನಪ್ರಸಾರಿತಕರೋ ಗೃಹ್ಣಾತಿ ದೂರಾದಪಿ ॥

ಯಾವನಿಂದ ಏತಕ್ಕೋಸ್ಕರ ಯಾವಾಗ ಯಾವ ಪ್ರಕಾರ ಎಷ್ಟುಮಾತ್ರ ಯಾವ ಸ್ಥಳದಲ್ಲಿ ಯಾವ ಶುಭಕರ್ಮವಾಗಲಿ ಅಶುಭಕರ್ಮವಾಗಲಿ ಆಗಬೇಕಾಗಿರುತ್ತದೋ ಅವನಿಂದ ಅದಕ್ಕೋಸ್ಕರ ಆಗ ಆ ಪ್ರಕಾರ ಅಷ್ಟುಮಾತ್ರ ಆಸ್ಥಳದಲ್ಲಿ ಅದು ದೈವವಶದಿಂದ ಮನುಷ್ಯರಿಗೆ ಆಗುತ್ತಿರುವುದು. ದೈವಕೃತವಾದುದಕ್ಕೆ ನಾವೇನ ಮಾಡಬಲ್ಲೆವು ?—ಎಂದು ಹೇಳಲಾಗಿ, ಹಿರಣ್ಯಕನು—ನಾನು ವಿಚಾರಿಸದೆ ನುಡಿದೆನು. ನೀನು ಹೇಳಿದಪ್ರಕಾರ ಆಗದೆ ತಪ್ಪದು. ಪಕ್ಷಿಗಳು ನೂರು ಯೋಜನ

ಎತ್ತರದಿಂದ ಭೂಮಿಯ ಮೇಲೆ ಇರುವ ಮಾಂಸವನ್ನು ಕಂಡುಕೊಳ್ಳು
ವುವು; ಕಾಲವು ಸಮೀಪಿಸಿದರೆ ಹತ್ತಿರವಲ್ಲಿದ್ದರೂ ಬಲೆಯ ಹಗ್ಗ
ಗಳನ್ನು ಕಂಡು ಹಿಡಿಯಲಾರವು. ಆನೆಗಳಿಗೂ ಸರ್ಪಗಳಿಗೂ ಪಕ್ಷಿ
ಗಳಿಗೂ ಬಂಧನವನ್ನೂ ಬುದ್ಧಿವಂತರಿಗೆ ಬಡತನವನ್ನೂ ಉಂಟುಮಾ
ಡಿದ ವಿಧಿಯನ್ನು ಏನು ಹೇಳಬಹುದು? ಆಕಾಶದಲ್ಲಿ ಸಂಚರಿಸುವ ಪಕ್ಷಿ
ಗಳು ಆಪತ್ತನ್ನು ಹೊಂದುತ್ತವೆ; ಬಹಳ ಆಳವಾದ ಸಮುದ್ರದಲ್ಲಿರುವ
ಮೀನುಗಳೂ ಬೆಸ್ತರಿಂದ ಹಿಡಿಯಲ್ಪಡುತ್ತವೆ. ಇದರಲ್ಲಿ ನ್ಯಾಯವಾ
ವುದು, ಅನ್ಯಾಯವಾವುದು? ಕಾಲನು ಆಸಕ್ತಿಯಿಂದ ದೂರದಿಂದ ಕೈಗ
ಳನ್ನು ಚಾಚಿ ಪ್ರಾಣಿಗಳನ್ನು ಹಿಡಿದುಕೊಳ್ಳುತ್ತಿರುವಾಗ ಯಾವ ಸ್ಥಾನ
ದಲ್ಲಿದ್ದರೇನು!—ಎಂದು ನುಡಿದು, ಹಿರಣ್ಯಕನು ಚಿತ್ರಗ್ರೀವನ ಬಂಧನ
ಗಳನ್ನು ಕಚ್ಚಿ ಬಿಡಿಸಬೇಕೆಂದು ಹತ್ತಿರಕ್ಕೆ ಬರುವುದನ್ನು ಚಿತ್ರಗ್ರೀ
ವನು ನೋಡಿ—ಎಲೈ ಸ್ನೇಹಿತನೇ, ಮುಂಚಿತವಾಗಿ ನನ್ನ ಪರಿವಾರದ
ಬಂಧಗಳನ್ನು ಕಚ್ಚಿ ಬಿಡಿಸಿ, ಆ ಮೇಲೆ ನನ್ನನ್ನು ಬಿಡಿಸು. ಇವರನ್ನು
ನಾನು ಮಕ್ಕಳಂತೆ ಸಾಕಿದೆನು. ಪರಿವಾರದ ಕ್ಷೇಮವನ್ನು ವಿಚಾರಿಸದ
ಅರಸನಿಗೆ ರಾಜ್ಯವು ಹೇಗೆ ನಿಲ್ಲುವುದು?—ಎಂದು ನುಡಿದನು. ಅದಕ್ಕೆ
ಹಿರಣ್ಯಕನು ಬಹಳ ಸಂತೋಷಿಸಿ—ಎಲೈ ಸ್ನೇಹಿತನೇ, ನಿನ್ನ ಗುಣ
ಗಳೂ ನಡವಳಿಕೆಯೂ ನಿನಗೇಸರಿ. ನಿನ್ನನ್ನು ಹೊಗಳುವುದಕ್ಕೆ ಯಾ
ರಿಂದಾದೀತು? ನಿನ್ನಂಥವರು ಬಹಳ ಅಪೂರ್ವ. ಈ ಲೋಕವ
ನ್ನೆಲ್ಲಾ ಆಳುವಂಥ ಶಕ್ತಿ ನಿನಗುಂಟು—ಎಂದು ಚಿತ್ರಗ್ರೀವನನ್ನು
ಹೊಗಳಿ ಮೊದಲಲ್ಲಿ ಪರಿಜನರ ಬಂಧಗಳನ್ನು ಬಿಡಿಸಿ, ಆ ಮೇಲೆ ಅರಸನ
ಬಂಧನವನ್ನು ಬಿಡಿಸಿ, ಅವರಿಗೆಲ್ಲರಿಗೂ ತಕ್ಕಂತೆ ಔತನವಮಾಡಿ, ಚಿತ್ರ
ಗ್ರೀವನನ್ನು ತಬ್ಬಿಕೊಂಡು ಕಳುಹಿಸಿ ತಾನು ತನ್ನ ಸ್ಥಾನಕ್ಕೆ ಹೋದನು.

On friendship—The conversation between a Crow and a Rat.

ಇವನ್ನೆಲ್ಲಾ ಲಘುಪತನಕನೆಂಬ ಕಾಗೆ ನೋಡಿ ಆಶ್ಚರ್ಯ ಪಟ್ಟು
ಹತ್ತಿರಕ್ಕೆ ಬಂದು—ಎಲೈ ಹಿರಣ್ಯಕನೇ, ನಿನ್ನ ಸ್ನೇಹಿತನಾದ ಚಿತ್ರ

ಗ್ರೀವನ ಬಂಧಗಳನ್ನು ಬಿಡಿಸಿದುದನ್ನು ಕಂಡು ನಿನ್ನ ಸ್ನೇಹ ಮಾಡಬೇಕೆಂದು ಬಂದೆನು. ನಾನು ಬೂರುಗದ ಮರದ ಮೇಲೆ ಇರುವಂಥವನು. ನನ್ನ ಹೆಸರು ಲಘುಪತನಕನು. ಕಾಗೆಗಳನ್ನೆಲ್ಲಾ ನನ್ನ ಪ್ರಜೆಗಳಾಗಿ ಮಾಡಿಕೊಂಡು ನಾನು ಅರಸನಾಗಿ ಇರುವೆನು.—ಎನಲು, ಹಿರಣ್ಯಕನು ಕೇಳಿ—ಎಲೈ ಹುಚ್ಚನೇ, ನಿನಗೂ ನನಗೂ ಹೇಗೆ ಸ್ನೇಹವಾದೀತು?

ಯದ್ಯೇನ ಯುಜ್ಯತೇ ಲೋಕೇ ಬುಧಸ್ತತ್ತೇನ ಯೋಜಯೇತ್ ।
ಅಹಮನ್ನಂ ಭವಾನ್ ಭೋಕ್ತಾ ಕಥಂ ಪ್ರೀತಿರ್ಭವಿಷ್ಯತಿ ॥

ಯಾರಿಗೆ ಎಂಥವರ ಸಂಗಡ ಸ್ನೇಹವೊಗ್ಗೀತೋ ಅವರು ಅಂಥವರ ಸಂಗಡ ಸ್ನೇಹಿಸಬೇಕು. ನನ್ನ ಶರೀರವು ನಿನಗೆ ಅನ್ನವು, ನೀನು ನನ್ನನ್ನು ಭುಜಿಸುವನು; ಆದುದರಿಂದ ನಮ್ಮಿಬ್ಬರಿಗೂ ಸ್ನೇಹವು ಸರಿಬೀಳದು—ಎಂದು ಹೇಳಿದನು. ಅದನ್ನು ಕೇಳಿ ಲಘುಪತನಕನು—ಎಲೈ ಸ್ನೇಹಿತನೇ, ನನ್ನನ್ನು ಅಂಥ ಪಾಪಾತ್ಮನಾಗಿ ಎಣಿಸಬೇಡ. ನಿನ್ನನ್ನು ತಿಂದ ಮಾತ್ರದಿಂದ ನನ್ನ ಹಸಿವು ತೀರೀತೇ? ನಾನು ಅಂಥ ಕೆಲಸಕ್ಕೆ ಬರುವವನಲ್ಲ. ಚಿತ್ರಗ್ರೀವನ ಸಂಗಡ ಹೇಗೆ ಸ್ನೇಹ ಮಾಡಿದೆಯೋ ಹಾಗೆ ನನ್ನೊಡನೆ ಸ್ನೇಹಕ್ಕೆ ಸಮ್ಮತಿಸು. ನನ್ನ ಮೇಲಿನ ಅನುಮಾನವನ್ನು ಬಿಟ್ಟು ನನಗೆ ಕೈಕೊಡು. ತಿರ್ಯಗ್ಜಂತುಗಳಿಗೆ ನಿಶ್ಚಯವಾದ ನಂಬುಗೆಯನ್ನು ನಾನೀಗ ನೋಡಿದೆನು. ನೀನು ಅನೇಕ ಸುಗುಣಗಳನ್ನುಳ್ಳವನು. ನಿನ್ನೊಡನೆ ಸ್ನೇಹವನ್ನು ಅಗತ್ಯವಾಗಿ ಮಾಡಬೇಕು. ದುಷ್ಟನಾದವನು ಅಸೂಯೆಯಿಂದ ಸಜ್ಜನನನ್ನು ಬೈದರೂ ಅವನು ಗರ್ವವಿಲ್ಲದವನಾದುದರಿಂದ ಆ ಬೈಗುಳಿಂದ ಒಂದು ವಿಕಾರವನ್ನೂ ಹೊಂದನು. ತೃಣಾಗ್ನಿಯನ್ನು ಹಾಕಿದ ಮಾತ್ರದಿಂದಲೇ ಸಮುದ್ರದ ನೀರು ಬೆಚ್ಚಗೆ ಆದಿತೋ?—ಎಂದು ಬಹುಪ್ರಕಾರವಾಗಿ ನುಡಿದನು. ಹಿರಣ್ಯಕನು—ನೀನು ಚಪಲಚಿತ್ತನು. ಇತರರನ್ನು ಕಾಪಾಡುವ ಶಕ್ತಿ ನಿನಗೆ ಹೇಗೆ ಉಂಟಾದೀತು? ಚಪಲನಾದವನು ಸಕಲಕಾರ್ಯಗಳನ್ನೂ ಕೆಡಿಸುವನು. ಆದುದರಿಂದ ನಿನಗೂ ನನಗೂ ಗೆಳತನವಾಗಲಾರದು—ಎಂದು ಹೇಳಿದನು. ಅದಕ್ಕೆ ಲಘುಪತನ

ಕನು—ನಾನಂಥವನೆಂದು ವಿರಸವ ಮಾತುಗಳನ್ನು ಏಕೆ ಆಡುತ್ತೀಯೆ? ನಾನು ನಿನ್ನನ್ನು ಭಕ್ಷಿಸುವನೆಂಬ ಶಂಕೆಯನ್ನು ಬಿಟ್ಟು ಅವಶ್ಯವಾಗಿ ನನ್ನಲ್ಲಿ ಮಿತ್ರಭಾವವನ್ನು ವಹಿಸು. ಒಂದಾನೊಂದು ವೇಳೆಯಾದರೂ ನನ್ನಲ್ಲಿ ಕೆಟ್ಟ ಗುಣಗಳು ಉಂಟಾದಾವೆಂದು ನೆನಸಬೇಡ—ಎನಲು, ಹಿರಣ್ಯಕನು—ನೀನು ಶತ್ರುಪಕ್ಷದಲ್ಲಿ ಸೇರಿದವನು. ನಿನಗೂ ನನಗೂ ಸ್ನೇಹವುಂಟಾಗಲಾರದು—ಎಂದು ಮರಳಿ ಇಂತೆಂದನು.

ಬುದ್ಧಿವಂತನಾದವನು ತನ್ನ ಶತ್ರುವನ್ನು ಹತ್ತಿರಕ್ಕೆ ಸೇರಲೀಯನು; ಸೇರಲಿತ್ತರೆ ಕಾದ ನೀರಿನಿಂದ ಬೆಂಕಿ ಆರಿದ ಹಾಗೆ ತಾನು ಕೆಟ್ಟು ಹೋಗುವನು. ಶಕ್ಯವಾದ ಕಾರ್ಯವನ್ನು ಮಾಡಬಹುದೇ ಹೊರತು ಅಶಕ್ಯವಾದ ಕಾರ್ಯವನ್ನು ಮಾಡಲಿಕ್ಕಾದೀತೆ? ಸಮುದ್ರದ ಮೇಲೆ ಬಂಡಿಗಳನ್ನೂ ನೆಲದಮೇಲೆ ಹಡಗುಗಳನ್ನೂ ನಾಗಿಸಬಹುದೇ? ಬುದ್ಧಿವಂತರು ದುರ್ಜನನೊಡನೆ ಸ್ನೇಹಿಸಬೇಕೆಂದು ಅಪೇಕ್ಷಿಸರು. ಇವನು ನನಗೆ ಬಹಳ ವಿಹಿತನು, ನನ್ನಿಂದ ತುಂಬ ಮೇಲು ಹೊಂದಿದನು, ನನಗೆ ದ್ರೋಹಮಾಡಲೊಲ್ಲನು—ಎಂದು ವಂಚಕನನ್ನು ನಂಬಿದವನು ಕೆಟ್ಟುಹೋಗುವನು. ಸಜ್ಜನನೆಂಬ ಮಾತು ಪೂರ್ವಕಾಲದಲ್ಲಿದ್ದಿತು. ಈಗ ಲೋಕವೆಲ್ಲಾ ಧನಮೂಲಕವಾದ ಸ್ನೇಹವುಳ್ಳುದಾಗಿದೆ. ದುರ್ಜನನು ಇಷ್ಟನಾದರೂ ಉಪಕಾರವನ್ನು ಹೊಂದಿದವನಾದರೂ, ಅವನನ್ನು ಮಡಿಲಿನಲ್ಲಿ ನಿದ್ರಿಸುತ್ತಿರುವ ಹಾವಿನ ಹಾಗೆ ಒಂದಾನೊಂದು ವೇಳೆಯಾದರೂ ನಂಬಕೂಡದು. ಬಹಳ ಧನವನ್ನು ಕೊಟ್ಟರೂ ಶತ್ರುವಿನ ಮೇಲೂ, ತನ್ನ ಮೇಲೆ ಮನಸ್ಸಿಲ್ಲದ ಹೆಂಡತಿಯ ಮೇಲೂ ನಂಬುಗೆ ಇಡಬಾರದು; ಅಂಥವರ ಮೇಲೆ ನಂಬುಗೆಯಿಟ್ಟವನಿಗೆ ಅದು ಅವಸಾನಕಾಲವೆಂದು ಎಣಿಸಬೇಕು. ಒಂದು ಸಲ ದುಷ್ಟನಾಗಿ ಕಾಣಿಸಿದ ಸ್ನೇಹಿತನೊಡನೆ ಯಾವನು ತಿರುಗಿ ಸ್ನೇಹಮಾಡುವನೋ ಅವನು, ಬಸಿರಾದ ನಳ್ಳಿಯಹಾಗೆ ನಾಶವನ್ನು ಹೊಂದುವನು. ತಾನು ಇವನಿಗೆ ಅಪಕಾರಮಾಡುವವನಲ್ಲವಲ್ಲಾ ಎಂದು ದುಷ್ಟನನ್ನು ನಂಬಿ ಇರಕೂಡದು; ಬುದ್ಧಿವಂತರಾದವರಿಗೆ ಸಹ ಪ್ರಮಾದವು

ಸಂಭವಿಸೀತು. ಆದಕಾರಣ ದುಷ್ಟರಿಂದ ಭಯವುಂಟು—ಎಂದು ನುಡಿಯಿತು.

ಅದನ್ನು ಕೇಳಿ ಕಾಗಿಯು—ನೀನು ನುಡಿದ ನೀತಿ ವಾಕ್ಯಗಳನ್ನೆಲ್ಲಾ ತಿಳಿದುಕೊಂಡೆನು. ಸರ್ವಪ್ರಯತ್ನದಿಂದಲೂ ನಾನು ನಿನ್ನೊಡನೆ ಸ್ನೇಹಿಸಬೇಕು. ನನ್ನನ್ನು ಇಷ್ಟನಾಗಿ ಕೈಕೊಳ್ಳು; ಇಲ್ಲವೇ ನಾನು ಆಹಾರವನ್ನು ತಿನ್ನದೆ ದೇಹವನ್ನು ಬಿಡುವೆನು.

ದ್ರವತ್ವಾತ್ಸರ್ವಲೋಹಾನಾಂ ನಿಮಿತ್ತಾನ್ಮೃಗ ಪಕ್ಷಿಣಾಂ ।
ಭಯಾಲ್ಲೋಭಾಚ್ಚ ಮೂರ್ಖಾಣಾಂ ಸಂಗತಂ ದರ್ಶನಾತ್ಸತಾಂ ॥

ಕರಗಿದರೆ ಲೋಹವೆಲ್ಲಾ ಒಂದಾಗಿ ಕೂಡುವುವು. ನಿಮಿತ್ತದಿಂದ ಮೃಗಗಳಾದರೂ ಪಕ್ಷಿಗಳಾದರೂ ಸೇರಿಕೊಳ್ಳುವುವು. ಭಯದಿಂದಾದರೂ ಲೋಭದಿಂದಾದರೂ ದುಷ್ಟನು ಸ್ನೇಹಮಾಡುವನು; ದರ್ಶನಮಾತ್ರದಿಂದಲೇ ಸತ್ಪುರುಷನು ಸ್ನೇಹಮಾಡುವನು. ದುರ್ಜನನ ಸ್ನೇಹವು ಮಣ್ಣು ಮಡಿಕೆಯ ಹಾಗೆ ಸುಲಭವಾಗಿ ಒಡೆಯಲಾಗತಕ್ಕದಾಗಿಯೂ, ಮರಳಿ ಬೆಸೆಯಕೂಡದುದಾಗಿಯೂ ಇರುತ್ತದೆ; ಸುಜನನ ಸ್ನೇಹವು ಚಿನ್ನದ ಬಿಂದಿಗೆಯ ಹಾಗೆ ಒಡೆಯಲಾಗದುದಾಗಿಯೂ, ತಿರುಗಿ ಬೆಸೆಯಲಾಗುವುದಾಗಿಯೂ ಇರುತ್ತದೆ—ಎಂದು ಹೇಳಿತು. ಅದಕ್ಕೆ ಹಿರಣ್ಯಕನು—ನಾನು ನಿನಗೆ ಎಷ್ಟು ಹೇಳಿದರೂ ಬಿಡದೆ ನಮಗೆ ಅಗತ್ಯವಾಗಿ ಸ್ನೇಹವಾಗಬೇಕೆಂದು ಹೇಳುತ್ತೀಯೆ, ನನಗೆ ಸಂತೋಷವಾಯಿತು. ನಿನ್ನ ಮಾತಿಗೆ ನಾನು ಸಮ್ಮತಿಸಿದೆನು. ತನಗೆ ಒಂದು ಉಪಕಾರ ಮಾಡಿದುದರಿಂದ ಮಿತ್ರನೆಂದೂ, ಅಪಕಾರ ಮಾಡಿದುದರಿಂದ ಶತ್ರುವೆಂದೂ ಎಣಿಸಕೂಡದು. ಉಪಕಾರಾಪಕಾರಗಳು ಮಿತ್ರಶತ್ರುಗಳಿಗೆ ಲಕ್ಷಣಗಳಲ್ಲವು; ದೋಷವಿಲ್ಲದೆ ಇರುವುದು ಮಿತ್ರ ಲಕ್ಷಣ, ದೋಷವುಂಟಾಗಿರುವುದು ಶತ್ರುಲಕ್ಷಣ—ಎಂದು ನುಡಿದನು. ಆ ಮೇಲೆ ಇಲಿಯೂ ಕಾಗೆಯೂ ಪರಸ್ಪರಸ್ನೇಹದಿಂದ ಒಂದಾದುವು. ತರುವಾಯ ಹಿರಣ್ಯಕನು ಕಾಗೆಯನ್ನು ತೃಪ್ತಿಪಡಿಸಿ ಕಳುಹಿಸಿಕೊಟ್ಟು ತನ್ನ ಮನೆಗೆ ಹೋದನು. ಕಾಗೆಯೂ ಸ್ವಸ್ಥಾನಕ್ಕೆ ತಲಪಿತು. ಅನಂತರ

ಲಘುಪತನಕನು ಆಗಾಗ್ಗೆ ಮಹಾರಣ್ಯವಲ್ಲಿ ಸಿಂಹ ಶಾರ್ದೂಲಾದಿಗಳಿಂದ ಕೊಲ್ಲಲ್ಪಟ್ಟ ಮೃಗಗಳ ಮಾಂಸವನ್ನು ತಂದು ಹಿರಣ್ಯಕನಿಗೆ ಕೊಟ್ಟು ತಾನೂ ತಿನ್ನುತ್ತಿದ್ದಿತು. ಈ ರೀತಿಯಲ್ಲಿ ನಿರಂತರಸ್ನೇಹದಿಂದ ಸ್ವಲ್ಪ ಕಾಲ ಕಳೆಯಿತು.

ಬಳಿಕ ಒಂದು ದಿನ ಲಘುಪತನಕನು ಹಿರಣ್ಯಕನನ್ನು ನೋಡಿ— ಎಲೈ ಸ್ನೇಹಿತನೇ, ಈಗ ಇಲ್ಲಿ ಆಹಾರವನ್ನು ಸಂಪಾದಿಸುವುದು ಬಹಳ ಕಷ್ಟವಾಗಿದೆ. ಆದುದರಿಂದ ಈ ಕಾಡನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗಬೇಕೆಂದಿದ್ದೇನೆ. ನನಗೆ ಅಪ್ಪಣೆ ಕೊಡು. ಇಲ್ಲಿಗೆ ಉತ್ತರವಾಗಿ ಹತ್ತುಗಾವುದದ ದೂರದಲ್ಲಿ ರಾಜಹಂಸಗಳು ಮೊದಲಾದ ಪಕ್ಷಿಗಳಿಂದ ಪ್ರಕಾಶಿಸುತ್ತಿರುವ ಒಂದು ಕೊಳವುಂಟು. ಅಲ್ಲಿ ನನ್ನ ಸ್ನೇಹಿತನಾದ ಮಿತ್ರಮಂದರನೆಂಬ ಕೂರ್ಮರಾಜನಿದ್ದಾನೆ. ಆತನು ಪ್ರೀತಿಯಿಂದ ನನಗೆ ಮೀನು ಮುಂತಾದ ಆಹಾರವನ್ನು ಕೊಟ್ಟು ನಾನಾ ವಿಧವಾದ ಉಪಚಾರಗಳಿಂದ ನನ್ನನ್ನು ಉಪಚರಿಸುವನು—ಎಂದು ಹೇಳಿದನು. ಅದಕ್ಕೆ ಹಿರಣ್ಯಕನು ಎಲೈ ಮಿತ್ರನಾದ ಲಘುಪತನ ಕನೇ, ನಾನು ನಿನ್ನ ಬಿಟ್ಟು ಒಂದು ನಿಮಿಷವಾದರೂ ನಿಲ್ಲಲಾರೆನು. ನಿನ್ನ ಹಿಂದೆಯೇ ಬರುತ್ತೇನೆ, ನನ್ನನ್ನೂ ಕರೆದುಕೊಂಡು ಹೋಗು. ಸಂಪ್ರಾಪ್ತವಾದ ದುಃಖವು ದೇಶಾಂತರಗಮನದಿಂದಲ್ಲದೆ ಶಾಂತಿಯಾಗ ದು—ಎನಲು, ಲಘುಪತನಕನು ಬೆದರಿಬಿದ್ದು—ನನ್ನೊಡನೆ ಈವರೆಗೆ ಎಂದಿಗೂ ನೀನು ಇಂಥ ಮಾತನ್ನು ಹೇಳಲಿಲ್ಲ. ದುಃಖಪ್ರಾಪ್ತಿಗೆ ಕಾರ ಣವೇನು?—ಎಂದು ಕೇಳಿದನು. ಅದನ್ನೆಲ್ಲಾ ಅಲ್ಲಿ ತಿಳಿಸುತ್ತೇನೆ, ನನ್ನನ್ನು ಕರೆದುಕೊಂಡು ಹೋಗು—ಎಂದು ಹಿರಣ್ಯಕನು ನುಡಿ ಯಲು,—ಹಾಗೆಯೇ ಆಗಲಿ—ಎಂದು ಕಾಗೆ ಇಲಿಯನ್ನು ತನ್ನ ಮೂಗಿ ನಲ್ಲಿ ಕಚ್ಚಿಕೊಂಡು ಆಕಾಶಮಾರ್ಗದಲ್ಲಿ ಹಾರಿ ತಾನು ಮುಂಚೆ ಹೋಗ ಬೇಕೆಂದಿದ್ದ ಕೊಳದ ಹತ್ತಿರ ಬಿಟ್ಟು ನಿಂತಿತು. ಆಗ ಮಿತ್ರಮಂದರನು ಕೊಳದಿಂದ ಹೊರಗೆ ಬಂದು—ಎಂದೂ ಬಾರದ ನಂಟರು ಇಂದು ಇಲ್ಲಿಗೆ ಬಂದುದರಿಂದ ನಾನು ಕೃತಾರ್ಥನಾದೆನು—ಎಂದು ಸಂತೋ

ಷಿಸಿ, ತಕ್ಕ ಸತ್ಕಾರವನ್ನು ಶೀಘ್ರವಾಗಿ ಮಾಡಿ ಸ್ನೇಹಿತನನ್ನು ನೋಡಿ—ಎಲೈ ಮಿತ್ರನೇ, ಈ ಇಲಿ ಎಲ್ಲಿಯದು? ಇದನ್ನು ಇಲ್ಲಿಗೆ ಏಕೆ ತಂದೆ?---ಎಂದು ಕೇಳಿದನು.

ಅದಕ್ಕೆ ಕಾಗೆಯು ಕೂರ್ಮನನ್ನು ನೋಡಿ—ಮಿತ್ರನೇ, ಈತನು ಹಿರಣ್ಯಕನೆಂಬ ಮೂಷಿಕರಾಜನು, ನನ್ನ ಸ್ನೇಹಿತನು. ದೈವವಶದಿಂದ ಈತನಿಗೆ ಒಂದು ವ್ಯಸನವು ಸಂಪ್ರಾಪ್ತವಾಯಿತು. ಆದುದರಿಂದ ನಿನ್ನನ್ನು ನೋಡ ಬಂದನು. ಚಾತುರ್ಯವುಳ್ಳ ನಿನ್ನ ಮಾತುಗಳಿಂದ ಈತನ ದುಃಖವನ್ನು ಶಮನಮಾಡು. ಸಾವಿರ ಮುಖಗಳುಳ್ಳ ಶೇಷನೂ ದೇವಗುರುವಾದ ಬೃಹಸ್ಪತಿಯೂ ಈತನ ಸುಗುಣಗಳನ್ನು ಎಣಿಸ ಲಾರರು.

ಆಮರಣಾಂತಾಃ ಪ್ರಣಯಾಃ ಕೋಪಾಸ್ತತ್ಕ್ಷಣಭಂಗುರಾಃ ।
ಪರಿತ್ಯಾಗಾಶ್ಚ ನಿಸ್ಸಂಗಾ ಭವಂತಿ ಹಿ ಮಹಾತ್ಮನಾಂ ॥

ಸ್ನೇಹವನ್ನು ಬಹುಕಾಲ ಬೆಳಯಿಸುವುದೂ ಕೋಪವನ್ನು ಕ್ಷಣ ದಲ್ಲಿ ಬಿಡುವುದೂ ನಿಸ್ಸಂಗನಂತೆ ದಾನಮಾಡುವುದೂ ಮಹಾತ್ಮರ ಗುಣ ಗಳು—ಎಂದು, ಮತ್ತೂ ಚಿತ್ರಗ್ರೀವನ ವೃತ್ತಾಂತ ಮೊದಲುಗೊಂಡು ಹಿರಣ್ಯಕನ ಗುಣಗಳನ್ನೆಲ್ಲಾ ತಿಳಿಸಿ, ಆ ಮೇಲೆ ತನಗೂ ಆತನಿಗೂ ನಡೆದ ಸ್ನೇಹವನ್ನು ಸವಿಸ್ತಾರವಾಗಿ ಹೇಳಿ,—ಈತನನ್ನು ನನಗಿಂತ ಇಷ್ಟನಾದ ಸಖನನ್ನಾಗಿ ಕೈಕೊಳ್ಳು—ಎಂದು ಅವನನ್ನು ಕೂರ್ಮ ರಾಜನಿಗೆ ಒಪ್ಪಿಸಿತು. ಆಗ ಕೂರ್ಮರಾಜನು ಬಹಳ ಆಶ್ಚರ್ಯಪಟ್ಟು ಹಿರಣ್ಯಕನನ್ನು ನೋಡಿ,—ಎಲೈ ಮಿತ್ರನೇ ನೀನು ಏನೆಂದು ವಿಚಾರಿಸದೆ ನಿರ್ಜನ ವಾದ ಈ ವನಕ್ಕೆ ಬರುವುದಕ್ಕೆ ಕಾರಣವೇನು? ಸವಿಸ್ತಾರವಾಗಿ ಹೇಳು—ಎನಲು, ಹಿರಣ್ಯಕನಿಂತೆಂದನು.

The Story of Chúdâkarna and Hiranyaka.

ಒಂದು ಪಟ್ಟಣದ ಹೊರಗೆ ಒಂದು ಮಠವುಂಟು. ಅದರಲ್ಲಿ ಚೂಡಾಕರ್ಣನೆಂಬ ಸಂನ್ಯಾಸಿ ವಾಸಮಾಡುತ್ತಿದ್ದನು. ಆತನು ನಿತ್ಯವೂ ಬ್ರಾಹ್ಮಣರ ಮನೆಗಳಿಗೆ ಹೋಗಿ ಭಿಕ್ಷವೆತ್ತಿ ತಂದು ಅನ್ನವನ್ನು ಮಠ

ವಲ್ಲಿ ಊಟಮಾಡಿ ಮಿಕ್ಕ ಅನ್ನವನ್ನು ಒಂದು ಪಾತ್ರದಲ್ಲಿ ಇಟ್ಟು ನಿದ್ದೆ ಹೋಗುತ್ತಿದ್ದನು. ನಾನದನ್ನು ತಿಂದು ತೃಪ್ತಿ ಹೊಂದುತ್ತಿದ್ದೆನು. ಹೀಗಿರಲಾಗಿ ಒಂದು ದಿನ ಮತ್ತೊಬ್ಬ ಸಂನ್ಯಾಸಿ ಬಂದು ಅವನ ಸಂಗಡ ನಾನಾವಿಧವಾಗಿ ಪುಣ್ಯಕಥೆಗಳನ್ನು ಮಾತನಾಡುತ್ತಿದ್ದನು. ಆಗ ನಾನು ಅನ್ನವನ್ನು ತಿನ್ನಬೇಕೆಂದು ಪಾತ್ರದ ಹತ್ತಿರಕ್ಕೆ ಹೋಗಲು, ಚೂಡಾಕರ್ಣನು ಕೋಲಿನಿಂದ ನನ್ನನ್ನು ಬೆದರಿಸಿ ಅಟ್ಟಬಿಡುತ್ತಿದ್ದನು. ಆ ಸಮಯದಲ್ಲಿ ಆ ಇನ್ನೊಬ್ಬ ಸಂನ್ಯಾಸಿ ಚೂಡಾಕರ್ಣನನ್ನು ನೋಡಿ— ಈಗ ನಾನೇನು ಹೇಳಿದೆನು, ನೀನೇನು ಕೇಳಿದೆ? ನಿನ್ನ ಮನಸ್ಸು ಬೇರೆ ಹೋದಹಾಗೆ ಇದೆ. ಅದು ಏತರಿಂದ? -ಎಂದು ಕೇಳಿದನು. ಚೂಡಾಕರ್ಣನು—ನೀನು ಹೇಳುತ್ತಿದ್ದ ಕಥೆಗಳ ಮೇಲೆ ನನ್ನ ಮನಸ್ಸು ಸಾವಧಾನವಾಗದೆ ಇರುವುದು ನಿಜವೇ. ಅದನ್ನು ನೀನು ತಿಳಿದುಕೊಂಡೆ. ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು :—ಒಂದಿಲಿಯು ಪ್ರತಿದಿನವೂ ನನ್ನ ಅನ್ನವನ್ನು ತಿಂದು ಹೋಗುತ್ತದೆ. ಇದರಿಂದ ನಾನೀ ಮಠವನ್ನು ಬಿಡಬೇಕಾಗಿ ಬಂದಿದೆ. ನನ್ನ ಮನಸ್ಸು ಸಾವಧಾನವಾಗದೆ ಇರುವುದಕ್ಕೆ ಇದೇ ಕಾರಣ—ಎಂದು ನುಡಿದನು. ಈ ಮಠದಲ್ಲಿ ಒಂದೇ ಇಲಿಯುಂಟೋ, ಅನೇಕ ಇಲಿಗಳು ಉಂಟೋ? —ಎಂದು ಆತನು ಕೇಳಿದನು. 'ಅನೇಕ ಇಲಿಗಳಿಲ್ಲ, ಒಂದೇ ಇಲಿ ಇದೆ,' ಎಂದು ಚೂಡಾಕರ್ಣನು ಹೇಳಿದನು. ಅದಕ್ಕೆ ಆ ಸಂನ್ಯಾಸಿ—ಇದು ಒಂದೇ ಈ ಮಠದಲ್ಲಿ ಇರಲಿಕ್ಕೆ ಏನೋ ಕಾರಣವಿರಬೇಕು. ಶಾಂಡಿಲಿಮಾತಾ ಎಂಬ ಹೆಂಗಸು ಉಜ್ಜಿ ಒಣಗಿಸಿದ ಬಿಳಿಯಳ್ಳಿಗೆ ಸರಿಯಾಗಿ ಬರಿಯಳ್ಳನ್ನು ಕೇಳಲು, ಅವರ ಕಾರಣವನ್ನು ಒಬ್ಬ ಬ್ರಾಹ್ಮಣನು ತಿಳಿದುಕೊಂಡಂತೆ ಇಲಿಯು ಇಲ್ಲಿ ಒಂಟಿಯಾಗಿ ಇರಲಿಕ್ಕೆ ಕಾರಣವನ್ನು ನಾವು ತಿಳಿದುಕೊಳ್ಳಬೇಕು—ಎನಲು, ಚೂಡಾಕರ್ಣನು—ಆ ಕಥೆಯನ್ನು ಸಾಂಗವಾಗಿ ಹೇಳೆಂದನು. ಇನ್ನೊಬ್ಬ ಸಂನ್ಯಾಸಿ ಹೇಳುತ್ತಾನೆ—

ಪ್ರಾಕ್ಕು ನಾನೊಬ್ಬ ಬ್ರಾಹ್ಮಣನ ಮನೆಗೆ ಭಿಕ್ಷಕ್ಕೋಸ್ಕರ ಹೋಗಿರಲಾಗಿ, ಆ ಮನೆಯ ಬ್ರಾಹ್ಮಣನು ಹೆಂಡತಿಯನ್ನು ನೋಡಿ—

ನಾಳೆಯು ದಿನ ಅಮಾವಾಸ್ಯೆ; ಬ್ರಾಹ್ಮಣರಿಗೆ ಭೋಜನವಿಡಬೇಕು. ಯಾವಯಾವ ಪದಾರ್ಥಗಳನ್ನು ನಮ್ಮ ಮನೆಯಲ್ಲಿ ಕೂಡಹಾಕಿದ್ದೀಯೆ? ಹೇಳು ಎಂದನು. ಆಗ ಹೆಂಡತಿಯು—ಗಂಡಸರು ತಮ್ಮ ಸಾಮರ್ಥ್ಯದಿಂದ ಪದಾರ್ಥಗಳನ್ನು ಸಂಪಾದಿಸಿ ಮನೆಗೆ ತಂದರೆ ಹೆಂಗಸರು ಬೇಕಾದ ಕೆಲಸಕ್ಕೆ ಅವುಗಳನ್ನು ಬಳಸುವರು. ನೀವು ತಾರದಿದ್ದರೆ ಮನೆಯಲ್ಲಿ ಏನು ಇದ್ದೀತು?—ಎಂದಳು. ಅದಕ್ಕೆ ಆತನು ಕೋಪದಿಂದ ಹೆಂಡತಿಯನ್ನು ನೋಡಿ—ಪದಾರ್ಥಸಂಗ್ರಹವನ್ನು ಮಾಡಬೇಕಾದುದು ಸರಿಯೇ. ಆದರೆ ವಿಸ್ತರಿಸಿ ಸಂಗ್ರಹಮಾಡಬೇಕೆಂಬ ಆಶೆ ಯಾರಿಗೂ ಕೂಡದು. ಪೂರ್ವದಲ್ಲಿ ಒಂದು ನರಿ ಅತಿಸಂಚಯದಲ್ಲಿ ಇಚ್ಛೆಗೊಂಡು ಬಿಲ್ಲಿನ ದೆಸೆಯಿಂದ ಸತ್ತಿತು ಎಂಬುದನ್ನು ಕೇಳಲಿಲ್ಲವೇ?—ಎಂದನು. 'ಆ ಕಥೆಯನ್ನು ನನಗೆ ಹೇಳು' ಎಂದು ಹೆಂಡತಿ ಕೇಳಿದಳು. ಗಂಡನು ಹೇಳುತ್ತಾನೆ

A desire to accumulate too much is improper—The Fox and the Bow.

ಅಧಿಷ್ಠಾನಪುರದಲ್ಲಿ ಮಾಂಸವನ್ನು ವಿಕ್ರಯಿಸುವ ಬೆಸ್ತನೊಬ್ಬನುಂಟು. ಅವನು ಒಂದಡವಿಗೆ ಹೋಗಿ ಅಲ್ಲಿ ಒಂದು ಮೃಗವನ್ನು ಕೊಂದು ತೆಗೆದುಕೊಂಡು ಬರುತ್ತಾ, ಒಂದು ದೊಡ್ಡ ಹಂದಿಯನ್ನು ಕಂಡು ದೇವರು ನನಗೆ ಬಹಳ ಮಾಂಸವುಳ್ಳ ಮತ್ತೊಂದು ಜಂತುವನ್ನು ತೋರಿಸಿದನೆಂದು ಹಿಗ್ಗಿ, ಮುಂಚೆ ತಾನು ಕೊಂದ ಮೃಗವನ್ನು ಕೆಳಗೆ ಇರಿಸಿ ಬಿಲ್ಲಿಗೆ ಅಂಬೇರಿಸಿ ಗುರಿನೋಡಿ ಎಸೆಯಲು, ಆ ಪೆಟ್ಟು ತಗುಲಿದ ಹಂದಿ ಕೋಪದಿಂದ ಅವನ ಮೇಲೆ ಹಾದು ಅವನನ್ನು ಕೊಂದು ತಾನೂ ಬಿದ್ದು ಸತ್ತಿತು. ಒಂದು ನರಿ ಹಸಿಗೊಂಡು ಆಹಾರಕ್ಕೋಸ್ಕರ ತಿರುಗುತ್ತಾ ಅಲ್ಲಿಗೆ ಬಂದು, ಅಲ್ಲಿ ಸತ್ತು ಬಿದ್ದಿದ್ದ ಆ ಮೃಗ ವರಾಹ ಕಿರಾತಕರನ್ನು ನೋಡಿ ಬಹಳ ಸಂತೋಷಿಸಿ ತನ್ನೊಳಗೆ ತಾನಿಂತೆಂದಿತು—ನನ್ನ ಅದೃಷ್ಟದಿಂದಲೇ ಅಲ್ಲವೇ ನನಗೆ ಇಲ್ಲಿ ಆಹಾರವು ವಿಸ್ತಾರವಾಗಿ ಸಿಕ್ಕಿತು? ಬೆಸ್ತನೂ ಮೃತನಾದನು; ಮೃಗ ಸೂಕರಗಳೂ ಸತ್ತುವು.

ಬೇಟೆಗಾರನನ್ನು ಒಂದು ತಿಂಗಳು ತಿನ್ನುವೆನು ; ಹಂದಿ ಮೃಗಗಳನ್ನು ಎರಡು ತಿಂಗಳು ಭಕ್ಷಿಸುವೆನು ; ಈ ಬಿಲ್ಲಿನ ನಾರಿಯನ್ನು ಈ ದಿವಸಕ್ಕೆ ಆಹಾರ ಮಾಡಿಕೊಳ್ಳುವೆನು—ಎಂದು ಆಲೋಚಿಸಿ, ಮುಂಚೆ ಬೆಸ್ತನು ಏರಿಸಿಯಿದ್ದ ಬಿಲ್ಲಿನ ತುದಿಯನ್ನು ಎದೆಗೆ ಆನಿಸಿಕೊಂಡು ನಾರಿಯನ್ನು ಕಚ್ಚಲು, ಆ ತುದಿಯು ಪೆಟ್ಟು ತಗುಲಿ ನರಿ ಸತ್ತಿತು. ಆದುದರಿಂದ ಅತಿ ಲೋಭಿಯಾದವನು ಮುಂದೆ ಬರುವ ಕೇಡನ್ನು ತಿಳಿದುಕೊಳ್ಳಲಾರನು. ತುಂಬ ಕೂಡಹಾಕಬೇಕೆಂದೆಣಿಸದೆ ಅತ್ಯಾವಶ್ಯಕವಾದ ಪದಾರ್ಥಗಳನ್ನು ಸ್ವಲ್ಪಸ್ವಲ್ಪ ಮಿಗಿಸಿಡದೆ ಇದ್ದರೆ ಆ ಸಂಸಾರವು ಮುಂದಕ್ಕೆ ಬಂದೀತೇ ?—ಎಂದನು.

A strange Bargain.

ಅದಕ್ಕೆ ಹೆಂಡತಿಯು—ಎಳ್ಳೂ ಅಕ್ಕಿಯೂ ಸ್ವಲ್ಪ ಕೂಡಿಟ್ಟಿದ್ದೇನೆ, ನಾಳೆ ತಿಲಾನ್ನವನ್ನು ಮಾಡುತ್ತೇನೆ—ಎಂದು, ಎಳ್ಳನ್ನು ಚೆನ್ನಾಗಿ ತೊಳೆದು ಒಣಹಾಕಿದಳು. ಆಗ ಒಂದು ಕೋಳಿ ಬಂದು ಆ ಎಳ್ಳನ್ನು ಕಾಲಿನಿಂದ ಕೆದಕಿತು. ಆ ಬ್ರಾಹ್ಮಣನು ಅದನ್ನು ನೋಡಿ—ಬ್ರಾಹ್ಮಣಭೋಜನಕ್ಕೆ ಈ ಎಳ್ಳು ಸರಿ ಬೀಳದು ; ಆದುದರಿಂದ ಇದನ್ನು ಯಾರಿಗಾದರೂ ಕೊಟ್ಟು ಬೇರೆ ಎಳ್ಳು ತಾ—ಎಂದು ಹೇಳಿದನು. ಆ ಬ್ರಾಹ್ಮಣ ಸ್ತ್ರೀ ಮಾರನೆಯ ದಿನ ನಾನು ಭಿಕ್ಷಕ್ಕೆ ಹೋಗಿದ್ದ ಮನೆಗೆ ಬಂದು, 'ಉಜ್ಜಿದ ಎಳ್ಳು ತೆಗೆದುಕೊಂಡು ಉಜ್ಜದ ಎಳ್ಳು ಕೊಡುತ್ತೀರಾ ? ' ಎಂದು ಮನೆಯವರನ್ನು ಕೇಳಿದಳು. ಆ ಮನೆಯ ಹೆಂಗಸು ಈ ಮಾತು ಕೇಳಿ ಸಂತೋಷಿಸಿ ಒಳಗಿನಿಂದ ಎಳ್ಳು ತೆಗೆದುಕೊಂಡು ಬಂದು ಅದಕ್ಕೆ ಬದಲಾಗಿ ಉಜ್ಜಿದ ಎಳ್ಳು ತೆಗೆದುಕೊಳ್ಳುತ್ತಿರುವ ಸಮಯದಲ್ಲಿ, ಆ ಮನೆಯ ಬ್ರಾಹ್ಮಣನು ಬಂದು—ಏನು ಬೇರವನ್ನು ಮಾಡುತ್ತೀಯೆ ?—ಎಂದು ಹೆಂಡತಿಯನ್ನು ಕೇಳಿದನು. 'ಬಗಸೆ ಎಳ್ಳುಕೊಟ್ಟು ಅಷ್ಟು ಉಜ್ಜಿದ ಎಳ್ಳು ಮಾರಿಸಿಕೊಳ್ಳುತ್ತೇನೆ' ಎಂದು ಅವಳು ನುಡಿದಳು. 'ಎಲೇ ಹುಚ್ಚಳೇ, ಸೇರೆ ಎಳ್ಳು ತೆಗೆದುಕೊಂಡು ಅಷ್ಟು ಉಜ್ಜಿದ ಎಳ್ಳು ಕೊಡುವವರು ಎಲ್ಲಾದರೂ ಉಂಟೋ ?

ಈಕೆ ಹೀಗೆ ಕೊಡುವುದಕ್ಕೆ ಏನೋ ಕಾರಣವಿರಬೇಕು' ಎಂದು ಗಂಡನು ಹೇಳಿದನು. ಅದಕ್ಕೆ ಮುಂಚೆಯೇ ನಾನು ಅವರ ಮನೆಗೆ ಭಿಕ್ಷಕ್ಕೆ ಹೋಗಿದ್ದೆನಾದುದರಿಂದ ಈ ಮಾತು ನನ್ನ ಕಿವಿಗೆ ಬಿದ್ದಿತು. ಈ ಇಲಿಯು ಕಾರಣವಿಲ್ಲದೆ ಇಲ್ಲಿ ಇರಲಾರದು—ಎಂದು ಸಂನ್ಯಾಸಿ ಹೇಳಿದನು.

ಅದನ್ನು ಕೇಳಿ ಚೂಡಾಕರ್ಣನು ಒಂದು ಗುದ್ದಲಿಯನ್ನು ತೆಗೆದು ಕೊಂಡು ನಾನು ವಾಸವಾಗಿದ್ದ ಬಿಲವನ್ನು ಅಗೆದು, ಬಹುಕಾಲದಿಂದ ನಾನು ಕೂಡಹಾಕಿದ್ದ ಧನವನ್ನೆಲ್ಲಾ ತೆಗೆದುಕೊಂಡನು. ಬಳಿಕ ನಾನು ಧನವಿಲ್ಲದವನಾದುದರಿಂದ ಬಲ ಕುಗ್ಗಿ ಉತ್ಸಾಹ ತಪ್ಪಿ ಆಹಾರ ಸಹ ಸಂಪಾದಿಸಲಾರದೆ ಹಸಿವಿನಿಂದ ಬಹಳ ಸಂಕಟಪಡುತ್ತಾ ಮರಳಿ ಭಿಕ್ಷಾ ಪಾತ್ರವನ್ನು ಅಲ್ಲಾಡಿಸಲಾಗಿ, ಚೂಡಾಕರ್ಣನು ನನ್ನನ್ನು ನೋಡಿ— ಧನವನ್ನೆಲ್ಲಾ ತೆಗೆದುಕೊಂಡರೂ ನಾಚಿಕೆಯಿಲ್ಲದೆ ತಿರುಗಿ ನನ್ನ ಭಿಕ್ಷಾ ಪಾತ್ರವನ್ನು ಹೇಗೆ ಕದಲಿಸುತ್ತದೆ—ಎಂದು ನುಡಿದನು. ಆ ಮೇಲೆ ನಾನು ಪೆಲ್ಲಮೆಲ್ಲಗೆ ಆಚೆ ಹೋದೆನು. ಆಗ ಆತನು ಇಂತೆಂದನು.

The power of wealth.

ಅರ್ಥೇನ ಹೀನಸ್ಯ ಪುರುಷಸ್ಯಾಲ್ಪಮೇಧಸಃ ।
ಕ್ರಿಯಾಸ್ಸರ್ವಾ ವಿನಶ್ಯಂತಿ ಗ್ರೀಷ್ಮೇ ಕುಸರಿತೋ ಯಥಾ ॥
ಯಸ್ಯಾರ್ಥಾಸ್ತಸ್ಯ ಮಿತ್ರಾಣಿ ಯಸ್ಯಾರ್ಥಾಸ್ತಸ್ಯ ಬಾಂಧವಾಃ ।
ಯಸ್ಯಾರ್ಥಾಸ್ಸಪುಮಾ್ ಲೋಕೇ ಯಸ್ಯಾರ್ಥಾಸ್ಸತು ಪಂಡಿತಃ ॥

ಧನವುಳ್ಳವನೇ ಬಲವಂತನು, ಧನವುಳ್ಳವನೇ ಪಂಡಿತನು. ಧನವಿಲ್ಲದುದರಿಂದ ಈ ಇಲಿ ತನ್ನ ಜಾತಿಯೊಂದಿಗೆ ಸಾಮ್ಯವನ್ನು ಹೊಂದಿತು ನೋಡು. ದರಿದ್ರನೂ ಬುದ್ಧಿಹೀನನೂ ಆದವನ ಕಾರ್ಯಗಳು ಬೇಸಗೆಯಲ್ಲಿ ಕಾಲುಹೊಳೆಗಳು ಬತ್ತಿಹೋಗುವ ಹಾಗೆ ಕೊನೆಸಾಗುವುದಿಲ್ಲವು. ಧನವುಳ್ಳವರಿಗೆ ಸ್ನೇಹಿತರು ಸಿಕ್ಕುವರು, ಧನವುಳ್ಳವನ ಹತ್ತಿರಕ್ಕೆ ನಂಟರು ಬರುವರು, ಧನವುಳ್ಳವನೇ ಗಂಡಸು, ಧನವುಳ್ಳವನೇ ತಿಳಿದವನು. ನಂಟರಿಲ್ಲದ ದೇಶವೂ, ಗಂಡುಮಕ್ಕಳಿಲ್ಲದ ಮನೆಯೂ, ಮೂರ್ಖನ

ಮನಸ್ಸೂ ಶೂನ್ಯಗಳು. ಹೀನದಶೆಯಿಂದ ವರ್ತಿಸುವ ದರಿದ್ರನು ಅದಕ್ಕಿಂತಲೂ ಶೂನ್ಯನು. ವಿಕಲವಾಗದ ಇಂದ್ರಿಯಗಳೂ, ಅಪ್ರತಿಹತವಾದ ಬುದ್ಧಿಯೂ, ಚತುರವಾದ ವಾಕ್ಯಪದ್ಧತಿಯೂ, ಪ್ರಸಿದ್ಧವಾದ ಹೆಸರೂ, ಮುಂಚಿನವಾದರೂ ಮನುಷ್ಯನು ಧನವನ್ನು ಕಳೆದುಕೊಂಡಾಗ ಕ್ಷಣದಲ್ಲಿ ಅನ್ಯನಾಗುತ್ತಾನೆ. ಇದು ಬಹಳ ಆಶ್ಚರ್ಯ—ಎಂದು ಚೂಡಾಕರ್ಣನು ಹೇಳಲು—ಇನ್ನು ಮೇಲೆ ಇಲ್ಲಿರಕೂಡದು, ಮತ್ತೊಂದು ಸ್ಥಳಕ್ಕೆ ಹೋಗಬೇಕು—ಎಂದು ನನಗೆ ತೋರಿತು.

ಮಾನಕ್ಕೆ ಹಾನಿಯಿಲ್ಲದ ತಾಪಿನಲ್ಲಿ ಇರಬೇಕು, ಮಾನಕ್ಕೆ ಹಾನಿಯಾಗುವ ಸ್ಥಳದಲ್ಲಿ ಇರಕೂಡದು. ದೇವತೆಗಳೊಡನೆ ವಿಮಾನ ಸಿಕ್ಕಿದರೂ, ಅದು ಮಾನಹಾನಿಕರವಾದರೆ ಅದನ್ನು ಬಿಟ್ಟುಬಿಡಬೇಕು. ಮುಂಚೆ ನಾಸಿದ್ದ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಬಂದರೂ ನಾನು ಒಬ್ಬರನ್ನು ಕೇಳಲಾರೆನು. ಒಬ್ಬರನ್ನು ಕೇಳುವವನು ಜೀವನ್ಮೃತನು. ಅದು ಹೇಗೆಂದರೆ, ಕೇಳಹೋಗುವಾಗ ಕಾಲು ತಡೆವುದು, ಮೈ ನಡಗುವುದು, ಬೆವರು ಸುರಿವುದು, ತುಂಬ ಭಯವುಂಟಾಗುವುದು. ಇಂಥ ದುರವಸ್ಥೆಗಳೊಂದಿಗೆ ಕೇಳುವ ಯಾಚಕನಿಗೆ ಮರಣಕಾಲದಲ್ಲಿ ಸಂಭವಿಸುವ ಚಿಹ್ನೆಗಳೆಲ್ಲಾ ಉಂಟಾಗುವುವು. ಅರ್ಥಹೀನನಾಗಿ ಇರುವುದಕ್ಕಿಂತ ಅಗ್ನಿಪ್ರವೇಶಮಾಡಿ ಪ್ರಾಣಬಿಡುವುದು ಮೇಲು. ಉಪಚಾರದ ಮಾತುಗಳಿಂದ ಲೋಭಿಯನ್ನು ಕೇಳುವುದು ಒಳ್ಳೆಯದಲ್ಲ. ಬಡತನದಿಂದ ನಾಚಿಕೆಯುಂಟಾಗುವುದು, ನಾಚಿಕೆಯಿಂದ ಸತ್ವವು ಶಿಥಿಲವಾಗುವುದು, ಸತ್ವವಿಲ್ಲದುದರಿಂದ ತಿರಸ್ಕಾರ ಬರುವುದು, ತಿರಸ್ಕಾರದಿಂದ ಬೇಸರ ಹುಟ್ಟುವುದು, ಬೇಸರದಿಂದ ದುಃಖ ಸಂಭವಿಸುವುದು, ದುಃಖದಿಂದ ಬುದ್ಧಿ ಕೆಟ್ಟುಹೋಗುವುದು, ಬುದ್ಧಿಹೀನನಾದುದರಿಂದ ಕೀರ್ತಿ ನಶಿಸುವುದು, ಅಪಕೀರ್ತಿ ಬರುತ್ತಲೇ ಎಲ್ಲರೂ ಹಾಸ್ಯಮಾಡುವರು. ಆದಕಾರಣ ನಿರರ್ಥಕನಾದವನು ಈ ವಿಪತ್ತುಗಳಿಗೆಲ್ಲಾ ಗುರಿಯಾಗುವನು. ಅವನನ್ನು ಯಾರೂ ಲಕ್ಷ್ಯಮಾಡರು—ಎಂದು ಹಿರಣ್ಯಕನು ನುಡಿದು ಮತ್ತೂ ಇಂತೆಂದನು.

ಅಸತ್ಯವಾದ ವಾಕ್ಯಗಳನ್ನು ನುಡಿವುದಕ್ಕಿಂತ ಮೌನಿಯಾಗಿರು ವುದು ಮೇಲು. ಪರಧನವನ್ನು ಅಪಹರಿಸುವುದಕ್ಕಿಂತ ಭಿಕ್ಷವೆತ್ತು ವುದು ಒಳ್ಳೆಯದು. ಊಳಿಗ ಮಾಡುವುದರಿಂದ ಮಾನವೂ, ಬೆಳದಿಂಗ ಳಿಂದ ಕತ್ತಲೆಯೂ, ವ್ಯಾಧಿಯಿಂದ ಚೆಲುವತನವೂ, ದೇವಕಥೆಗಳನ್ನು ಕೇಳುವುದರಿಂದ ಪಾಪವೂ ಹೇಗೆ ನಶಿಸುವುವೋ ಹಾಗೆಯೇ, ಒಬ್ಬ ರನ್ನು ಯಾಚಿಸುವುದರಿಂದ ಯಾಚಕನ ಗುಣಗಳೆಲ್ಲಾ ನಶಿಸುವುವು. ಅಧಮರು ಧನವನ್ನು ಕೋರುತ್ತಾರೆ; ಮಧ್ಯಮರು ಧನಮಾನಗ ಳನ್ನು ಬಯಸುತ್ತಾರೆ; ಉತ್ತಮರು ಮಾನವನ್ನೇ ಅಪೇಕ್ಷಿಸು ತ್ತಾರೆ. ಮಹಾತ್ಮನಿಗೆ ಮಾನವೇ ಧನ. ಆದಕಾರಣ ಪರಾನ್ನದಿಂದ ನಾನು ಹೇಗೆ ಮೈಯನ್ನು ಬೆಳಸಲಿ? ಇದು ಒಂದು ಮೃತ್ಯುದ್ವಾರ. ರೋಗಿಯೂ, ಬಹುಕಾಲ ಪ್ರವಾಸಮಾಡುವನೂ, ಪರಾನ್ನವನ್ನು ಭುಜಿ ಸುವನೂ, ಪರಗೃಹವಾಸವನ್ನು ಮಾಡುವವನೂ, ಬದುಕಿದ್ದರೂ ಸತ್ತವ ನಿಗೆ ಸಮಾನರು—ಎಂದು ಆಲೋಚಿಸಿ, ಸಿಟ್ಟುಗೊಂಡು ಧನಾಪೇಕ್ಷೆ ಯಿಂದ ಆ ಸಂನ್ಯಾಸಿಯನ್ನು ಕಚ್ಚಬೇಕೆಂದು ಹತ್ತಿರಕ್ಕೆ ಹೋದೆನು. ಅದನ್ನರಿತು ಆತನು ಕೋಲನ್ನು ತೆಗೆದುಕೊಂಡು ನನ್ನನ್ನು ಹೊಡೆ ದನು. ಆಗ ಮುಖಕೆಟ್ಟು ಈಚೆಗೆ ಬಂದೆನು.

ಉತ್ಸಾಹವುಳ್ಳವನಿಗೆ ಎಲ್ಲಿಗೆ ಹೋದರೂ ಸಂಪತ್ತು ಉಂಟಾಗು ವುದು. ಪಾಪಾಸು ಮೆಟ್ಟಿದವನ ಕಾಲಿಗೆ ಭೂಮಿಯೆಲ್ಲಾ ಚರ್ಮದಿಂದ ಹೊದಿಸಿದ ಹಾಗೆ ಇರುವುದಷ್ಟೆ. ಸಂತೋಷವೆಂಬ ಅಮೃತದಿಂದ ತೃಪ್ತಿಹೊಂದಿ ಶಾಂತವಾದ ಮನಸ್ಸುಳ್ಳವರಿಗೆ ಎಂಥ ಸುಖವುಂಟಾಗು ವುದೋ ಅಂಥ ಸುಖವು ಧನಲುಬ್ಧರಾಗಿ ಈಚೆ ಆಚೆ ಓಡುವವರಿಗೆ ಹೇಗೆ ಉಂಟಾಗುವುದು? ತುಂಬ ಧನಾಶೆಯುಳ್ಳವನಿಗೆ ನೂರು ಗಾವು ದವಾದರೂ ದೂರವಾಗಿ ಇರದು. ನಿತ್ಯಸಂತೋಷಿಯಾಗಿ ಇರುವವನಿಗೆ ಧನವು ಕೈಗೆ ಸಿಕ್ಕಿದರೂ ಅದರಲ್ಲಿ ಆದರಣೆ ಹುಟ್ಟದು. ಅಸಾಧ್ಯವಾದ ಅರ್ಥದ ನಿಮಿತ್ತವಾಗಿ ಪ್ರಯತ್ನ ಮಾಡಬಾರದು. ಧನವಂತನು ವಿವೇ ಕಿಯಾದರೆ, ರತ್ನದೊಂದಿಗೆ ಚಿನ್ನ ಸೇರಿದ ಹಾಗೆ ಶೋಭಿಸುವನು.

ಭೂತದಯೆಗಿಂತ ಪುಣ್ಯವಿಲ್ಲವು. ರೋಗವಿಲ್ಲದೆ ಇರುವುದಕ್ಕಿಂತ ಸೌಖ್ಯವೂ, ಕಪಟವಿಲ್ಲದ ಪ್ರೀತಿಗಿಂತ ಸ್ನೇಹವೂ, ವಿವೇಕಿಯಾಗುವುದಕ್ಕಿಂತ ಪಾಂಡಿತ್ಯವೂ ಇಲ್ಲ. ಅದುಕಾರಣ ನನಗೆ ಹುಟ್ಟಿದ ವ್ಯಸನದಿಂದ ನಿನ್ನ ಬಳಿಗೆ ಬಂದೆನು. ಈ ಲೋಕದಲ್ಲಿರುವ ಸಕಲಜಂತುಗಳೂ ಹೇಗಾದರೂ ಆಹಾರವನ್ನು ಸಂಪಾದಿಸಿಕೊಳ್ಳುವುವು; ಆದರೆ ವಿವೇಕವುಳ್ಳವನು ಆಹಾರಕ್ಕೋಸ್ಕರ ಅನುಚಿತವಾದ ಕೆಲಸವನ್ನು ಮಾಡನು. ನೀನು ಪರೋಪಕಾರವನ್ನು ಮಾಡುವುದಕ್ಕಾಗಿ ಶ್ರಮಪಡುವುದು ತಪ್ಪಲ್ಲ. ಯಾರ ಕಷ್ಟವು ಪರರಿಗೆ ಉಪಯೋಗಿಸುವುದೋ ಅವನೊಬ್ಬನೇ ಪುಣ್ಯವಂತನು—ಎಂದು ಹಿರಣ್ಯಕನು ನುಡಿದನು. ಅದನ್ನು ಕೇಳಿ ಮಿತ್ರಮಂದರನು ಇಂತೆಂದನು.

ವಿವೇಕವಿಲ್ಲದವನು ಶಾಸ್ತ್ರಗಳನ್ನು ಓದಿದರೂ ಅವುಗಳಲ್ಲಿ ಹೇಳಿರುವ ಪ್ರಕಾರ ಆಚರಿಸನು. ವಿವೇಕವುಳ್ಳವನು ಶಾಸ್ತ್ರಗಳನ್ನು ಓದಿ ಅವುಗಳಲ್ಲಿ ಹೇಳಿರುವ ಮೇರೆಗೆ ನಡೆದುಕೊಳ್ಳುವನು. ಶಾಸ್ತ್ರಗಳನ್ನು ಓದಿದವನು ಅವುಗಳಲ್ಲಿ ಹೇಳಿರುವ ಪ್ರಕಾರ ಆಚರಿಸಬೇಕು; ಇಲ್ಲದಿದ್ದರೆ ಶಾಸ್ತ್ರಗಳನ್ನು ಓದುವುದು ವ್ಯರ್ಥವು. ಶಾಸ್ತ್ರಪ್ರಕಾರ ಮಾಡಿದ ಔಷಧವನ್ನು ತೆಗೆದುಕೊಂಡರೆ ಹೊರತು ಔಷಧದ ಹೆಸರನ್ನು ಹೇಳಿದ ಮಾತ್ರದಿಂದಲೇ ರೋಗ ವಾಸಿಯಾಗುವುದೋ? ಶಾಸ್ತ್ರವನ್ನು ಚೆನ್ನಾಗಿ ಓದಿಯಿದ್ದರೂ ಅದರಲ್ಲಿ—ಇದು ಹೀಗೆ—ಎಂದು ಸಿದ್ಧಾಂತ ಮಾಡುವುದಕ್ಕೆ ಹೆದರುವವನಿಗೆ ಅದನ್ನು ಓದಿದುದರಿಂದ ಪ್ರಯೋಜನವಿಲ್ಲ. ಕುರುಡನ ಕೈಯಲ್ಲಿ ದೀಪವಿದ್ದರೆ ಅಲ್ಲಿರುವ ಪದಾರ್ಥವು ಅವನಿಗೆ ಕಾಣಿಸುವುದೇ? ದಾತನು ಒಂದುವೇಳೆ ಯಾಚಕನಾಗುವನು; ಯಾಚಕನು ಒಂದುವೇಳೆ ದಾತನಾಗುವನು. ಶೂರನು ಒಂದುವೇಳೆ ಶತ್ರುಗಳನ್ನು ಜಯಿಸುವನು, ಒಂದುವೇಳೆ ಶತ್ರುಗಳಿಂದ ಜಯಿಸಲ್ಪಡುವನು. ವಿದ್ವಾಂಸನು ಪ್ರಸಂಗದಲ್ಲಿ ಒಂದುವೇಳೆ ಗೆಲ್ಲುವನು; ಒಂದುವೇಳೆ ಸೋಲುವನು. ಹೀಗೆ ಹಾನಿವೃದ್ಧಿಗಳು ಯಾರಿಗಾದರೂ ಸರಿ ಉಂಟು. ಒಳ್ಳೆಯ ಅದೃಷ್ಟವಿರುವಾಗ ಚೆನ್ನಾಗಿ ನಡೆವುದು, ದುರ

ದೃಷ್ಟ ಬಂದಾಗ ವ್ಯತ್ಯಸ್ತವಾಗಿ ನಡೆವುದು. ಆದುದರಿಂದ ಇವುಗಳೆಲ್ಲಕ್ಕೂ ಅದೃಷ್ಟವೇ ಕಾರಣ. ಹಲ್ಲೂ ಕೂದಲೂ ಉಗುರೂ ಮನುಷ್ಯನೂ ತಮ್ಮ ತಮ್ಮ ನೆಲೆಗಳು ತಪ್ಪಿದರೆ ಕೆಲಸಕ್ಕೆ ಬಾರದೆ ಹೋಗುವರು. ಇದನ್ನು ತಿಳಿದ ಬುದ್ಧಿವಂತರು ಎಷ್ಟು ದುರ್ದಶೆ ಬಂದರೂ ತಮ್ಮ ಸ್ಥಾನವನ್ನು ಬಿಡರು—ಎಂದು ಹೇಳಲು, ಹಿರಣ್ಯಕನಿಂತೆಂದನು.

Change of Place.

ಕೋ ವೀರಸ್ಯ ಮನಸ್ವಿನಸ್ಸ್ವವಿಷಯಃ ಕೋವಾ ವಿದೇಶಸ್ತಥಾ ।
ಯಂ ದೇಶಂ ಶ್ರಯತೇ ತಮೇವ ಕುರುತೇ ಬಾಹುಪ್ರತಾಪಾರ್ಜಿತಂ ॥
ಯದ್ದಂಷ್ಟ್ರಾನಖಲಾಂಗುಲಪ್ರಹರಣಸ್ಸಿಂಹೋ ವನಂ ಗಾಹತೇ ।
ತಸ್ಮಿನ್ನೇವ ಹತ ದ್ವಿಪೇಂದ್ರರುಧಿರೈಸ್ತೃಷ್ಣಾಂ ಛಿನತ್ತ್ಯಾತ್ಮನಃ ॥
ಸ್ಥಾನಮುತ್ಸೃಜ್ಯ ಗಚ್ಛಂತಿ ಸಿಂಹಾಸ್ಸತ್ಪುರುಷಾ ಗಜಾಃ ।
ತತ್ರೈವ ನಿಧನಂ ಯಾಂತಿ ಕಾಕಾಃ ಕಾಪುರುಷಾ ಮೃಗಾಃ ॥

ಸ್ಥಳವನ್ನು ಬಿಡಕೂಡದೆಂಬುದು ಕುತ್ಸಿತರ ಮಾತು. ಸತ್ಪುರುಷರು ಸಿಂಹಗಳು ಆನೆಗಳು ಮುಂತಾದುವು ಮತ್ತೊಂದು ಸ್ಥಳಕ್ಕೆ ಹೋಗಿ ನೆಮ್ಮದಿಯಾಗಿ ಇರುವುವು. ಕಾಗೆಗಳು, ಕುತ್ಸಿತ ಪುರುಷರು, ಮೃಗಗಳು, ಈ ಮೊದಲಾದುವು ತಮ್ಮ ನೆಲೆಗಳನ್ನು ಬಿಡಲಾರದೆ ಅಲ್ಲೇ ನಾಶವನ್ನು ಪಡೆವುವು. ನಿವಾಸಭೂಮಿಯನ್ನು ಬಿಡುವುದರಿಂದ ಬಹಳ ಅಲ್ಪರಾದವರಿಗೇ ಆಪತ್ತು ಸಂಭವಿಸುವುದು; ದೊಡ್ಡವರಿಗೆ ಅಂತಹುದೇನೂ ಇಲ್ಲ. ಅದು ಹೇಗೆಂದರೆ: ಮಣಿಗಳು ತಾವಿರುವ ಸ್ಥಾನವನ್ನು ಬಿಟ್ಟು ಬಂದರೆ ಅರಸುಗಳ ತಲೆಗಳ ಮೇಲೆ ಧರಿಸಲ್ಪಡುವುವು; ಕಪ್ಪೆಗಳು ತಮ್ಮ ಸ್ಥಾನವನ್ನು ಬಿಟ್ಟು ಬಂದಾಗ ಕಾಗೆಗಳ ಬಾಯಿಗಳಲ್ಲಿ ಬೀಳುವುವು. ಧೈರ್ಯಶಾಲಿಯೂ ವಿವೇಕಿಯೂ ಆದವನಿಗೆ ಪರದೇಶವೆಂಬ ಭಯಲೇಶವೂ ಇಲ್ಲ. ಅವನು ಎಲ್ಲಿದ್ದರೂ ಅದೇ ಅವನಿಗೆ ಸ್ವದೇಶವು; ಅಲ್ಲಿ ತನ್ನ ಭುಜಬಲದಿಂದಲೂ ಬುದ್ಧಿಬಲದಿಂದಲೂ ಸಂಪಾದಿಸಲ್ಪಟ್ಟ ಸಂಪತ್ತುಗಳನ್ನು ಅನುಭವಿಸುತ್ತಲಿರುವನು. ಅದೆಂತೆಂದರೆ: ಸಿಂಹವು ಮುಂಚೆ ತಾನಿದ್ದ ವನವನ್ನು ಬಿಟ್ಟು ಮತ್ತೊಂದು

ವನದಲ್ಲಿ ಪ್ರವೇಶಿಸಿದರೂ, ಪೌರುಷದಿಂದಲೂ ಬಲದಿಂದಲೂ ವಜ್ರಗಳಿಗೆ ಸಮಾನವಾದ ಉಗುರುಗಳ ಕೊನೆಗಳಿಂದಲೂ ಮದಿಸಿದ ಆನೆಗಳ ಕುಂಭ ಸ್ಥಳಗಳನ್ನು ಸೀಳಿ ರಕ್ತವನ್ನು ಹೀರಿ ಮಾಂಸವನ್ನು ಭಕ್ಷಿಸಿ ಸುಖವಾಗಿ ಇರುವುದಲ್ಲವೇ ?

ಲೋಕದಲ್ಲಿ ಉದ್ಯೋಗವುಳ್ಳವನು ಧನವನ್ನಾಗಲಿ ಯಶಸ್ಸನ್ನಾಗಲಿ ಮರಣವನ್ನಾಗಲಿ ಹೊಂದುವನು ; ಉದ್ಯೋಗವಿಲ್ಲದವನು ಮರಣವನ್ನು ಮಾತ್ರವೇ ಹೊಂದುವನಲ್ಲದೆ ಧನವನ್ನಾಗಲಿ ಯಶಸ್ಸನ್ನಾಗಲಿ ಹೊಂದಲಾರನು. ಕಪ್ಪೆಗಳು ಮಡುವನ್ನೂ ಮೀನುಗಳು ಕೊಳಗನ್ನೂ ಹೊಂದುವ ಹಾಗೆ, ಉದ್ಯೋಗವುಳ್ಳವನು ಧನವನ್ನೂ ಸಹಾಯವನ್ನೂ ಹೊಂದುವನು. ಪಾಲುಮಾರಿಕೆ, ಜನ್ಮಭೂಮಿಯಲ್ಲಿಯ ಆಶೆ, ರೋಗಿಯಾಗುವಿಕೆ, ಭಯಶೀಲತೆ, ಅಸಂತುಷ್ಟಿ, ಈ ಐದು ಪೂಜ್ಯತೆಗೆ ವಿಘ್ನಕಾರಣಗಳು. ಇವುಗಳನ್ನು ಪರಿಹರಿಸಿದ ಪುರುಷನು ಪೂಜ್ಯನಾಗುವನು. ಪೂಜ್ಯತೆಯಿಂದ ಸಂಪತ್ತು ಉಂಟಾಗುವುದು. ಸಂಪನ್ನನಾದುದರಿಂದ ಸುಖಗಳನ್ನು ಅನುಭವಿಸುವನು. ಪ್ರಾಪ್ತವಾದ ಸುಖವನ್ನಾದರೂ ದುಃಖವನ್ನಾದರೂ ಅನುಭವಿಸಿಯೇ ತೀರಬೇಕು. ನಾವು ಕೋರದೆಯೇ ಸುಖವಾಗಲಿ ದುಃಖವಾಗಲಿ ಬರುವುದು. ಸುಖಬಂದಿತೆಂದು ಸಂತೋಷಿಸಬಾರದು ; ದುಃಖಬಂದಿತೆಂದು ವ್ಯಸನಪಡಬಾರದು.

> ಉತ್ಸಾಹಸಂಪನ್ನಮದೀರ್ಘಸೂತ್ರಂ
> ಕ್ರಿಯಾವಿಧಿಜ್ಞಂ ವ್ಯಸನೇಷ್ವಯುಕ್ತಂ ।
> ಶೂರಂ ಕೃತಜ್ಞಂ ದೃಢಸೌಹೃದಂಚ
> ಲಕ್ಷ್ಮೀಸ್ಸ್ವಯಂ ಯಾತಿ ನಿವಾಸಹೇತೋಃ ॥

ಉತ್ಸಾಹಸಹಿತನೂ ವ್ಯಸನಗಳಲ್ಲಿ ಆಸಕ್ತನೂ ಆಗಿ ತಿಳುವಳಿಕೆಯನ್ನು ಪಡೆದು ಕೆಲಸಗಳಲ್ಲಿ ಪ್ರಗಲ್ಭನಾಗಿ ಬೇಸರವಿಲ್ಲದೆ ಸ್ಥಿರಚಿತ್ತನಾಗಿ, ಚಿರಕ್ರಿಯನಲ್ಲದೆ ಸರ್ವಭೂತಸಮನೂ, ಮಿತಸತ್ಯಭಾಷಿಯೂ, ಪುಣ್ಯಕರ್ಮಗಳ ಮೇಲೆ ಬುದ್ಧಿಯುಳ್ಳವನೂ, ಆಶ್ರಿತರಕ್ಷಕನೂ, ಶೂರನೂ, ಕೃತಜ್ಞನೂ, ಆದ ಪುರುಷನನ್ನು ಲಕ್ಷ್ಮಿ ತನ್ನ

ಷ್ಟಕ್ಕೆ ತಾನೇ ಹೊಂದುವಳು. ಕೆಲಸಮಾಡದೆ ಮೃಗಳ್ಳತನವುಳ್ಳವನಾಗಿ ಸಾಹಸವಿಲ್ಲದ ಪುರುಷನನ್ನು ಲಕ್ಷ್ಮಿ ಬಲಿಯುಳು—ಎಂದು ಹೇಳಲು, ಕೂರ್ಮವಿಂತೆಂದಿತು.

ಎಲೈ ಹಿರಣ್ಯಕನೇ, ನೀನು ಅರ್ಥವಿಲ್ಲದವನಾದರೂ ಪ್ರಜ್ಞೋತ್ಸಾಹ ವುಳ್ಳವನು. ಆದುದರಿಂದ ನಿನಗೇನೂ ಕಡಿಮೆಯಿಲ್ಲ. ಬುದ್ಧಿವಂತನು ಬಂದುವೇಳೆ ಧನವಿಲ್ಲದವನಾದರೂ ಅವನಿಗೆ ಹೀನತೆ ಬಾರದು; ದೊಡ್ಡ ತನವೇ ಬರುವುದು. ಬುದ್ಧಿಯಿಲ್ಲದವನಿಗೆ ತುಂಬ ಧನ ಬಂದರೂ ಅವನು ದೊಡ್ಡ ಮನುಷ್ಯನಾಗನು. ಹೇಗೆಂದರೆ: ಸಿಂಹವು ಆಹಾರವಿಲ್ಲದೆ ಬಹಳ ಬಳಲಿದ್ದರೂ ಅದರ ಖ್ಯಾತಿ ಪೋಗಲಾರದು. ನಾಯನ್ನು ಚಿನ್ನದ ಒಡ ವೆಗಳಿಂದ ಅಲಂಕರಿಸಿ ಸಿಂಹಾಸನದ ಮೇಲೆ ಕುಳ್ಳಿರಿಸಿದರೂ ಅದಕ್ಕೆ ಖ್ಯಾತಿ ಬರಲಾರದು. ಶೌರ್ಯವೂ, ಧೈರ್ಯವೂ, ಉತ್ಸಾಹವೂ, ಸಾಹ ಸವೂ, ಶಕ್ತಿಯೂ, ಉಳ್ಳ ಪುರುಷನು ಸಮುದ್ರವನ್ನು ಗೋಷ್ಪಾದಕ್ಕೆ ಸಮಾನವಾಗಿ ಎಣಿಸುವನು; ಮೇರು ಪರ್ವತವನ್ನು ಹುತ್ತಿಗೆ ಸಮಾನ ವಾಗಿ ನೋಡುವನು. ಅಂಥವನ ನಗರದಲ್ಲಿ ಸಂತೋಷಚಿತ್ತೆಯಾಗಿ ಲಕ್ಷ್ಮೀದೇವಿಯು ನಿಶ್ಚಲೆಯಾಗಿ ವಾಸಮಾಡುವಳು. ಅಂತಹ ಪುಣ್ಯಾಪು ರುಷರು ಭೂಮಿಯಲ್ಲಿ ಬಹಳ ಹುಟ್ಟರು; ಹುಟ್ಟಿದರೂ ನೂರಕ್ಕೆ ಸಾವಿ ರಕ್ಕೆ ಒಬ್ಬನು ಸುಜನರಿಂದ ಪೂಜಿಸಲ್ಪಟ್ಟವನಾಗಿ ಗಣನೆಗೆ ಬರುವನು. ಈ ಗುಣಗಳಿಲ್ಲದವನಲ್ಲಿ ಲಕ್ಷ್ಮಿ ಸೇರಳು. ಉದ್ಯೋಗವಂತನಾದ ಮಹಾ ತ್ಮನು ಮೇರು ಪರ್ವತದ ತುದಿಯನ್ನೂ ಪಾತಾಳದ ಆಳವನ್ನೂ ಸಮು ದ್ರದ ವಿಸ್ತೀರ್ಣವನ್ನೂ ಸ್ವಲ್ಪವಾಗಿ ಎಣಿಸುವನು—ಎನಲು, ಹಿರಣ್ಯಕ ನು—ಎಲೈ ಮಿತ್ರಮಂದರನೇ, ನೀನು ಹೇಳಿದ ನೀತಿ ವಚನಗಳನ್ನು ಕೇಳಿ ನನ್ನ ಮನಸ್ಸಿನಲ್ಲಿ ಇದ್ದ ವ್ಯಸನವೆಲ್ಲಾ ತೀರಿತು. ನೀನು ಧನ ವಂತನಾಗಿದ್ದರೂ ರವೆಯಷ್ಟಾದರೂ ಗರ್ವಪಡುವವನಲ್ಲ. ಮೇಘಗಳ ನೆರಳೂ, ದುಷ್ಟಜನರ ಪ್ರೀತಿಯೂ, ಯೌವನವೂ, ಸಂಪತ್ತೂ, ಸ್ವಲ್ಪ ಕಾಲವಿರುವುವೇ ಹೊರತು ಎಲ್ಲಾ ಕಾಲದಲ್ಲೂ ಇರವೆಂದು ದೊಡ್ಡವರು ಅವುಗಳಲ್ಲಿ ಮನಸ್ಸಿಡರು—ಎಂದು ನುಡಿದನು.

Generosity.

ಅವನ್ನು ಕೇಳಿ ಕೂರ್ಮವು ಹಿರಣ್ಯಕನನ್ನು ನೋಡಿ— ಯಾವನು ಹಂಸಗಳನ್ನು ಬೆಳ್ಳಗೆ ಮಾಡಿದನೋ, ಯಾವನು ಗಿಣಿಗಳನ್ನು ಹಚ್ಚಗೆ ಮಾಡಿದನೋ, ಯಾವನು ನವಿಲುಗಳನ್ನು ಚಿತ್ರವರ್ಣವುಳ್ಳವುಗಳಾಗಿ ಮಾಡಿದನೋ ಅವನು ಸರ್ವಪ್ರಾಣಿಗಳಿಗೂ ಜೀವನವನ್ನು ಉಂಟುಮಾಡುತ್ತಾನೆ. ಹುಟ್ಟಿದಾಗಲೇ ಧನಸಂಪತ್ತುಗಳೊಡನೆ ಹುಟ್ಟಿದ ಮನುಷ್ಯನು ಒಬ್ಬನೂ ಇಲ್ಲ; ಉಂಟಾದ ಸಂಪತ್ತುಗಳನ್ನೆಲ್ಲಾ ನೂರು ಸಂವತ್ಸರದ ತನಕ ವಿನೋದವಾಗಿ ಅನುಭವಿಸಿದವನೂ ಇಲ್ಲ. ಪೂರ್ವಜನ್ಮದಲ್ಲಿ ಒಬ್ಬರಿಗೆ ತಾನೇನ ಕೊಟ್ಟಿದ್ದನೋ ಅದು ಈ ಜನ್ಮದಲ್ಲಿ ತನಗೆ ಪ್ರಾಪ್ತವಾಗುವುದು. ಆದಕಾರಣ ತನ್ನ ಶಕ್ತಿಗೆ ತಕ್ಕಷ್ಟು ದಾನಮಾಡಬೇಕು. ದಾನಕ್ಕೆ ಸಮಾನವಾದ ನಿಕ್ಷೇಪವಿಲ್ಲ; ಸಂತೋಷಕ್ಕೆ ಸಮವಾದ ಸುಖವಿಲ್ಲ; ಸದಾಚಾರಕ್ಕೆ ಸರಿಯಾದ ಭೂಷಣವಿಲ್ಲ; ಆರೋಗ್ಯಕ್ಕೆ ಈಡಾದ ಲಾಭವಿಲ್ಲ. ಏತಕ್ಕೆ ಬಹಳ ಮಾತುಗಳನ್ನಾಡಬೇಕು? ನೀನೆಲ್ಲಿಗೂ ಹೋಗಬೇಡ. ನಾನೂ ನೀನೂ ಬಹಳ ಸೌಖ್ಯವುಳ್ಳವರಾಗಿ ಇಲ್ಲಿಯೇ ಇರೋಣ—ಎಂದಿತು.

ಅದಕ್ಕೆ ತಟಸ್ಥನಾದ ಲಘುಪತನಕನಿಂತೆಂದನು—ಎಲೈ ಕೂರ್ಮರಾಜನೇ, ನೀನು ಸಮಸ್ತಜನರೂ ಕೊಂಡಾಡತಕ್ಕ ಗುಣಗಳುಳ್ಳವನು. ಇನ್ನು ಮೇಲೆ ನಿನ್ನ ಸ್ನೇಹಿತನನ್ನು ಆದರಿಸು.

ಶ್ಲಾಘ್ಯಸ್ಸಏಕೋ ಭುವಿ ಮಾನವಾನಾಂ
ಸ ಉತ್ತಮಸ್ಸತ್ಪುರುಷಸ್ಸಧನ್ಯಃ ।
ಯಸ್ಯಾರ್ಥಿನೋವಾ ಶರಣಾಗತೋವಾ
ನಾಶಾ ವಿಭಿನ್ನಾ ವಿಮುಖಾಃ ಪ್ರಯಾಂತಿ ॥

ದೊಡ್ಡ ಮನುಷ್ಯನಿಗೆ ಒಂದುವೇಳೆ ಕೇಡು ಬಂದರೆ ಆ ಕೇಡನ್ನು ಹೋಗಲಾಡಿಸುವುದಕ್ಕೆ ಅಷ್ಟು ದೊಡ್ಡವನಾದವನೇ ಹೊರತು ಅಲ್ಪನು ಶಕ್ತನಲ್ಲ; ಕೆಸರಿನಲ್ಲಿ ಇಳಿಯುಬಿದ್ದ ಆನೆಯನ್ನು ಆನೆಗಳು ಎತ್ತಬೇಕೇ ಹೊರತು ಕ್ಷುದ್ರಮೃಗಗಳು ಎತ್ತಲಾಪುವೇ? ಬುದ್ಧಿವಿಭವವುಳ್ಳವನು

ಬಂದಾನೊಂದುವೇಳೆ ದೈವವಶದಿಂದ ತನಗೆ ಆಪತ್ತು ಬಂದರೂ ವಿದ್ವಾಂಸರು ತನ್ನನ್ನು ಹೊಗಳುವ ಹಾಗೆ ಆ ಆಪತ್ತನ್ನು ತಾಳಿಕೊಳ್ಳುವನು. ತನ್ನ ನಂಟರೂ ಗೆಳೆಯರೂ ಆಪತ್ತನ್ನು ಹೊಂದಿ ತನ್ನ ಬಳಿಗೆ ಬಂದರೆ, ಧೈರ್ಯದಿಂದ ಅವರ ಆಪತ್ತನ್ನು ಪರಿಹರಿಸುವನು. ಯಾವನು ಧನಹೀನನಾದ ಮಿತ್ರನನ್ನು ಧನವಂತನಾಗಿ ಮಾಡುವನೋ, ಯಾವನನ್ನು ಯಾಚಿಸಿದವರೂ ಶರಣುಹೊಕ್ಕವರೂ ತಮ್ಮ ಕೋರಿಕೆಗಳು ನೆರವೇರಿ ಸುಖವಾಗಿ ಹೋಗುವರೋ, ಅವನೊಬ್ಬನೇ ಮನುಷ್ಯರಲ್ಲಿ ಶ್ಲಾಘ್ಯನು. ವಾಯುವು ವನಗಳನ್ನೂ, ತುಂಬಿಗಳು ಹೂಗಳನ್ನೂ, ಹಂಸಗಳು ನೀರನ್ನೂ, ಪಕ್ಷಿಗಳು ಆಕಾಶವನ್ನೂ ಆಶ್ರಯಿಸಿದ ಹಾಗೆ ನಾವು ನಿನ್ನನ್ನು ಆಶ್ರಯಿಸಿದೆವು—ಎಂದು ಹೇಳಲಾಗಿ, ಕೂರ್ಮವು ಸಂತೋಷಿಸಿತು.

Hospitality.

ಬಳಿಕ ಮಿತ್ರಮಂದರನೂ ಲಘುಪತನಕನೂ ಹಿರಣ್ಯಕನೂ ತಮ್ಮಲ್ಲಿ ತಾವು ಮಾತನಾಡುತ್ತಾ ಹೊತ್ತು ಕಳೆವ ಸಮಯದಲ್ಲಿ, ಬಂದು ಮೃಗವು ಬೇಟೆಗಾರನಿಗೆ ಬೆದರಿ ಓಡುತ್ತಾ ಅಲ್ಲಿಗೆ ಬಂದಿತು. ಅದನ್ನು ನೋಡಿ ಹೆದರಿ ಅವು ಮೂಲೆಗೊಂದರಂತೆ ಓಡಿಹೋದುವು. ಅವುಗಳಲ್ಲಿ ಕಾಗೆ ಆ ಬಳಿಯಲ್ಲಿದ್ದ ಮರದ ಮೇಲಕ್ಕೆ ಹಾರಿ ನಾಲ್ಕು ಕಡೆಯೂ ನೋಡಿ ಬೇಟೆಗಾರನ ಬಾಧೆಯಿಲ್ಲದೆ ಇರುವುದನ್ನು ತಿಳಿದು ಮಿತ್ರಮಂದರ ಹಿರಣ್ಯಕರನ್ನು—ನೀವು ಹೆದರಬೇಡಿರಿ—ಎಂದು ಹೆಸರು ಹಿಡಿದು ಕೂಗಲು; ಆ ಇಬ್ಬರೂ ಆ ಮರದ ಹತ್ತಿರಕ್ಕೆ ಬಂದು, ಭಯದಿಂದ ಗಡಗಡನೆ ನಡುಗುತ್ತಿರುವ ಮೃಗವನ್ನು ನೋಡಿದುವು. ಅವರಲ್ಲಿ ಮಿತ್ರಮಂದರನು ಮೃಗದ ಸಂಗಡ—ಎಲೈ ಮೃಗೋತ್ತಮನೇ, ನಿನ್ನ ಹೆಸರೇನು? ನೀನೆಲ್ಲಿಂದ ಬಂದೆ? ಏತಕ್ಕೆ ಅಂಜಿದೆ? ಆ ಕಡೆಯಲ್ಲಿ ಏನು ಸಂಭವಿಸಿತು? ನೀನು ಬಂದುದರಿಂದ ನಮ್ಮ ದೊಡ್ಡವರೆಲ್ಲರೂ ಬಂದ ಹಾಗಿದೆ. ಆದುದರಿಂದ ಬೇಕಾದ ಆಹಾರವನ್ನು ನಾವಿರುವ ಸ್ಥಳದಲ್ಲಿ ತೆಗೆದುಕೋ. ನಿನ್ನ ಸಂಚಾರದಿಂದ ಈ ವನವನ್ನು ಅಲಂಕರಿಸು—ಎಂದು

ನುಡಿದನು. ಅದಕ್ಕೆ ಆ ಮೃಗವು—ನನ್ನ ಹೆಸರು ಚಿತ್ರಾಂಗನು. ಒಬ್ಬ ಬೇಟೆಗಾರನು ನನ್ನ ಮೇಲೆ ಚಲಹಿಡಿದು ಬೆನ್ನಟ್ಟಿ ಬರಲು, ಹೆದರಿ ಇಲ್ಲಿ ಯಾರ ಸಂಗಡಲಾದರೂ ಸ್ನೇಹಿಸಿಕೊಂಡು ನಿರ್ಭಯವಾಗಿ ಇರೋಣವೆಂದು ಬಂದೆನು—ಏನಲಾಗಿ, ಆ ಮಾತಿಗೆ ಮಿತ್ರಮಂದರನು ಬಹಳ ಸಂತೋಷಿಸಿ—ಎಲೈ ಚಿತ್ರಾಂಗನೇ, ಈ ವನದಲ್ಲಿ ನಿನಗೆ ನಮಗಿಂತ ಆಪ್ತರು ಸಿಕ್ಕಲಾರರು. ಈ ಮನೆಯನ್ನು ನಿನ್ನ ಮನೆಯಾಗಿ ಎಣಿಸಿಕೊಂಡು ಮನಸ್ಸಿನಲ್ಲಿ ಭೇದವಿಲ್ಲದೆ ಇಲ್ಲಿ ನಮ್ಮ ಸಂಗಡ ಇರು—ಎಂದಿತು. ಮೃಗವು ಅದಕ್ಕೆ ಸಮ್ಮತಿಸಿ ಅಲ್ಲಿ ಬಹುಕಾಲ ಸುಖವಾಗಿದ್ದಿತು.

Friendly feeling.

ಹಾಗಿರಲು ಒಂದಾನೊಂದು ದಿನ ಮೃಗವು ದೂರಕ್ಕೆ ಮೇವಿಗೆ ಹೋಗಿ ನಿತ್ಯವೂ ಬರುವ ವೇಳೆಗೆ ಬಾರದೆ ಇದ್ದುದರಿಂದ, ಕೂರ್ಮಾದಿಗಳು ಚಿಂತೆಹೊಂದಿ ಸ್ವಲ್ಪ ಹೊತ್ತು ಏನೂ ತೋರದೆ ಇದ್ದುವು. ಆಗ ಲಘುಪತನಕನು ಎದ್ದು—ನಾನು ಚಿತ್ರಾಂಗನನ್ನು ಹುಡುಕಿ ಬರುತ್ತೇನೆ—ಎಂದು ಹಾರಿಹೋಗಿ ಸಮೀಪದಲ್ಲಿ ಉರಲಿನಲ್ಲಿ ಸಿಕ್ಕಿಕೊಂಡಿದ್ದ ಮೃಗವನ್ನು ನೋಡಿ ಕಣ್ಣೀರು ಬಿಡುತ್ತಾ, ದುಃಖಸಮುದ್ರದಲ್ಲಿ ಮುಳುಗಿ—ಎಲೈ ಚಿತ್ರಾಂಗಾ, ನೀನು ಒಬ್ಬರನ್ನೂ ಬೇಡುವವನಲ್ಲ; ಅನ್ಯರ ಆಪತ್ತನ್ನು ಸಹಿಸಲಾರೆ; ಇತರರ ಸ್ವತ್ತಿಗೆ ಆಶೆ ಪಡುವವನಲ್ಲ. ಕಾಡಿನಲ್ಲಿ ಹುಲ್ಲುತಿಂದು ನೀರುಕುಡಿದು ಕಾಲವನ್ನು ಕಳೆಯುತ್ತೀಯೆ. ಒಬ್ಬರಿಗೆ ಅಪಕಾರ ಮಾಡುವುದಿಲ್ಲ. ಇಂಥ ನಿನಗೆ ಈ ದುರವಸ್ಥೆ ಸಂಭವಿಸಬಹುದೇ?—ಎಂದು ಅನೇಕ ಪ್ರಕಾರವಾಗಿ ಆ ಮೃಗವನ್ನು ಕುರಿತು ದುಃಖಿಸುತ್ತಾ, ತಿರುಗಿ ಅದನ್ನು ಕುರಿತು—ಈ ಮೂಳೆಗೆ ನೀನು ಏತಕ್ಕೋಸ್ಕರ ಬಂದೆ? ಹೇಗೆ ಸಿಕ್ಕುಬಿದ್ದೆ? ಇನ್ನು ಮೇಲೆ ನಾವು ಮಾಡಬೇಕಾದುದೇನು?—ಎಂದು ಕೇಳಿತು. ಅದಕ್ಕೆ ಚಿತ್ರಾಂಗನು—ಎಲೈ ಸ್ನೇಹಿತನೇ, ಬೇಟೆಗಾರನು ಬಂದ ಮೇಲೆ ನನ್ನನ್ನು ರಕ್ಷಿಸುವುದು ನಿನಗೆ ಕಷ್ಟ. ಆದಕಾರಣ ಅವನು ಬರುವುದಕ್ಕಿಂತ ಮುಂಚೆಯೇ ನೀನು ಹೋಗಿ ಈ ವೃತ್ತಾಂತವನ್ನೆಲ್ಲಾ ಹಿರಣ್ಯಕನಿಗೆ ತಿಳಿಸಿ ಅವನನ್ನು

ಕರೆದುಕೊಂಡು ಬಾ. ನನ್ನ ಬಂಧನಗಳನ್ನು ಅವನು ಬಿಡಿಸುವನು— ಎಂದು ಹೇಳಲು, ಲಘುಪತನಕನು ಆಕಾಶಕ್ಕೆ ಹಾರಿ ಅತಿ ತ್ವರೆಯಾಗಿ ಹೋಗಿ ಮಿಂತ್ರವೆಂದರ ಹಿರಣ್ಯಕರಿಗೆ ಚಿತ್ರಾಂಗನು ಉರಲಲ್ಲಿ ಬಿದ್ದದನ್ನು ತಿಳಿಸಿ ಹಿರಣ್ಯಕನನ್ನು ಕರೆದುಕೊಂಡು ಹೋಯಿತು. ಚಿತ್ರಾಂಗನನ್ನು ನೋಡಿ ಹಿರಣ್ಯಕನು—ಎಲೈ ಚಿತ್ರಾಂಗನೇ, ನೀನು ಬಹು ಬುದ್ಧಿವಂತನು; ಬುದ್ಧಿಯಿಲ್ಲದವನಂತೆ ಉರಲಲ್ಲಿ ಸಿಕ್ಕಿಕೊಂಡೆ! ಇದೇನು?— ಎನಲು, ಚಿಂತ್ರಾಂಗನು—ಎಲೈ ಸ್ನೇಹಿತನೇ, ಬೇಟೆಗಾರನು ಬಂದು ನೋಡುವುದಕ್ಕಿಂತ ಮುಂಚೆ ಈ ಉರಲನ್ನು ಕಚ್ಚಿ ತುಂಡಿಸಿದರೆ ಒಳ್ಳೆಯದು. ಅವನು ಬಂದ ಮೇಲೆ ಏನು ಸಂಭವಿಸೀತೋ—ಎಂದು ನುಡಿದನು. ಆ ಮಾತನ್ನು ಹಿರಣ್ಯಕನು ಕೇಳಿ—ನಿನಗೆ ಮೇಲುಕೋರಿ ಸಮೀಪಕ್ಕೆ ಬಂದೆನು. ನಾನು ಹತ್ತಿರದಲ್ಲಿರುವಾಗ ಬೇಡನಿಂದ ನಿನಗೆ ಯಾವಭಯವೂ ಬರಲಾರದು. ನಾನು ಕೇಳಿದುದಕ್ಕೆ ಉತ್ತರವನ್ನು ಹೇಳು—ಎಂದನು. ಅದಕ್ಕೆ ಅಯ್ಯಾ, ನಾನು ಮುಂಚೆ ಒಂದು ಸಲ ಮೋಸಹೋಗಿ ಉರಲಲ್ಲಿ ಸಿಕ್ಕಿಕೊಂಡು ದೈವವಶದಿಂದ ಬದುಕಿದೆನು. ಈಗ ತಿರುಗಿ ಬಂಧನದಲ್ಲಿ ತಗುಲಿದೆನು. ದೈವಕೃತವಾದ ಶುಭಾಶುಭಗಳನ್ನು ಹೋಗಲಾಡಿಸುವುದಕ್ಕೆ ನಮಗೆ ಶಕ್ತಿಯುಂಟೇ? ಎಂತಹವನಾದರೂ ತಪ್ಪಿ ಬದುಕಿದೆನೆನ್ನಕೂಡದು. ಪೂರ್ವಜನ್ಮದಲ್ಲಿ ಮಾಡಿದುವನ್ನೆಲ್ಲಾ ಅನುಭವಿಸಬೇಕೇ ಹೊರತು ಪರಿಹರಿಸಲಿಕ್ಕಾಗದು. ಇದಕ್ಕೆ ಚಿಂತಿಸ ಬೇಕಾದುದಿಲ್ಲ. ನನ್ನ ಪೂರ್ವವೃತ್ತಾಂತವನ್ನು ಕೇಳು— ಎಂದು ಚಿತ್ರಾಂಗನಿಂತೆಂದನು.

The story of the Deer Chitranga.

"ನನ್ನ ಚಿಕ್ಕತನದಲ್ಲಿ ಎಂದರೆ ನಾನು ಆರು ತಿಂಗಳ ಮಗುವಾಗಿದ್ದಾಗ, ಒಂದು ದಿನ ನಮ್ಮ ಜಾತಿಯ ಮೃಗಗಳ ಸಂಗಡ ಸಂಚರಿಸುತ್ತಾ ಇರುವಲ್ಲಿ ಒಬ್ಬ ಬೇಟೆಗಾರನು ಬಂದನು. ಆಗ ನನ್ನ ಸಂಗಡ ಇದ್ದ ಮೃಗಗಳೆಲ್ಲಾ ಚದರಿ ಚದರಿ ಓಡಿಹೋದುವು. ನನಗೆ ಸಾಕಾದಷ್ಟು ಬಲವಿಲ್ಲದುದರಿಂದ, ನಾನು ಅವುಗಳ ಸಂಗಡ ಓಡಲಾರದೆ ಹಿಂದೆ

ಬಿದ್ದೆನು. ಅವನ್ನು ನೋಡಿ ಬೇಟೆಗಾರನು ಓಡಿ ಬಂದು ನನ್ನನ್ನು ಹಿಡಿದುಕೊಂಡು ಹಂಬುಗಳಿಂದ ಗಟ್ಟಿಯಾಗಿ ಕಟ್ಟಿ, ನಿರ್ಹೇತುಕವಾದ ದಯೆಯಿಂದ ನನ್ನನ್ನು ಕೊಲ್ಲದೆ ಆ ದೇಶವನ್ನಾಳುತ್ತಿದ್ದ ರಾಜಕುಮಾರನಿಗೆ ಕಾಣಿಕೆಯಾಗಿ ಕೊಟ್ಟನು. ಆತನು ಅಂತಃಪುರಸ್ತ್ರೀಯರಿರುವ ಸ್ಥಲದಲ್ಲಿ ನನ್ನನ್ನು ಇಟ್ಟು ನನಗೆ ಮೇವನ್ನೂ ನೀರನ್ನೂ ಕೊಟ್ಟು ಚೆನ್ನಾಗಿ ವಿಚಾರಿಸುವಂತೆ ಏರ್ಪಾಡುಮಾಡಿ ಬಹು ಆರೈಕೆಯಾಗಿ ಸಾಕುತ್ತಿದ್ದನು. ಹೀಗೆ ಬಹುಕಾಲವಿರಲಾಗಿ ಒಂದು ದಿನ ರಾತ್ರಿ ರಾಜಕುಮಾರನು ಮಲಗಿರುವ ಸಮಯದಲ್ಲಿ, ಮಿಂಚೂ ಗುಡುಗೂ ಬಹಳವಾಗಿ ಕಾಣಿಸಿ ಅಧಿಕವಾದ ಮಳೆ ಹೊಯ್ಯುತ್ತಿರುವಾಗ, ನಾನು ಅತಿ ಕುತೂಹಲದಿಂದ ಮನುಷ್ಯಭಾಷೆಯಲ್ಲಿ—ಮಳೆಹನಿ ಬಿದ್ದು ಮೈಮೇಲೆ ಗಾಳಿ ಸೋಕಲಾಗಿ ಚಿಮ್ಮಿ ನೆಗೆಯುತ್ತಾ ಮೃಗಸಮೂಹದ ಹಿಂದೆ ಓಡುವ ಭಾಗ್ಯವು ನನಗೆ ಎಂದು ಉಂಟಾದೀತೋ ? -ಎಂದು ನುಡಿದೆನು. ಅದನ್ನು ರಾಜಕುಮಾರನು ಕೇಳಿ ನಾಲ್ಕು ಕಡೆಯೂ ನೋಡಿ ಅಲ್ಲಿ ಯಾರೂ ಇಲ್ಲದುದರಿಂದ ಆಶ್ಚರ್ಯಪಟ್ಟು, ನನ್ನನ್ನು ನೋಡಿ ಈ ಮೃಗವು ಹೀಗೆ ನುಡಿಯಿತೆಂದು ನಿಶ್ಚಯಿಸಿ, ರಾತ್ರಿ ಎಚ್ಚರವಾಗಿದ್ದು, ಸೂರ್ಯೋದಯವಾದ ಕೂಡಲೆ ಜೋಯಿಸರನ್ನು ಕರೆಯಿಸಿ ಈ ವೃತ್ತಾಂತವನ್ನು ಅವರ ಸಂಗಡ ಹೇಳಿದನು. ಅವರಲ್ಲೊಬ್ಬನು—ಪಶುಜಾತಿಗಳು ಮಾನುಷಭಾಷೆಯನ್ನು ನುಡಿದರೆ ಅದನ್ನು ಅರಸರು ಕೇಳಕೂಡದು ; ಇದಕ್ಕೆ ಕೆಲವು ಜಪಗಳನ್ನೂ ಕೆಲವು ಹೋಮಗಳನ್ನೂ ಮಾಡಿ ಈ ಉತ್ಪಾತವನ್ನು ನಿವರ್ತಿಸಬೇಕು. ಇನ್ನು ಮೇಲೆ ಇದನ್ನು ಇಲ್ಲಿ ಇರಲೀಯದೆ ಅರಣ್ಯದಲ್ಲಿ ಬಿಟ್ಟು ಬರಬೇಕು—ಎಂದು ಹೇಳಲು, ಅರಸನು ನನ್ನನ್ನು ಚುರಚುರನೆ ನೋಡಿ, ತನ್ನ ಸೇವಕರನ್ನು ಕರೆದು, —ಈ ಮೃಗವನ್ನು ಈಗಲೇ ತೆಗೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟು ಬನ್ನಿ, ತಡಮಾಡಬೇಡಿ—ಎಂದು ಹೇಳಿದನು. ಆ ರಾಜಾಜ್ಞೆಯ ಪ್ರಕಾರ ಅವರು ಆಗಲೇ ನನ್ನನ್ನು ತೆಗೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟು ಬಿಟ್ಟರು. ಅಂದು ಆ ರೀತಿಯಲ್ಲಿ ಆಪತ್ತನ್ನು ಹೊಂದಿದೆನು. ಇಂದು

ಹೀಗೆ ಬಲೆಯಲ್ಲಿ ಸಿಕ್ಕಿಕೊಂಡೆನು. ದೈವಕೃತವನ್ನು ತಪ್ಪಿಸಲಿಕ್ಕೆ ಯಾರಿಂದಾದೀತು ?" ಎಂದು ಚಿತ್ರಾಂಗನು ಹೇಳಿದನು.

ಅಷ್ಟರಲ್ಲಿ ಕೂರ್ಮರಾಜನು, ಚಿತ್ರಾಂಗಾದಿಗಳು ವಾಸಸ್ಥಾನಕ್ಕೆ ಬಾರದೆ ಇದ್ದುದರಿಂದ ಅಲ್ಲಿ ಏನು ಸಂಭವಿಸಿತೋ ಎಂದು ಚಿಂತಾಕ್ರಾಂತನಾಗಿ, ಹಿರಣ್ಯಕನು ಹೋದ ದಾರಿಗೆ ಬಂದನು. ಅವನನ್ನು ನೋಡಿ ಹಿರಣ್ಯಕನಿಂತೆಂದನು—ಎಲೈ ಮಿತ್ರಮಂದರನೇ, ನೀನು ನಮ್ಮ ಮೇಲಿನ ಪ್ರೀತಿಯಿಂದ ಇಲ್ಲಿಗೆ ಬಂದೆ. ನಮಗೆ ಅದು ಇಷ್ಟವೇ ಸರಿ. ಆದರೂ ಈಗ ಬೇಟೆಗಾರನು ಬರುವ ಹೊತ್ತಾಯಿತು. ಅವನಿಗೆ ಸಿಕ್ಕದೆ ನಾವು ಮೂವರೂ ಹೋಗಲಾಪೆವು. ನೀನು ನೀರಿನಲ್ಲಾದರೆ ತ್ವರೆಯಾಗಿ ಓಡಬಲ್ಲೆ ; ಮಿಟ್ಟನೆಲದಲ್ಲಿ ಒಂದಡಿಯಾದರೂ ಸಾಗಿ ಹೋಗಲಾರೆ. ಆದುದರಿಂದ ನೀನು ಇಲ್ಲಿಗೆ ಬಂದುದು ಅನುಚಿತವು—ಎನಲು, ಕೂರ್ಮವು ಇಂತೆಂದಿತು.

ದಯೆಯೂ ಸ್ನೇಹಪ್ರೀತಿಯೂ ಉಳ್ಳ ಇಷ್ಟಜನವನ್ನು ಅಗಲಿದವನಿಗೆ ಆ ಇಷ್ಟಜನವನ್ನು ಯಾವಾಗ ನೋಡುವೆನೆಂದು ದೃಷ್ಟಿ ಚಲಿಸುತ್ತಿರುವುದು ; ಮನಸ್ಸು ವ್ಯಾಕುಲದಿಂದ ಎಲ್ಲಿಗೋ ಹೋಗುವುದು. ಬಳ್ಳಿಯ ಮನಸ್ಸುಳ್ಳ ಮಿತ್ರನ ಮೇಲೂ ಗುಣವತಿಯಾದ ಹೆಂಡತಿಯ ಮೇಲೂ ಪ್ರಯಾಸವನ್ನರಿತ ಪ್ರಭುವಿನ ಮೇಲೂ ಮನಸ್ಸು ಬಹಳ ಅನುರಾಗವುಳ್ಳುದಾಗಿರುವುದು. ತನಗೇನು ಕಷ್ಟ ಬಂದರೂ ಅದು ಕಷ್ಟವಾಗಿ ತೋರದು - ಎಂದು ನುಡಿಯುತ್ತಿರುವ ಸಮಯದಲ್ಲಿ, ಯಮದೂತನ ಹಾಗೆ ಬೇಟೆಗಾರನು ಅಲ್ಲಿಗೆ ಬಂದನು. ಅವನನ್ನು ಕಾಣುತ್ತಲೆ ಹಿರಣ್ಯಕನು ಚಿತ್ರಾಂಗನ ಉರಲನ್ನು ಅತಿತ್ವರೆಯಾಗಿ ಕಚ್ಚಿ ತುಂಡಿಸಿ ತಾನೊಂದು ಬಿಲದಲ್ಲಿ ಹೊಕ್ಕನು. ಚಿತ್ರಾಂಗನು ಓಡಿ ಹೋದನು. ಲಘುಪತನಕನು ಹಾರಿ ಹೋದನು. ಅದನ್ನು ನೋಡಿ ಬೇಟೆಗಾರನು ಬಹಳ ವ್ಯಸನಪಟ್ಟು ಅಷ್ಟರಲ್ಲಿ ಮಂದಗತಿಯಾದ ಆಮೆಯನ್ನು ನೋಡಿ ಸ್ವಲ್ಪ ಸಂತೋಷಿಸಿ, ಅದನ್ನು ಹಿಡಿದುಕೊಂಡು ಬಿಲ್ಲಿನ ತುದಿಗೆ ಕಟ್ಟಿಕೊಂಡು ಹೋಗುತ್ತಿದ್ದನು.

Love of Friends.

ಆಗ ಕಾಗೆಯೂ ಮೃಗವೂ ಇಲಿಯೂ ಆಮೆಗೆ ಬಂದ ಅವಸ್ಥೆಯನ್ನು ನೋಡಿ ಏನು ಮಾಡುವುದಕ್ಕೂ ತೋರದೆ ಕಣ್ಣೀರುಬಿಡುತ್ತಾ ಅದರ ಹಿಂದೆ ಹೋಗುತ್ತಿದ್ದವು. ಹಿರಣ್ಯಕನು ತನಗೆ ಪ್ರಾಣಸ್ನೇಹಿತನಾದ ಕೂರ್ಮರಾಜನು ಬೇಟೆಗಾರನ ಕೈಯಲ್ಲಿ ಸಿಕ್ಕುಹೋದುದಕ್ಕೆ ಬಹಳ ಪರಿತಪಿಸಿ, ಸ್ವಲ್ಪ ಹೊತ್ತಿಗೆ ತಿಳಿವಳಿಕೆಯನ್ನು ತಂದುಕೊಂಡು ಚಿತ್ರಾಂಗ ಲಘುಪತನಕರನ್ನು ನೋಡಿ ಇಂತೆಂದನು:—ನಾವು ದುಃಖಿಸ ಕೆಲಸವಿಲ್ಲ; ಸಮುದ್ರದ ಪಾರದ ಹಾಗೆ ಒಂದು ದುಃಖದ ಪಾರವನ್ನು ಕಾಣಲಾರದೆ ಇರುವಾಗ ಎರಡನೆಯ ದುಃಖವು ಸಂಪ್ರಾಪ್ತವಾಯಿತು. ದುಃಖಪಡುವುದು ರೋಗಕ್ಕೆ ಹೇತುವು, ಕಾರ್ಯಗಳಿಗೆ ಕೇಡು. ಆದುದರಿಂದ ನಾವು ಚಿಂತಿಸದೆ ಇರಬೇಕು.

ಸ್ವಭಾವಜಂ ತು ಯನ್ಮಿತ್ರಂ ಭಾಗ್ಯೇನೈವಾಭಿಜಾಯತೇ।
ತದಕೃತ್ರಿಮಸೌಹಾರ್ದ ಮಾಪತ್ಸ್ವಪಿ ನ ಮುಂಚತಿ ॥

ತಕ್ಕ ಮಿತ್ರನು ಅದೃಷ್ಟವುಳ್ಳವನಿಗೆ ಸಿಕ್ಕುವನಲ್ಲದೆ ಅದೃಷ್ಟವಿಲ್ಲದವನಿಗೆ ಸಿಕ್ಕನು. ಅಂತಹ ಮಿತ್ರನು ಆಪತ್ಕಾಲದಲ್ಲಿ ಕಾಯದೆ ಕೈಬಿಡನು. ಕಪಟಸ್ವಭಾವವುಳ್ಳ ಮಿತ್ರನು ಪ್ರೀತಿಯುಳ್ಳವನ ಹಾಗೆ ಮೇಲಕ್ಕೆ ನಟಿಸುವನು; ಕೇಡೇನಾದರೂ ಬಂದಾಗ ಕೈಬಿಡುವನು. ಮಿತ್ರನಲ್ಲಿಟ್ಟ ನಂಬುಗೆಯನ್ನು ತನ್ನ ತಾಯಿಯ ಮೇಲೂ ತಂದೆಯ ಮೇಲೂ ಹೆಂಡತಿಯ ಮೇಲೂ ಒಡಹುಟ್ಟಿದವರ ಮೇಲೂ ಮಗನ ಮೇಲೂ ಇತರರ ಮೇಲೂ ಪುರುಷನು ಇಡನು. ಪೂರ್ವದಲ್ಲಿ ತಾವು ಮಾಡಿಕೊಂಡ ಕರ್ಮಗಳಿಂದ ಒಂದು ಕಾಲಾಂತರದಲ್ಲಿ ಶುಭಾಶುಭ ಫಲಗಳನ್ನು ಅನುಭವಿಸುವಂತೆ ಮಾಡುವ ಅವಸ್ಥಾಭೇದಗಳು, ಒಂದು ಜನ್ಮ ಹೋಗಿ ಮತ್ತೊಂದು ಜನ್ಮ ಬರುವ ಹಾಗೆ ಮನುಷ್ಯರಿಗೆ ಬರುತ್ತಾ ಇರುವುವು.

ಕಾಯಸ್ಸನ್ನಿಹಿತಾಪಾಯಃ ಸಂಪದಃ ಪದಮಾಪದಾಂ।
ಸಮಾಗಮಾಸ್ಸಾಪಗಮಾ ಸ್ಸರ್ವಮುತ್ಪಾದಿಭಂಗುರಂ ॥

ಶೋಕಾರಾತಿಭಯತ್ರಾಣಂ ಪ್ರೀತಿ ವಿಸ್ರಂಭಭಾಜನಂ ।
ಕೇನ ರತ್ನ ಮಿದಂ ಸೃಷ್ಟಂ ಮಿತ್ರ ಮಿತ್ಯಕ್ಷರದ್ವಯಂ ॥

ದೇಹಕ್ಕೆ ಯಾವಾಗಲೂ ಅಪಾಯವು ಸನ್ನಿಹಿತವಾಗಿರುವುದು. ಸಂಪತ್ತಿನ ಹಿಂದೆ ಆಪತ್ತುಗಳು ಬರುತ್ತಿರುವುವು. ಕೂಟಕ್ಕೆ ಸಂಗಡಲೇ ಅಗಲಿಕೆ ಸಂಭವಿಸುವುದು. ಉತ್ಪತ್ತಿಯುಳ್ಳ ಸರ್ವವೂ ನಾಶನವನ್ನುಳ್ಳುದಾಗಿ ಇರುವುದು. ಗಾಯವಾದ ಕಡೆಯಲ್ಲೇ ಗಾಯತಾಕುವುದನ್ನೂ, ಆಹಾರವಿಲ್ಲದಾಗ ದೇಹವನ್ನು ಜಠರಾಗ್ನಿ ಕೃಶಪಡಿಸುವುದನ್ನೂ, ಆಪತ್ತುಗಳು ಬಂದಾಗ ವೈರಗಳು ಹುಟ್ಟುವುದನ್ನೂ, ದುಃಖಗಳು ಉಂಟಾದಾಗ ಅನರ್ಥಗಳು ಸಂಭವಿಸುವುದನ್ನೂ, ದೇಹ ಧಾರಿಗಳಿಗೆ ನಿವಾರಿಸಲಾದೀತೇ? ಶೋಕವನ್ನೂ ಶತ್ರುಭಯವನ್ನೂ ಹೋಗಲಾಡಿಸಿ ರಕ್ಷಿಸತಕ್ಕುದಾಗಿ, ಸಂತೋಷಕ್ಕೂ ನಂಬುಗೆಗೂ ಸಾನಭೂತವಾಗಿ, ಅಮೃತಸಮಾನವಾದ ಮಿತ್ರವೆಂಬ ಅಕ್ಷರ ದ್ವಯವನ್ನು ಸೃಜಿಸಿದ ಪುಣ್ಯಾತ್ಮನಾರೋ! ಅಪುಣ್ಯಾತ್ಮನೇ ಈ ಬೇಡನು ಈ ಕಾಡನ್ನು ದಾಟ ಹೋಗುವುದಕ್ಕಿಂತ ಮುಂಚೆ ತ್ವರೆಯಾಗಿ ನಮ್ಮ ಸ್ನೇಹಿತನನ್ನೂ ಬಿಡಿಸುವುದಕ್ಕೆ ಉಪಾಯವನ್ನು ತೋರಿಸಬೇಕು. ಇವನು ಈ ಕಾಡನ್ನು ದಾಟ ದೂರಕ್ಕೆ ಹೋದರೆ ಎಂತಹವರೂ ಬಿಡಿಸಲಾರರು—ಎಂದನು. ಚಿತ್ರಾಂಗ ಲಘುಪತನಕರು ಮಿತ್ರಮಂದರನಿಗೆ ಸಂಭವಿಸಿದ ಆಪತ್ತಿಗೆ ಹೆದರಿ ಮನಸ್ಸಿನಲ್ಲಿ ಕಳವಳಗೊಂಡು ಮಾಡಬೇಕಾದ ಉಪಾಯವೇನೂ ತೋರದೆ ಸ್ನೇಹಿತನನ್ನು ನೆನೆಮುಕೊಳ್ಳುತಾ—ದುಃಖಸಮುದ್ರದಲ್ಲಿ ಮುಳಿಗಿರುವ ನಮಗೇನು ಬುದ್ಧಿ ಹೇಳುತ್ತೀಯೆ? ಉದ್ದವೂ ದಪ್ಪವೂ ಚೆಲುವಿಕೆಯೂ ಬಲವೂ ಉಳ್ಳ ಶರೀರವುಳ್ಳವನಾಗಿದ್ದರೂ ಜಡಬುದ್ಧಿಯಾದರೆ ಅವನು ತೃಣಕ್ಕಿಂತ ಕಡೆ; ಅವನ ಹುಟ್ಟು ನಿಷ್ಫಲವು. ನಮಗಿಂತ ಬುದ್ಧಿಯಲ್ಲಿ ಅಧಿಕನಾದುದರಿಂದ ನಿನ್ನನ್ನು ಕೋರಿದೆವು. 'ಈಗ ನಾವು ಮಾಡಬೇಕಾದ ಕಾರ್ಯವೇನು? ಹೇಳು—ಎಂದು ಹಿರಣ್ಯಕನನ್ನು ಕೇಳಿದರು.

The plan adopted by the Rat to free the Tortoise.

ಅದಕ್ಕೆ ಹಿರಣ್ಯಕನು ಅವರನ್ನು ನೋಡಿ—ನಾನು ಅವಶ್ಯವಾಗಿ ಮಾಡಬೇಕಾದ ಕಾರ್ಯಕ್ಕೆ ನೀವಿಷ್ಟೊಂದು ಬೇಡಿಕೊಳ್ಳಬೇಕಾದುದೇನು?—ಎಂದು ನುಡಿದು, ಸ್ವಲ್ಪಹೊತ್ತು ಆಲೋಚಿಸಿ ಕಾರ್ಯವನ್ನು ನಿಶ್ಚಯಿಸಿ—ಎಲೈ ಚಿತ್ರಾಂಗಾ, ನೀನು ಬೇಟೆಗಾರನಿಗೆ ಕಾಣಿಸಿಕೊಳ್ಳದೆ ಮುಂದಾಗಿ ಹೋಗಿ, ಅವನು ಬರುವ ಮಾರ್ಗದಲ್ಲಿ ಒಂದು ಮಡುವಿನ ಬಳಿಯಲ್ಲಿ ಸತ್ತವನಹಾಗೆ ಕದಲದೆ ಮಲಗಿಕೊಂಡು, ಕಾಲುಗಳನ್ನು ಚಾಚಿಕೊಂಡು, ಕಣ್ಣುಗಳನ್ನು ಸ್ವಲ್ಪ ಮುಚ್ಚಿಕೊಂಡಿರಬೇಕು. ಎಲೈ ಲಘುಪತನಕನೇ, ನೀನು ಚಿತ್ರಾಂಗನ ಮೇಲೆ ಕುಳಿತು ಕಣ್ಣುಗಳನ್ನು ಚುಚ್ಚಿ ತಿನ್ನುವವನ ಹಾಗೆ ಮೆಲ್ಲಗೆ ನೋಯಿಸದೆ ಕಣ್ಣುಗಳ ಮೇಲೆ ಚುಚ್ಚುತ್ತಾ ಕೂಗುತ್ತಾ ಇರಬೇಕು. ಇಷ್ಟರಲ್ಲಿ ಬೇಟೆಗಾರನು ಬಂದು—ಮೃಗವು ಸತ್ತು ಬಿದ್ದಿದೆ—ಎಂದು ತಿಳಿದುಕೊಂಡು, ಸಂತೋಷಿಸಿ ಮಿತ್ರಮಂದರನನ್ನು ಬಿಗಿದು ಕಟ್ಟಿರುವ ಬಿಲ್ಲನ್ನು ಅಲ್ಲಿ ನೆಲದಮೇಲೆ ಇರಿಸಿ ಮಡುವಿನ ಹತ್ತಿರಕ್ಕೆ ಬರುವನು. ಆಗ ನಾನು ಬೇಟೆಗಾರನ ಹಿಂದೆ ಬರುತ್ತಾ ಇದ್ದು, ಅವನು ಬಿಲ್ಲನ್ನು ಕೆಳಗೆ ಇಟ್ಟ ಕೂಡಲೇ ಮಿತ್ರಮಂದರನ ಕಟ್ಟಿದ ಕಟ್ಟನ್ನು ಕಚ್ಚಿ ಬಿಡುವೆನು. ಆಗ ಮಿತ್ರಮಂದರನು ಮಡುವಿನಲ್ಲಿ ಪ್ರವೇಶಿಸುವನು, ನಾನು ಬಿಲದಲ್ಲಿ ಹೊಗುವೆನು. ನೀವು ಓಡಬೇಕು—ಎಂದು ಹೇಳಿದನು.

ಆಗ ಚಿತ್ರಾಂಗ ಲಘುಪತನಕರು ಹಿರಣ್ಯಕನ ಉಪಾಯಕ್ಕೆ ಬಹಳ ಸಂತೋಷಿಸಿ ಅದೇಪ್ರಕಾರ ಮಾಡಿದರು. ಕಡೆಗೆ ಕಾರ್ಯವೆಲ್ಲಾ ಆಲೋಚಿಸಿದ ಪ್ರಕಾರವೇ ನಡೆಯಿತು. ಆಗ ಬೇಟೆಗಾರನು ಚಿಂತಾಕ್ರಾಂತನಾಗಿ ಮೆಲ್ಲಮೆಲ್ಲಗೆ ತನ್ನ ಮನೆಗೆ ಹೋದನು. ತರುವಾಯ ಕಾಕ ಕೂರ್ಮ ಮೃಗ ಮೂಷಿಕಗಳು ಸ್ವಸ್ಥಾನಕ್ಕೆ ಹೋಗಿ ಮುಂಚಿನ ಹಾಗೆ ಅನ್ಯೋನ್ಯ ಸ್ನೇಹವುಳ್ಳವಾಗಿ ಇದ್ದುವು.

ಎಂದು ವಿಷ್ಣುಶರ್ಮನು ಹೇಳಿದ ಸುಹೃಲ್ಲಾಭವನ್ನು ಕೇಳಿ ರಾಜಪುತ್ರರು ಸಂತೋಷವನ್ನು ಹೊಂದಿದರು.

SECTION III.

INVETERATE ENMITY.

ಸಂಧಿವಿಗ್ರಹವು.

To depend upon an enemy is ruinous—
The Owls and the Crows.

"ಶತ್ರುವಾದವನು ತನ್ನ ಕೆಲಸಕ್ಕಾಗಿ ಬಹಳ ಸ್ನೇಹಮಾಡಿದರೂ ಅವನನ್ನು ನಂಬಕೂಡದು ; ನಂಬಿದರೆ ಅವನು ನಂಬಿದವನಿಗೆ ತಪ್ಪದೆ ಕೇಡುಮಾಡುವನು. ಕಾಗೆಗಳು ಗೂಗೆಗಳನ್ನು ನಂಬಿಸಿ ಅವುಗಳು ಗುಹೆಯಲ್ಲಿದ್ದ ಸಮಯವನ್ನು ನೋಡಿಕೊಂಡಿದ್ದು ಬಾಗಿಲಲ್ಲಿ ಬೆಂಕಿ ಹಾಕಿ ಕಪಟದಿಂದ ಅವುಗಳನ್ನೆಲ್ಲಾ ಕೊಂದುವು" ಎಂದು ವಿಷ್ಣುಶರ್ಮನು ಹೇಳಿದನು.

ಅದನ್ನು ರಾಜಕುಮಾರರು ಕೇಳಿ—ಕಾಗೆಗಳು ಗೂಗೆಗಳನ್ನು ಹೇಗೆ ನಂಬಿಸಿದುವು ? ಅವುಗಳನ್ನೆಲ್ಲಾ ಹೇಗೆ ಕೊಂದುವು ? ನಮಗೆ ಸ್ಪಷ್ಟವಾಗಿ ಹೇಳಬೇಕು—ಎನಲು, ವಿಷ್ಣುಶರ್ಮನಿಂತೆಂದನು.

ಒಂದು ಅಡವಿಯಲ್ಲಿ ದೊಡ್ಡ ಕೊಂಬೆಗಳಿಂದ ಭೂಮಿಯನ್ನೂ ಆಕಾಶವನ್ನೂ ದಿಕ್ಕುಗಳನ್ನೂ ಆಕ್ರಮಿಸಿ, ಸೂರ್ಯಕಿರಣಗಳು ಪ್ರವೇಶಿಸಕೂಡದ ಎಲೆಯ ಜೊಂಪೆಗಳಿಂದ ಪೂರ್ಣವಾಗಿ, ನೀರಿನೊಂದಿಗೆ ಕೂಡಿಕೊಂಡ ಮೇಘದ ರೂಪವನ್ನು ಧರಿಸಿ, ನೋಡುವವರಿಗೆ ಆಶ್ಚರ್ಯಕರವಾಗಿ, ಮಹಾಸರ್ಪಗಳಿಗೂ ಸಮಸ್ತ ಪಕ್ಷಿಗಳಿಗೂ ಆಶ್ರಯವಾದ ಒಂದು ಆಲದಮರವುಂಟು. ಅದರಲ್ಲಿ ಅನೇಕ ವಾಯುಸಗಳು ತನ್ನನ್ನು ಓಲೈಸಲು, ಶತ್ರುಗಳನ್ನು ಸಂಹರಿಸುವುದರಲ್ಲಿ ನಿಪುಣನಾದ ಮೇಘವರ್ಣ

ನೆಂಬ ಹೆಸರುಳ್ಳ ವಾಯುಸರಾಜನು ವಾಸಮಾಡುತ್ತಿರುವನು. ವಾಯುಸ ಗಳಿಗೆ ನಿವಾಸವಾದ ಆಲದಮರಕ್ಕೆ ಬಹಳ ದೂರವಲ್ಲದ ಒಂದು ಬೆಟ್ಟದ ಗವಿಯಲ್ಲಿ ಉಪಮರ್ದನೆಂಬ ಹೆಸರುಳ್ಳ ಉಲೂಕರಾಜನು ಅನೇಕ ಸ್ವಜಾತಿ ಪಕ್ಷಿಗಳು ತನ್ನನ್ನು ಓಲೈಸಲಾಗಿ ವಾಸಮಾಡುತ್ತಿರುವನು. ಆತನು ಒಂದು ದಿನ ರಾತ್ರಿವೇಳೆ ತನ್ನ ಮಂತ್ರಿಗಳನ್ನು ಕರೆದು ಅವರ ಸಂಗಡ ಇಂತೆಂದನು.

The Crows destroyed by Owls.

"ಕಾಗೆಗಳಿಗೂ ನಮಗೂ ವೈರವು ಸಹಜವಾದುದರಿಂದ ಸಮಯ ನೋಡಿ ನಾವು ಕಾಗೆಗಳನ್ನು ಕೊಲ್ಲಬೇಕು. ನೀವು ನಿಮ್ಮ ಸೇನೆಗ ಳನ್ನು ಕೂಡಿಸಿ ತೆಗೆದುಕೊಂಡು ಬನ್ನಿರಿ" ಎಂದು ಹೇಳಲು, ಅವರು ಹಾಗೆಯೇ ಮಾಡಿದರು. ಆಗ ಗೂಗೆಗಳೆಲ್ಲಾ ಯಮಕಿಂಕರರ ಸಮೂ ಹದ ಹಾಗೆ ದಂಡುಹೊರಟು ನಡೆಯುತ್ತಿರುವಾಗ, ಉಪಮರ್ದನು ಅರ್ಧ ರಾತ್ರಿವೇಳೆಯಲ್ಲಿ ಮಂತ್ರಿಗಳೊಡನೆಯೂ ಸೇನೆಗಳೊಡನೆಯೂ ಕಾಗೆಗಳಿ ರುವ ಆಲದ ಮರದ ಹತ್ತಿರಕ್ಕೆ ಹೋಗಿ ಕೆಲವು ಸೇನೆಗಳನ್ನು ಆ ಮರದ ಸುತ್ತೂ ನಿಲ್ಲಿಸಿ, ಕೆಲವು ದಂಡಿನ ಸಂಗಡ ಗಿಡದ ಮೇಲಕ್ಕೇರಿ, ಅಧಿಕ ನಿದ್ರೆಯಿಂದ ಕಾಗೆಗಳು ಮೈಮರೆತಿರುವುದನ್ನು ನೋಡಿ, ಕೆಲವನ್ನು ಕತ್ತು ಕಚ್ಚಿ, ಕೆಲವನ್ನು ಹೊಟ್ಟೆಸೀಳಿ, ಮತ್ತೂ ಅನೇಕ ಪ್ರಕಾರ ವಾಗಿ ಕಾಗೆಗಳನ್ನು ನಾಶಮಾಡಿ, ಮುಂಚೆ ಬಹು ಕೋಲಾಹಲ ಧ್ವನಿ ಯೊಂದಿಗೆ ಕೂಡಿಕೊಂಡಿದ್ದ ಆಲದ ಮರವು ನಿಶ್ಶಬ್ದವಾಗಿರುವುದನ್ನು ನೋಡಿ ಶತ್ರುಗಳನ್ನು ನಿಶ್ಶೇಷವಾಗಿ ಕೊಂದೆವೆಂದು ಸಂತೋಷಿಸಿ ಗೂಗೆಗಳೊಡನೆ ನಿಜನಿವಾಸಕ್ಕೆ ಹೋದನು.

ಅಂತಹ ಆಪತ್ಕಾಲದಲ್ಲಿ ಮೇಘವರ್ಣನು ಒಂದು ಪೊಟರೆಯಲ್ಲಿ ಅವಿತುಕೊಂಡಿದ್ದು, ಸೂರ್ಯೋದಯವಾದ ಮೇಲೆ ಹೊರಗೆ ಬಂದು ಕಾಗೆಯ ಕುಲಕ್ಕೆ ಬಂದ ಆಪತ್ತನ್ನು ಚಿಂತಿಸುತ್ತಾ ಇದ್ದನು. ಆ ಸಮ ಯದಲ್ಲಿ ಆತನ ಕುಲಕ್ರಮಾಗತರಾದ ಮಂತ್ರಿಗಳು, ಉದ್ದೀಪಿ, ಸಂದೀಪಿ,

ಆದೀಪಿ, ಪ್ರೋದ್ದೀಪಿ, ಚಿರಂಜೀವಿ ಎಂಬವರು ಐದು ಮಂದಿಯೂ ಮೊದಲಿನ ರಾತ್ರಿ ಹೇಗೋ ತಪ್ಪಿಸಿಕೊಂಡು ಬದುಕಿ ವಾಯುಸರಾಜನ ಹತ್ತಿರಕ್ಕೆ ಬಂದರು. ಆಗ ಮೇಘವರ್ಣನು ಬಹಳ ವ್ಯಸನದಿಂದ ಅವರನ್ನು ನೋಡಿ—ಅರಸನಿಲ್ಲದ ಮಂತ್ರಿಗಳು ಎಷ್ಟುಮಂದಿ ಇದ್ದರೂ ಕೆಲಸಕ್ಕೆ ಬಾರರು. ಮಂತ್ರಿಗಳಿಲ್ಲದ ಅರಸನು ಮೃತನಿಗೆ ಸಮಾನನು. ದೈವವಶದಿಂದ ನೀವೂ ನಾನೂ ಹಗೆಗಳ ಕೈಯಲ್ಲಿ ಸಿಕ್ಕದೆ ತಪ್ಪಿಸಿಕೊಂಡೆವು. ನಿಮ್ಮ ಬುದ್ಧಿಬಲದಿಂದಲೂ ನನ್ನ ಭುಜಬಲದಿಂದಲೂ ಇಂದಿನವರೆಗೆ ಪ್ರಬಲರಾಗಿದ್ದು ಕಡೆಯಲ್ಲಿ ಗೂಗೆಗಳಿಂದ ಹೀಗಾದೆವು. ಇನ್ನು ಮೇಲೆ ನಾವು ಮಾಡಬೇಕಾದುದೇನು ?—ಎಂದು ನುಡಿದನು.

Council of Revenge.

ಅದಕ್ಕೆ ಉದ್ದೀಪಿ ಎಂಬ ಮಂತ್ರಿಯು – ಬಲವಂತನಾದ ಶತ್ರುವಿನ ಸಮೀಪವನ್ನು ಬಿಟ್ಟು ಹೋಗಿ ಬಲವಂತನಾದ ಮತ್ತೊಬ್ಬನೊಂದಿಗೆ ಸೇರಿಕೊಂಡು ಇರುವುದು ಒಂದು ; ಸ್ಥಳವನ್ನು ಬಿಟ್ಟುಬಿಟ್ಟು ಅಸಾಧ್ಯವಾದ ದುರ್ಗದಲ್ಲಿ ಪ್ರವೇಶಿಸಿ ಇರುವುದೊಂದು ; ದೂರದೇಶಕ್ಕೆ ಹೋಗಿ ಅಲ್ಲಿ ಅಡಗಿರುವುದೊಂದು ; ಈ ಮೂರು ಉಪಾಯಗಳು ನನಗೆ ತೋರಿದುವು. ಇನ್ನು ನಿಮ್ಮ ಚಿತ್ತ—ಎಂದು ನುಡಿಯಲು, ಕೇಳಿ ಆತನು ಸಂದೀಪಿಯನ್ನು ನೋಡಿ—ನಿನಗೇನು ತೋರುತ್ತದೆ—ಎಂದು ಕೇಳಿದನು.

ಸಂದೀಪಿ—ಮೊದಲಲ್ಲಿ ತಮ್ಮ ಸಂಗಡ ಉದ್ದೀಪಿ ಹೇಳಿದ ಮೂರು ಪಕ್ಷಗಳೂ ಸರಿಯೆ. ಆದರೆ ಅವುಗಳಲ್ಲಿ ಸ್ಥಾನತ್ಯಾಗವು ಸಂಭವಿಸುತ್ತದೆ. ತ್ವರೆಪಟ್ಟು ಸ್ಥಾನತ್ಯಾಗ ಮಾಡಕೂಡದು. ಏತಕ್ಕೆಂದರೆ, ತಾನಿದ್ದಸ್ಥಳದಲ್ಲೇ ಇದ್ದರೆ ಅನುಕೂಲವಾಗಿ ಕಾರ್ಯಗಳು ಸಿದ್ಧಿಸುವುವು. ಆಡಿಗೆ ಕೆಚ್ಚಲಿನ ಮೊಲೆಗಳಲ್ಲಿ ಹಾಲಿರುವ ಹಾಗೆ ಕುತ್ತಿಗೆಯ ಮೊಲೆಗಳಲ್ಲಿ ಹಾಲು ಉಂಟೆ ? ತನ್ನ ಸಾನದಲ್ಲಿ ಪ್ರಮಾದವಿಲ್ಲದೆ ನಿಂತ ಅರಸನಿಗೆ ಜಯವುಂಟಾಗುವುದು ಶಕ್ಯವು. ನಾಯಿಯೂಕೂಡ ತನ್ನನ್ನು ಸಾಕಿದ ಮನೆಯಲ್ಲಿದ್ದು ಆ ಬಾಗಿಲಿಗೆ ಎಷ್ಟು ಮಂದಿ ಬಂದರೂ ಸ್ಥಾನಬಲದಿಂದ ಎಲ್ಲರನ್ನೂ ಗೆಲ್ಲುತ್ತದೆ. ಆದಕಾರಣ ನಮ್ಮ ನೆಲೆಯನ್ನು ಬಿಡದೆ ಕಾಲ

ವನ್ನು ಕಳೆಯುತ್ತಿದ್ದು ನಮಗೆ ಬಲವುಂಟಾದಾಗ ಒಂದು ಉಪಾಯ ವನ್ನು ಹುಡುಕಿ ಶತ್ರುಗಳನ್ನು ಜಯಿಸಬೇಕು—ಎಂದು ಮಹಾವಿನ ಯದಿಂದ ನುಡಿದನು.

ಆ ಮೇಲೆ ಮೇಘವರ್ಣನು ಆದೀಪಿಯನ್ನು ನೋಡಿ—ನಿನಗೇನು ತೋರುತ್ತದೆ—ಎಂದು ಕೇಳಿದನು. ಆದೀಪಿ—ಬಾಲರನ್ನೂ ವೃದ್ಧ ರನ್ನೂ ಸ್ತ್ರೀಯರನ್ನೂ ಸಾಮಗ್ರಿಗಳನ್ನೂ ಬಿಟ್ಟು ಹೋಗುವುದು ಅಶ ಕ್ಯವು. ತೆಗೆದುಕೊಂಡು ಹೋಗುವುದು ಮತ್ತಷ್ಟು ಅಶಕ್ಯವು. ಸಂಧಿ ಮಾಡುವುದು ಯುಕ್ತವು. ಬಲವಂತನೊಂದಿಗೆ ಸಂಧಿಮಾಡುವುದು ಬಹಳ ಮೇಲು. ಆದುದರಿಂದ ನಾವು ಎಲ್ಲರ ಕ್ಷೇಮಾರ್ಥವಾಗಿ ಶತ್ರುವಿನ ಸಂಗಡ ಚೆನ್ನಾಗಿ ಸಂಧಿಮಾಡಿ ಕೂಡಿ ಇರೋಣ—ಎನಲು, ಮೇಘವರ್ಣನು ಪ್ರೋದ್ದೀಪಿಯನ್ನು ನೋಡಿ—ನೀನೇನು ಹೇಳುತ್ತೀಯೆ—ಎಂದನು. ಅದಕ್ಕೆ ಪ್ರೋದ್ದೀಪಿ—ಗೂಗೆಗಳಿಗೆ ರಾತ್ರಿಯಲ್ಲೇ ಹೊರತು ಹಗಲು ಕಣ್ಣು ಕಾಣಿಸುವುದಿಲ್ಲ; ನಮಗೆ ಹಗಲಿನಲ್ಲಿ ಹೊರತು ರಾತ್ರಿ ಕಾಣಿ ಸುವುದಿಲ್ಲ. ಆದಕಾರಣ ದೂತನನ್ನು ಕಳುಹಿಸುವುದು ಹೇಗೆ? ಸಂಧಿ ಯಾಗುವುದು ಹೇಗೆ? ಅವು ರಾತ್ರಿಬಂದು ನಮ್ಮ ಮೇಲೆ ಬಿದ್ದು ಕೊಂದುವು; ನಾವು ಹಗಲು ಹೋಗಿ ಅವುಗಳ ಮೇಲೆ ಬಿದ್ದು ಕೊ ಲ್ಲೋಣ—ಎಂದನು. ಆಗ ಮೇಘವರ್ಣನು ಚಿರಂಜೀವಿಯನ್ನು ನೋಡಿ —ನೀನು ಸಕಲ ನೀತಿಶಾಸ್ತ್ರಗಳನ್ನೂ ತಿಳಿದವನು. ಈಗ ಮಾಡ ಬೇಕಾದ ಕಾರ್ಯವನ್ನು ಚೆನ್ನಾಗಿ ಆಲೋಚಿಸಿ ಹೇಳಬೇಕು—ಎನಲು, ಚಿರಂಜೀವಿ ಇಂತೆಂದನು.

ಇವರೆಲ್ಲರೂ ಪರಮಾಪ್ತರು; ಜಾಣರು. ನೀತಿಶಾಸ್ತ್ರದಲ್ಲಿ ಇವರಿಗಿಂತ ಹೆಚ್ಚು ತಿಳಿದವರಿಲ್ಲ. ಆದರೂ ನನಗೆ ತಿಳಿದ ಮಟ್ಟಿಗೆ ನಾನು ಬಿನ್ನವಿಸುತ್ತೇನೆ. ಇವರೆಲ್ಲರೂ ನಂಬಿಕೆಗೆ ಪಾತ್ರರು. ಮಂತ್ರವು ಆಪ್ತಪರಂಪರೆಯಿಂದ ಭೇದಿಸದಂತೆ ರಕ್ಷಿಸಲ್ಪಡದೆ ಹೋದರೆ ಸಮಸ್ತ ಕಾರ್ಯಗಳಿಗೂ ವಿಘ್ನವು ಬರುವುದು. ವಿಘ್ನಬಂದರೆ ರಾಜ್ಯವು ವೃದ್ಧಿ ಹೊಂದದು. ಆದುದರಿಂದ ಅರಸರಿಗೆ ಮಂತ್ರರಕ್ಷಣವು ಮುಖ್ಯಕಾ

ರ್ಯವು. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ, ಆಶ್ರಯವೆಂಬ ಷಡ್ಗುಣಗಳನ್ನರಿತು, ಕರ್ಮಾರಂಭೋಪಾಯ, ಪುರುಷದ್ರವ್ಯ ಸಂಪತ್ತಿ, ದೇಶಕಾಲವಿಭಾಗ, ವಿನಿಪಾತ ಪ್ರತೀಕಾರ, ಕಾರ್ಯಸಿದ್ಧಿ ಎಂಬ ಪಂಚಾಂಗ ಗಳನ್ನು ತಿಳಿದವನಾಗಿ, ಸಾಮ, ದಾನ, ಭೇದ, ದಂಡಗಳೆಂಬ ಚತು ರುಪಾಯಗಳನ್ನರಿತು, ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿ ಎಂಬ ಶಕ್ತಿತ್ರಯವುಳ್ಳವನಾಗಿ, ಸ್ತ್ರೀಯರು, ಜೂಜು, ಪಾನ, ಬೇಟೆ, ವಾಕ್ಪಾರುಷ್ಯ, ಅನುಚಿತವಾದ ದಾನ, ಕಠಿಣದಂಡ ಎಂಬ ಸಪ್ತವ್ಯಸನ ಗಳಲ್ಲಿ ತಗುಲಿಕೊಳ್ಳದೆ ಆಯಾಕಾಲಕ್ಕೆ ತಕ್ಕಹಾಗೆ ಮಾಡುತ್ತಾ ಇರ ಬೇಕು. ತನ್ನ ಶಕ್ತಿಯನ್ನೂ ದೇಶವನ್ನೂ ಕಾಲವನ್ನೂ ವಿಚಾರಿಸಿ ಕೊಕ್ಕರೆಯ ಹಾಗೆ ಸುಮ್ಮಗಿರಬೇಕು; ಇಲ್ಲವೆ ಸಿಂಹದ ಹಾಗೆ ಪರಾಕ್ರ ಮದಿಂದ ಶತ್ರುಗಳನ್ನು ಸಂಹರಿಸಬೇಕು. ತನ್ನ ಬಲವನ್ನೂ ಇದಿರಾ ಳಿನ ಬಲವನ್ನೂ ಮನಸ್ಸಿನಲ್ಲಿ ಚೆನ್ನಾಗಿ ವಿಚಾರಿಸದೆ ಶತ್ರುಗಳನ್ನು ಜಯಿಸುವುದಕ್ಕಾಗಿ ಯಾವನು ಪ್ರಯತ್ನಮಾಡುತ್ತಾನೋ ಅವನಿಗೆ ಆಪ ತ್ತುಗಳು ಬರುವುದು ಸಿದ್ಧವೆಂದು ದೊಡ್ಡವರು ಹೇಳುತ್ತಾರೆ. ಅಸಮಾ ನವಾದ ಪ್ರತಾಪವುಳ್ಳ ಶತ್ರುವು, ದೂರದಲ್ಲಿದ್ದರೂ, ತನ್ನ ಶತ್ರುಗಳ ಬಲ ವನ್ನು ಅಡಗಿಸುವನು. ಅಲ್ಪನಾದ ಶತ್ರುವು ಆಯುಧವನ್ನು ಕೈಯಲ್ಲಿ ಹಿಡಿದುಕೊಂಡು ಸಮೀಪದಲ್ಲಿದ್ದರೂ, ತನ್ನ ಶತ್ರುವನ್ನು ಸಂಹರಿಸಲಿಕ್ಕೆ ಶಕ್ತನಾಗನು. ತಾಳ್ಮೆಯಿದ್ದರೂ ಸಮಯಬಂದಾಗ ಪರಾಕ್ರಮವನ್ನು ತೋರಿಸುತ್ತಾ ತನ್ನ ಗುಣದೋಷಗಳನ್ನೂ ಇದಿರಾಳಿನ ಗುಣದೋಷಗ ಳನ್ನೂ ಅರಿತು ಬುದ್ಧಿವಂತನಾದವನು ಶತ್ರುವನ್ನು ನಂಬನು. ಉಪಾ ಯವಂತನಾದವನ ಬಳಿಗೆ ಬಲಾತ್ಕಾರದಿಂದಲ್ಲದೆ ಲಕ್ಷ್ಮಿ ತನಗೆ ತಾನೇ ಬಂದು ಬಹು ಸಂತೋಷದಿಂದ ಅವನ ಮನೆಯಲ್ಲಿ ಯಾವಾಗಲೂ ಇರು ವಳು. ರಾಜ್ಯಲಕ್ಷ್ಮಿಯೆಂಬ ಭುಜಂಗಿಯು ಮಂತ್ರಪ್ರಭಾವದಿಂದ ತರ ಲ್ಪಟ್ಟು ಮಂತ್ರಶಕ್ತಿಯಿಂದ ಕಟ್ಟಲ್ಪಟ್ಟರೆ ನರೇಂದ್ರರಿಗೆ ಭೋಗವನ್ನು ತೋರಿಸುತ್ತಿರುವಳು. ಮದಿಸಿದವರಿಗೂ ಚಾಡಿಹೇಳುವವರಿಗೂ ಲೋ ಭವುಳ್ಳವರಿಗೂ ಕಾಮಾತುರರಿಗೂ ದುಷ್ಟರಿಗೂ ಗರ್ವಿಸಿದವರಿಗೂ ಕ್ರೋಧವುಳ್ಳವರಿಗೂ ದಂಡನೀತಿ ಸುಲಭವಲ್ಲ. ಮರ್ಯಾದೆತಪ್ಪದೆ ಗರ್ವ

ಪಡದೆ ಕಾರ್ಯಗಳನ್ನು ಮಾಡುವಾಗ ಚೆನ್ನಾಗಿ ವಿಚಾರಿಸುತ್ತಾ ತಾಳ್ಮೆ ಯುಳ್ಳಂಟಾಗಿ ಉಪಾಯಗಳನ್ನರಿತು ಮೌಢ್ಯವಿಲ್ಲದೆ ಇರುವವರಿಗೆ ದಂಡ ನೀತಿ ಸುಲಭವು. ಅರಸನಿಗೆ ಚತುರಂಗಬಲಸಮೃದ್ಧಿ ಯಿಲ್ಲದಿದ್ದರೂ ಬೊಕ್ಕಸವೂ ಮಂತ್ರವೂ ಇದ್ದರೆ ಅವು ಯುದ್ಧಕ್ಕೆ ಒದಗುವುವು. ಬೊಕ್ಕಸದಿಂದ ಎಲ್ಲರೂ ಭೃತ್ಯರಾಗುವರು. ಮಂತ್ರದಿಂದ ಜಗತ್ತು ಜಯಿಸಲ್ಪಡುವುದು. ಪ್ರಾಣತ್ಯಾಗಮಾಡಿದರೂ ಪಡೆಯಕೂಡದ ಸಂಪತ್ತುಗಳು ನೀತಿತಿಳಿದವರ ಮನೆಯಲ್ಲಿ ತಮ್ಮಿಷ್ಟಕ್ಕೆ ತಾವೇ ಬಂದು ಇರುವುವು. ಶೂರರೂ ಉಪಾಯವರಿತವರೂ ಬುದ್ಧಿವಂತರೂ ವಿದ್ವಾಂಸರೂ ಸಹಾಯವಾದರೆ ಅರಸನು ಸರ್ವೋನ್ನತನಾಗುವನು. ಅರಸನಾಗುವುದು ಸತ್ಸಹಾಯದಿಂದಲೇ ಅಲ್ಲವೇ? ರಾಜ್ಯಲಕ್ಷ್ಮಿ ವಂಶಪರಂಪರೆಯಾಗಿ ಬಂದಿದ್ದರೂ ಒಳ್ಳೆಯ ಸಹಾಯವಿಲ್ಲದ ವಿದ್ವಾಂಸನನ್ನಾಗಲಿ ತೇಜಗಾರನನ್ನಾಗಲಿ ವರಿಸಲಿಚ್ಛೈಸಳು; ಶೂರನೂ ಸತ್ಸಹಾಯಕನೂ ಆದವನನ್ನೇ ವರಿಸಲಿಚ್ಛಿಸುವಳು. ರೆಕ್ಕೆಗಳಿಲ್ಲದ ಪಕ್ಷಿಗೆ ಆಕಾಶ ಗಮನವು ಹೇಗೆ ಕೊನೆಸಾಗದೋ ಹಾಗೆಯೇ, ಸಹಾಯವಿಲ್ಲದವನಿಗೆ ಒಂದು ಪ್ರಯತ್ನವಾದರೂ ಕೊನೆಸಾಗಲಾರದು. ಪ್ರಭುವು ತನ್ನ ಬುದ್ಧಿಗೆ ತೋರಿದ ಕಾರ್ಯವನ್ನು ವಿವೇಕಿಯಾದ ಆಪ್ತನೊಂದಿಗೆ ಆಲೋಚಿಸಿದರೆ, ಅಂಬಿಗನಿಂದ ಹಡಗು ಹೇಗೆ ರೇವಿಗೆ ಸೇರುವುದೋ ಹಾಗೆ ವಿಘ್ನಗಳಿಲ್ಲದೆ ಚೆನ್ನಾಗಿ ಕ್ಷೇಮವನ್ನು ಹೊಂದುವನು. ತನ್ನ ಆದಾಯವನ್ನೂ ವ್ಯಯವನ್ನೂ ಸ್ಪಷ್ಟವಾಗಿ ತಿಳಿದುಕೊಂಡು ಗೂಢರಾದ ಚಾರರನ್ನು ಸಂಪಾದಿಸಿ ಮಂತ್ರವನ್ನು ಗುಟ್ಟುಪಡಿಸಿ ಪ್ರಾಣಿಗಳಿಗೆ ಅಪ್ರಿಯಗಳನ್ನು ನುಡಿಯದೆ ದಯೆಯುಳ್ಳವನಾಗಿ ಯಾವನಿರುವನೋ ಅವನು ಸಮುದ್ರದಿಂದ ಸುತ್ತಿಕೊಳ್ಳಲ್ಪಟ್ಟ ಮಂಡಲವನ್ನೆಲ್ಲ ಅನುಭವಿಸುವನು. ತನ್ನ ಶಕ್ತಿಯನ್ನರಿಯದೆ ಗರ್ವಾಂಧನಾಗಿ ದೊಡ್ಡ ಕಾರ್ಯಗಳಿಗೆ ಆರಂಭಿಸಿದವನು ಬಾವಿಯಲ್ಲಿಬಿದ್ದ ಮೊಟ್ಟೆಯಹಾಗೆ ಕೆಟ್ಟುಹೋಗುವನು. ಆದಕಾರಣ ಈಗ ಯುದ್ಧವೊಳ್ಳೆಯದಲ್ಲ. ಗೂಗೆಗಳಿಗೂ ನಮಗೂ ಸಹಜವೈರವಾದುದರಿಂದ ಸಂಧಿಯೂ ಸರಿಬೀಳದು—ಎನಲು, ಮೇಘ

ವರ್ಣನು ಚಿರಂಜೀವಿಯನ್ನು ನೋಡಿ—ನೀನು ಹಿಂದು ಮುಂದು ತಿಳಿದವನು. ಗೂಗೆಗಳಿಗೂ ನಮಗೂ ಹೇಗೆ ವಿರೋಧ ಪುಟ್ಟಿತು?—ಹೇಳು ಎಂದು ಕೇಳಿದನು. ಚಿರಂಜೀವಿ ಮೇಘವರ್ಣನನ್ನು ನೋಡಿ—ವಾಗ್ದೋಷದಿಂದ ವಿರೋಧ ಪುಟ್ಟಿತು.' ಪೂರ್ವದಲ್ಲಿ ಬುದ್ಧಿಯಿಲ್ಲದ ಒಂದು ಕತ್ತೆ ಹುಲಿಯ ಚರ್ಮವನ್ನು ಹೊದೆದುಕೊಂಡು ಬೇಸಗೆಯ ಕಾಲವೆಲ್ಲಾ ಹೊಟ್ಟೆತುಂಬ ಪೈರು ಮೇದು ಬದುಕಿದ್ದು ತನ್ನ ವಾಗ್ದೋಷದಿಂದ ಹತವಾಯಿತಲ್ಲವೆ? ಎಂದು ನುಡಿದನು. 'ಅದು ಹೇಗೆ' ಎಂದು ಮೇಘವರ್ಣನು ಕೇಳಲು, ಚಿರಂಜೀವಿ ಹೇಳುತ್ತಾನೆ.

The Ass detected and destroyed by its own braying.

ಒಂದು ಊರಲ್ಲಿ ಒಬ್ಬ ಅಗಸನು ಬಟ್ಟೆಯ ಮೂಟೆಗಳನ್ನು ಹೊರುವುದಕ್ಕಾಗಿ ಒಂದು ಕತ್ತೆಯನ್ನು ತಂದು, ಅದನ್ನು ಚೆನ್ನಾಗಿ ಬಲಿಸಬೇಕೆಂದು ಅದರ ಮೇಲೆ ಹುಲಿಯ ಚರ್ಮವನ್ನು ಹೊದಿಸಿ, ಒಳ್ಳೆಯ ಪೈರುಳ್ಳ ಗದ್ದೆಗಳಿಗೆ ರಾತ್ರಿಯ ಹೊತ್ತು ಹೊಡೆಯುತ್ತಾ ಬಂದನು. ಅದು ಯಥೇಷ್ಟವಾಗಿ ಪೈರನ್ನು ಮೇಯುತ್ತಿರುವುದು. ಆ ಧಾನ್ಯದ ಮಡಿಗಳಲ್ಲಿ ಕಾವಲಿರುವವರು ಅದನ್ನು ನೋಡಿ ಹುಲಿ ಎಂಬ ಭ್ರಾಂತಿಯಿಂದ ದೂರಕ್ಕೆ ಓಡುವರಲ್ಲದೆ ಪೈರುಮೇಯುದಂತೆ ಅದನ್ನು ಹೊಡೆಯರು. ಹೀಗಿರಲಾಗಿ ಕೆಲವು ದಿನಕ್ಕೆ ಒಬ್ಬ ಗದ್ದೆಯವನು ಸಾಹಸದಿಂದ ಧೂಮವರ್ಣವಾದ ಕಂಬಳಿಯನ್ನು ಹೊದೆದುಕೊಂಡು ಬಿಲ್ಲಿನಲ್ಲಿ ಬಾಣವನ್ನು ಸಂಧಿಸಿ ಮುಚ್ಚಿಕೊಂಡು ಇರಲಾಗಿ, ಆ ಕತ್ತೆ ಅಲ್ಲಿಗೆ ಬಂದು ಅವನನ್ನು ನೋಡಿ ಹೆಣ್ಣು ಕತ್ತೆಯೆಂದುಕೊಂಡು ಕೂಗುತ್ತಾ ಹತ್ತಿರಕ್ಕೆ ಬಂದಿತು. ಆಗ ಅವನು ಅದನ್ನು ನೋಡಿ—ಓಹೋ! ಇಷ್ಟು ದಿನ ಇದು ಹುಲಿ ಎಂದು ಓಡಿ ಹೋಗುತ್ತಿದ್ದೆನು. ಇದು ದೊಡ್ಡ ಕತ್ತೆಯೆಂದು ಇಂದು ಇದರ ಕೂಗಿನಿಂದ ತಿಳಿಯಿತು. ಇನ್ನೇನು ಭಯ?—ಎಂದು ಒಂದು ಬಾಣದಿಂದ ಅದನ್ನು ಕೊಂದನು.

ಅದೇಪ್ರಕಾರ ಕಾಗೆಗಳಿಗೂ ಗೂಗೆಗಳಿಗೂ ಮುಂಚೆ ವಾಗ್ದ್ವೇಷದಿಂದ ಪ್ರಬಲವಿರೋಧವು ಸಂಭವಿಸಿತು. ಅದು ಹೇಗೆಂದರೆ: ಒಂದು ಸಮಯದಲ್ಲಿ ಭೂಮಿಯಲ್ಲಿರುವ ಪಕ್ಷಿಗಳೆಲ್ಲಾ ತಮ್ಮನ್ನು ರಕ್ಷಿಸುವುದಕ್ಕಾಗಿ ಒಬ್ಬನು ಅರಸಾಗಿ ಇರಬೇಕೆಂದು ಉಲೂಕಶ್ರೇಷ್ಠನಿಗೆ ಪಟ್ಟವನ್ನು ಕಟ್ಟುವುದಕ್ಕೆ ಪ್ರಯತ್ನಮಾಡುತ್ತಿರಲಾಗಿ, ಒಂದು ಮುದಿ ಕಾಗೆಯು ಪಕ್ಷಿಸಮೂಹವನ್ನು ನೋಡಿ—ವಿಕಾರ ರೂಪವುಳ್ಳುದಾಗಿ ದಿವಾಂಧವಾದ ಗೂಗೆಯನ್ನು ಪಕ್ಷಿರಾಜನನ್ನಾಗಿ ನೀವು ಮಾಡಬೇಕಾದುದೇನು? ಇದಕ್ಕೆ ಪಟ್ಟವನ್ನು ಕಟ್ಟುವುದರಿಂದ ನಮಗೇನು ಕಾಪು ಉಂಟಾದೀತು? ಅರಸನು ಇಲ್ಲದೆಯಿದ್ದರೂ ಅರಸನೊಬ್ಬನುಂಟೆಂದು ಹೇಳಿ ಕಾರ್ಯವನ್ನು ನಡಿಸಿಕೊಳ್ಳಕೂಡದೇ? ಪೂರ್ವದಲ್ಲಿ ಚಂದ್ರನು ಅರಸೆಂದು ಹೇಳಿಕೊಂಡು ಮೊಲಗಳು ಸುಖಿಸಲಿಲ್ಲವೆ?—ಎಂದು ಹೇಳಿತು. 'ಅದು ಹೇಗೆ' ಎಂದು ಪಕ್ಷಿಗಳು ಕೇಳಲು, ಕಾಗೆ ಹೇಳುತ್ತದೆ.

The Elephant and the Hare.

ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ಹನ್ನೆರಡು ಸಂವತ್ಸರ ಅನಾವೃಷ್ಟಿ ಬಂದುದರಿಂದ ಒಂದು ಅಡವಿಯಲ್ಲಿ ಗಜಸಮೂಹಗಳು ತಮ್ಮ ಯೂಥಪತಿಯನ್ನು ನೋಡಿ—ಸ್ವಾಮಿ, ನಮಗೇನು ಉಪಾಯ? ಇಲ್ಲಿ ಕ್ಷುದ್ರಜಂತುಗಳಿಗೆ ಸ್ನಾನಪಾನಕ್ಕೆ ತಕ್ಕ ಸರಸ್ಸು ಇದೆ. ನಮ್ಮ ಸ್ನಾನಪಾನಗಳಿಗೆ ತಕ್ಕುದಿಲ್ಲ—ಎಂದು ಹೇಳಲು, ಸಲಗನು ನೀರಿರುವ ಸ್ಥಳಗಳನ್ನು ಹುಡುಕಿ ಬರುವುದಕ್ಕಾಗಿ ವೇಗವುಳ್ಳ ಆನೆಗಳನ್ನು ಪ್ರತಿದಿಕ್ಕಿಗೂ ಕಳುಹಿಸಿತು. ಅವುಗಳಲ್ಲಿ ಒಂದಾನೆಯು ಹುಡುಕಿ ನೋಡಿ ಬಂದು—ಅಯ್ಯಾ, ಇಲ್ಲಿಗೆ ಸಮೀಪದಲ್ಲಿ ಸ್ವಚ್ಛವಾದ ನೀರುಳ್ಳ ದೊಡ್ಡ ಸರಸ್ಸು ಇದೆ—ಎಂದು ಹೇಳಿತು. ಅದನ್ನು ಕೇಳಿ ಗಜರಾಜನು ಆನೆಗಳನ್ನು ಸಂಗಡ ಕರೆದುಕೊಂಡು ಮಹಾಸಂತೋಷದಿಂದ ತ್ವರೆಯಾಗಿ ಕೊಳದ ಹತ್ತಿರಕ್ಕೆ ಹೋಗಲು, ಆನೆಗಳು ನಡೆವಾಗ ಅವುಗಳ ಕಾಲಕೆಳಗೆ ಸಿಕ್ಕಿ ನಲುಗಿ ಹಲವು ಮೊಲಗಳು ಸತ್ತುವು. ತರುವಾಯ ಶಿಲೀಮುಖನೆಂಬ ಶಶಕರಾಜನು ತನ್ನ ಮಂತ್ರಿಗಳನ್ನೆಲ್ಲಾ

ಆಲೋಚಿಸುವುದಕ್ಕೆ ಕರೆದು—ಎಲ್ಲೂ ನೀರಿಲ್ಲದುದರಿಂದ ಆನೆಗಳ ಗುಂಪು ಇಲ್ಲಿಗೆ ಬಂದು ಮೇಘಗಳ ಹಾಗೆ ದಿಕ್ಕುಗಳನ್ನೆಲ್ಲಾ ವ್ಯಾಪಿಸಿದುವು. ಅವುಗಳ ತುಳಿದಾಟದಿಂದ ಅನೇಕವಾಗಿ ಮೊಲಗಳು ನಲುಗಿ ಸತ್ತುವು. ಈ ಆನೆಗಳ ಉಪದ್ರವವು ನಮಗೆ ಹೇಗೆ ತಪ್ಪೀತು ? ಏನು ಮಾಡೋಣ ?—ಎನಲು, ಬಹು ವೃತ್ತಾಂತಗಳನ್ನರಿತ ವಿಜಯನೆಂಬ ಮುದಿಮೊಲವು ಶಿಲೀಮುಖನನ್ನು ನೋಡಿ—ಅಯ್ಯಾ, ಆನೆಗಳು ಇಲ್ಲಿಗೆ ಬಾರದಂತೆ ಮಾಡುವುದು ಕಷ್ಟವಲ್ಲ—ಎಂದಿತು. ಅದಕ್ಕೆ ಶಿಲೀಮುಖನು ಸಂತೋಷಿಸಿ—ಎಲೈ ವಿಜಯನೆ, ನೀತಿಶಾಸ್ತ್ರಗಳನ್ನೂ ದೇಶಕಾಲಗಳನ್ನೂ ಅರಿತ ನೀನು ಯಾವ ಕೆಲಸಕ್ಕೆ ಪ್ರವೇಶಿಸಿದರೂ ಆ ಕೆಲಸವು ನಿಶ್ಚಯವಾಗಿ ಕೈಗೂಡಿಬರುವುದು—ಎಂದು ನುಡಿದನು. ಅದನ್ನು ಕೇಳಿ ವಿಜಯನು—ತಾವು ಆಜ್ಞಾಪಿಸಿದರೆ ನಾನು ಇಗೋ ! ಈ ಕಾರ್ಯವನ್ನು ಸಾಧಿಸಿಕೊಂಡು ಬರುತ್ತೇನೆ—ಎಂದು ಅಪ್ಪಣೆ ಪಡೆದುಕೊಂಡು ಹೊರಗೆ ಹೋಗಿ, ತನ್ನೊಳು ತಾನು ಇಂತೆಂದು ವಿತರ್ಕಿಸಿದನು—

ಸ್ಪೃಶನ್ನಿವ ಗಜೋ ಹಂತಿ ಜಿಘ್ರನ್ನಿವ ಭುಜಂಗಮಃ ।
ಪಾಲಯನ್ನಿವ ಭೂಪಾಲಃ ಪ್ರಹಸನ್ನಿವ ದುರ್ಜನಃ ॥

ನಮ್ಮಂಥ ಅಲ್ಪದೇಹಿಗಳು ಈ ಆನೆಗಳ ಸಮೀಪಕ್ಕೆ ಹೋಗಿ ಹೇಗೆ ಮಾತಾಡಬಹುದು ? ಮುಟ್ಟುವುದರ ಹಾಗೆ ಆನೆ ಕೊಲ್ಲುವುದು; ಮೂಸಿನೋಡುವುದರ ಹಾಗೆ ಹಾವು ಕೊಲ್ಲುವುದು ; ಮನ್ನಿಸುವವನ ಹಾಗೆ ಅರಸನು ಕೊಲ್ಲುವನು ; ನಗುತ್ತಿರುವವನ ಹಾಗೆ ದುರ್ಜನನು ಕೊಲ್ಲುವನು. ಆದಕಾರಣ ನಾನು ಪರ್ವತ ಶಿಖರವನ್ನೇರಿ ಗಜರಾಜನೊಂದಿಗೆ ಮಾತನಾಡುವೆನು—ಎಂದು ನಿಶ್ಚಯಿಸಿ, ಬೆಟ್ಟದ ತುದಿಗೆ ಹತ್ತಿ ಗಜರಾಜನನ್ನು ನೋಡಿ,—ಎಲೈ ಗಜರಾಜನೇ, ನಿನಗೆ ಶುಭವಾಗಲಿ—ಎಂದು ನುಡಿದನು. ಗಜರಾಜನು ವಿಜಯನನ್ನು ನೋಡಿ—ನೀನು ಯಾರು ? ಎಲ್ಲಿಂದ ಬಂದೆ ?—ಎಂದು ಕೇಳಿದನು. 'ನಾನು ದೂತನು. ನನ್ನನ್ನು ಭಗವಂತನಾದ ಚಂದ್ರನು ಕಳಹಿಸಿದನು' ಎಂದು ಮೊಲವು ಹೇಳಿತು, 'ಏನು ಕೆಲಸವಾಗಿ ಬಂದೆ ?' ಎಂದು ಆನೆ

ಕೇಳಲು, ಮೊಲವಿಂತೆಂದಿತು. 'ಆಯುಧವನ್ನು ಎತ್ತಿಕೊಂಡು ತನ್ನನ್ನು ಕೊಲ್ಲಬಂದರೂ ದೂತನು ಭಯಪಡದೆ ಯಥಾರ್ಥವನ್ನು ಹೇಳಬೇಕು. ಅರಸನು ದೂತನನ್ನು ಕೊಲ್ಲಬಾರದು. ನಾನು ಸ್ವಾಮಿ ಆಜ್ಞಾಪಿಸಿದಪ್ರಕಾರ ಹೇಳುತ್ತೇನೆ: ತನ್ನ ಬಲವನ್ನೂ ಇದಿರಾಳಿನ ಬಲವನ್ನೂ ಚೆನ್ನಾಗಿ ವಿಚಾರಿಸದೆ ಅಜ್ಞಾನದಿಂದ ಯಾವನು ಕಲಹಕ್ಕೆ ಯತ್ನಿಸುತ್ತಾನೋ ಅವನಿಗೆ ವಿಪತ್ತುಗಳು ಬರುವುವು. ಚಂದ್ರನು ಈ ಸರಸ್ಸನ್ನು ನೋಡಿಕೊಳ್ಳುವುದಕ್ಕೆ ಮೊಲಗಳನ್ನು ಕಳುಹಿಸಿದನು. ಆದುದರಿಂದ ನಮ್ಮನ್ನು ಯಾರೂ ಹೆದರಿಸಲಾರರು. ಈ ಸರಸ್ಸು ಚಂದ್ರನದಾದಕಾರಣ ಇದಕ್ಕೆ ಚಂದ್ರಸರಸ್ಸೆಂದು ಹೆಸರು ಬಂದಿತು. ಶಶಗಳು ಎಂದರೆ ಮೊಲಗಳು; ಅವುಗಳನ್ನುಳ್ಳವನಾದುದರಿಂದ ಚಂದ್ರನಿಗೆ ಶಶಿ ಎಂಬ ಹೆಸರು ಬಂದಿತು. ನಾವು ಚಂದ್ರನಿಗೆ ಮಕ್ಕಳ ಹಾಗಿರುವವರು. ನಮ್ಮಲ್ಲಿ ಅನೇಕರನ್ನು ನೀವು ತುಳಿದು ಕೊಂದುಹಾಕಿದಿರಿ. ಈ ಸಂಗತಿಯನ್ನು ಕೇಳಿ ಚಂದ್ರನಿಗೆ ಬಹಳ ಕೋಪಬಂದು—ಆನೆಗಳು ಈ ಪ್ರಕಾರ ಏತಕ್ಕೆ ಮಾಡಿದುವೋ ತಿಳಿದುಕೊಂಡು ಬಾ—ಎಂದು ಹೇಳಿ ಆತನು ನನ್ನನ್ನು ಕಳುಹಿಸಿದನು' ಎಂದು ಹೇಳಲಾಗಿ, ಆ ಆನೆ ಹೆದರಿ, —ಅಯ್ಯೋ, ತಿಳಿಯದೆ ಹಾಗೆ ಮಾಡಿದೆವು. ನಾವು ಹೊರಟು ಹೋಗುತ್ತೇವೆ. ಕೋಪಮಾಡಬೇಡ—ಎಂದು ಬೇಡಿಕೊಂಡಿತು. 'ನಮ್ಮ ಅರಸನಾದ ಚಂದ್ರನ ಸಂಗಡ ಹೇಳಿ ಅಪ್ಪಣೆ ತೆಗೆದುಕೊಂಡು ಹೋಗಿ. ಈ ಸಾಯಂಕಾಲಕ್ಕೆ ಚಂದ್ರನು ಇಲ್ಲಿಗೆ ಬರುತ್ತಾನೆ' ಎಂದು ಮೊಲವು ಹೇಳಲು, ಆನೆ ಸಮ್ಮತಿಸಿತು. ಬಳಿಕ ಹೊತ್ತು ಮುಳುಗುತ್ತಲೇ ಮೊಲವು ಗಜರಾಜನನ್ನು ಚಂದ್ರನ ಓಲಗಕ್ಕೆ ಕೊಳದ ಹತ್ತಿರಕ್ಕೆ ಕರೆದುಕೊಂಡು ಹೋಗಿ, ಕೊಳದಲ್ಲಿ ಚಂದ್ರನ ಪ್ರತಿಬಿಂಬವನ್ನು ತೋರಿಸಿತು. ನಮ್ಮ ತಪ್ಪನ್ನು ಮನ್ನಿಸಬೇಕು. ಅಜ್ಞಾನದಿಂದ ಹೀಗೆ ಮಾಡಿದೆವು. ಇನ್ನು ಮೇಲೆ ಈ ದಿಕ್ಕಿಗೆ ಬಾರೆವು—ಎಂದು ಗಜರಾಜನು ಚಂದ್ರನ ಪ್ರತಿಬಿಂಬಕ್ಕೆ ಎರಗಿದನು. ಆ ಮೇಲೆ ಮೊಲವು ಗಜರಾಜನನ್ನು ನೋಡಿ —ಚಂದ್ರನು ದಯೆಯಿಂದ ನಿನ್ನನ್ನು ಬಿಟ್ಟುಬಿಟ್ಟನು. ನೀನು ಮನಸ್ಸು ಬಂದ ಕಡೆಗೆ ಶೀಘ್ರವಾಗಿ ಹೋಗು—ಎಂದು ಹೇಳಿತು. ಬಳಿಕ ಗಜ

ಸಮೂಹಗಳೊಂದಿಗೆ ಗಜರಾಜನು ಬಹು ವೇಗವಾಗಿ ಮತ್ತೊಂದು ಸ್ಥಳಕ್ಕೆ ಹೋದನು. ತರುವಾಯ ವಿಜಯನು ಶಿಲೀಮುಖನ ಬಳಿಗೆ ಬಂದು ಆತನಿಗೆ ಅಡ್ಡಬಿದ್ದು—ಬುದ್ಧೀ, ಒಂದು ಉಪಾಯದಿಂದ ಆನೆಗಳು ಈ ಕೊಳವನ್ನು ಬಿಟ್ಟು ಹೋಗುವಂತೆಮಾಡಿ ಬಂದೆನು. ಇನ್ನು ನಾವೀ ತಾವನ್ನು ಬಿಡದೆ ಸುಖವಾಗಿ ಇರಬಹುದು—ಎಂದು ಆ ವೃತ್ತಾಂತವನ್ನೆಲ್ಲಾ ಹೇಳಿದನು. ಶಿಲೀಮುಖನು ವಿಜಯನನ್ನು ತಬ್ಬಿಕೊಂಡು ಬಹಳವಾಗಿ ಹೊಗಳಿ ಸುಖವಾಗಿದ್ದನು. ಆದಕಾರಣ ಅರಸನೊಬ್ಬನುಂಟೆಂದು ಹೇಳಿ ಕಾರ್ಯವನ್ನು ನೆರವೇರಿಸಿಕೊಳ್ಳಲಿಕ್ಕಾಗದೇ?—ಎಂದು ನುಡಿದು,—ಈ ಉಪಮರ್ದನು, ಕ್ಷುದ್ರನು, ದುರ್ಬಲನು, ನಮ್ಮನ್ನು ರಕ್ಷಿಸಲಿಕ್ಕೆ ಹೇಗೆ ಶಕ್ತನಾದಾನು? ಅಲ್ಪನನ್ನು ಪ್ರಭುವಾಗಿ ಸೇವಿಸಿ ಶಶಕಪಿಂಜಲಗಳು ಮೃತವಾದುದು ತಿಳಿಯದೋ?—ಎನಲು, 'ಆ ವೃತ್ತಾಂತವೇನು? ಹೇಳು' ಎನುತಪಕ್ಷಿಗಳು ಕೇಳಿದುವು. ಮುದಿಕಾಗಿ ಹೇಳುತ್ತದೆ—

We should not have recourse to a mean person—The Bird Kapinjala and the Hare Dirghakarna.

ಬಹುಕಾಲದ ಕೆಳಗೆ ನಾನೊಂದು ಗಿಡದಮೇಲೆ ವಾಸಮಾಡುತ್ತಿರಲಾಗಿ, ಅದೇ ಗಿಡದ ಪೊಟ್ಟರೆಯಲ್ಲಿ ಕಪಿಂಜಲನೆಂಬ ಹೆಸರುಳ್ಳ ಪಕ್ಷಿ ಒಕ್ಕಲಿದ್ದಿತು. ಒಂದುದಿನ ಕಪಿಂಜಲನು ಸಾಯಂಕಾಲದವರೆಗೆ ನಿವಾಸ ಸ್ಥಳಕ್ಕೆ ಬಾರದೆ ಹೋಗಲಾಗಿ ನಾನು ದಿಗಿಲುಪಟ್ಟು ದಿಕ್ಕುಗಳನ್ನೆಲ್ಲಾ ನೋಡುತ್ತಿರುವ ಸಮಯದಲ್ಲಿ, ದೀರ್ಘಕರ್ಣನೆಂಬ ಮೊಲವು ಆ ಪೊಟ್ಟರೆಗೆ ಪ್ರವೇಶಿಸಿತು; ಬೇಡವೆಂದು ನಾನು ಎಷ್ಟು ಹೇಳಿದರೂ ಕೇಳಲಿಲ್ಲ. ಬಳಿಕ ಸ್ವಲ್ಪ ಹೊತ್ತಿಗೆ ಕಪಿಂಜಲನು ಬಂದು—ನನ್ನ ಸ್ಥಳದಲ್ಲಿ ನೀನು ಏಕೆ ಬಂದಿದ್ದೀಯೆ? ಹೊರಗೆ ಹೋಗು—ಎಂದು ಹೇಳಿದನು. 'ಬಾವಿಗಳು, ಕೆರೆಗಳು, ಮರದ ಪೊಟ್ಟರೆಗಳು ಮೊದಲಾದುವು ಒಬ್ಬರ ಸೊತ್ತಲ್ಲ; ಯಾರು ಆಕ್ರಮಿಸಿಕೊಂಡರೆ ಅವರ ಸೊತ್ತು. ಈಗ ಈ ಸ್ಥಲಕ್ಕೆ ನಾನು ಪ್ರವೇಶಿಸಿದೆನಾದುದರಿಂದ ನಿನಗೆ ನಿಮಿತ್ತವಿಲ್ಲ. ಹೋಗು' ಎಂದು

ದೀರ್ಘಕರ್ಣನು ಹೇಳಿದನು. 'ನನ್ನ ಮನೆಯನ್ನು ತೆಗೆದುಕೊಳ್ಳುವು ದಕ್ಕೆ ನಿನಗೆ ಸಲ್ಲುವುದೇ? ಈಗ ನೀನು ನನ್ನ ಸ್ಥಳವನ್ನಾದರೂ ಬಿಟ್ಟುಬಿಡಬೇಕು; ನ್ಯಾಯಕ್ಕಾದರೂ ಬರಬೇಕು; ಇಲ್ಲವೇ ನನ್ನ ಸಂಗಡ ಜಗಳವಾದರೂ ಕಾದಬೇಕು' ಎಂದು ಕಪಿಂಜಲನು ಮೊಲದ ಸಂ ಗಡ ಹೇಳಿದನು. 'ವ್ಯವಹಾರಕ್ಕೆ ಬರಹೇಳಿದರೆ ಬಾರೆನು ಎನ್ನಬಹುದೇ? ಹೋಗೋಣ' ಎಂದು ಮೊಲವು ಆ ಪಕ್ಷಿಯ ಸಂಗಡ ಹೊರಟಿತು. ನಾನೂ ಆ ಇಬ್ಬರ ಹಿಂದೆ ವಿನೋದವಾಗಿ ಹೋದೆನು. ಸ್ವಲ್ಪ ದೂರ ಹೋಗುತ್ತಲೆ ಕಪಿಂಜಲನು ಮೊಲವನ್ನು ನೋಡಿ—ನಮಗೆ ನ್ಯಾಯ್ಯ ವನ್ನು ತೀರಿಸುವವರು ಯಾರು?—ಎಂದು ಕೇಳಿದನು. 'ಯಮುನಾ ನದಿಯ ತೀರದಲ್ಲಿ ದಧಿಕರ್ಣನೆಂಬ ಹೆಸರುಳ್ಳ ಧಾರ್ಮಿಕನಾದ ಮುದಕ ಮಾರ್ಜಾಲ ರಾಜನುಂಟು. ಆತನ ಬಳಿಗೆ ಹೋಗಿ ನಾವು ವಿವಾದವನ್ನು ತೀರಿಸಿಕೊಳ್ಳೋಣ' ಎಂದು ಮೊಲವು ಉತ್ತರಕೊಟ್ಟಿತು. 'ಬೆಕ್ಕು ಯಾವಾಗಲೂ ಬಹು ಕ್ರೂರಹೃದಯವುಳ್ಳುದು, ಅದನ್ನು ನಂಬಕೂ ಡದು, ಎಂದು ನನಗೆ ಚೆನ್ನಾಗಿ ತಿಳಿವುದು. ನಿನ್ನ ಮನಸ್ಸಿಗೆ ಹೇಗೆ ನಂಬಿಕೆ ಹುಟ್ಟಿತು?' ಎಂದು ಪಕ್ಷಿ ನುಡಿಯಿತು. 'ಆ ಮಾರ್ಜಾಲಾ ಧಿಪತಿ ಆಚಾರವಂತನು, ಉತ್ತಮನು, ಧರ್ಮಶಾಸ್ತ್ರವನ್ನು ಓದಿದ ವನು. ಈ ಸಮೀಪದಲ್ಲಿ ಇರುವವರೆಲ್ಲರೂ ಆತನನ್ನು ಬಲ್ಲರು. ನೀನು ಅಂಜದೆ ನನ್ನೊಂದಿಗೆ ಬೇಗ ಬಾ' ಎಂದು ಮೊಲವು ಹೇಳಿತು. 'ಅಂ ಜಿಕೆ ನಿನಗೂ ನನಗೂ ಸಮಾನವೇ. ನನಗೆ ಕೇಡು ಬಂದರೆ ನಿನಗೆ ಬಾರದೇ? ಹೇಳತಕ್ಕ ಬುದ್ಧಿಯನ್ನು ಹೇಳಿದೆನು. ನೀನು ಕೇಳದಿ ದ್ದರೆ ನಾನೇನು ಮಾಡಲಾಪೆನು?' ಎಂದು ಪಕ್ಷಿ ನುಡಿಯಿತು. ಬಳಿಕ ಅವು ಎರಡೂ ದಧಿಕರ್ಣನಿರುವ ಸ್ಥಳಕ್ಕೆ ಹೋಗಿ ದೂರವಾಗಿ ನಿಂತು— ಎಲೈ ದಧಿಕರ್ಣನೇ, ನಾವಿಬ್ಬರೂ ಸ್ಥಲಕ್ಕಾಗಿ ವಿವಾದಪಟ್ಟು ನಿನ್ನ ಬಳಿಗೆ ಬಂದೆವು. ಪಕ್ಷಪಾತವಿಲ್ಲದೆ ನ್ಯಾಯ್ಯವನ್ನು ಬಗೆಹರಿಸಿ ನಮ್ಮನ್ನು ತ್ವರೆಯಲ್ಲಿ ಕಳುಹಿಸಬೇಕು—ಎಂದು ಬಿನ್ನೈಸಿದುವು. 'ದೂರದಲ್ಲಿ ಇದ್ದು ಹೇಳಿದರೆ ನನಗೆ ಕಿವಿ ಕೇಳಿಸುವುದಿಲ್ಲ; ಹತ್ತಿರಕ್ಕೆ ಬಂದು ಹೇಳಿದರೆ

ಕೇಳಿಸುತ್ತದೆ, ಸಮೀಪದಲ್ಲಿರುವ ವಸ್ತು ಕಣ್ಣಿಗೆ ಕಾಣಿಸುತ್ತದೆ. ನನಗೆ ಮುಂಚಿನ ಹಾಗೆ ಇಂದ್ರಿಯ ಪಟುತ್ವವಿಲ್ಲ. ಬಹಳ ಮುದುಕನಾದೆನು' ಎಂದು ದಧಿಕರ್ಣನು ನುಡಿದನು. ಅವು ಸ್ವಲ್ಪ ಹತ್ತಿರಕ್ಕೆ ಬಂದುವು. ಆಗ ಬೆಕ್ಕು ಅವುಗಳಿಗೆ ಬಹಳ ನಂಬಿಕೆ ಉಂಟಾಗುವಹಾಗೆ ಇಂತೆಂದಿತು.

'ತಾನು ಧರ್ಮವನ್ನು ಕೆಡಿಸಿದರೆ ಅದು ತನ್ನನ್ನು ಕೆಡಿಸುವುದು; ಧರ್ಮವನ್ನು ರಕ್ಷಿಸಿದರೆ ಅದು ತನ್ನನ್ನು ರಕ್ಷಿಸುವುದು. ಆದುದರಿಂದ ಧರ್ಮವನ್ನು ಕೆಡಿಸಬಾರದು. ಮರಣಕಾಲದಲ್ಲಿ ಜೊತೆಯಾಗಿ ಬರುವುದು ಧರ್ಮವೊಂದೇ ಹೊರತು ಇತರವಾದ ಧನ ಮುಂತಾದುವುಗಳಲ್ಲಿ ಬಂದಾದರೂ ತನ್ನ ಸಂಗಡ ಬಾರದು. ನಾನು ಹೇಳುವ ಮಾತು ದಿಟ; ನಾನು ಸುಳ್ಳಾಡುವನಲ್ಲ; ಸುಳ್ಳಾಡುವ ದುಷ್ಟನು ಸಂದೇಹವಿಲ್ಲದೆ ನರಕದಲ್ಲಿ ಬೀಳುವನು. ಅಹಿಂಸೆಗೆ ಸಮಾನವಾದ ಧರ್ಮವಿಲ್ಲ.

ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿ ಲೋಷ್ಟವತ್ ।
ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ ॥

ಪರರ ಹೆಂಡಿರನ್ನು ತಾಯಿಯ ಹಾಗೂ ಪರದ್ರವ್ಯವನ್ನು ಒಡಕು ಬಕ್ಕರೆಯ ಹಾಗೂ ಸರ್ವಭೂತಗಳನ್ನು ತನ್ನ ಹಾಗೂ ಯಾವನು ನೋಡುವನೋ ಅವನು ಪರಬ್ರಹ್ಮವನ್ನು ತಿಳಿದುಕೊಳ್ಳುವನು. ಹೆದರಿ ತನ್ನ ಶರಣು ಹೊಂದಿದವನನ್ನು ರಕ್ಷಿಸಿದರೆ ಅಶ್ವಮೇಧಯಾಗವಾಡಿದ ಫಲವು ಬರುವುದು' ಎಂದು ಬೆಕ್ಕು ಹೇಳಲು, ಅವು ನಂಬಿ ಬಹಳ ಸಮೀಪಕ್ಕೆ ಬಂದುವು. ಬರುತ್ತಲೆ ಬೆಕ್ಕು ಆ ಎರಡನ್ನೂ ಒಂದೇಸಾರಿ ಹಿಡಿದು ಕೊಂದಿತು.

ಆದಕಾರಣ ಅಲ್ಪನನ್ನು ಪ್ರಭುವಾಗಿ ಸೇವಿಸಿ ಶಶಕಪಿಂಜಲಗಳು ಮೃತವಾದುವು—ಎಂದು ಹೇಳಿ, 'ಈ ಉಪಮರ್ದನನು ಅಲ್ಪನಾದುದರಿಂದ ರಾಜ್ಯಾರ್ಹನಲ್ಲ' ಎಂದು ಮುದುಕಾಗೆ ನುಡಿಯಿತು. ಬಳಿಕ ಪಕ್ಷಿಗಳೆಲ್ಲಾ — ಈ ಕಾಗೆ ಹೇಳಿದುದು ನಿಜ—ಎಂದು ಗೂಗೆಗೆ ರಾಜ್ಯಾಭಿಷೇಕವನ್ನು ಮಾಡದೆ ತಮ್ಮ ತಮ್ಮ ನೆಲೆಗಳಿಗೆ ಹೋದುವು. ತರುವಾಯ

ಉಲೂಕಪತಿ ಮುನುಕಾಗೆಯು ಹತ್ತಿರಕ್ಕೆ ಬಂದು ಸಿಟ್ಟಿನಿಂದ ಕಣ್ಣು ಗಳನ್ನು ಕೆದರಿಸಿಕೊಂಡು—ಎಲೈ ವೃದ್ಧವಾಯುಸವೇ, ನಾನು ನಿನಗೇನು ಅಪಕಾರ ಮಾಡಿದೆ? ನೀನು ಏತಕ್ಕೆ ನನ್ನ ರಾಜ್ಯಕ್ಕೆ ವಿಘಾತಮಾಡಿದೆ? ತೀಕ್ಷ್ಣವಾದ ಬಾಣದಿಂದ ತಗುಲಿದ ಗಾಯವು ಆರುವುದು; ಕೊಡಲಿ ಯಿಂದ ಕಡಿಯಲ್ಪಟ್ಟ ಕೊಂಬೆ ಚಿಗುರುವುದು; ಕಾಡಕಿಚ್ಚಿನ ಉರಿ ಯಿಂದ ಸುಟ್ಟುಹೋದ ಹುಲ್ಲು ತಿರುಗಿ ಬೆಳವುದು; ನಿಷ್ಠುರವಾದ ಮಾತಿ ನಿಂದ ಹೊಡೆಯಲ್ಪಟ್ಟ ಹೃದಯದಲ್ಲಿಯ ಈ ಗಾಯವು ಎಂದೆಂದಿಗೂ ಮಾಯದು. ಆದುದರಿಂದ ಇನ್ನುಮೇಲೆ ನಿಮಗೂ ನಮಗೂ ವೈರವು ಸಿದ್ಧ—ಎಂದು ಹೇಳಿ ತನ್ನ ಸ್ಥಾನಕ್ಕೆ ಹೋಯಿತು. ಅದು ಮೊದಲು ಉಲೂಕಗಳಿಗೂ ನಮಗೂ ವೈರವು ಸಹಜವಾಗಿ ಉಂಟಾಯಿತು. ಎಂದು ಚಿರಂಜೀವಿ ಹೇಳಿದನು. ಮೇಘವರ್ಣನು ಕೇಳಿ—ಅಯ್ಯಾ, ನಾವು ಈಗ ಮಾಡಬೇಕಾದ ಉಪಾಯವೇನೋ ಅದನ್ನು ಸಾಯಂಕಾಲಕ್ಕೆ ಮುಂ ಚೆಯೇ ಆಲೋಚಿಸಬೇಕು—ಎಂದು ಹೇಳಲು, ಚಿರಂಜೀವಿ ಇಂತೆಂ ದನು. 'ಸ್ವಾಮೀ, ಸಂಧಿವಿಗ್ರಹಗಳನ್ನು ಮಾಡಲು ಈಗ ಸಮಯವಲ್ಲ. ಯಾನಾಸನ ದ್ವೈಧಗಳೂ ಸಲ್ಲವು; ಸಮಾಶ್ರಯವೊಂದು ಯುಕ್ತವು. ಅದನ್ನು ನಾನು ಯಾವ ವಿಧದಿಂದಾದರೂ ಮಾಡುತ್ತೇನೆ. ಶತ್ರುಗಳು ಬಲವಂತರಾಗಿ ಅನೇಕರಿದ್ದರೂ ಬುದ್ಧಿಬಲದಿಂದ ಅವರನ್ನು ವಂಚಿಸ ಬಹುದು. ಪೂರ್ವದಲ್ಲಿ ಬ್ರಾಹ್ಮಣರು ಒಬ್ಬ ವಂಚಕನಿಂದ ವಂಚಿಸಲ್ಪಡ ಲಿಲ್ಲವೇ?' ಎಂದು ನುಡಿಯಲು, ಮೇಘವರ್ಣನು—ಆ ಕಥೆ ಹೇಗೆ?— ಎಂದು ಕೇಳಿದನು; ಚಿರಂಜೀವಿ ಹೇಳುತ್ತಾನೆ.

Brahmins deceived by a Knave.

"ಒಂದಾನೊಂದು ಕಾಲದಲ್ಲಿ ಕೆಲವರು ಬ್ರಾಹ್ಮಣರು ಯಾಗಾರ್ಥ ವಾಗಿ ಒಂದು ಹೋತನನ್ನು ಕೊಂಡುಕೊಂಡು ಹೋಗುತ್ತಿರಲು, ಮಾರ್ಗ ವಲ್ಲಿ ಒಬ್ಬ ವಂಚಕನು ನೋಡಿ ಆ ಹೋತನನ್ನು ಇವರು ಬಿಟ್ಟು ಬಿಟ್ಟುಹೋಗುವ ಹಾಗೆ ಮಾಡಿ ಅದನ್ನು ಒಯ್ಯಬೇಕೆಂದು ಆಲೋಚಿಸಿ

ಅವರ ಹತ್ತಿರಕ್ಕೆ ಬಂದು—ಅಯ್ಯಾ, ನೀವು ತುಂಬಾ ದೊಡ್ಡವರು. ನಾಯನ್ನು ಹೊತ್ತುಕೊಂಡು ಹೋಗುತ್ತೀರೇನು ?—ಎಂದು ಕೇಳಿದನು 'ಛೀ, ನಿನಗೇನು ತಿಳಿವುದು ಹೋಗು' ಎಂದು ಅವನ ಮಾತನ್ನು ನಿರಾಕರಿಸಿ ಬ್ರಾಹ್ಮಣರು ಹೋಗುತ್ತಿದ್ದರು. ಆ ಮೇಲೆ ಸ್ವಲ್ಪ ಹೊತ್ತಿಗೆ ಅವನು ಮತ್ತೊಂದು ವೇಷಹಾಕಿಕೊಂಡು ಬಂದು—ಅಯ್ಯಾ, ನಿಮ್ಮನ್ನು ನೋಡಿದರೆ ಬ್ರಾಹ್ಮಣರಾಗಿದ್ದೀರಿ. ಈ ದೊಡ್ಡ ನಾಯನ್ನು ಏತಕ್ಕೆ ಹೊತ್ತುಕೊಂಡು ಹೋಗುತ್ತೀರಿ ?—ಎಂದನು. 'ನಿನಗೆ ತಿಳಿಯದು ಹೋಗು' ಎಂದು ಅವನ ಮಾತನ್ನು ಸಡ್ಡೆಮಾಡದೆ ಬ್ರಾಹ್ಮಣರು ಮತ್ತೂ ಸ್ವಲ್ಪದೂರ ಸಾಗಿಹೋದರು. ಬಳಿಕ ಸ್ವಲ್ಪ ಹೊತ್ತಿಗೆ ಅವನು ಇನ್ನೊಂದು ವೇಷವನ್ನು ಹಾಕಿಕೊಂಡು—ಎಲೈ ಬ್ರಾಹ್ಮಣೋತ್ತಮರೇ, ನೀವೀನಾಯನ್ನು ಹೊರುವುದೇನು ? ನಿಮಗೀ ಅವಸ್ಥೆಯನ್ನು ಯಾರು ತಂದಿಕ್ಕಿದರು ?—ಎಂದನು. ಆ ಮಾತುಗಳನ್ನು ಬ್ರಾಹ್ಮಣರು ಕೇಳಿ ಸ್ವಲ್ಪ ಅನುಮಾನಿಸಿ—ಇಷ್ಟು ಮಂದಿ ಏಕವಾಕ್ಯವಾಗಿ ಇದು ನಾಯೆಂದು ಹೇಳುತ್ತಾರೆ. ಇದು ಅಬದ್ಧವಾಗಿರದು. ನಮಗೇನೋ ಬುದ್ಧಿಗೆ ಭ್ರಮೆ ಬಂದಿತು—ಎಂದು ನಿಶ್ಚಯಿಸಿಕೊಂಡು, ಆ ಹೋತನನ್ನು ಬಿಟ್ಟುಬಿಟ್ಟು ಹೋದರು. ತರುವಾಯ ಅವನು ಅದನ್ನು ತಾನೇ ಎತ್ತಿಕೊಂಡು ಹೋದನು. ಆದಕಾರಣ ಶತ್ರುಗಳನೇಕರು ಬುದ್ಧಿವಂತರಾಗಿ ಇದ್ದರೂ ಅವರನ್ನು ವಂಚಿಸಬಹುದು. ನಾನು ಸಾಹಸದಿಂದ ಶತ್ರುಗಳನ್ನು ಜಯಿಸುವೆನು. ನನ್ನ ಮಾತನ್ನು ನಂಬಿ ಚಿಂತೆಬಿಟ್ಟು ಇರಬೇಕು. ನನ್ನ ಮೈಗೆ ರಕ್ತವನ್ನು ಸವರಿ ನೀವೆಲ್ಲರೂ ಋಷ್ಯಶೃಂಗ ಪರ್ವತಕ್ಕೆ ಹೋಗಿ ಇರಬೇಕು. ನಾನಿಲ್ಲಿದ್ದು ನಮಗೆ ಬಂದ ಆಪತ್ತನ್ನು ತಪ್ಪಿಸುವ ಪ್ರಯತ್ನವನ್ನು ಮಾಡುತ್ತಿರುವೆನು" ಎಂದು ಹೇಳಿದನು. ಮೇಘವರ್ಣನು ಆ ಪ್ರಕಾರವೇ ಮಾಡಿದನು.

ತರುವಾಯ ಸೂರ್ಯಾಸ್ತಮಯವಾಗುತ್ತಲೇ ಉಪಮರ್ದನೆಂಬ ಘೂಕರಾಜನು ತನ್ನ ಮಂತ್ರಿಗಳನ್ನು ನೋಡಿ—ಶತ್ರುಗಳನ್ನು ನಿಶ್ಶೇಷವಾಗಿ ಕೊಲ್ಲಬೇಕು. ಬಬ್ಬನು ಉಳಿದಾಗ್ಗೂ ನಮಗೆ ಬಳ್ಳಯು

ದಲ್ಲ. ಅಗ್ನಿಶೇಷ, ಋಣಶೇಷ, ಶತ್ರುಶೇಷಗಳನ್ನು ಉಳಿಸಬಾರದು. ಆದುದರಿಂದ ನಾವು ತ್ವರೆಯಲ್ಲಿ ಆ ಆಲದ ಮರದ ಬಳಿಗೆ ಹೋಗಿ ಕಾಗೆಗಳನ್ನು ಹುಡುಕಿ ಕೊಲ್ಲಬೇಕು—ಎಂದು ನುಡಿದನು. ಮಂತ್ರಿಗಳು ಆ ಮಾತನ್ನು ಕೇಳಿ,—ಸ್ವಾಮಿ ಹೇಳಿದುದು ಮಹಾಯುಕ್ತವಾಗಿದೆ—ಎಂದು ಉಪಮರ್ದನನ್ನು ಶ್ಲಾಘಿಸಿ ಆತನ ಸಂಗಡ ಕೂಡಿಕೊಂಡು ಕಾಗೆಗಳ ನಿವಾಸವಾದ ಪೊಟ್ಟರೆಯ ಹತ್ತಿರಕ್ಕೆ ಹೋಗಿ, ಅಲ್ಲಿ ಒಂದು ಕಾಗೆಯನ್ನಾದರೂ ಕಾಣದೆ ಕಾಗೆಗಳೆಲ್ಲಾ ಸತ್ತುವೆಂದುಕೊಂಡು ತಿರುಗಿ ಬರುವ ಸಮಯದಲ್ಲಿ ಚಿರಂಜೀವಿ ಕೂಗಿದನು. ಆ ಕೂಗನ್ನು ಕೇಳಿ ಗೂಗೆಗಳು ಹೋಗಿ ಚಿರಂಜೀವಿಯನ್ನು ಹಿಡಿದುಕೊಂಡು ಬಂದು ಉಪಮರ್ದನ ಹತ್ತಿರ ಇಟ್ಟುವು. ಉಪಮರ್ದನು ಅವನನ್ನು ನೋಡಿ—ನೀನು ಯಾರು ?—ಎಂದು ಕೇಳಿದನು. 'ನಾನು ಚಿರಂಜೀವಿ ಎಂಬವನು' ಎಂದು ಅವನು ನುಡಿದನು.

Chiranjivi's Trickery.

'ನೀನು ಮೇಘವರ್ಣನಿಗೆ ಪ್ರಧಾನಮಂತ್ರಿಯಲ್ಲವೆ ? ನಿನಗೆ ಈ ಅವಸ್ಥೆ ಹೇಗೆ ಬಂದಿತು ?' ಎಂದು ಆತನು ಕೇಳಿದನು. 'ಅಯ್ಯಾ, ನನ್ನನ್ನು ಆಲೋಚನೆ ಕೇಳಿದುದಕ್ಕೆ—ಉಪಮರ್ದನು ಬಲವಂತನಾದುದರಿಂದ ಅವನ ಶರಣುಹೊಕ್ಕು ಬದುಕೋಣ—ಎಂದು ಹೇಳಿದಕಾರಣ, ಇವನು ಶತ್ರುಪಕ್ಷಪಾತಿ ಎಂದು ಕಾಗೆಗಳೆಲ್ಲಾ ಕೂಡಿ ಮೂಗುಗಳಿಂದ ನನ್ನನ್ನು ಚುಚ್ಚಿ ಕಾಲುಗಳಿಂದೊದೆದು ಈ ಪ್ರಕಾರ ಮಾಡಿದುವು. ಪ್ರಾಣ ಮಾತ್ರ ಹೋಗಲಿಲ್ಲ, ನೀವಾದರೂ ಚೆನ್ನಾಗಿ ಕೊಲ್ಲಿರಿ' ಎಂದು ಚಿರಂಜೀವಿ ಹೇಳಲು, ಉಪಮರ್ದನು ಕೇಳಿ, ರಕ್ತಾಕ್ಷ ಮೊದಲಾದ ತನ್ನ ಮಂತ್ರಿಗಳನ್ನು ನೋಡಿ—ಇವನನ್ನು ಏನು ಮಾಡೋಣ ?—ಎಂದು ಕೇಳಿದನು. ಆಗ ರಕ್ತಾಕ್ಷನಿಂತೆಂದನು. 'ಶತ್ರುವು ಹೀನಬಲನಾಗಿರುವಾಗ ಸಿಕ್ಕಿದರೆ ಅವನನ್ನು ಅವಶ್ಯವಾಗಿ ಕೊಲ್ಲಬೇಕು. ದಯೆಯಿಂದ ಅವನನ್ನು ರಕ್ಷಿಸಿದರೆ, ಮುಂದಕ್ಕೆ ಅವನೇ ಪ್ರಬಲಶತ್ರುವಾಗುವನು. ಆದುದರಿಂದ ಇವನನ್ನು ಈಗ ಕೊಲ್ಲೋಣ' ಎನಲು, ಕ್ರೂರಾಕ್ಷನು—

ಮರೆಹೊಕ್ಕವನನ್ನು ಕೊಂದರೆ ಬಹಳ ಪಾಪವೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಆದುದರಿಂದ ದಯೆಮಾಡಿ ಇವನನ್ನು ರಕ್ಷಿಸಬೇಕು—ಎಂದನು. ಬಳಿಕ ಆತನು ದೀಪ್ತಾಕ್ಷನೆಂಬ ಮಂತ್ರಿಯನ್ನು ನೋಡಿ—ನಿನಗೆ ತೋರಿದುದನ್ನು ಹೇಳು—ಎನಲು, ದೀಪ್ತಾಕ್ಷನು—ಅಯ್ಯಾ, ಶರಣಾಗತನ ಕೊಲ್ಲುವುದನ್ನು ಈ ವರೆಗೆ ನಾನೆಲ್ಲೂ ಕೇಳಲಿಲ್ಲ; ನೋಡಲೂ ಇಲ್ಲ. ಪೂರ್ವದಲ್ಲಿ ಬೆಸ್ತನು ಮರೆಹೊಗಲು, ಕಪೋತವು ಸ್ವಶರೀರಮಾಂಸವನ್ನು ಕೊಟ್ಟಿತು. ಆದಕಾರಣ ನೀನು ಶರಣಾಗತನಾದ ಈ ಕಾಗೆಗೆ ದಯೆ ತೋರಿಸಬೇಕು—ಎನಲು, ಕೇಳಿ ಉಪಮರ್ದನು ವಕ್ರನಾಸನೆಂಬ ಮಂತ್ರಿಯನ್ನು ನೋಡಿ—ನಿನ್ನ ತಾತ್ಪರ್ಯವೇನು—ಎಂದನು. ವಕ್ರನಾಸನು—ಈ ಕಾಗೆಯನ್ನು ಕೊಲ್ಲಬಾರದು. ಶತ್ರುಗಳು ತಮ್ಮಲ್ಲಿ ತಾವು ವಿರೋಧಿಸಿಕೊಳ್ಳುವುದು ನಮಗೆ ಒಳ್ಳೆಯದು. ಪೂರ್ವಕಾಲದಲ್ಲಿ ಕಳ್ಳನೂ ರಾಕ್ಷಸನೂ ವಿರೋಧಪಟ್ಟು ಬ್ರಾಹ್ಮಣನಿಗೆ ಕಳ್ಳನು ಪ್ರಾಣವನ್ನು ಕೊಟ್ಟನು; ರಾಕ್ಷಸನು ಎರಡು ಪಸುಗಳನ್ನು ಕೊಟ್ಟನು. ಆ ಕಥೆಯನ್ನು ಹೇಳುತ್ತೇನೆ ಕೇಳು—ಎಂದು ಇಂತೆಂದನು.

The internal disputes of the enemy are favorable to the opposite party—The Thief and the Evil Spirit Brahmarakshasa.

ಒಂದು ಅಗ್ರಹಾರದಲ್ಲಿ ಒಬ್ಬ ಬ್ರಾಹ್ಮಣನುಂಟು. ಆತನು ಒಳ್ಳೆಯ ನಡತೆಯುಳ್ಳವನು. ಆತನಿಗೆ ಒಳ್ಳೆಯ ಆಕಳುಗಳು ಎರಡಿದ್ದುವು. ಅವುಗಳನ್ನು ಅಪಹರಿಸಬೇಕೆಂದು ಒಬ್ಬ ಕಳ್ಳನು ಬಹುಕಾಲದಿಂದ ಹೊಂಚು ಹಾಕಿಕೊಂಡಿದ್ದು, ಒಂದು ದಿನ ರಾತ್ರಿ ಎರಡು ಜಾವದ ವೇಳೆಯಲ್ಲಿ ಮೋಡಕವಿದು ಸೋನೆಹಿಡಿಯಲು, ಗೌಗತ್ತಲೆಯಲ್ಲಿ ಒಬ್ಬೊಂಟಿಗನಾಗಿ ಹೋಗುತ್ತಾ ಇದ್ದನು. ಆಗ ಒಬ್ಬನ ಕೈ ತನ್ನ ಮೈಗೆ ಸೋಕಲು ಹೆದರದೆ—ನೀನು ಯಾರು?—ಎಂದು ಕೇಳಿದನು. ನಾನು ಬ್ರಹ್ಮರಾಕ್ಷಸನೆಂದು ಅವನು ಹೇಳಿ, ನೀನು ಯಾರೆಂದು ಕೇಳಿದನು. ನಾನು ಕಳ್ಳನೆಂದು ಇವನು ಹೇಳಿದನು. ನೀನೆಲ್ಲಿಗೆ ಹೋಗುತ್ತೀಯೆ?

ಎಂದು ರಾಕ್ಷಸನು ಕೇಳಿದನು. ಬ್ರಾಹ್ಮಣನ ಹಸುಗಳನ್ನು ಅಪಹರಿಸ ಹೋಗುತ್ತೇನೆಂದು ಕಳ್ಳನೆಂದನು. ನಾನು ಆ ಬ್ರಾಹ್ಮಣನನ್ನು ಹಿಡಿಯ ಹೋಗುತ್ತೇನೆಂದು ರಾಕ್ಷಸನು ಹೇಳಿದನು. ತರುವಾಯ ಅವರಿಬ್ಬರೂ ಬ್ರಾಹ್ಮಣನ ಮನೆಗೆ ಹೋಗಿ ಬಾಗಿಲಲ್ಲಿ ನಿಂತರು. ಆಗ ಆ ರಾಕ್ಷಸನು ಚೋರನನ್ನು ನೋಡಿ—ನಾನು ಮುಂಚೆ ಒಳಕ್ಕೆ ಹೋಗಿ ಬ್ರಾಹ್ಮಣನನ್ನು ಹಿಡಿಯುತ್ತೇನೆ; ಆ ಮೇಲೆ ನೀನು ಆಕಳುಗಳನ್ನು ಹೊಡೆದುಕೊಂಡು ಹೋಗು ಎಂದನು. ಆ ಮಾತನ್ನು ಕಳ್ಳನು ಕೇಳಿ – ನೀನು ಮೊದಲಲ್ಲಿ ಬ್ರಾಹ್ಮಣನನ್ನು ಹಿಡಿವ ಪಕ್ಷದಲ್ಲಿ ಅವನು ಕೇಕೆಹಾಕಿದರೆ ನೆರೆಹೊರೆಯವರು ಏಳುವರು. ಆ ಸಮಯದಲ್ಲಿ ನಾನು ಓಡಿ ಹೋಗಬೇಕಲ್ಲದೆ ಆಕಳುಗಳನ್ನು ಹೇಗೆ ಹೊಡೆದುಕೊಂಡು ಪೋಗಲಿಕ್ಕಾದೀತು? ನಾನು ಮೊದಲು ಆಕಳುಗಳನ್ನು ಹೊಡೆದುಕೊಂಡು ಈ ಗ್ರಾಮವನ್ನು ದಾಟಿ ಹೋಗುತ್ತಲೆ ನೀನು ಬ್ರಾಹ್ಮಣನನ್ನು ಹಿಡಿಯಬಹುದು—ಎಂದು ರಾಕ್ಷಸನ ಸಂಗಡ ಹೇಳಿದನು. ಆ ಮೇಲೆ ಅವರಿಬ್ಬರೂ ಸಿಟ್ಟಿನಿಂದ ವ್ಯಾತಿಳಿಯದೆ ಗಟ್ಟಿಯಾಗಿ ಮಾತನಾಡಲು, ಆ ಗದ್ದಲದಿಂದ ಮನೆಯ ಬ್ರಾಹ್ಮಣನು ಎಚ್ಚರಗೊಂಡು ಬೀದಿಯ ಬಾಗಿಲಿಗೆ ಬಂದು,—ಈ ಅರ್ಧರಾತ್ರಿಯ ವೇಳೆಯಲ್ಲಿ ನಮ್ಮ ಬಾಗಿಲಲ್ಲಿ ಜಗಳವಾಡುತ್ತಿದ್ದೀರಿ, ನೀವು ಯಾರು?—ಎಂದು ಕೇಳಿದನು. 'ಇವನು ನಿನ್ನ ಹಿಡಿಯಲಿಕ್ಕೆ ಬಂದ ಬ್ರಹ್ಮರಾಕ್ಷಸನು' ಎಂದು ಕಳ್ಳನು ಹೇಳಿದನು. 'ಇವನು ನಿನ್ನ ಆಕಳುಗಳನ್ನು ಅಪಹರಿಸಲಿಕ್ಕೆ ಬಂದ ಕಳ್ಳನು' ಎಂದು ಬ್ರಹ್ಮರಾಕ್ಷಸನು ನುಡಿದನು. ಆಗ ಬ್ರಾಹ್ಮಣನು ತನ್ನ ಮಂತ್ರಬಲದಿಂದ ಬ್ರಹ್ಮರಾಕ್ಷಸನನ್ನು ಓಡಿಸಿಬಿಟ್ಟನು. ಅದಕ್ಕೆ ಮುಂಚೆಯೇ ಕಳ್ಳನು ಕಂಬಿಕಿತ್ತನು. ಆದಕಾರಣ ಶತ್ರುಗಳು ತಮ್ಮಲ್ಲಿ ತಾವು ಹೋರಾಡುವುದು ಮೇಲು. ಅದೂಅಲ್ಲದೆ ಮಹಾತ್ಮನಾದ ಶಿಬಿಚಕ್ರವರ್ತಿ ತನ್ನ ಮಾಂಸವನ್ನು ಕೊಯ್ದು ಡೇಗೆಗೆ ಕೊಟ್ಟು ಶರಣುಹೊಕ್ಕ ಪಾರಿವಾಳವನ್ನು ರಕ್ಷಿಸಿದನೆಂದು ಕೇಳಲಿಲ್ಲವೆ? ನೀನು ಶರಣಾಗತನನ್ನು ಕೊಲ್ಲಕೂಡದು—ಎಂದನು. ಅದನ್ನು ಕೇಳಿ ಉಪಮರ್ದನು ಪ್ರಾಕಾರವರ್ಣನೆಂಬ ಮಂತ್ರಿಯನ್ನು ನೋಡಿ—ನಿನ್ನ ಅಭಿಪ್ರಾಯವೇನು—ಎಂದು ಕೇಳಲು, ಅವನು ವಕ್ರನಾಸನು ಹೇಳಿದಂ

ತೆಯೇ ನುಡಿದನು. ಆ ಮೇಲೆ ರಕ್ತಾಕ್ಷನು ಎದ್ದು ಅಡ್ಡಬಿದ್ದು ಉಪಮರ್ದನನ್ನು ನೋಡಿ ಇಂತೆಂದನು.

The wise council of the Owl Minister Raktaksha.

'ಹಗೆಗಾರನು ದೀನನಾಗಿ ಹೀನವೃತ್ತಿಯಿಂದ ಅಡಗಿ ಇದ್ದು ತನಗೆ ಬಲವುಂಟಾದಾಗ ವಿಜೃಂಭಿಸುವನು. ತನಗೆ ಕೇಳು ಮಾಡಿದಂಥ ದುಷ್ಟನಿಂದ ಹೇಳಲ್ಪಟ್ಟ ವಿನಯವಾಕ್ಯಗಳನ್ನು ಮೆಚ್ಚಿಕೊಳ್ಳುವ ಹುಚ್ಚನುಂಟೋ ? ಈ ಚಿರಂಜೀವಿ ಮುಂಚೆ ಪ್ರತ್ಯಕ್ಷವಾಗಿ ನಿನಗೆ ಅಪಕಾರ ಮಾಡಿದವನು. ಈಗ ಒಳ್ಳೆಯ ಮಾತು ಹೇಳಿದುದರಿಂದಲೇ ಇವನನ್ನು ನಂಬಕೂಡದು. ಮಾಡಿದ ದೋಷ ಪ್ರತ್ಯಕ್ಷವಾಗಿರಲಾಗಿ ಮೂಢನು ಒಳ್ಳೆಯ ಮಾತಿನಿಂದ ಸಂತೋಷಿಸುವನು' ಎಂದು ನಾನಾವಿಧವಾಗಿ ರಕ್ತಾಕ್ಷನು ಹೇಳಿದನು.

ಅದನ್ನು ಕೇಳಿ ಉಪಮರ್ದನು ರಕ್ತಾಕ್ಷನಾಗಿ, ಅವನ ಮಾತನ್ನಾದರಿಸದೆ, ಚಿರಂಜೀವಿಯನ್ನು ಕರೆದುಕೊಂಡು ತನ್ನ ನಿವಾಸಕ್ಕೆ ಹೋಗಿ, ಅವನನ್ನು ಅತ್ಯಂತ ಗೌರವಪಡಿಸಿಕೊಂಡಿದ್ದನು. ಒಂದು ದಿನ ಚಿರಂಜೀವಿ ಬಂದು ಉಪಮರ್ದನಿಗೆ ನಮಸ್ಕರಿಸಿ—ಅಯ್ಯಾ, ನಿನ್ನ ಹಗೆಗಾರನು ನಿನ್ನ ಗುಣಗಳನ್ನು ಆತನ ಮುಂದೆ ನಾನು ಸ್ತೋತ್ರ ಮಾಡಿದುದರಿಂದ ಬಹಳ ಕೋಪಗೊಂಡು ನನ್ನನ್ನು ಅವಮಾನ ಪಡಿಸಿದನು. ಪ್ರಾಣ ಸಿಹಿಯೆಂದು ನಾನು ಬದುಕಿರಲೊಲ್ಲೆನು. ' ಅವಮಾನಪಟ್ಟ ಈ ಬಾಳು ಏತಕ್ಕೆ ? ನಾನು ಅಗ್ನಿಯಲ್ಲಿ ಪ್ರವೇಶಿಸಿ ದೇಹವನ್ನು ನಾಗಿಸಿ ಬಿಡುವೆನು. ನನಗೆ ಯಾರೂ ಅಡ್ಡಲಾಗಿ ಬರಬೇಡಿರಿ—ಎಂದು ನುಡಿದನು. ಚಿರಂಜೀವಿ ಹೇಳಿದ ಮಾತುಗಳನ್ನೆಲ್ಲಾ ಕೇಳಿ ರಕ್ತಾಕ್ಷನು ಅವನ ಮನಸ್ಸನ್ನು ತಿಳಿದುಕೊಳ್ಳೋಣವೆಂದು—ನೀನು ಸತ್ತು ಏನುಮಾಡಬಲ್ಲೆ ?—ಎಂದನು. 'ನಾನು ಸತ್ತು ಗೂಗೆಯಾಗಿ ಹುಟ್ಟಿ ಶೀಘ್ರವಾಗಿ ಕಾಕಕುಲವನ್ನೆಲ್ಲಾ ನನ್ನ ಆಶೆ ತೀರುವ ಹಾಗೆ ಹಿಡಿದು ಕೊಲ್ಲುವೆನು ' ಎಂದು ಚಿರಂಜೀವಿ ನುಡಿದನು. 'ಈ ವಿಧವಾಗಿ ಮಾಡೋಣವು ನಿನಗೆ

ಅಸಾಧ್ಯ. ಪೂರ್ವಕಾಲದಲ್ಲಿ ಸೂರ್ಯನನ್ನೂ ಮೇಘವನ್ನೂ ವಾಯು
ವನ್ನೂ ಪರ್ವತವನ್ನೂ ಗಂಡನಾಗಿ ಉದ್ದೇಶಿಸಿ ಒಂದು ಇಲಿ ತನ್ನ ಜನ್ಮ
ವನ್ನು ಎತ್ತಿತೇ ಹೊರತು ಉತ್ಕೃಷ್ಟಜನ್ಮವನ್ನು ಎತ್ತಲಾರದೆ ಹೋ
ಯಿತು' ಎಂದು ರಕ್ತಾಕ್ಷನು ನುಡಿದನು. 'ಅದು ಹೇಗೆ?' ಎಂದು
ಚಿರಂಜೀವಿ ಕೇಳಿದನು. ರಕ್ತಾಕ್ಷನು ಹೇಳುತ್ತಾನೆ.

The Rat and the Munisvara.

ಒಬ್ಬ ಮುನೀಶ್ವರನು ಪುಣ್ಯನದಿಗಳಲ್ಲಿ ಸ್ನಾನಮಾಡುತ್ತಾ ಒಂದು
ದಿನ ಸೂರ್ಯೋದಯ ಸಮಯದಲ್ಲಿ ಅರ್ಘ್ಯಜಲವನ್ನು ಬಗಸೆಯಲ್ಲಿ ಹಿಡಿ
ದುಕೊಂಡಿದ್ದನು. ಆಗ ಒಂದು ಡೇಗೆ ಒಂದಿಲಿಯನ್ನು ಕಾಲಿನಲ್ಲಿ
ಎತ್ತಿಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತಿರಲು, ಆ ಇಲಿ ಡೇಗೆಯ
ಕಾಲಿನಿಂದ ಬಿಡಿಸಿಕೊಂಡು ಆ ಮುನಿಯ ಬಗಸೆಯಲ್ಲಿ ಬಿದ್ದಿತು. ಆಗ
ಮುನಿ ದಯೆಯುಳ್ಳವನಾಗಿ 'ಈ ಇಲಿ ಕನ್ಯಕೆಯಾಗಲಿ' ಎಂದನು.
ಆ ಕೂಡಲೆ ಅದು ಕನ್ಯಕೆಯಾಯಿತು. ಆ ಮುನಿ ಆ ಕನ್ಯಕೆಯನ್ನು
ತನ್ನ ಹೆಂಡತಿಯ ಕೈಗೆ ಕೊಟ್ಟನು. ಆಕೆ ಅದನ್ನು ತಾನು ಹೆತ್ತ
ಹೆಣ್ಣಿಗಿಂತ ಅತಿಶಯವಾದ ಪ್ರೀತಿಯಿಂದ ಬಳಯಿಸುತ್ತಿರಲಾಗಿ ಅದಕ್ಕೆ
ಯೌವನ ಬಂದಿತು. ಆಗ ಮುನಿ ಬಹಳ ಮನೋಹರವಾದ ಆಕಾರವುಳ್ಳ
ಆ ಸಾಕುಮಗಳನ್ನು ನೋಡಿ—ಇವಳು ಮದುವೆಯಾಗುವುದಕ್ಕಿಂತ
ಮುಂಚೆ ಮೈನೆರೆದರೆ ವೃಷಲಿ ಎನ್ನಿಸಿಕೊಳ್ಳುವಳು. ಇವಳನ್ನು ಮದು
ವೆಯಾದವನು ವೃಷಲೀಪತಿ ಎನ್ನಿಸಿಕೊಳ್ಳುವನು. ಆದಕಾರಣ ತಕ್ಕ
ವರನನ್ನು ವಿಚಾರಿಸಿ ತ್ವರೆಯಾಗಿ ಇವಳಿಗೆ ಮದುವೆಮಾಡಬೇಕು—
ಎಂದು ಯೋಚಿಸಿ, ಮೂರು ಲೋಕವನ್ನೂ ಪ್ರಕಾಶಪಡಿಸುವ ಸೂರ್ಯ
ನನ್ನು ಧ್ಯಾನಿಸಿ ನಮಸ್ಕರಿಸಿದನು. ಒಡನೆ ಸೂರ್ಯನು ಪ್ರಸನ್ನನಾಗಿ
ಬಂದು 'ನಿನಗೇನು ಬೇಕು' ಎಂದು ಕೇಳಿದನು. 'ಅಯ್ಯಾ, ಈ
ರೂಪವತಿಯಾದ ಹುಡುಗಿಯನ್ನು ಮದುವೆಯಾಗಲಿಕ್ಕೆ ಮನುಷ್ಯರು
ಅರ್ಹರಲ್ಲವೆಂದು ಮದುವೆಮಾಡದೆ ನಿಲ್ಲಿಸಿದ್ದೇನೆ. ಇವಳನ್ನು ಹೆಂಡತಿ
ಯಾಗ ನೀನು ಪರಿಗ್ರಹಿಸಬೇಕು. ಇದು ನನ್ನ ಕೋರಿಕೆ' ಎಂದು ಮುನಿ

ಹೇಳಿದನು. ಆಗ ಸೂರ್ಯನು ಅವಳು ಇಚ್ಛೆ ಯಂಬುದನ್ನು ತಿಳಿದು ಪರಿಹರಿಸಬೇಕೆಂದು,—ಎಲೈ ಮುನಿಯೇ, ಮೇಘನು ನನ್ನ ಪ್ರಕಾಶವನ್ನು ಮರೆಪಡಿಸುತ್ತಾನೆ. ಆದಕಾರಣ ಆತನು ನನಗಿಂತ ಬಲವಂತನು. ಆತನಿಗೆ ಈ ಕನ್ಯಕೆಯನ್ನು ಕೊಟ್ಟು ಮದುವೆಮಾಡಿದರೆ ಸರಿಯಾಗಿರುವುದು— ಎಂದನು. ಮುನಿಯು ಮೇಘನನ್ನು ಪ್ರಾರ್ಥಿಸಲು, ಆತನು ಪ್ರತ್ಯಕ್ಷನಾಗಿ 'ನನ್ನನ್ನೇಕೆ ಕರೆಯಿಸಿದೆ?' ಎಂದು ಕೇಳಿದನು. 'ಅಯ್ಯಾ, ಈ ಹುಡುಗಿ ನನ್ನ ಮಗಳು. ಇವಳನ್ನು ನೀನು ಹೆಂಡತಿಯಾಗಿ ಪರಿಗ್ರಹಿಸಬೇಕು' ಎಂದು ಆತನು ಕನ್ಯಕೆಯನ್ನು ತೋರಿಸಿದನು. ಮೇಘನು ಮುಗುಳುನಗೆನಗುತ್ತಾ ಮುನಿಯನ್ನು ನೋಡಿ—ವಾಯು ನನ್ನನ್ನು ಚದರ ಹೊಡೆಯುತ್ತಾನೆ. ಆದಕಾರಣ ವಾಯುವು ನನಗಿಂತ ಬಲವಂತನು. ನಿನ್ನ ಮಗಳನ್ನು ಆತನಿಗೆ ಕೊಟ್ಟರೆ ಚೆನ್ನಾಗಿರುವುದೇ ಹೊರತು ಇತರರಿಗೆ ಕೊಡುವುದು ಸರಿಯಲ್ಲ—ಎಂದು ಮೃದುವಾದ ಮಾತಿನಿಂದ ಮುನಿಯನ್ನು ಸಮ್ಮತಿಪಡಿಸಿ ಹೋದನು.

ತರುವಾಯ ಆ ಮುನಿ ವಾಯುವನ್ನು ಧ್ಯಾನಿಸಲಾಗಿ ಆತನು ಬಂದು ಮುಂದೆ ನಿಂತು 'ನನ್ನನ್ನು ನೆನಸಿದ ಕಾರ್ಯವೇನು,' ಎಂದು ಕೇಳಿದನು. ಆ ಮುನಿ ತನ್ನ ಮಗಳನ್ನು ಆತನಿಗೆ ತೋರಿಸಿ—ಇವಳನ್ನು ಬಹಳ ಪ್ರೀತಿಯಿಂದ ಸಾಕಿದೆನು. ತಕ್ಕ ವರನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಆಸೆಯಿಂದ ನಿನ್ನನ್ನು ಪ್ರಾರ್ಥಿಸಿದೆನು. ಈ ಕನ್ಯಕೆಯನ್ನು ಮನುಷ್ಯರಿಗೆ ಕೊಡುವುದು ನನಗೆ ಸಮ್ಮತವಿಲ್ಲ. ಜಗತ್ಪ್ರಾಣನಾದ ನಿನಗೆ ಕೊಡಬೇಕೆಂದಿದ್ದೇನೆ. ನೀನು ದಯಮಾಡಿ ಈ ಕನ್ಯಕೆಯನ್ನು ಮದುವೆ ಮಾಡಿಕೊಳ್ಳಬೇಕು. ಅದರಿಂದ ನಾನು ಕೃತಾರ್ಥನಾಗುವೆನು—ಎಂದು ಹೇಳಿದನು. ಅದನ್ನು ವಾಯುದೇವನು ಕೇಳಿ—ನಾನು ಎಲ್ಲರನ್ನೂ ಕದಲಿಸುತ್ತೇನೆ. ಬೆಟ್ಟವನ್ನು ಮಾತ್ರ ಅಲ್ಲಾಡಿಸಲಾರೆನು. ನನಗಿಂತ ಪರ್ವತಕ್ಕೆ ಬಲ ಹೆಚ್ಚು. ಆದಕಾರಣ ಈ ಹುಡುಗಿಯನ್ನು ಪರ್ವತಕ್ಕೆ ಕೊಟ್ಟು ಮದುವೆಮಾಡಿದರೆ ಬಹಳ ಒಳ್ಳೆಯದು—ಎಂದು ಹೇಳಿ ತನ್ನ ಸ್ಥಳಕ್ಕೆ ಹೋದನು.

ಆ ಮೇಲೆ ಆ ಮುನಿ ಪರ್ವತಗಳಲ್ಲಿ ಶ್ರೇಷ್ಠವಾದ ಮೇರುಪರ್ವತವನ್ನು ಆರಾಧಿಸಲಾಗಿ, ಮೇರುವು ದಿವ್ಯರೂಪವನ್ನು ಧರಿಸಿ ಮುನಿಯ ಮುಂದೆ ನಿಂತು, 'ನನ್ನಿಂದ ನಿನಗೆ ಆಗಬೇಕಾದ ಕೆಲಸವೇನು?' ಎಂದು ಕೇಳಿದನು. 'ರೂಪವತಿಯಾದ ನನ್ನ ಮಗಳನ್ನು ಯೌವನಶಾಲಿಯೂ ಚೆಂದುಳ್ಳ ಚೆಲುವನೂ ಆದ ನಿನಗೆ ಕೊಟ್ಟು ಮದುವೆ ಮಾಡಬೇಕೆಂದು ಪ್ರಾರ್ಥಿಸಿದೆನು' ಎಂದು ಮುನಿ ಹೇಳಿದನು. ಮೇರುಪರ್ವತವು ಆ ಮಾತನ್ನು ಕೇಳಿ—ಎಲೈ ಮುನಿಶ್ರೇಷ್ಠನೇ, ಇಲಿ ನೋಡಿದರೆ ಸ್ವಲ್ಪವಾಗಿ ಕಾಣಿಸುತ್ತದೆ. ಅದರ ಶಕ್ತಿಯನ್ನು ಏನೆಂದು ಹೇಳಬೇಕು! ಬಹು ದೃಢವಾದ ಪರ್ವತಗಳನ್ನು ಸಹ ತೋಡಿ ಬಿಲಗಳನ್ನು ಮಾಡುತ್ತದೆ. ಆದುದರಿಂದ ನನಗಿಂತ ಮೂಷಕವು ಬಲಶಾಲಿ. ನಿನ್ನ ಮಗಳನ್ನು ಮೂಷಕಕ್ಕೆ ಕೊಟ್ಟು ಮದುವೆ ಮಾಡಿದರೆ ವರಸಾಮ್ಯವಾಗಿ ಇರುವುದು—ಎಂದು ಹೇಳಿ ತನ್ನ ಠಾವಿಗೆ ಹೋದನು. ಬಳಿಕ ಆ ಮುನಿ ಆ ಹುಡುಗಿಯನ್ನು ಕರೆದುಕೊಂಡು ಋಷ್ಯಾಶ್ರಮಗಳಿಗೆ ಹೋಗಿ 'ಈ ಹುಡುಗಿಯನ್ನು ಮದುವೆ ಮಾಡಿಕೊಳ್ಳಿರಿ' ಎಂದು ಬ್ರಾಹ್ಮಣೋತ್ತಮರೊಂದಿಗೆ ಹೇಳಲಾಗಿ,—ಇಷ್ಟು ಚೆಲುವೆಯಾದ ಹುಡುಗಿ ನಮ್ಮ ಮನೆಯಲ್ಲಿರಲಿಕ್ಕಾಗದು. ಅರಸರಿಗಾದರೆ ಯೋಗ್ಯವಾಗಿ ಇರುವುದು—ಎಂದು ಬ್ರಾಹ್ಮಣೋತ್ತಮರು ಹೇಳಿದರು. ಆಗ ಆ ಮುನಿ ಬಹಳ ನಾಚಿಕೆಪಟ್ಟು ಮನೆಗೆ ಹೋಗಿ 'ಇವಳು ಮದುವೆಯಾಗುವುದಕ್ಕಿಂತ ಮುಂಚೆ ಋತುಮತಿಯಾದರೆ ಧರ್ಮಹಾನಿಯಾಗುವುದು; ಆದುದರಿಂದ ಇವಳು ಪೂರ್ವರೂಪವನ್ನು ಧರಿಸಿ ಸಂಚರಿಸಲಿ' ಎಂದು ನುಡಿಯಲು, ಅವಳು ಮತ್ತೆ ಇಲಿಯಾದಳು. ಆ ಮೇಲೆ ಆ ಮುನಿ ಈ ಹೆಣ್ಣು ಇಲಿಯನ್ನು ಒಂದು ಗಂಡಿಲಿಯ ಹಿಂದೆ ಬಿಟ್ಟುಬಿಟ್ಟನು. ಮುನಿಗೆ ಸೂರ್ಯ ಮೇಘ ವಾಯು ಮೇರುಪರ್ವತಗಳನ್ನು ಪ್ರತ್ಯಕ್ಷ ಮಾಡಿಕೊಳ್ಳುವಷ್ಟು ಶಕ್ತಿಯಿದ್ದರೂ ಅದರ ಮೂಷಿಕಾಜನ್ಮವನ್ನು ಬೇರೆ ಮಾಡಲಿಲ್ಲವಾಯಿತು.

Upamardana's kind reception of Chiranjivi, snd the consequent destruction of the Owls.

ಆ ಬಳಿಕ ಉಪಮರ್ದನನು ರಕ್ತಾಕ್ಷನ ಮಾತುಗಳನ್ನು ಆದರಿಸದೆ ಚಿರಂಜೀವಿಯನ್ನು ಹತ್ತಿರಕ್ಕೆ ಕರೆದು ಅಭಯಪ್ರದಾನಮಾಡಿ— ಎಲೈ ಚಿರಂಜೀವಿಯೋ, ನೀನು ಸ್ವೇಚ್ಛೆಯಾಗಿ ನನ್ನ ಮನೆಯಲ್ಲಿ ಇರು —ಎಂದು ಅದಕ್ಕೆ ಆಹಾರಗಳನ್ನು ಒದಗಿಸುವುದಕ್ಕೆ ತನ್ನ ಪರಿಚಾರಕರನ್ನು ಏರ್ಪಡಿಸಿ ಬಹು ಪ್ರೀತಿಯಾಗಿದ್ದನು. ಆ ಮೇಲೆ ಚಿರಂಜೀವಿ ಸ್ವಲ್ಪಕಾಲವಿದ್ದು ಶತ್ರುಗಳಿಗಿರುವ ಬಲವನ್ನೂ ದುರ್ಗಸ್ಥಾನಗಳನ್ನೂ ರಹಸ್ಯಮಾರ್ಗಗಳನ್ನೂ ತಿಳಿದುಕೊಂಡು, ಶತ್ರುಗಳನ್ನು ನಾಶಮಾಡಲಿಕ್ಕೆ ಇದು ಸಮಯವೆಂದು ಎಣಿಸಿ, ಒಂದು ದಿನ ಬೆಳಗ್ಗೆ ಗೂಗೆಗಳು ಮಲಗಿ ಮೈ ಮರೆತು ನಿದ್ದೆ ಹೋಗುತ್ತಿರುವಾಗ, ಗವಿಯ ಸುತ್ತಲೂ ಹಸುಗಳ ಮಂದೆ ನಿಲ್ಲುವುದರಿಂದ ಸೇರಿದ ಗೊಬ್ಬರವನ್ನು ಸ್ವಲ್ಪ ಕೊಕ್ಕಿನಲ್ಲೂ ಸ್ವಲ್ಪ ಕಾಲುಗಳಲ್ಲೂ ತೆಗೆದುಕೊಂಡು ಹೋಗಿ ಗುಹೆಯ ದ್ವಾರಗಳಲ್ಲೆಲ್ಲಾ ತುಂಬಿಟ್ಟು, ಗೂಗೆಗಳನ್ನು ಚೆನ್ನಾಗಿ ನೋಡಿ— ನನ್ನನ್ನು ನಂಬಿದ ಇವುಗಳನ್ನು ಕೊಲ್ಲುವುದರಿಂದ ನನಗೆ ದೋಷವಿಲ್ಲ. ಶತ್ರುಗಳನ್ನು ನಂಬಿಸದೆ ಕೊಲ್ಲುವುದು ಕಷ್ಟ. ನನ್ನನ್ನೇ ಮುಖ್ಯವಾಗಿ ನಂಬಿದ ಮೇಘವರ್ಣನಿಗೆ ಹಿತವನ್ನು ಮಾಡಬೇಕು. ಆಳಿದವನು ಸೇವಕನಿಗೆ ಯಾವ ಕೆಲಸವನ್ನು ಹೇಳುತ್ತಾನೋ ಆ ಕೆಲಸವನ್ನು ನೆರವೇರಿಸುವುದು ಅವನಿಗೆ ಧರ್ಮವು. ಇಂತಹ ಸಂಗತಿಯಲ್ಲಿ ಪಾಪಪುಣ್ಯಗಳು ಪ್ರಭುವಿಗೆ ಬರುವುವೇ ಹೊರತು ಭೃತ್ಯನಿಗೆ ಏನು ದೋಷವಿದೆ? ಮೇಘವರ್ಣನಿಗೆ ಈ ಸಮಯವನ್ನು ತಿಳಿಸಬೇಕು— ಎಂದೆಣಿಸಿ, ತಟ್ಟನೆ ಮೇಘವರ್ಣನ ಬಳಿಗೆ ಹೋಗಿ ಆತನಿಗೆ ಎರಗಿ 'ನಮ್ಮ ಮುಯ್ಯಿ ತೀರಿಸಿಕೊಳ್ಳುವುದಕ್ಕೆ ಯುಕ್ತವಾದ ಕಾಲವನ್ನು ಕಂಡು ಹಿಡಿದು ನಿಮಗೆ ತಿಳಿಸುವುದಕ್ಕೆ ಬಂದೆನು. ಕಡೆಯಲ್ಲಿ ನನ್ನ ಸಮಾಚಾರವನ್ನು ಹೇಳುವೆನು. ಈಗ ನಮ್ಮವರೆಲ್ಲರೂ ಕಸಕಡ್ಡಿಗಳನ್ನು ತೆಗೆದುಕೊಂಡು ಬರುವ ಹಾಗೆ ಆಜ್ಞಾಪಿಸಿರಿ' ಎಂದು ಹೇಳಿ, ತಾನು ಉರಿವ ಕೊಳ್ಳಿಯನ್ನು ಕಚ್ಚಿಕೊಂಡು ಜಾಗ್ರತೆಯಾಗಿ ಮುಂದೆ ಹೋದನು. ಕಾಗೆಗಳೆಲ್ಲಾ ತೃಣ

ಕಾಷ್ಟಗಳನ್ನೆತ್ತಿಕೊಂಡು ಶತ್ರುಗಳನ್ನು ಗೆಲ್ಲುವುದಕ್ಕಾಗಿ ಮೇಘವರ್ಣನ ಸಂಗಡ ಸಂತೋಷದಿಂದ ಆಕಾಶಮಾರ್ಗದಲ್ಲಿ ಹಾರಿ ಗೂಗೆಗಳಿರುವ ಗುಹೆಯ ಬಾಗಿಲಲ್ಲಿ ಆ ಕಡ್ಡಿಕಸಗಳನ್ನು ತುಂಬಿದುವು. ಚಿರಂಜೀವಿ ತಾನು ತಂದ ಉರಿಗೊಳ್ಳಿಯನ್ನು ತಗುಲಿಸಿ ರೆಕ್ಕೆಗಳಿಂದ ಬೀಸಿ ಉರಿಸಿದನು. ತರುವಾಯ ಹೊಗೆಯೂ ಉರಿಯೂ ಹೆಚ್ಚಿ ಗುಹೆಯಲ್ಲಿ ಪ್ರವೇಶಿಸಲು, ಗೂಗೆಗಳು ಭಯಭ್ರಾಂತಿಗೊಂಡು ದಿಕ್ಕುದಿಕ್ಕಿಗೆ ಓಡಿ, ಗುಹೆಯ ಒಳಗಿನಿಂದ ಹೊರಗೆ ಹೋಗುವುದಕ್ಕೆ ಎಲ್ಲೂ ಹಾದಿಕಾಣದೆ ತತ್ತರಿಸುತ್ತಿದ್ದುವು.

ಆಗ ರಕ್ತಾಕ್ಷನು ತನ್ನ ಸ್ವಾಮಿಯಾದ ಉಪಮರ್ದನ ಹತ್ತಿರಕ್ಕೆ ಬಂದು —ಚಿರಂಜೀವಿಯನ್ನು ಕೊಲ್ಲಬಾರದೆಂದು ನೀನೂ ನಿನ್ನ ಮಂತ್ರಿಗಳೂ ಹೇಳಿದಿರಿ. ಈಗ ಈ ಪ್ರಕಾರ ಅನುಭವಿಸಬೇಕಾಗಿ ಬಂದಿತು. ಇಂತಹ ಪಾಪ ಎಲ್ಲಾದರೂ ಉಂಟೇ? ತನಗೆ ಹಿತನಾದ ಮಂತ್ರಿಯ ಮಾತುಗಳನ್ನು ಕೇಳದ ಅರಸನು ಬಂಧು ಮಿತ್ರಸಹಿತವಾಗಿ ವಿಪತ್ತನ್ನು ಹೊಂದುವನು—ಎಂದು ನುಡಿದನು. ಉಪಮರ್ದನು ಖಿನ್ನನಾಗಿ—ಪ್ರತಿಕೂಲವಾದ ಕಾಲದಲ್ಲಿ ಪ್ರಾಣಿಗಳಿಗೆ ಧರ್ಮವು ಅಧರ್ಮವಾಗಿ ಕಾಣುವುದು, ಕೆಟ್ಟದಾರಿ ಒಳ್ಳೆಯ ದಾರಿಯಾಗಿ ಕಾಣುವುದು, ಶತ್ರುವು ಮಿತ್ರನಾಗಿ ಕಾಣುವನು. ಆದಕಾರಣ ನನಗೆ ನೀನೆಷ್ಟು ಹಿತನಾಗಿ ಹೇಳಿದಾಗ್ಯೂ ಕೇಳದೆ ಚಿರಂಜೀವಿಯನ್ನು ಪರಿಗ್ರಹಿಸಿ ಯಮನ ಹತ್ತಿರಕ್ಕೆ ಹೋಗಲಿಕ್ಕೆ ಮಾರ್ಗವನ್ನು ಮಾಡಿಕೊಂಡೆನು. ದೈವವಶದಿಂದ ಬಂದುದಕ್ಕೆ ನಾವೇನು ಮಾಡಬಹುದು! ಪೂರ್ವದಲ್ಲಿ ಒಂದು ಅಕ್ಷೌಹಿಣಿಯೊಂದಿಗೆ ಪಾಂಡವಬಲವಿರಲಾಗಿ, ರಾತ್ರಿಯಲ್ಲಿ ಅಶ್ವತ್ಥಾಮನೊಬ್ಬನೇ ಅವರನ್ನು ಸಂಹರಿಸುತ್ತಿರುವ ಸಮಯದಲ್ಲಿ, ಶ್ರೀ ಕೃಷ್ಣಸ್ವಾಮಿಯು ಅಲ್ಲಿ ಇದ್ದೂ ನಿವಾರಿಸಲು ಶಕ್ತನಾದನೇ? ದೈವಕೃತ್ಯವನ್ನು ತಪ್ಪಿಸಲಿಕ್ಕೆ ಯಾರಿಂದಲೂ ಆಗದು—ಎಂದು ಹೇಳಿದನು. ಅಷ್ಟರಲ್ಲಿ ಉರಿ ಬಲವಾದುದರಿಂದ ಗೂಗೆಗಳೆಲ್ಲಾ ಸತ್ತುಹೋದುವು. ಆಗ ಕಾಗೆಗಳು ಸಂತೋಷಿಸಿ ತಮ್ಮ ನಿಜನಿವಾಸಕ್ಕೆ ಹೋದುವು.

Chiranjivi honoured by Meghavarna.

ಅಲ್ಲಿ ಮೇಘವರ್ಣನು ಮಹಾ ವೈಭವದೊಂದಿಗೆ ಒಡ್ಡೋಲಗದಲ್ಲಿದ್ದು, ಚಿರಂಜೀವಿಯನ್ನು ನೋಡಿ ತಬ್ಬಿಕೊಂಡು ಚೆನ್ನಾಗಿ ಸನ್ಮಾನಿಸಿ —ಇಷ್ಟು ದಿನ ಶತ್ರುಗಳು ನಂಬುವಂತೆ ಯಾವ ವಿಧವಾಗಿ ನಡೆದು ಕೊಂಡೆ? ನನಗೆ ಹೇಳಬೇಕು—ಎನಲು, ಚಿರಂಜೀವಿ ಇಂತೆಂದನು.

ಅಯ್ಯಾ, ಕಾರ್ಯಾರ್ಥಿಯಾದವನು ಒಂದು ವೇಳೆ ಬರಿಯ ನೆಲದಲ್ಲಿ ಮಲಗಿಕೊಳ್ಳುವನು, ಒಂದು ವೇಳೆ ಬಳ್ಳಿಯ ಮೃದುವಾದ ಹಾಸಿಗೆಗಳ ಮೇಲೆ ಮಲಗಿಕೊಳ್ಳುವನು, ಒಂದುವೇಳೆ ಕಾಯಿ ಸೊಪ್ಪುಗಳನ್ನು ತಿನ್ನುವನು, ಒಂದುವೇಳೆ ಷಡ್ರಸೋಪೇತವಾದ ಶಾಲ್ಯನ್ನವನ್ನು ಉಣ್ಣುವನು; ಒಂದು ವೇಳೆ ಬೊಂತೆಯನ್ನು ಹೊದೆಯುಕೊಳ್ಳುವನು, ಒಂದು ವೇಳೆ ಬಳ್ಳಿಯ ಊಚುಬಟ್ಟೆಗಳನ್ನು ಉಟ್ಟುಕೊಳ್ಳುವನು; ಸುಖದುಃಖಗಳನ್ನು ಮನಸ್ಸಿನಲ್ಲೆಣಿಸನು. ಅನುವಲ್ಲದ ವೇಳೆಯಲ್ಲಿ, ಅಧಿಕ ಸಾಮರ್ಥ್ಯವುಳ್ಳವನಾದಾಗ್ಯೂ, ಶತ್ರುಗಳನ್ನಾದರೂ ಸೇವಿಸಿ ಸಮಯ ಬಂದಾಗ ಶತ್ರುಗಳನ್ನು ಗೆಲ್ಲುವನು. ಸಕಲದಿಕ್ಕಿನಲ್ಲಿ ಇರುವ ಅರಸುಗಳನ್ನೂ ಪರಾಕ್ರಮದಿಂದ ಗೆಲ್ಲುವಂತಹ ತಮ್ಮಂದಿರನ್ನುಳ್ಳ ಯುಧಿಷ್ಠಿರನು ಸಹ ಅನುಕೂಲವಿಲ್ಲದ ವೇಳೆಯಲ್ಲಿ ತನ್ನ ತಮ್ಮಂದಿರ ಸಹಿತ ಸಕಲ ಕಷ್ಟಗಳನ್ನೂ ಅನುಭವಿಸಲಿಲ್ಲವೇ? ಮತ್ಸ್ಯದೇಶಾಧಿಪತಿಯಾದ ವಿರಾಟರಾಜನ ಪತ್ತಿರ ಕಾವಿಯ ಬಟ್ಟೆಗಳನ್ನು ಉಟ್ಟುಕೊಂಡು ಕಂಕಭಟ್ಟನೆಂಬ ಹೆಸರಿನಿಂದ ಧರ್ಮರಾಯನು ಇದ್ದನು; ವಲಲನೆಂಬ ಹೆಸರಿನಿಂದ ಅಡಿಗೆಯವನಾಗಿ ಭೀಮನು ಕಾಲವನ್ನು ಕಳೆದನು; ಶಿಖಂಡಿಯಾಗಿ ಹೆಂಗಸರಿಗೆ ನಾಟ್ಯವನ್ನು ಕಲಿಸುತ್ತಾ ಬೃಹಂನಳೆಯೆಂಬ ಹೆಸರಿನಿಂದ ಅರ್ಜುನನು ವರ್ತಿಸಿದನು; ತಂತ್ರಿಪಾಲನೆಂಬ ಹೆಸರಿನಿಂದ ನಕುಲನು ಅಶ್ವಶಿಕ್ಷಕನಾದನು; ದಾಮಗ್ರಂಥಿ ಎಂಬ ಹೆಸರಿನಿಂದ ಸಹದೇವನು ವನ ಕಾವವನಾಗಿ ಇದ್ದನು. ಬಳಿಕ ಕಾಲವು ಅನುಕೂಲಿಸಿ ಬರುತ್ತಲೇ ಪಾಂಡವರು ದುರ್ಯೋಧನನೇ ಮೊದಲಾದ ಶತ್ರುಗಳನ್ನೆಲ್ಲರನ್ನೂ ಗೆದ್ದು ಸಕಲ ಸಾಮ್ರಾಜ್ಯವನ್ನೂ ಅನುಭವಿಸಿದರು. ಆದಕಾರಣ ನಾನು ಮಹಾ ಬಲ

ಹೀನನಾದ ದೆಸೆಯಿಂದ ಶತ್ರುಗಳನ್ನು ಓಲೈಸಿ ಹಾಗೆತೀರಿಸಿದೆನು—ಎಂದು ಚಿರಂಜೀವಿ ಹೇಳಿದನು.

ಆಗ ಮೇಘವರ್ಣನು ಸಾದರವಾಗಿ ಚಿರಂಜೀವಿಯನ್ನು ನೋಡಿ—ಶತ್ರು ಮಧ್ಯದಲ್ಲಿ ಸ್ವಲ್ಪವಾದರೂ ಶಂಕೆಯಿಲ್ಲದೆ ಧೈರ್ಯದಿಂದ ಹೇಗೆ ವರ್ತಿಸಿದೆ ಹೇಳು—ಎನಲು, ಚಿರಂಜೀವಿ ಇಂತೆಂದನು:—ದೇವಾ ಕೇಳು. ಉಲೂಕಪತಿಯಾದ ಉಪಮರ್ದನನ ಮಂತ್ರಿಗಳಲ್ಲಿ ರಕ್ತಾಕ್ಷನೆಂಬುವನು ನೀತಿಶಾಸ್ತ್ರವನ್ನು ಚೆನ್ನಾಗಿ ತಿಳಿದವನು, ಸಜ್ಜನರಿಗೆ ಪ್ರಿಯನು, ಪರಾಕ್ರಮವುಳ್ಳವನು, ಕ್ರೂರವಲ್ಲದ ನಡೆವಳಿಕೆಯುಳ್ಳವನು, ಸರ್ವಜನರಿಂದಲೂ ಸ್ತೋತ್ರ ಮಾಡಲ್ಪಟ್ಟವನು, ನನಗಿಂತ ಹೆಚ್ಚು ಬುದ್ಧಿಯುಳ್ಳವನು. ಅವನು ನನ್ನನ್ನು ಕೊಲ್ಲಬೇಕೆಂದು ಉಪಮರ್ದನನ ಸಂಗಡ ಎಷ್ಟು ಹೇಳಿದಾಗ್ಯೂ ಆತನು ಕೇಳದೆ, ಇತರರಾದ ತನ್ನ ಮಂತ್ರಿಗಳ ಸಂಗಡ ಆಲೋಚಿಸಿ, ಶರಣಾಗತರನ್ನು ಕೊಲ್ಲಕೂಡದೆಂದು ಅವರು ಹೇಳಲು, ಅವರ ಮಾತನ್ನು ಕೇಳಿ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಇಷ್ಟು ವಿಪತ್ತನ್ನು ತಂದುಕೊಂಡನು. 'ನೀನು ಅತಿಸಮರ್ಥನು, ಆದಕಾರಣ ಶತ್ರುಗಳನ್ನು ಜಯಿಸಿದೆ. ತನಗೆ ಸಮಯವಲ್ಲದಾಗ ಶತ್ರುಗಳಿಗೆ ಅಧೀನನಾಗಿದ್ದು ತರುವಾಯ ಶತ್ರುಗಳನ್ನು ಗೆಲ್ಲುವುದು ಒಳ್ಳೆಯದು. ಪೂರ್ವದಲ್ಲಿ ಒಂದು ಕೃಷ್ಣಸರ್ಪವು ಕಪ್ಪೆಗಳನ್ನು ತನ್ನ ಬೆನ್ನಿನ ಮೇಲೆ ಹೊತ್ತು ಓಲೈಸುತ್ತಿದ್ದು ಸಮಯ ಬಂದಾಗ ಅವುಗಳನ್ನೆಲ್ಲಾ ಕೊಂದಿತು—ಎನಲು, ಮೇಘವರ್ಣನು ಆ ಕಥೆಯನ್ನು ತನಗೆ ಹೇಳೆಂದನು. ಚಿರಂಜೀವಿ ಹೇಳುತ್ತಾನೆ.

Trust-breaking—The Serpent Mandavisha and the Frog Jalapada.

ಮಂದವಿಷನೆಂಬ ಹೆಸರುಳ್ಳ ಒಂದು ನಾಗರಹಾವು ಹಸಿವುಗೊಂಡು ತಿರುಗುತ್ತಿದ್ದು ಕಪ್ಪೆಗಳುಳ್ಳ ಒಂದು ಕೊಳದ ಹತ್ತಿರಕ್ಕೆ ಹೋಗಿ ಅವುಗಳ ಅರಸನಾದ ಜಾಲಪಾದನೆಂಬ ಕಪ್ಪೆಯನ್ನು ನೋಡಿ, ಮಹಾದೈನ್ಯದಿಂದ ಹೀನವಾದ ಕಂಠಸ್ವರದಲ್ಲಿ—ನನ್ನ ಹೊಟ್ಟೆಗೋಸ್ಕರ ನಾನು ಒಬ್ಬ

ರನ್ನೂ ಕೇಳದೆ ಈ ವರೆಗೆ ಕಾಲಕಳೆದೆನು. ಈಗ ನಿಮಗೆ ಭೃತ್ಯನಾಗಿ ಇರಬೇಕಾಗಿ ಬಂದಿತು. ನಾನೇನು ಮಾಡಲಿ! ನನ್ನನ್ನು ದೈವವು ಈ ಗತಿಗೆ ತಂದಿತು—ಎನಲು, ಜಾಲಪಾದನು ಕೇಳಿ—ನಮ್ಮನ್ನು ಈಗ ಆಶ್ರಯಿಸುವುದಕ್ಕೆ ಕಾರಣವೇನು?—ಎಂದು ಕೇಳಿದನು. ಅದಕ್ಕೆ ಮಂದವಿಷನು—ನಿನ್ನೆ ರಾತ್ರಿವೇಳೆಯಲ್ಲಿ ಹಸಿವಿನಿಂದ ಬಳಲಿ ಅತ್ತಿತ್ತ ತಿರುಗುತ್ತಿರುವಾಗ ಒಬ್ಬ ಬ್ರಾಹ್ಮಣಬಾಲನು ಕಾಣದೆ ನನ್ನನ್ನು ತುಳಿದನು. ನಾನು ಅವನನ್ನು ಅತ್ಯುಗ್ರನಾಗಿ ಕಚ್ಚಿದೆನು. ಆಗ ವಿಷವೇರಿ ಅವನು ಮೂರ್ಛೆ ಹೋಗಲು, ಆ ಹುಡುಗನ ತಂದೆ ನೋಡಿ ಬಹಳ ದಿಗಿಲುಪಟ್ಟು ಮಂತ್ರವಾದಿಗಳನ್ನು ಕರೆಸುತಂದು ಮಂತ್ರಹಾಕಿಸಿ ಔಷಧಗಳನ್ನು ಕೊಟ್ಟು ಅವನನ್ನು ಬದುಕಿಸಿಕೊಂಡು, ನನ್ನ ಮೇಲೆ ಬಹು ಸಿಟ್ಟನಿಂದ ಕಣ್ಣು ಕೆರಳಿಸಿಕೊಂಡು, 'ನನ್ನ ಹುಡುಗನನ್ನು ಕಚ್ಚಿದ ಕೆಟ್ಟ ಹಾವು ತನಗೆ ಆಹಾರವಾದ ಕಪ್ಪೆಗಳನ್ನು ಹೊತ್ತು ಬಹಳ ಹಸಿವಿನಿಂದ ಕಂಗೆಟ್ಟು ಓಡಲಾರದೆ ಆ ಕಪ್ಪೆಗಳು ದಯಮಾಡಿ ಕೊಟ್ಟ ಆಹಾರವನ್ನು ತಿಂದು ಅವುಗಳಲ್ಲಿ ಬಂದಾಗ ಸಂಚರಿಸಲಿ' ಎಂದು ನನ್ನನ್ನು ಶಪಿಸಿದನು. ನಾನು ಸಮೀಪದಲ್ಲಿರುವ ಹುತ್ತಿನಲ್ಲಿದ್ದು ಈ ಮಾತುಗಳನ್ನೆಲ್ಲಾ ಕೇಳಿದೆನು. ಸಿಡಿಲಿನ ಪೆಟ್ಟನ್ನಾದರೂ ತಪ್ಪಿಸಿಕೊಳ್ಳಬಹುದಲ್ಲದೆ ಬ್ರಾಹ್ಮಣನ ಶಾಪವನ್ನು ತಪ್ಪಿಸಿಕೊಳ್ಳಕೂಡದು. ಈಗ ನೀನೇ ದಿಕ್ಕೆಂದು ಬಂದೆನು. ದಯೆಯಿಂದ ನನ್ನನ್ನು ಹತ್ತಿರಕ್ಕೆ ಸೇರಿಸಿಕೊಂಡು ನಿನ್ನ ಭೃತ್ಯನನ್ನಾಗಿ ಆಳಿ ನನಗೆ ತುಸು ಆಹಾರಕೊಟ್ಟು ಕಾಪಾಡಬೇಕು. ಪೂರ್ವದಲ್ಲಿ ನನ್ನ ನಿಮ್ಮ ಹಿರಿಯರು ವಿವೇಕವಿಲ್ಲದುದರಿಂದ ಸ್ನೇಹಿಸಲೊಲ್ಲದೆ ವೃಥಾ ಹಗೆತನವನ್ನು ಬೆಳಸಿಕೊಂಡು ಹೋದರು. ಈಗ ನಾನೂ ನೀವೂ ಸ್ನೇಹವಾಗಿ ಕೂಡಿ ಇರೋಣ—ಎಂದು ಹೇಳಿದನು. ಅದಕ್ಕೆ ಮಂಡೂಕರಾಜನು ಸಂತೋಷಿಸಿ ಆ ಹಾವಿನ ಬೆನ್ನಿನ ಮೇಲೇರಿ ಕುಳಿತುಕೊಂಡಿರಲು, ಆತನ ಮಂತ್ರಿಗಳೂ ಬಂದು ಅದರ ಬೆನ್ನನ್ನೇರಿ ತಮ್ಮ ಅರಸನ ಸಂಗಡ ಕುಳಿತುಕೊಂಡರು. ಆಮೇಲೆ ಮಂದವಿಷನು ಸ್ವಲ್ಪಹೊತ್ತು ತಿರುಗಿ ದಣಿದವನಹಾಗೆ ಮೆಲ್ಲಮೆಲ್ಲಗೆ ನಡೆ

ಯುತ್ತಾ ಇದ್ದನು. ಜಾಲಪಾದನು—ಮೆಲ್ಲಗೆ ನಡೆಯುತ್ತೀಯೆ; ಇದೇನು?—ಎಂದು ಕೇಳಿದನು. 'ಆಹಾರವಿಲ್ಲದುದರಿಂದ ನಡೆಯಲಾರದೆ ಶ್ರಮಪಡುತ್ತೇನೆ. ನೀವು ಕೊಡದಿದ್ದರೆ ನನಗೆ ಆಹಾರವೆಲ್ಲಿಯದು? ಈಗ ನನಗೇನಾದರೂ ಹೊಟ್ಟೆಗೆ ಕೊಟ್ಟು ರಕ್ಷಿಸದಿದ್ದರೆ ಪ್ರಾಣವು ನಿಲ್ಲುವುದಿಲ್ಲ' ಎಂದು ಮಂದವಿಷನು ನುಡಿದನು. ಆ ಮಾತನ್ನು ಮಂಡೂಕ ರಾಜನು ಕೇಳಿ ಹಾವನ್ನು ಕರುಣಿಸಿ—ಈ ಕೊಳದಲ್ಲಿರುವ ಕಪ್ಪೆಗಳನ್ನು ನಿನಗೆ ಬೇಕಾದಷ್ಟು ನನ್ನ ಆಜ್ಞೆಯ ಮೇಲೆ ತಿಂದು ಶೀಘ್ರವಾಗಿ ನನ್ನ ವಾಹನಕಾರ್ಯವನ್ನು ನೆರವೇರಿಸು—ಎಂದು ಹೇಳಿದನು.

ಮಂದವಿಷನು ಮಹಾಪ್ರಸಾದವೆಂದು ಆತನನ್ನು ಆತನ ಮಂತ್ರಿಗಳ ಸಹಿತ ಅಲ್ಲಿ ಇಳಿಸಿ, ನಡು ನೀರಿಗೆ ಹೋಗಿ ಬೇಕಾದಷ್ಟು ಕಪ್ಪೆಗಳನ್ನು ತಿಂದು ಬಂದು ಮುಂಚಿನ ಹಾಗೆ ವಾಹನದ ಕೆಲಸವನ್ನು ಮಾಡಿದನು. ಈ ಪ್ರಕಾರ ಕೆಲವು ದಿನಕ್ಕೆ ಜಾಲಪಾದನು ಹೊರತು ಕೊಳದಲ್ಲಿರುವ ಕಪ್ಪೆಗಳನ್ನೆಲ್ಲಾ ಮಂದವಿಷನು ಭಕ್ಷಿಸಿದನು. ತರುವಾಯ ಕೊಳದಲ್ಲಿ ಕಪ್ಪೆಗಳು ಇಲ್ಲದುದರಿಂದ ಕಡೆಯಲ್ಲಿ ಜಾಲಪಾದನನ್ನು ಭಕ್ಷಿಸಿ ಸರ್ಪವು ಸ್ವೇಚ್ಛೆಯಾಗಿ ಹೋಯಿತು. ಹಾಗೆ ನಾನು ಶತ್ರುಗಳನ್ನು ಆಶ್ರಯಿಸಿ ಸಾಧಿಸಿ ಹಗೆತೀರಿಸಿದೆನು.

ಅಗ್ನಿಯು ಅರಣ್ಯವನ್ನು ದಹಿಸುವಾಗ ಗಿಡಗಳ ಬೇರುಗಳು ನಶಿಸವಾದುದರಿಂದ ತಿರುಗಿ ಚಿಗುರುವುವು. ಹಾಗೆಯೇ ಶತ್ರುಗಳಲ್ಲಿ ಕೆಲವರನ್ನು ನಾಶಮಾಡಿ ಕೆಲವರನ್ನು ಉಳಿಸಿದರೆ, ಕೆಲವು ಕಾಲಕ್ಕೆ ಅವರು ಮರಳಿ ಬಲವಂತರಾಗಿ ಬರುವರು. ಅಗ್ನಿಶೇಷ, ಋಣಶೇಷ, ರೋಗಶೇಷ, ಶತ್ರುಶೇಷ, ಉಳಿದಿದ್ದರೆ ಅವು ದಿನೇ ದಿನೇ ವೃದ್ಧಿಯಾಗುವುವು. ಆದುದರಿಂದ ಶತ್ರುಶೇಷವನ್ನು ಉಳಿಸಕೂಡದು. ನೀನು ನಿಶ್ಶೇಷವಾಗಿ ಶತ್ರುಗಳನ್ನು ಸಂಹರಿಸಿದ ಭಾಗ್ಯವಂತನು. ಅರಸನು ವ್ಯಸನಗಳಲ್ಲಿ ಸಕ್ತನಾಗದೆ ಪ್ರಜೆಗಳನ್ನು ಸಂತೋಷಪಡಿಸುತ್ತಾ, ಕಾಮಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳನ್ನು ಬಿಟ್ಟು, ಸತ್ಯ ಧರ್ಮ ಶೌಚ

ಸಹನವುಂತಾದ ಸುಗುಣಗಳನ್ನುಳ್ಳವನಾಗಿ, ತನ್ನ ಛಿದ್ರಗಳನ್ನು ಕಾಣ ಲೀಯದೆ ತನ್ನ ಮನುಷ್ಯರ ಛಿದ್ರಗಳನ್ನು ತಿಳಿದುಕೊಳ್ಳುತ್ತಾ, ದೇಶಕಾಲ ವನ್ನರಿತು, ಸ್ವಾಮಿ ಅಮಾತ್ಯ ಸುಹೃತ್ತು ಕೋಶ ರಾಷ್ಟ್ರ ದುರ್ಗ ಬಲ ಎಂಬ ಸಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾ, ಮಹಾಧಾರ್ಮಿಕನೆಂದು ಜನರಿಂದ ಹೊಗಳಿಸಿಕೊಂಡು, ತನ್ನ ಕೀರ್ತಿಯನ್ನು ದಿಕ್ಕು ದಿಕ್ಕುಗ ಳಲ್ಲಿ ವ್ಯಾಪಿಸುವಂತೆ ಮಾಡಿದರೆ, ಆತನು ದೇವಾಂಶದಿಂದ ಹುಟ್ಟಿದನೆಂದು ಅರಿಯತಕ್ಕದು. ಶೂರನು ತೀಕ್ಷ್ಣವಾದ ಆಯುಧಗಳಿಂದ ಯುದ್ಧ ಭೂಮಿಯಲ್ಲಿ ಎದುರಿಸಿದ ಶತ್ರುಗಳನ್ನು ಮಾತ್ರ ಕೊಲ್ಲುವನೇ ಹೊರತು ಬಹು ಸೈನ್ಯಗಳನ್ನು ಕೊಲ್ಲಲಾರನು; ಬಳ್ಳಿಯ ಉಪಾಯದಿಂದಾದರೆ ಶತ್ರುವನ್ನು ಪುತ್ರ ಮಿತ್ರ ಕಳತ್ರ ಬಂಧು ಸಹಿತವಾಗಿ ನಾಶಮಾಡುವನು. ಯಾವ ಕೆಲಸಕ್ಕೆ ಉದ್ಯೋಗಿಸಿದಾಗ್ಗೂ ದೈವವು ಅನುಕೂಲಿಸಿದರೆ ಆ ಕೆಲಸವು ಸಿದ್ಧಿಸುವುದು. ಆದಕಾರಣ ದೈವಾನುಕೂಲತೆಯಿಲ್ಲದ ಪುರುಷ ಪ್ರಯತ್ನದಿಂದ ಮಾತ್ರವೇ ಕಾರ್ಯವು ಸಿದ್ಧಿಸದು. ಆದಕಾರಣ ದೈವಾನು ಕೂಲತೆಯಿಲ್ಲದ ಪುರುಷನ ಪ್ರಯತ್ನವು ನಿರರ್ಥಕವು. ದಶರಥರಾಮನು ತಾಪಸ ವೇಷವನ್ನು ಧರಿಸಿದನು; ಬಲಿಚಕ್ರವರ್ತಿ ಬಂಧಿಸಲ್ಪಟ್ಟನು; ಪಾಂಡುಪುತ್ರರು ವನವಾಸವನ್ನು ಅನುಭವಿಸಿದರು; ಯಾದವರು ಒಬ್ಬ ರೊಡನೊಬ್ಬರು ಹೋರಾಡಿ ಸತ್ತರು; ನಳ ಮಹಾರಾಜನು ಸಕಲ ಕಷ್ಟ ಗಳನ್ನೂ ಅನುಭವಿಸಿದನು; ಭೀಷ್ಮನು ಶರತಲ್ಪದಲ್ಲಿ ಮಲಗಿಕೊಂಡನು; ನಾರಾಯಣನು ವಾಮನಾಕಾರವನ್ನು ತಾಳಿದನು; ರಾವಣಾಸುರನು ಕಾರ್ತವೀರ್ಯಾರ್ಜುನನ ಪರಾಕ್ರಮಕ್ಕೆ ಹಿಂಜರಿದು ಇದ್ದನು. ಹೀಗೆ ಜಗತ್ತೆಲ್ಲಾ ದೈವಪ್ರಯತ್ನದಿಂದ ನಡೆಯುತ್ತದೆ. ಇದನ್ನು ಮೂಢನಾ ದವನು ತಿಳಿದುಕೊಳ್ಳಲಾರನು; ಬುದ್ಧಿವಂತನಾದವನು ತಿಳಿದುಕೊಂಡು ಸ್ಥಿರಚಿತ್ತನಾಗಿರುವನು. ಶಾಸ್ತ್ರದಿಂದ ಬುದ್ಧಿಯೂ, ಸಿಹಿನೀರಿನಿಂದ ಹೊಳೆಯೂ, ಚಂದ್ರನಿಂದ ರಾತ್ರಿಯೂ, ನೀತಿಯಿಂದ ದೊರೆತನವೂ ಅಲಂಕರಿಸಲ್ಪಡುವುವು.

ಮುದಂ ವಿಷಾದಶ್ಶರದಂ ಹಿಮಾಗಮ
　ಸ್ತಮೋ ವಿವಸ್ವಾನ್ಸುಕೃದಂ ಕೃತಘ್ನತಾ ।
ವಿಶುದ್ಧ ಬುದ್ಧಿಶ್ಶುಚಮಾಪದಂ ನಯ
　ಶ್ಶ್ರಿಯಸ್ಸಮೃದ್ಧಾ ಅಪಿ ಹಂತಿ ದುರ್ನಯಃ ॥

ಸೂರ್ಯನು ಕತ್ತಲೆಯನ್ನು ಹೋಗಲಾಡಿಸುವಹಾಗೆ ಹೇಮಂತ ಋತುವು ಶರತ್ಕಾಲವನ್ನೂ, ಕೃತಘ್ನತೆಯು ಸುಕೃತವನ್ನೂ, ವಿವೇಕವು ದುಃಖವನ್ನೂ, ನೀತಿ ಆಪತ್ತನ್ನೂ, ದುರ್ನೀತಿ ಸಂಪತ್ತನ್ನೂ, ವಿಷಾದವು ಸಂತೋಷವನ್ನೂ, ಹೋಗಲಾಡಿಸುವುವು. ಆದಕಾರಣ ನೀತಿಯಿಂದ ಪ್ರಜೆಗಳನ್ನು ಪಾಲಿಸುವ ಅರಸನು ಸುಖವನ್ನು ಅನುಭವಿಸುವನು—ಎಂದು ಹೇಳಿದ ಚಿರಂಜೀವಿಯ ನುಡಿಗಳಿಗೆ ಮೇಘವರ್ಣನು ಸಂತೋಷಿಸಿ, ಆತನಿಗೆ ಅರ್ಧರಾಜ್ಯವನ್ನು ಕೊಟ್ಟು ತಾನು ಸಾಮ್ರಾಜ್ಯವನ್ನು ಅನುಭವಿಸುತ್ತಾ ಸುಖವಾಗಿದ್ದನು.

ಎಂದು ವಿಷ್ಣುಶರ್ಮನು ಹೇಳಿದ ಸಂಧಿವಿಗ್ರಹವನ್ನು
ಕೇಳಿ ರಾಜನಂದನರು ಸಂತೋಷಿಸಿದರು.

SECTION IV.

LOSS OF ADVANTAGE.

ಲಬ್ಧನಾಶವು.

'ಒಂದು ಮೊಸಳೆ ಒಂದು ಕೋತಿಯೊಂದಿಗೆ ಸ್ನೇಹಮಾಡಿ ಮೋಸಹೋದಹಾಗೆ, ಮೂರ್ಖನಾದವನು ತನಗೆ ಸಿಕ್ಕಿದ ಅರ್ಥವನ್ನು ಇತರರ ಒಳ್ಳೆಯ ಮಾತಿಗೆ ಮೋಸಹೋಗಿ ಅಜ್ಞಾನದಿಂದ ಬಿಟ್ಟುಬಿಡುವನು' ಎಂದು ವಿಷ್ಣುಶರ್ಮನು ಹೇಳಲಾಗಿ, ರಾಜಕುಮಾರರು ಕೇಳಿ,—ಮೊಸಳೆಗೂ ಕೋತಿಗೂ ಹೇಗೆ ಸ್ನೇಹವಾಯಿತು? ಮೊಸಳೆ ಹೇಗೆ ಮೋಸಹೋಯಿತು? ನಮಗೆ ವಿಶದವಾಗಿ ಹೇಳು—ಎನಲು, ವಿಷ್ಣುಶರ್ಮನಿಂತೆಂದನು.

The Crocodile and the Monkey.

ಸಮುದ್ರತೀರದಲ್ಲಿ ಬಲವರ್ಧನನೆಂಬ ಹೆಸರುಳ್ಳ ಒಂದು ಕೋತಿಯುಂಟು. ಅದು ಮುದಿಯಾದುದರಿಂದ ಮತ್ತೊಂದು ವಾನರಪತಿಯಿಂದ ಹೊರಡಿಸಲ್ಪಟ್ಟು, ನಾಚಿಕೆಯಿಂದ ಆ ಪ್ರಾಂತ್ಯವನ್ನು ಬಿಟ್ಟು ಹೋಗುತ್ತಾ, ಒಂದು ನದಿಯ ತೀರದಲ್ಲಿ ಮಧುಗರ್ಭವೆಂಬ ಮಾವಿನಮರವು ಫಲಭರಿತವಾಗಿರಲು ನೋಡಿ ಅಲ್ಲಿ ನಿಂತು, ಅದರ ಹಣ್ಣುಗಳಿಂದ ತನ್ನ ಶರೀರವನ್ನು ಪೋಷಿಸಿಕೊಳ್ಳುತ್ತಾ ಇದ್ದಿತು. ಹೀಗಿರಲಾಗಿ ಒಂದು ದಿನ ಆ ಮಾವಿನ ಮರದಿಂದ ಒಂದು ಹಣ್ಣು ನೀರಿನಲ್ಲಿ ಬೀಳಲು, ಅದರಿಂದ ಮನೋಹರವಾದ ಧ್ವನಿಯೊಂದು ಉಂಟಾಯಿತು. ಆ ಶಬ್ದವನ್ನು ಕೇಳಿ ಕೋತಿಯು ಸಹಜವಾದ ಚಪಲತ್ವದಿಂದ ಮಾವಿನಹಣ್ಣು ನೀರಿನಲ್ಲಿ

ಬೀಳುವಾಗ ಕಿವಿಗಳಿಗೆ ಇಂಪಾದ ಶಬ್ದವನ್ನು ಮಾಡುತ್ತವೆಂದು ಕೆಲವು ಹಣ್ಣುಗಳನ್ನು ಉದುರಿಸಿತು. ಬಳಿಕ ಅಲ್ಲಿ ಕೆಳಗಿದ್ದ ಕ್ರಕಚವೆಂಬ ಹೆಸರುಳ್ಳ ಮೊಸಳೆಯು ದೈವವಶದಿಂದ ಒಳಗಿನಿಂದ ನೀರಿನ ಮೇಲಕ್ಕೆ ಬಂದು ಆ ಹಣ್ಣುಗಳನ್ನು ಭಕ್ಷಿಸಿತು. ತರುವಾಯ ಅದು ಮಧುರವಾದ ಆಹಾರವು ಸಿಕ್ಕುವುದರಿಂದ ತೃಪ್ತಿಹೊಂದಿ ಆ ಬಲವರ್ಧನನೆಂಬ ಕೋತಿಯೊಂದಿಗೆ ಸ್ನೇಹಮಾಡಿ ಅಲ್ಲೇ ಬಹುದಿವಸವಿದ್ದಿತು.

ಅಷ್ಟರಲ್ಲಿ ಆ ಮೊಸಳೆಯ ಹೆಂಡತಿ ಗಂಡನನ್ನು ಕಾಣದೆ ಅವನನ್ನು ಹುಡುಕಿ ನೋಡುವುದಕ್ಕಾಗಿ ಒಬ್ಬ ದೂತಿಕೆಯನ್ನು ಕಳುಹಿಸಲು, ಆ ದೂತಿಕೆ ಹುಡುಕುತ್ತಾ ಬಂದು ಮೊಸಳೆಯನ್ನೂ ಕೋತಿಯನ್ನೂ ಕಂಡು ಬೇಗ ಹೋಗಿ,—ಅಮ್ಮಾ, ನಿನ್ನ ಗಂಡನು ಕೋತಿಯೊಂದಿಗೆ ಕೂಡಿಕೊಂಡು ಆಡುತ್ತಾನೆ—ಎಂದು ಉಂಟಾದ ಕೆಲವನ್ನೂ ಇಲ್ಲದ ಕೆಲವನ್ನೂ ಹೇಳಿದಳು. ಬಳಿಕ ಒಂದು ದಿನ ಮೊಸಳೆಯು ಕೆಲವು ಮಾವಿನ ಹಣ್ಣನ್ನು ತೆಗೆದುಕೊಂಡು ಮನೆಗೆ ಹೋಗಲು, ಹೆಂಡತಿ ದೂರದಿಂದ ನೋಡಿ ಮೈಗೆ ತೈಲವನ್ನು ಹಚ್ಚಿಕೊಂಡು ಮಲಗಿದ್ದಳು. ಅವಳನ್ನು ನೋಡಿ ಮೊಸಳೆ ಬಹು ವ್ಯಸನವನ್ನು ಹೊಂದಿ—ನಿನಗೆ ಮೈಯಲ್ಲೇನು? ಏಕೆ ಮಲಗಿದ್ದೀಯೆ?—ಎಂದು ಕೇಳಿತು. 'ನನಗೆ ಅಸಾಧ್ಯವಾದ ರೋಗ ಬಂದಿತು. ಈವರೆಗೆ ಬದುಕಿರುವುದೇ ಹೆಚ್ಚು. ನಿನ್ನನ್ನು ನೋಡಿ ಪ್ರಾಣಬಿಡಬೇಕೆಂಬ ಆಶೆಯಿಂದ ಬದುಕಿದ್ದೇನೆ' ಎಂದು ಅವಳು ಹೇಳಿದಳು. ಆ ಮಾತನ್ನು ಗಂಡು ಮೊಸಳೆಯು ಕೇಳಿ ದಿಗಿಲುಪಟ್ಟು—ನನ್ನ ಪ್ರಾಣವನ್ನಾದರೂ ಕೊಟ್ಟು ನಿನ್ನನ್ನು ಬದುಕಿಸುತ್ತೇನೆ--ಎಂದು ಹೇಳಿ,—ವೈದ್ಯನು ನೋಡಿದನೋ? ಏನು ಹೇಳುತ್ತಾನೆ?—ಎಂದು ಕೇಳಿತು. 'ವೈದ್ಯನು ನೋಡಿ—ಕಪಿಯ ಕರುಳು ಸಿಕ್ಕಿದರೆ ಔಷಧಮಾಡಿ ಕೊಡುವೆನು. ಇಲ್ಲದಿದ್ದರೆ ಬದುಕಲಾರೆ,—ಎಂದು ಹೇಳಿದನು' ಎಂದು ಹೆಣ್ಣು ಮೊಸಳೆ ನುಡಿಯಿತು. ಆ ಮೇಲೆ ಕ್ರಕಚಕನು ತನ್ನಲ್ಲಿ ತಾನು—ಇದು ಏನು ಕಷ್ಟ ಸಂಭವಿಸಿತು? ಬಲವರ್ಧನನು ಹೊರತು ನನಗೆ ಕೋತಿ ಎಲ್ಲಿ ಸಿಕ್ಕೀತು? ಕರುಳನ್ನು

ಎಲ್ಲಿಂದ ತರಲಿ? ಅವನನ್ನು ಕೊಂದರೆ ಬಹಳ ಪಾಪ. ಆದಾಗ್ಯೂ ಹೆಂಡತಿಯನ್ನು ಬದುಕಿಸುವುದು ಮುಖ್ಯವಾದ ಕೆಲಸವು. ಬಳ್ಳೆಯ ಗುಣವುಳ್ಳ ಮಿತ್ರನು, ಹೆಂಡತಿ, ಈ ಇಬ್ಬರಲ್ಲಿ ಮಿತ್ರನಗಿಂತ ಹೆಂಡತಿಯೇ ಶ್ರೇಷ್ಠಳು. ಆದಕಾರಣ ಮಿತ್ರನನ್ನು ಕೊಂದು ಹೆಂಡತಿಯನ್ನು ಬದುಕಿಸುವುದು ಧರ್ಮವು—ಎಂದು ನಿಶ್ಚಯಿಸಿಕೊಂಡು ಬಲವರ್ಧನ ಹತ್ತಿರಕ್ಕೆ ಮೆಲ್ಲಗೆ ಹೋದನು. ಅದನ್ನು ನೋಡಿ—ನೀನೇಕೆ ಮೆಲ್ಲಗೆ ನಡೆಯುತ್ತೀಯೆ?—ಎಂದು ಬಲವರ್ಧನು ಕೇಳಿದನು. 'ನಿನ್ನ ಸಂಗಡ ಸ್ನೇಹಮಾಡಿದೆನಾದಕಾರಣ ನಿನ್ನನ್ನು ನನ್ನ ಮನೆಗೆ ಒಂದುಸಲವಾದರೂ ಕರೆದುಕೊಂಡು ಹೋಗದೆ ಹೋದೆನಲ್ಲಾ ಎಂಬ ಸಂಕೋಚದಿಂದ ಮೆಲ್ಲಗೆ ನಡೆಯುತ್ತೇನೆ. ಈ ಲೋಕದಲ್ಲಿಯ ಜನರು ತಮಗೊಂದು ಪ್ರಯೋಜನವನ್ನು ಉದ್ದೇಶಿಸಿ, ಬಬ್ಬರಮೇಲೆ ಪ್ರೀತಿಯಾಗಿರುತ್ತಾರೆ. ನೀನು ಪ್ರಯೋಜನವನ್ನು ಉದ್ದೇಶಿಸದೆಯೆ ದಯೆಯುಳ್ಳವನಾಗಿ ಇದ್ದೀಯೆ—ಎಂದು ಮೊಸಳೆ ಹೇಳಿತು. 'ಎಲೈ, ಇದು ಒಂದು ಉಪಕಾರವೇ? ನಿನ್ನ ಸಂಗಡ ಸಂತೋಷವಾಗಿ ಇಲ್ಲಿ ವಾಸಮಾಡುತ್ತಾ ರಾಜ್ಯಹೋದುದರಿಂದ ಬಂದ ದುಃಖವನ್ನು ಹೋಗಲಾಡಿಸಿಕೊಳ್ಳುತ್ತಿದ್ದೇನೆ. ದುಃಖವನ್ನೂ ಭಯವನ್ನೂ ಹೋಗಲಾಡಿಸಿ ರಕ್ಷಿಸುವಂತಹ ಶ್ರೇಷ್ಠನಾದ ಮಿತ್ರನು ಪ್ರೀತಿಗೂ ನಂಬಿಕೆಗೂ ಪಾತ್ರನು. ಮಿತ್ರವೆಂಬ ಈ ಅಕ್ಷರದ್ವಯವನ್ನು ಯಾವನು ಕಲ್ಪಿಸಿದನೋ ಅವನು ಮಹಾಪುಣ್ಯಾತ್ಮನು—ಎಂದು ವಾನರನು ನುಡಿದನು. ಮೊಸಳೆ ಆ ಮಾತುಗಳನ್ನು ಕೇಳಿ ಸಂತೋಷಿಸಿ—ನೀನು ನನ್ನ ಬೆನ್ನಿನಮೇಲೆ ಹತ್ತಿ ನನ್ನ ಮನೆಯನ್ನು ಒಂದು ನೋಡಬೇಕು—ಎಂದು ಕೇಳಿತು. ಬಲವರ್ಧನು ಬಳ್ಳೆಯದೆಂದು ಮೊಸಳೆಯ ಬೆನ್ನನ್ನೇರಿದನು.

ಬಳಿಕ ಕ್ರಕಚನು ಬಲವರ್ಧನನ್ನು ಮೇಲೆ ಹತ್ತಿಸಿಕೊಂಡು ನಡೆಯುತ್ತಾ ಇಂತೆಂದು ವಿತರ್ಕಿಸಿದನು: 'ಈಗ ನಾನು ಸ್ತ್ರೀಕಾರ್ಯವನ್ನು ದೊಡ್ಡದು ಮಾಡಿ ಮಿತ್ರನನ್ನು ಕೊಲ್ಲುತ್ತೇನೆ. ಇದು ಮಹಾದಾರುಣವಾದ ಕೆಲಸ. ನಾನು ನಿಂದೆಯು ಪಾಲಾದೆನು. ಚಿನ್ನದ ಗುಣ

ಗಳನ್ನು ತಿಳಿದುಕೊಳ್ಳಬೇಕಾದರೆ ಒರೆಗಲ್ಲಿನ ಮೇಲೆ ಬರೆದು ತಿಳಿದುಕೊಳ್ಳಬಹುದು. ಪುರುಷನ ಗುಣಗಳನ್ನು ತಿಳಿದುಕೊಳ್ಳಬೇಕಾದರೆ ಅವನ ನಡೆವಳಿಕೆಯಿಂದ ತಿಳಿದುಕೊಳ್ಳಬಹುದು. ವೃಷಭದ ಗುಣಗಳನ್ನು ತಿಳಿದುಕೊಳ್ಳಬೇಕಾದರೆ ಭಾರವನ್ನು ಹೊರಿಸಿ ತಿಳಿದುಕೊಳ್ಳಬಹುದು. ಹೆಂಗಸರ ಗುಣಗಳನ್ನು ತಿಳಿದುಕೊಳ್ಳಬೇಕಾದರೆ ಯಾವ ಉಪಾಯದಿಂದಲೂ ಎಷ್ಟು ಬುದ್ಧಿವಂತನಾದಾಗ್ಯೂ ತಿಳಿದುಕೊಳ್ಳಲಾರನು. ಇಂಥ ಸ್ತ್ರೀನಿಮಿತ್ತವಾಗಿ ನಾನು ಮಿತ್ರವಧೆಯನ್ನು ಹೇಗೆ ಮಾಡಲಿ ?—ಎಂದು ವಿತರ್ಕಿಸುವ ಸಮಯದಲ್ಲಿ, ಬಲವರ್ಧನು ಆ ಮಾತನ್ನು ಕೇಳಿ,—ಎಲೈ ಸ್ನೇಹಿತನೇ, ಈಗ ನೀನೇನು ಹೇಳಿದೆ?—ಎಂದು ಕೇಳಿದನು. ಕ್ರಕಚನು ಏನೂ ಇಲ್ಲವೆಂದನು. ಕ್ರಕಚನು ಮರೆಪಡಿಸಿದುದರಿಂದ ವಾನರನು ಸಂದೇಹಿಸಿ—ನಾನು ಕೇಳಿದುದಕ್ಕೆ ಮೊಸಳೆ ಏನೂ ಹೇಳದೆಯಿದೆ, ಇದಕ್ಕೆ ಕಾರಣವೇನು? ನಾನು ಮೊಸಳೆಯ ಮನಸ್ಸಿನಲ್ಲಿಯ ಮಾತನ್ನು ನನ್ನ ಪ್ರಜ್ಞೆಯಿಂದ ಹೊರಗೆ ತೆಗೆವೆನು—ಎಂದು ನಿಶ್ಚಯಿಸಿ, 'ಎಲೈ ಸ್ನೇಹಿತನೇ, ನಿನ್ನ ಮನೆಯಲ್ಲಿ ನನ್ನ ತಂಗಿಗೆ ಸಮಾನಳಾದ ನಿನ್ನ ಹೆಂಡತಿ ಸುಖವಾಗಿ ಇದ್ದಾಳೆಯೇ?' ಎಂದನು. 'ಅವಳು ಅಸಾಧ್ಯವಾದ ವ್ಯಾಧಿಯಿಂದ ಕಷ್ಟಪಡುತ್ತಿದಾಳೆ, ಬದುಕುವುದು ಕಷ್ಟ' ಎಂದು ಮೊಸಳೆ ಹೇಳಲು, 'ವೈದ್ಯರಿಗೂ ಮಾಂತ್ರಿಕರಿಗೂ ತೋರಿಸಿ ಆ ವ್ಯಾಧಿಗೆ ಏನಾದರೂ ಪ್ರತಿಕ್ರಿಯೆಯನ್ನು ಮಾಡಿಸಲಿಲ್ಲವೇ ?' ಎಂದು ವಾನರನು ಕೇಳಿದನು. ವೈದ್ಯನನ್ನು ಕೇಳಿದುದಕ್ಕೆ ಕೋತಿಯ ಕರುಳಿನಲ್ಲಿ ಔಷಧಮಾಡಿಕೊಟ್ಟರೆ ಹೊರತು ಬದುಕುವುದಿಲ್ಲವೆಂದು ಅವರು ಹೇಳಿದರೆಂದು ಕ್ರಕಚನು ಪ್ರಿಯಳನ್ನು ಕುರಿತು ದುಃಖದಿಂದ ಸ್ಮೃತಿತಪ್ಪಿ ವಾನರನಿಗೆ ಉತ್ತರಕೊಟ್ಟನು.

ಅದನ್ನು ಕೇಳಿ ವಾನರನು ತನ್ನ ಪ್ರಾಣಹೋಯಿತೆಂದು ಯೋಚಿಸಿ 'ಅಯ್ಯೋ ವ್ಯರ್ಥವಾಗಿ ಸತ್ತೆನು! ಮುಪ್ಪಿನಲ್ಲಿ ಇಂದ್ರಿಯಗಳನ್ನು ಜಯಿಸದವನಾದುದಕ್ಕೆ ಫಲವನ್ನು ಅನುಭವಿಸುತ್ತೇನೆ. ರಾಗದೊಂದಿಗೆ ಕೂಡಿಕೊಂಡವನು ಅರಣ್ಯದಲ್ಲಿ ಬಹುಕಾಲವಿದ್ದಾಗ್ಯೂ ಫಲವಿಲ್ಲ; ಇಂದ್ರಿಯ

ನಿಗ್ರಹವುಳ್ಳವನು ಮನೆಯನ್ನು ಬಿಡದೆ ಇದ್ದಾಗ್ಯೂ ತಪಸ್ಸು ಸಿದ್ಧಿಸುವುದು. ರಾಗವನ್ನು ಬಿಟ್ಟು ವಿನಯಶೀಲನಾಗಿ ಧರ್ಮಾಧರ್ಮವನ್ನರಿತು, ಸತ್ಯ ದಯೆ ದಾನ ಶೌಚಗಳುಳ್ಳವನಿಗೆ ಮನೆಯೇ ತಪೋವನವು. ದಂಡ, ಕಾವಿಬಟ್ಟೆ, ಬೋಳುತಲೆ, ಭಿಕ್ಷಾಚರಣೆ, ಓದು, ಇವುಗಳಿಂದ ತಪಸ್ಸು ಸಿದ್ಧಿಸದು—ಎಂದು ತನ್ನ ಮನಸ್ಸಿನಲ್ಲಿ ಚಿಂತಿಸಿ, ದೈವವಶದಿಂದ ಒಂದು ಉಪಾಯ ತೋರಿ ಮೊಸಳೆಯೊಂದಿಗೆ ಇಂತೆಂದನು: 'ಎಲೈ ಸ್ನೇಹಿತನೇ, ನೀನು ಹುಚ್ಚುಕೆಲಸವನ್ನು ಮಾಡಿದೆ. ಈ ಮಾತನ್ನು ಮುಂಚೆಯೇ ಏಕೆ ಹೇಳದೆ ಹೋದೆ? ನನಗೆ ಮುಂಚೆ ತಿಳಿದಿದ್ದರೆ ಆ ಔಷಧವನ್ನು ನಾನು ಸಂಗಡಲೇ ತೆಗೆದುಕೊಂಡು ಬರುತ್ತಿದ್ದೆನು. ನಾನು ಮುದುಕನಾದುದರಿಂದ ಹೊರಲಾರದೆ ನನ್ನ ಕರುಳನ್ನು ಆ ಮರದ ಕೊಂಬೆಯಲ್ಲಿ ಇಟ್ಟಿದ್ದೇನೆ. ಈಗ ಅದನ್ನು ತೆಗೆದುಕೊಂಡು ಹೋಗುವುದು ಉಚಿತಧರ್ಮ. ಅರ್ಥವನ್ನೂ ಮೋಕ್ಷವನ್ನೂ ಕೋರಿದವರು ಅರಸನನ್ನೂ ಬ್ರಾಹ್ಮಣನನ್ನೂ ದೇವರನ್ನೂ ರಿಕ್ತಹಸ್ತದಿಂದ ನೋಡಹೋಗರು. ನೀನು ಬುದ್ಧಿ ಹೀನನಾಗಿ ಈ ಸಂಗತಿಯನ್ನು ಮೊದಲೇ ನನ್ನೊಂದಿಗೆ ಹೇಳದುದರಿಂದ ಕಾರ್ಯಕ್ಕೆ ಕುಂದು ಬಂದಿತು—ಹೀಗೆಂದು ಹೇಳಲು, ಕ್ರಕಚನು ಕೇಳಿ,—ನಾವೀಗ ತಿರುಗಿ ಹೋಗಿ ಕರುಳನ್ನು ತೆಗೆದುಕೊಂಡು ಬರೋಣ. ಅದರಿಂದಲೇ ಅಲ್ಲವೇ ನನ್ನ ಹೆಂಡತಿಯ ಪ್ರಾಣ ಉಳಿವುದು—ಎಂದು ಮಾವಿನ ಮರದ ಹತ್ತಿರಕ್ಕೆ ವಾನರನೊಂದಿಗೆ ತಿರುಗಿ ಬಂದನು. ಆಗ ವಾನರನು ಶೀಘ್ರವಾಗಿ ಆ ಮರಕ್ಕೆ ಹತ್ತಿದನು. 'ಎಲೈ ಸ್ನೇಹಿತನೇ, ತ್ವರೆಯಾಗಿ ಕರುಳನ್ನು ತೆಗೆದುಕೊಂಡು ಬಾ' ಎಂದು ಕ್ರಕಚನು ಕೂಗಿದನು. 'ನಿನ್ನ ಗುಣವು ನನಗೆ ತಿಳಿಯಿತು. ಇನ್ನು ಮೇಲೆ ನಾನು ಬಂದೇನೇ? ನಾನು ಮುದಿ ಕೋತಿಯೇ ಹೊರತು ಕತ್ತೆಯಲ್ಲ. ಮೊದಲಲ್ಲಿ ಸ್ನೇಹಿಸಿ ತರುವಾಯ ವಿರೋಧಿಸಿ ಅಗಲಿ ತಿರುಗಿ ಬರುವವನು ನರಿಯ ಮಾತನ್ನು ಕೇಳಿ ಸಿಂಹದ ಹತ್ತಿರಕ್ಕೆ ಬಂದ ಕತ್ತೆಯಹಾಗೆ ಕೆಟ್ಟು ಹೋಗುವನು' ಎಂದು ಕಪಿ ಹೇಳಿತು. 'ಅದು ಹೇಗೆ ಹೇಳು' ಎಂದು ಮೊಸಳೆ ಕೇಳಲು, ವಾನರನಿಂತೆಂದನು.

Imprudence—The Lion, the Fox and the Ass.

ಒಂದು ವನದಲ್ಲಿ ಒಂದು ಸಿಂಹವುಂಟು. ಅದಕ್ಕೆ ಭೃತ್ಯನಾಗಿ ಒಂದು ನರಿ ಇದ್ದಿತು. ಒಂದು ದಿನ ಸಿಂಹವು ಮಹಾದೈನ್ಯದಿಂದ ನರಿಯನ್ನು ನೋಡಿ—ನನಗೆ ಮಹೋದರವ್ಯಾಧಿ ಸಂಭವಿಸಿತು. ಕತ್ತೆಯ ಕಿವಿಯನ್ನೂ ಕರುಳನ್ನೂ ಭಕ್ಷಿಸಿದರೆ ಆ ರೋಗವು ವಾಸಿಯಾಗುವುದು. ಇನ್ನೊಂದು ಮದ್ದಿನಿಂದಲೂ ಗುಣವಾಗುವುದಿಲ್ಲ. ಆದಕಾರಣ ಮಹಾಪ್ರಯತ್ನದಿಂದ ಕತ್ತೆಯನ್ನು ಕರೆದುಕೊಂಡು ಬಾ—ಎಂದು ಹೇಳಿತು. ಆ ಮಾತನ್ನು ಕೇಳಿ ನರಿ ಮಹಾಪ್ರಸಾದವೆಂದು ಕತ್ತೆಯನ್ನು ಕರೆದುಕೊಂಡು ಬರುವುದಕ್ಕಾಗಿ ಹೊರಟು, ಪಟ್ಟಣದ ಸಮೀಪದಲ್ಲಿ ಒಬ್ಬ ಅಗಸನ ಬಡಕತ್ತೆಯನ್ನು ನೋಡಿ, ತನ್ನ ಮಾತಿನ ಚಾತುರ್ಯದಿಂದ ಅದನ್ನು ಮೋಸಗೊಳಿಸಿ ಕರೆದುಕೊಂಡು ಹೋಗಿ ಸಿಂಹಕ್ಕೆ ಒಪ್ಪಿಸಿತು. ಸಿಂಹವು ಅದನ್ನು ಹಿಡಿದುಕೊಳ್ಳಬೇಕೆಂದು ಏಳುತ್ತಲೇ ಅದು ಅಂಜಿ ಓಡಿ ಹೋಯಿತು. ತರುವಾಯ ಸಿಂಹವು ನರಿಯನ್ನು ನೋಡಿ—ನನಗೆ ಸಿಕ್ಕಿದ ಕತ್ತೆ ಓಡಿ ಹೋಯಿತು, ಏನು ಮಾಡಲಿ?—ಎಂದಿತು. 'ನನ್ನ ಪ್ರಜ್ಞಾಬಲದಿಂದ ಅದನ್ನು ಮರಳಿ ಕರೆದುಕೊಂಡು ಬರುತ್ತೇನೆ' ಎಂದು ಹೇಳಿ, ನರಿಯು ತಿರುಗಿ ಕತ್ತೆಯ ಬಳಿಗೆ ಹೋಗಿ,—ಎಲೈ ನೀನು ಬಹು ಪಾಪಮಾಡಿದುದರಿಂದ ಕತ್ತೆಯಾಗಿ ಹುಟ್ಟಿ ಅಗಸನ ಮೈಲಿಗೆ ಬಟ್ಟೆಗಳನ್ನು ಹೊತ್ತುಹೊತ್ತು ಕಂಗೆಟ್ಟು ಹೋಗುತ್ತೀಯೆ. ನನ್ನ ಹಾಗೆ ಸ್ವೇಚ್ಛಾವಿಹಾರನಾಗಿ ಸಂಚರಿಸುತ್ತಾ ಕಾಡಿನಲ್ಲಿ ಏಕಿರಲೊಲ್ಲೆ? ದೇವರು ನನಗೆ ಕೊಡುವ ಹಾಗೆ ನಿನಗೆ ಆಹಾರವನ್ನು ಕೊಡದೆ ಇರುವನೇ?—ಎಂದು ನುಡಿಯಲು,—ಸಿಂಹವು ನನ್ನನ್ನು ಕೊಲ್ಲಲಿಕ್ಕೆ ಬಂದುದರಿಂದ ನಾನು ಓಡಿದೆನು—ಎಂದು ಕತ್ತೆ ಹೇಳಿತು. ಅದನ್ನು ಕೇಳಿ ನರಿಯು—ಓಹೋ, ನಿನಗೆ ತಿಳಿಯದೆ ಹೋಯಿತು. ಸಿಂಹವು ಎದ್ದುದು ನಿನ್ನನ್ನು ಕೊಲ್ಲುವುದಕ್ಕಾಗಲ್ಲ, ಮತ್ತೇಕೆಂದರೆ, ನೀನು ಬಂದ ಸಂಗತಿಯನ್ನು ಮಿಕ್ಕ ಸಿಂಹ ಶಾರ್ದೂಲ ಮುಂತಾದುವುಗಳಿಗೆ ತಿಳಿಸುವುದಕ್ಕಾಗಿ ಎದ್ದಿತು. ನೀನು ಎಂದಿಗೆ ಬಂದೀಯೋ ಎಂದು ಎದುರು ನೋಡುತ್ತಿದೆ. ನನ್ನ ಮಾತನ್ನು ನಂಬಿ ಬಾ. ಬದುಕಿರುವ ತನಕ ನನ್ನ ಜತೆಯಲ್ಲಿ ಸುಖವನ್ನು ಅನುಭವಿಸು.

ಇನ್ನು ಮೇಲೆ ನೀನೇ ಸ್ನೇಹಿತರಿಗೆ ಹಿತವನ್ನು ಮಾಡಹೋಗುತ್ತೀಯೆ. ನೀನೂ ನಾನೂ ಸಿಂಹಕ್ಕೆ ಪ್ರಧಾನಭೃತ್ಯರಾಗಿ ಇರೋಣ. ಸಾವಿರ ಮಾತು ಏತಕ್ಕೆ? ಮನುಷ್ಯರಲ್ಲಿ ಧರ್ಮಾರ್ಥಕಾಮಗಳನ್ನು ಕೋರುವವರಿಗೆ ಶುಭಗಳು ಬಹು ವಿಘ್ನಗಳುಳ್ಳವಾಗಿ ಇರುವುವು—ಎಂದು ಹೇಳಲಾಗಿ, ಕತ್ತೆ ಕೇಳಿ,—ನಾನು ನಿನ್ನ ಸಂಗಡ ಬರುತ್ತೇನೆ—ಎಂದು ಹೇಳಿತು. ಆಗ ನರಿ—ನೀನು ಹೆದರಬೇಡ, ಬಾ; ನನ್ನನ್ನು ನಂಬು,—ಎಂದು ಬುದ್ಧಿಯಿಲ್ಲದ ಕತ್ತೆಯನ್ನು ತಿರುಗಿ ಕರೆದುಕೊಂಡು ಹೋಗಿ ಸಿಂಹಕ್ಕೆ ಒಪ್ಪಿಸಿತು. ತರುವಾಯ ಸಿಂಹವು ಅದನ್ನು ಪ್ರೀತಿಯಾಗಿಯೇ ಹಿಡಿದುಕೊಂಡು ಕೊಂದು, ನರಿಯನ್ನು ನೋಡಿ—ನೀನು ದುಸ್ತರವಾದ ಕಾರ್ಯವನ್ನು ಮಾಡಿದೆ. ನಿನ್ನಂತಹ ಸಮರ್ಥರು ಈ ಲೋಕದಲ್ಲಿ ಇಲ್ಲವೆಂದು ಹೊಗಳಿ, ನೀನು ಕ್ಷಣಮಾತ್ರ ಇದನ್ನು ನೋಡಿಕೊಂಡಿರು. ನಾನು ಸ್ನಾನಮಾಡಿ ನಿತ್ಯಕರ್ಮವನ್ನು ತೀರಿಸಿಕೊಂಡು ಬಂದು ಈ ಮೃದ್ದನ್ನು ತಿನ್ನುತ್ತೇನೆ—ಎಂದು ಹೇಳಿ ಹೋಯಿತು. ಸಿಂಹವು ಹೋಗುತ್ತಲೇ, ನರಿ ಇದು ಏನೋ ಮಹೌಷಧವೆಂದು ನೆನಸಿ ಕತ್ತೆಯ ಕಿವಿಗಳನ್ನೂ ಕರುಳನ್ನೂ ತಾನೇ ಭಕ್ಷಿಸಿತು. ಅನಂತರ ಸಿಂಹವು ಬಂದು—ಕತ್ತೆಯ ಕಿವಿಗಳೂ ಕರುಳೂ ಎಲ್ಲಿ?—ಎಂದು ಕೇಳಿತು. ಬುದ್ಧಿಹೀನನಿಗೆ ಕಿವಿಗಳೂ ಕರುಳೂ ಉಂಟೋ? ಅವು ಇದ್ದರೆ ಅವನು ಹೀಗೇಕಾದಾನು?—ಎಂದು ನರಿ ಪ್ರತ್ಯುತ್ತರಕೊಟ್ಟಿತು. ಅಹುದೇನೋ ಎಂದು ಸಿಂಹವು ಸುಮ್ಮನೆ ಇದ್ದಿತು. ಆದಕಾರಣ ನಾನು ಮುದಿಕೋತಿಯೇ ಹೊರತು ಕತ್ತೆಯಲ್ಲವೆಂದು ಹೇಳಿದೆನು. ಇನ್ನು ಮೇಲೆ ನನ್ನನ್ನು ವಂಚಿಸಲಿಕ್ಕೆ ನಿನ್ನಿಂದಾಗದು. ನೀನು ಹೋಗಿ ನೀರು ಕುಡಿಯುತ್ತಾ ಇರಬೇಕು—ಎಂದು ವಾನರನು ಹೇಳಲು, ಕೇಳಿ ಮೊಸಳೆ ಸಿಕ್ಕಿದುದನ್ನು ಹೋಗಲಾಡಿಸಿಕೊಂಡು ಹೋಯಿತು.

ಇಂತು ವಿಷ್ಣುಶರ್ಮನು ಹೇಳಿದ ಲಬ್ಧನಾಶವೆಂಬ ನಾಲ್ಕನೆಯ ತಂತ್ರವನ್ನು ಕೇಳಿ ರಾಜಕುಮಾರರು ಬಹಳ ಸಂತೋಷಚಿತ್ತರಾದರು.

SECTION V.

INCONSIDERATENESS.

ಅಸಂಪ್ರೇಕ್ಷ್ಯಕಾರಿತ್ವವು.

—:o:—

‘ನಿಜವನ್ನೂ ಸುಳ್ಳನ್ನೂ ತಿಳಿದುಕೊಳ್ಳಲಾರದೆ ಕ್ರೋಧದಿಂದ ಜನಗಳಿಗೆ ಕೇಡವಮಾಡುವವನು ಹಾವನ್ನು ಕೊಂದ ಮುಂಗಸಿಯನ್ನು ವಧಿಸಿದ ಬ್ರಾಹ್ಮಣನ ಹಾಗೆ ಮಹತ್ತಾದ ಮನೋವ್ಯಥೆಯನ್ನು ಹೊಂದುವನು’ ಎಂದು ವಿಷ್ಣುಶರ್ಮನು ಹೇಳಲಾಗಿ ರಾಜಪುತ್ರರು ಕೇಳಿ—ಹಾವನ್ನು ಮುಂಗಸಿ ಏಕೆ ಕೊಂದಿತು? ಮುಂಗಸಿಯನ್ನು ಬ್ರಾಹ್ಮಣನು ಏಕೆ ವಧಿಸಿದನು? ನಮಗೆ ಅದನ್ನು ತಿಳಿಯಹೇಳಬೇಕು—ಎನಲು, ವಿಷ್ಣುಶರ್ಮನಿಂತೆಂದನು.

‘ಗೌಡದೇಶವಲ್ಲಿ ಒಂದು ಅಗ್ರಹಾರವುಂಟು. ಅದರಲ್ಲಿ ದೇವಶರ್ಮನೆಂಬ ಬ್ರಾಹ್ಮಣನಿದ್ದನು. ಆತನ ಹೆಂಡತಿ ಯಜ್ಞಸೇನೆ. ಆಕೆಯು ಪೂರ್ವಕೃತಪುಣ್ಯದಿಂದ ಗರ್ಭವನ್ನು ಧರಿಸಿದಳು. ಬ್ರಾಹ್ಮಣನು ಅವಳನ್ನು ನೋಡಿ ಬಹಳ ಸಂತೋಷದಿಂದ ಅನಂತವಾದ ಕೋರಿಕೆಗಳನ್ನು ಕೋರುತ್ತಾ—ಎಲೈ ಪ್ರಿಯಳೇ, ನಿನ್ನ ಗರ್ಭವಲ್ಲಿರುವ ಕುಮಾರನು ನಮ್ಮ ಕುಲವನ್ನೆಲ್ಲಾ ಉದ್ಧರಿಸತಕ್ಕವನು. ಮಹಾಭಾಗ್ಯವಂತನು—ಎಂದು ಹೇಳಿದನು. ಹೆಂಡತಿ ಗಂಡನನ್ನು ನೋಡಿ—ಇಂತಹ ಕೋರಿಕೆಗಳನ್ನು ಕೋರುವುದು ಯುಕ್ತವಲ್ಲ. ಅನಾಗತಕಾರ್ಯಗಳನ್ನು ಕುರಿತು ಚಿಂತೆಯನ್ನು ಯಾವನು ಮಾಡುತ್ತಾನೋ ಅವನು ಸೋಮಶರ್ಮನ ತಂದೆಯ ಹಾಗೆ ಬಹಳ ವಿಷಾದವನ್ನು ಹೊಂದುವನು—ಎಂದು ನುಡಿದಳು. ‘ಅದು ಹೇಗೆ’ ಎಂದು ಬ್ರಾಹ್ಮಣನು ಕೇಳಲು, ಅವನ ಹೆಂಡತಿ ಹೇಳುತ್ತಾಳೆ.

Castles in the air—The Brahmin and the flour of fried grain.

ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಒಬ್ಬ ಬ್ರಾಹ್ಮಣಕುಮಾರನು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಶ್ರಾದ್ಧದಲ್ಲಿ ನಿಮಂತ್ರಿತನಾಗಿ ಭೋಜನ ಮಾಡಿ ಬರುತ್ತಿರಲಾಗಿ, ಮತ್ತೊಬ್ಬ ಬ್ರಾಹ್ಮಣನ ಮನೆಯಲ್ಲಿ ಆತನಿಗೆ ಅರಳಹಿಟ್ಟನ್ನು ಕೊಟ್ಟರು. ಅದಕ್ಕೆ ಅವನು ಸಂತೋಷಿಸಿ ಅದನ್ನು ಒಂದು ಮಡಕೆಯಲ್ಲಿಟ್ಟು ತನ್ನ ಹತ್ತಿರ ಮಡಗಿಕೊಂಡು ಒಂದು ಜಗಲಿಯ ಮೇಲೆ ಮಲಗಿ ನಿದ್ರೆಹಿಡಿವ ಸಮಯದಲ್ಲಿ, ಮಿತಿಯಿಲ್ಲದ ಕೋರಿಕೆಗಳನ್ನೆಲ್ಲಾ ಕೋರಸಾಗಿದನು. ಹೇಗೆಂದರೆ: 'ಈಗ ನನ್ನ ಬಳಿಯಲ್ಲಿ ಅರಳಹಿಟ್ಟು ಇದೆಯಷ್ಟೆ. ನಾನು ಈ ಹಿಟ್ಟನ್ನು ಮಾರಿ ಕರೆವ ಆಡನ್ನು ಕೊಂಡುಕೊಳ್ಳುವೆನು. ಅದಕ್ಕೆ ಎರಡು ಮರಿಗಳು ಹುಟ್ಟುವುವು. ಆ ಎರಡೂ ಎರಡೆರಡು ಮರಿಗಳನ್ನು ಹಾಕುವುವು. ಆ ನಾಲ್ಕಕ್ಕೂ ಎಂಟು ಮರಿಗಳು ಹುಟ್ಟುವುವು. ಅವು ಸ್ವಲ್ಪ ಕಾಲಕ್ಕೆ ಸಾವಿರಾರು ಮೇಕೆಗಳಾಗುವುವು. ತರುವಾಯ ಅವುಗಳನ್ನು ಮಾರಿ ನೂರಾರು ಹಸಗಳನ್ನು ಕೊಳ್ಳುವೆನು. ಅವು ಪ್ರತಿ ಸಂವತ್ಸರವೂ ಈನುತ್ತಿರುವುವು. ಕೆಲವು ಸಂವತ್ಸರಕ್ಕೆ ಸಾವಿರ ಸಂಖ್ಯೆಗಳ ಹಸುಗಳೂ ಕಡಸುಗಳೂ ಹೋರಿಗಳೂ ದೊಡ್ಡಿ ತುಂಬಿ ಇರುವುವು. ಕೆಲವು ಹೋರಿಗಳನ್ನು ನೇಗಿಲುಗಳಿಗೆ ಕಟ್ಟಿ ಉಳಿಸಿ ಸಾಗುವಳಿಮಾಡಿ ಹುಟ್ಟುವಳಿಯಾದ ಧಾನ್ಯವನ್ನು ಮಾರುವೆನು; ಕೆಲವು ಹೋರಿಗಳನ್ನು ವಿಕ್ರಯಿಸುವೆನು. ಕೆಲವು ಎತ್ತುಗಳನ್ನು ಹೇರಾಟಕ್ಕೆ ಹಾಕಿ ವ್ಯಾಪಾರಮಾಡಿ ಲಾಭಸಂಪಾದಿಸುವೆನು. ಆ ಮೇಲೆ ಒಂದು ಉಪ್ಪರಿಗೆಯ ಮನೆಯನ್ನು ಕಟ್ಟಿಸಿ ನಿಲುವುಕನ್ನಡಿಗಳು ಮುಂತಾದ ಒಳ್ಳೆಯ ಸಾಮಾನುಗಳಿಂದ ಅದನ್ನು ಚೆನ್ನಾಗಿ ಅಲಂಕರಿಸುವೆನು. ಇವುಗಳನ್ನೆಲ್ಲಾ ನೋಡಿ ನಾನು ಹಣಗಾರನೆಂದು ತಿಳಿದುಕೊಂಡು ನನಗೆ ಹೆಣ್ಣುಗಳನ್ನು ಕೊಡುತ್ತೇವೆಂದು ಅನೇಕರು ಬರುವರು. ಆಗ ಕುಲವೂ ರೂಪವೂ ಗುಣವೂ ಉಳ್ಳ ಹೆಣ್ಣನ್ನು ಮದುವೆ ಮಾಡಿಕೊಂಡು ಅವಳ ಸಂಗಡ ಸಂಸಾರಮಾಡುತ್ತಾ ಇರುವಲ್ಲಿ, ನನಗೆ

ಒಬ್ಬ ಮಗನು ಹುಟ್ಟುವನು. ಅವನಿಗೆ ಸೋಮಶರ್ಮನೆಂಬ ಹೆಸರು ಇಡುವೆನು. ಅವನಿಗೆ ಕೆಲವು ತಿಂಗಳಾದಮೇಲೆ ಚಿನ್ನದ ಉಡಿಗೆಜ್ಜೆ ಉಡಿದಾರ ಕಂಠಸರ ಬಳೆ ಸರಪಣಿ ಗೆಜ್ಜೆ ಗೊಲಸು ವಜ್ರದ ಪತ್ತಕಡಕು ಮುಂತಾದ ಒಡವೆಗಳನ್ನಿಕ್ಕುವೆನು. ಆಗ ನನ್ನ ಹೆಂಡತಿ ನನ್ನಮೇಲೆ ಬಹಳ ಪ್ರೀತಿಯಾಗಿರುವಳು. ಆದಾಗ್ಯೂ ನಾನು ಅವಳಿಗೆ ಬಹಳ ಸಲುಗೆಯನ್ನು ಕೊಡೆನು. ಯಾವಾಗಲಾದರೂ ಅವಳು ನನ್ನ ಸಂಗಡ ಸರಸವಾಡಲಿಕ್ಕೆ ಬಂದರೆ ಅವಳನ್ನು ಒದೆದು ಆಚೆಗೆ ಕಳುಹಿಸುವೆನು' ಎಂದು ತಾನು ನಿಜವಾಗಿ ಒದೆಯ ಹೋಗುವವನ ಹಾಗೆ ಕಾಲನ್ನು ಝಾಡಿಸಲು, ಆ ಹಿಟ್ಟಿರುವ ಮಡಕೆಗೆ ತಗಲಿ ಮಡಕೆ ಚೂರುಚೂರಾಗಿ ಹಿಟ್ಟುಮಣ್ಣಿನಲ್ಲಿ ಬೆರಸಿ ಹೋಯಿತು. ಆಗ ಬ್ರಾಹ್ಮಣನು ಕನಸು ಕಂಡು ಎಚ್ಚರವಾದವನಹಾಗೆ ಎಣಿಸಿಕೊಂಡು ಬಹಳ ವ್ಯಸನಪಟ್ಟನು. ಆದಕಾರಣ ಅನಾಗತಕಾರ್ಯಗಳನ್ನು ಕುರಿತು ಚಿಂತೆಯನ್ನು ಯಾವನು ಮಾಡುವನೋ ಅವನು ಸೋಮಶರ್ಮನ ತಂದೆಯಂತೆ ಬಹಳ ವಿಷಾದವನ್ನು ಹೊಂದುವನೆಂದು ಹೇಳಿದಳು. ಬ್ರಾಹ್ಮಣನು ನಾಚಿಕೆಪಟ್ಟು ಸುಮ್ಮನಿದ್ದನು.

It is improper to do a thing hastily without knowing its nature.

ತರುವಾಯ ಕೆಲವು ದಿನಕ್ಕೆ ಪ್ರಸವಕಾಲವು ಬರುತ್ತಲೇ ಆ ಬ್ರಾಹ್ಮಣಸ್ತ್ರೀ ಶುಭಲಕ್ಷಣಸಂಪನ್ನನಾದ ಮಗನನ್ನು ಹೆತ್ತಳು. ಬಳಿಕ ಒಂದು ಪುಣ್ಯದಿನದಲ್ಲಿ ಆಕೆ ಮಗನನ್ನು ಗಂಡನಿಗೆ ಒಪ್ಪಿಸಿ ಸ್ನಾನಮಾಡುವುದಕ್ಕಾಗಿ ಹೊಳೆಗೆ ಹೋದಳು. ಆಕೆ ಸ್ನಾನಕ್ಕೆ ಹೋದ ಕೂಡಲೇ, ಆ ದೇಶದ ಅರಸನು ಅಂದು ಪುಣ್ಯದಿನವಾದುದರಿಂದ ಅಗ್ರಹಾರದಲ್ಲಿರುವ ಬ್ರಾಹ್ಮಣರನ್ನು ದಾನಕೊಡುವುದಕ್ಕಾಗಿ ಕರೆಯ ಕಳುಹಿಸಿದನು. ಆಗ ಕೆಲವರು ಬಾಹ್ಮಣರು ಹೋಗುತ್ತಿರಲಾಗಿ, ಈ ಬ್ರಾಹ್ಮಣನು ವಿಚಾರಗ್ರಸ್ತನಾಗಿ—ಹೆಂಡತಿಯನ್ನು ಏತಕ್ಕೆ ಕಳುಹಿಸಿದೆನು? ನಾನು

ಹೋದರೆ ಈಗ ಈ ಶಿಶುವನ್ನು ರಕ್ಷಿಸುವವರು ಯಾರು? ಅರಸನು ನನ್ನನ್ನು ಯಾವಾಗ ಕರೆಯಿಸುವನೋ, ಯಾವಾಗ ದಾನಕೊಡುವನೋ ಯಾವಾಗ ಭಾಗ್ಯವಂತನಾಗುವೆನೋ, ಎಂದು ಕಾಲವನ್ನು ನಿರೀಕ್ಷಿಸುತ್ತಿದ್ದು, ಸಮಯ ಬಂದಾಗ ಹೋಗುವುದಕ್ಕೆ ಸಂದರ್ಭಿಸದೆ ಹೋಯಿತು—ಎಂದು ಚಿಂತಿಸಿ, ಬಹುದಿನದಿಂದ ಕೂಸಿನಂತೆ ಸಾಕಿದ ಮುಂಗಸಿಯನ್ನು ಮಗನ ಹತ್ತಿರ ಕಾವಲಿಟ್ಟು ಹೋಗುತ್ತೇನೆಂದು ನಿಶ್ಚಯಿಸಿ, ಮುಂಗಸಿಯನ್ನು ಕೂಗಿ,—ನೀನು ಇಲ್ಲಿದ್ದು ಶಿಶುವನ್ನು ನೋಡಿಕೊಳ್ಳಬೇಕು—ಎಂದು ಸಂಕೇತವಾಗಿ ಅದರೊಂದಿಗೆ ಹೇಳಿ, ದ್ವಾರದಲ್ಲಿ ನಿಲ್ಲಿಸಿ, ಅರಮನೆಗೆ ಹೋದನು. ಬ್ರಾಹ್ಮಣನು ಅರಮನೆಗೆ ಹೋದ ಕೂಡಲೇ, ಒಂದು ಕೃಷ್ಣಸರ್ಪವು ಮಗುವಿನ ಹತ್ತಿರಕ್ಕೆ ಹೋಗುತ್ತಿರಲಾಗಿ, ಮುಂಗಸಿಯು ನೋಡಿ ಆ ಸರ್ಪವನ್ನು ಹಿಡಿದು ಕುತ್ತಿಗೆಯನ್ನು ಕಚ್ಚಿ ಕೊಂದು ದೇಹವನ್ನು ತುಂಡುತುಂಡಾಗಿ ಮಾಡಿ, ರಕ್ತಸೋಕಿದ ಬಾಯೊಂದಿಗೆ ಮುಂಚೆ ತಾನಿದ್ದ ಸ್ಥಳಕ್ಕೆ ಬಂದು ನಿಂತಿತು. ಅಲ್ಲಿ ಬ್ರಾಹ್ಮಣನು ದಾನವನ್ನು ತೆಗೆದುಕೊಂಡು ಮಗುವನ್ನು ನೆನಸಿಕೊಂಡು ಅತಿ ತ್ವರೆಯಾಗಿ ಬಂದು ರಕ್ತದ ಬಾಯೊಂದಿಗಿರುವ ಆ ಮುಂಗಸಿಯನ್ನು ನೋಡಿ, 'ಅಯ್ಯೋ, ನಾನೇನುಮಾಡಲಿ? ಇದು ನನ್ನ ಮಗುವನ್ನು ಕಚ್ಚಿತು' ಎಂದು ಎಣಿಸಿಕೊಂಡು ಒನಕೆಯಿಂದ ಮುಂಗಸಿಯನ್ನು ಹೊಡೆದು ಕೊಂದನು. ಚೆನ್ನಾಗಿ ವಿಚಾರಿಸದೆ ಮುಂಗಸಿಯನ್ನು ಹೊಡೆದು ಅದನ್ನು ಕೊಂದ ಬಳಿಕ ಬ್ರಾಹ್ಮಣನು ಮನೆಯೊಳಕ್ಕೆ ಹೋಗಿ, ಸಂತೋಷವಾಗಿ ಮಲಗಿರುವ ಮಗನನ್ನೂ ತುಂಡು ತುಂಡಾಗಿ ಕತ್ತರಿಸಿ ಬಿದ್ದಿರುವ ಹಾವನ್ನೂ ನೋಡಿ, ತಲೆತಲೆ ಬಡಿದುಕೊಂಡು, —ಮಂದಬುದ್ಧಿಯಾದ ನಾನೇ ಚೆನ್ನಾಗಿ ವಿಚಾರಿಸದೆ ತ್ವರೆಪಟ್ಟು ಮಾಡಬಾರದ ಕೆಲಸವನ್ನು ಮಾಡಿದೆನು—ಎಂದು ಪ್ರಲಾಪಿಸುತ್ತಿದ್ದನು. ಆಗ ಹೆಂಡತಿ ಬಂದು ಸತ್ತು ಬಿದ್ದಿರುವ ಕೀರನನ್ನೂ ಹಾವನ್ನೂ ಕಂಡು 'ಇದು ಏನು?' ಎಂದು ಬ್ರಾಹ್ಮಣನನ್ನು ಕೇಳಲು, ನಡೆದ ವೃತ್ತಾಂತವನ್ನು ಬ್ರಾಹ್ಮಣನು ಹೇಳಿದನು. ಆಗ ಆತನ ಹೆಂಡತಿ—

ಯಾವನು ಚೆನ್ನಾಗಿ ಕೇಳದೆಯೂ ಚೆನ್ನಾಗಿ ನೋಡದೆಯೂ ಕೂಲಂಕಷವಾಗಿ ವಿಚಾರಿಸದೆಯೂ ಒಂದು ಕೆಲಸವನ್ನು ಮಾಡುವನೋ ಅವನು ಭಿಕ್ಷುಕರನ್ನು ಕೊಂದ ನಾಯಿಂದನ ಹಾಗೆ ಆಪತ್ತನ್ನು ಹೊಂದುವನು— ಎಂದು ಹೇಳಲು, ‘ಅದು ಹೇಗೆ?’ ಎಂದು ಬ್ರಾಹ್ಮಣನು ಕೇಳಿದನು. ಅವನ ಹೆಂಡತಿ ಹೇಳುತ್ತಾಳೆ.

The Komati, the Beggars and the Barber.

ಒಬ್ಬಾನೊಬ್ಬ ಕೋಮಟಿ ಹುಡುಗನುಂಟು. ಅವನು ಹುಟ್ಟುತಲೇ ಅವನ ತಾಯಿ ಸತ್ತುಹೋದಳು. ತರುವಾಯು ಅವನನ್ನು ದಾದಿ ಬೆಳಯಿಸುತ್ತಿದ್ದಳು. ಹೀಗಿರಲಾಗಿ ಆ ಹುಡುಗನಿಗೆ ಬಾಲ್ಯವು ಕಳೆವ ಸಮಯದಲ್ಲಿ, ಒಂದು ದಿನ ಅವನು ದಾರಿದ್ರ್ಯದಿಂದ ದುಃಖಿಸುತ್ತಾ ತನ್ನನ್ನು ನಿಂದಿಸಿಕೊಂಡು, ನಿಟ್ಟುಸಿರು ಬಿಡುತ್ತಾ, ರಾತ್ರಿ ಮಲಗಿ ನಿದ್ರೆಹೋಗುತ್ತಿದ್ದನು. ಅಂದಿನ ರಾತ್ರಿ ಬೆಳಗಿನ ಜಾವದಲ್ಲಿ ಅವನ ದುಷ್ಕೃತವು ನಶಿಸಿ ಹೋದುದರಿಂದ ಒಳ್ಳೆಯ ಕನಸನ್ನು ಕಂಡನು. ಆ ಕನಸಿನಲ್ಲಿ ಒಬ್ಬ ಸಿದ್ಧಪುರುಷನು ಬಂದು—ನೀನು ಏತಕ್ಕೆ ಚಿಂತಿಸುತ್ತೀಯೆ? ಪ್ರಾತಃಕಾಲದಲ್ಲಿ ಕ್ಷೌರ ಅಭ್ಯಂಜನಸ್ನಾನ ಮುಂತಾದ ಕೃತ್ಯಗಳನ್ನು ತೀರಿಸಿಕೊಂಡು ಕಾದಿರು. ಆಗ ಮೂರು ಮಂದಿ ಭಿಕ್ಷುಕರು ಬರುವರು. ಅವರನ್ನು ಪೂಜಿಸಿ ಭೋಜನಮಾಡಿಸಿ ತೃಪ್ತಿಪೊಂದಿಸಿದ ತರುವಾಯು, ನಿರ್ದಯನಾಗಿ ಆ ಮೂವರನ್ನೂ ದೊಣ್ಣೆಯಿಂದ ತಲೆಯ ಮೇಲೆ ಹೊಡೆ. ಆ ಮೇಲೆ ಆ ಮೂವರೂ ಮೂರು ನಿಧಿಗಳಾಗುವರು. ಆ ನಿಧಿಗಳನ್ನು ಇಟ್ಟುಕೊಂಡು ಸಕಲ ಧರ್ಮಗಳನ್ನೂ ಮಾಡುತ್ತಾ ಪುತ್ರಪೌತ್ರಾಭಿವೃದ್ಧಿಯನ್ನು ಪಡೆದು ಚಿರಕಾಲ ಬಾಳು—ಎಂದು ಆಶೀರ್ವದಿಸಿ, ಅದೃಶ್ಯನಾಗಿ ಹೋದನು. ಆ ಕೂಡಲೇ ಆ ಕೋಮಟಿ ಹುಡುಗನು ಎಚ್ಚರಗೊಂಡು, ಒಳ್ಳೆಯ ಕನಸು ಕಂಡವನು ತಿರುಗಿ ನಿದ್ರಿಸಬಾರದಾದುದರಿಂದ ಸೂರ್ಯೋದಯ ಕಾಲಪರ್ಯಂತ ನಿದ್ದೆ ಹೋಗದೆ ಕುಳಿತಿದ್ದು, ಸೂರ್ಯೋದಯವಾದ ಬಳಿಕ ದಾದಿಯನ್ನು

ಕೂಗಿ,—ಇಂದು ನಮಗೊಂದು ಮೇಲುಂಟಾಗುತ್ತದೆ. ನೀನು ನಮ್ಮ ಮನೆ ಮುಂತಾದುವನ್ನು ಚೆನ್ನಾಗಿ ಸಾರಿಸಿ ಶುದ್ಧಿಮಾಡಿ ನೇಮವುಳ್ಳವಳಾಗಿರು. ನಾನು ಕ್ಷೌರಾಭ್ಯಂಜನಗಳನ್ನು ಮಾಡಿಸಿಕೊಂಡು ಸ್ನಾನ ಮಾಡಿ ಮಡಿಯಾಗಿರುತ್ತೇನೆ. ಒಬ್ಬ ಕ್ಷೌರಕನನ್ನು ಕರೆಯಿಸು—ಎಂದು ಹೇಳಿ, ಕ್ಷೌರಕನು ಬಂದಕೂಡಲೇ ಕ್ಷೌರಮಾಡಿಸಿಕೊಂಡು, ಅವನನ್ನು ಸ್ವಲ್ಪ ಹೊತ್ತು ಇರಹೇಳಿ, ಅಭ್ಯಂಜನಸ್ನಾನಮಾಡಿ, ಮಡಿಬಟ್ಟೆಗಳನ್ನು ಉಟ್ಟುಕೊಂಡು ಶುಚಿಯಾಗಿದ್ದನು. ತರುವಾಯ ಸಿದ್ಧಪುರುಷನು ಹೇಳಿದ ಪ್ರಕಾರ ಭಿಕ್ಷುಕರು ಮೂವರು ಬಂದರು. ಅವರನ್ನು ಕೋಮಟಿ ಹುಡುಗನು ನೋಡಿ ಪೂಜಿಸಿ, ಅವರಿಗೆ ಷಡ್ರಸೋಪೇತವಾದ ಭೋಜನವನ್ನು ಬಡಿಸಿ ಅವರು ತೃಪ್ತಿಹೊಂದಿದ ಮೇಲೆ ದೊಣ್ಣೆಯನ್ನು ತೆಗೆದುಕೊಂಡು ಅವರ ತಲೆಯ ಮೇಲೆ ಹೊಡೆದನು. ಆಗ ಆ ಮೂವರೂ ಮೂರು ವರಹಗಳ ರಾಶಿಗಳಾದರು. ಅದನ್ನು ನೋಡಿ ಅವನು ಬಹಳ ಸಂತೋಷಿಸಿ ದಾದಿಯ ಸಂಗಡ ಧನಸಹಿತವಾದ ತನ್ನ ಮನೆಯನ್ನು ಪ್ರವೇಶಿಸಿ ನಾಯಿಂದನಿಗೆ ನೂರು ವರಹಗಳನ್ನು ಕೊಟ್ಟು ಕಳುಹಿಸಿದನು. ಈ ಸಂಗತಿಯನ್ನು ಚೆನ್ನಾಗಿ ವಿಚಾರಿಸದ ನಾಯಿಂದನು ಇದನ್ನು ನೋಡಿ ತನ್ನ ಮನೆಗೆ ಹೋಗಿ, 'ನಾನೂ ಭಿಕ್ಷುಕರು ಮೂವರನ್ನು ಕೊಂದು ಧನವನ್ನು ಗಳಿಸುವೆನು' ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಭಿಕ್ಷುಕರನ್ನು ಎದುರು ನೋಡುತ್ತಿದ್ದನು. ಕರ್ಮವಶದಿಂದ ಮೂವರು ಭಿಕ್ಷುಕರು ಬಂದರು. ನಾಯಿಂದನು ಅವರನ್ನು ನೋಡಿ ಸಂತೋಷಿಸಿ ಪೂಜಿಸಿ ತೃಪ್ತಿಯಾಗಿ ಭೋಜನಮಾಡಿಸಿ, ಆ ಮೇಲೆ ಅವರನ್ನು ದೊಣ್ಣೆಯಿಂದ ಹೊಡೆದು ಕೊಂದನು. ಆದರೆ ವರಹಗಳ ರಾಶಿ ಸಿಕ್ಕಲಿಲ್ಲ. ಈ ಸಮಾಚಾರವನ್ನು ಅರಮನೆಯವರು ಕೇಳಿ ಕ್ಷೌರಕನನ್ನು ಎಳೆದುಕೊಂಡು ಹೋಗಿ ಅರಸನಿಗೆ ತಿಳಿಸಿ ಅರಸನ ಆಜ್ಞೆಯ ಮೇಲೆ ಅವನನ್ನು ಕೊಂದರು.

ಆದಕಾರಣ ಯಾವ ಕಾರ್ಯವನ್ನಾದರೂ ಸರಿ, ವಿಚಾರಿಸದೆ ತ್ವರೆಪಟ್ಟು ಮಾಡಬಾರದು. ತ್ವರೆಪಟ್ಟು ಮಾಡುವ ಅವಿವೇಕಿಗೆ ಆಪತ್ತುಗಳು ಬರುವುದು ಸಿದ್ಧವು. ಚೆನ್ನಾಗಿ ವಿಮರ್ಶಿಸಿ ಮಾಡುವ ವಿವೇಕಿಗೆ ಸಂಪತ್ತು ತಪ್ಪದೆ ಉಂಟಾಗುವುದು—ಎಂದು ಹೆಂಡತಿ ಹೇಳಲು, ಕೇಳಿ ಬ್ರಾಹ್ಮಣನು ಆಕೆಯ ವಿವೇಕವಚನಗಳಿಗೆ ಸಂತೋಷವನ್ನೂ, ವಿಚಾರಿಸದೆ ತಾನು ಮುಂಗಸಿಯನ್ನು ಕೊಂದುದಕ್ಕೆ ಪರಿತಾಪವನ್ನೂ ಹೊಂದಿದ ಚಿತ್ತವುಳ್ಳವನಾಗಿ, ಸರ್ವವೂ ದೈವಾಧೀನವೆಂದು ನುಡಿದು, ತನ್ನ ಮಗನನ್ನು ಲಾಲಿಸುತ್ತಾ ಭಾರ್ಯೆಯೂ ತಾನೂ ಸುಖವಾಗಿದ್ದರು.

ಇಂತು ವಿಷ್ಣುಶರ್ಮನು ಹೇಳಿದ ಅಸಂಪ್ರೇಕ್ಷ್ಯಕಾರಿತ್ವವೆಂಬ
ಐದನೆಯ ತಂತ್ರವನ್ನು ಕೇಳಿ ಆ ರಾಜನಂದನರು
ಅಪರಿಮಿತ ಸಂತೋಷಭರಿತರಾದರು.